ಸಂವಾದ

ಫೆಬ್ರವರಿ 2009
ರೂ. 20

ಕುರುಡು ಕಾಂಚಾಣ

ಧುತ್ ಅಂತ ಬಿತ್ತೋ...!

ಧರ್ಮ–ದೇವರುಗಳ ಸುತ್ತ ಮುತ್ತ

ಆ ಗರಿಕೆ ಹುಲ್ಲು ನಸುನಕ್ಕು ಧನ್ಯವಾಯಿತು!

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೪
ಫೆಬ್ರವರಿ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧
✆ ೨೩೪೮೦೨೭೮/೯೪೪೮೦ ೪೮೩೦೬
ಇ–ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23480278, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಅಂತರಂಗ ೦೫
❑ <u>ಜಾತಿ, ಧರ್ಮ, ತಾರತಮ್ಯ ಚರ್ಚೆ:</u>
ಬಾಲು ಜೊತೆ ನಾಭೂ ಮಾತುಕತೆ!?
○ ಡಿ.ಎಸ್. ನಾಗಭೂಷಣ ೦೬
❑ **RSS** ಕುರಿತು ಒಂದು ಟಿಪ್ಪಣಿ ೦೮
○ ಪ್ರಶಾಂತ್ ಹುಲ್ಕೋಡು
❑ ಹಿಂದುಯಿಸಂ ಮತ್ತು ಸೆಕ್ಯುಲರಿಸಂ
ಎಂಬ ವಾದಗ್ರಸ್ಥ ಪರಿಕಲ್ಪನೆ...
○ ಕಿರಣ್ ಎಂ ಗಜನೂರು ೧೦
❑ ಮತಾಂತರ: ಬಿಡುಗಡೆಯ ಹಾದಿ
○ ಸಾ ರಾ ಅಬೂಬಕ್ಕರ್ ೧೪
❑ 'ಕುರುಡು ಕಾಂಚಾಣ
ಧುತ್ ಅಂತ ಬಿತ್ತೋ...'
○ ಹರ್ಷಕುಮಾರ್ ಕುಗ್ವೆ ೧೮



❑ ನಕ್ಸಲ್ಸ್ ಮತ್ತು ಪ್ರಭುತ್ವ
○ ಚಂದ್ರಶೇಖರ್ ೨೨
❑ ಧರ್ಮ–ದೇವರುಗಳ ಸುತ್ತ ಮುತ್ತ...
○ ಡಾ. ಬಸವರಾಜ ಸಬರದ ೨೬
❑ ಬಸವಣ್ಣ ನಿರ್ಮಿಸ ಬಯಸಿದ ಸಮಾಜ
○ ಡಾ. ಎಚ್. ಟಿ. ಪೋತೆ ೩೦
❑ ಪರಂಪರೆ ಸಂರಕ್ಷಣೆಗಾಗಿ ಕಾಲೇಜುಗಳಲ್ಲಿ
ಹೆರಿಟೇಜ್ ಕ್ಲಬ್‌ಗಳ ಸ್ಥಾಪನೆ
○ ವಿ ಚಂದ್ರಶೇಖರ ನಂಗಲಿ ೩೨
❑ ಕಥೆ : ಬೀಜ ಬಿತ್ತಿದರು
○ ಡಾ॥ ನಾ. ಡಿಸೋಜ ೩೬
❑ ಬೌದ್ಧ ಸೌಂದರ್ಯ ಮೀಮಾಂಸೆ – ೬
ಭಿನ್ನಾಭಿನ್ನ ನಿರಾಕರಣೆ
○ ಡಾ. ಎಸ್. ನಟರಾಜ್ ಬೂದಾಳು ೩೯
❑ ಧರೆ ಹತ್ತಿ ಉರಿದರೆ... ೬
ಜಾಗತಿಕ ಮುಗ್ಗಟ್ಟು ಮತ್ತು ನಮ್ಮ ಆರ್ಥಿಕ
ಬಿಕ್ಕಟ್ಟು
○ ಡಾ. ಟಿ. ಆರ್ ಚಂದ್ರಶೇಖರ್ ೪೨
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್
❑ ಬುದ್ಧಾಯಣ ೫೦
○ ಸಿ.ಎಚ್ ರಾಜಶೇಖರ್



ಕವನಗಳು : ❑ ಮಂದ್ರ ಲಾಲಿ ೪ ❑ ಅಲ್ಲಮನೆಂಬ 'ಅಚ್ಚು'ಗೆ ೧೩
❑ ದಂಡೆಯಲ್ಲಿ ಕುಳಿತ ಹುಡುಗಿಯರು ೨೫ ❑ ದೂರದ ತಮಟೆಯ ಸದ್ದು ೩೪

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಅಸ್ಪೃಶ್ಯತೆ ಇರುವವರೆಗೆ ಮತಾಂತರ ಮುಂದುವರೆಯಲಿ

ಮಾನ್ಯ ಸಂಪಾದಕರೇ,

ಭಾರತೀಯ ಸಂಸ್ಕೃತಿ ಹಿಂದೂ ಧರ್ಮದಲ್ಲಿ ಮಹಾಮಾರಿ, ಅನಿಷ್ಟಪದ್ಧತಿ ಹಾಗೂ ಸಾಮಾಜಿಕ ಪಿಡುಗು ಅಸ್ಪೃಶ್ಯತೆ ಮತಾಂತರಕ್ಕೆ ಪೂರಕವಾಗಿದೆ. ಅಸ್ಪೃಶ್ಯತೆ ಶೇ. ೧೫ರಷ್ಟು ಹಿಂದೂಗಳಿಗೆ ಶಾಪವಾಗಿದ್ದು ಪ್ರಾಣಿ, ಪಕ್ಷಿ, ಕ್ರಿಮಿಕೀಟಕ್ಕೆ ಇರುವಷ್ಟು ಸ್ವಾತಂತ್ರ್ಯ ಇಲ್ಲದೆ ಅಸಮಾನತೆ ಜೀವನ ನಡೆಸುತ್ತಿರುವುದು ಶೋಚನಿಯ ಸಂಗತಿ ಹಾಗೂ ಹಿಂದೂ ಧರ್ಮಿಯರು ತಲೆತಗ್ಗಿಸುವಂತಹದು. ಕ್ರಿಸ್ತಪೂರ್ವದಲ್ಲಿಯೇ ಭಗವಾನ್ ಬುದ್ಧ ಅಸ್ಪೃಶ್ಯತೆಯನ್ನು ವಿರೋಧಿಸಿ ಅದರ ವಿನಾಶಕ್ಕೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು ಮತ್ತು ರಾಜರುಗಳು ಇದ್ದುದ್ದಕ್ಕೆ ಇತಿಹಾಸವಿದೆ.

ತದನಂತರ ೧೨ನೇ ಶತಮಾನದಲ್ಲಿ ಸಮಾಜ ಸುಧಾರಕ ಕ್ರಾಂತಿಕಾರಿ ಜಗಜ್ಯೋತಿ ಬಸವಣ್ಣ ಅವರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಂತರ್ಜಾತಿ ವಿವಾಹ ಮಾಡಿದರು. ಹಾಗೂ ಜಾತಿ ವಿನಾಶಕ್ಕೆ ಅನುಭವ ಮಂಟಪ ಕಟ್ಟಿ ದೊಡ್ಡಪ್ಪ ಹೊಲೆಯ, ಚಿಕ್ಕಪ್ಪ ಡೋಹರ ಕಕ್ಕಯ್ಯ, ನನ್ನ ಅಪ್ಪಗಳ ಅಪ್ಪನ್ನು ಮಾದಾರ ಚೆನ್ನಯ್ಯ. ಕೂಡಲ ಸಂಗಮೇಶ ನಿಮ್ಮ ಶರಣರು ಒಲಿದು ಅವಿರತವೂ ನನ್ನನ್ನು ಕಾಪಾಡಲು ಸಿದ್ಧರಿದ್ದಾರೆ ಎಂದು ಹೇಳಿರುವುದು ಬಸವಾದಿಗಳಿಗೆ ಏನಾದರೂ ಗೊತ್ತಿದಿಯೆ? ಅಂತೆಯೇ ನನ್ನ ತಾಯಿ ನಿಂಬೆವ್ವಾ ಮೈತೊಳೆದು ಉಣಬಡಿಸುವಳು, ತಂದೆ ಚೆನ್ನಯ್ಯ ಕೂಲಿ ಕಂಬಳಿ ಮಾಡಿ ಸಲಹುತ್ತಾರೆ. ನನಗೆ ದಿಕ್ಕಿಲ್ಲದವನೆನ್ನಬೇಡ. ಅಕ್ಕ ಕಂಚಿನ ಪಾತ್ರೆಯಲ್ಲಿ ಅಡುಗೆ ಮಾಡುತ್ತಾಳೆ. ನನ್ನ ಅಜ್ಜ, ಮುತ್ತಜ್ಜರು ಮಾಡಿ ನೀಡಿದ ಭಕ್ತಿಯನ್ನು ನಿಮ್ಮ ಕೃಪೆಯಿಂದ ಪಡೆಯುವೆ ಕೂಡಲ ಸಂಗಮದೇವಾ ಎಂದಿದ್ದಾರೆ. ಅನುಭವ ಮಂಟಪದಲ್ಲಿದ್ದ ಮಹಾಶಿವ ಭಕ್ತರಾದ ಸಿರಿಯಾಳನನ್ನು ಶೆಟ್ಟಿಯೆಂದು ಕರೆಯಬಹುದೆ? ಮಾಚಿದೇವನನ್ನು ಅಗಸ ಎನ್ನಲಾದಿತೆ? ಕಕ್ಕಯ್ಯನಿಗೆ ಡೋಹರ ಎನ್ನಬಹುದೆ? ಚೆನ್ನಯ್ಯನಿಗೆ ಮಾದಾರವನು ಎಂದೆನೆಯೆ? ಮೈಮರೆತು ನಾನು ಬ್ರಾಹ್ಮಣ ಎಂದುಕೊಂಡರೆ ಕೂಡಲಸಂಗಮನಾಥನು ನಕ್ಕು ಬಿಡುತ್ತಾನೆ ಎಂದು ಮಹಾ ಮಾನವತಾವಾದಿ ಬಸವಣ್ಣ ಮುಂದೆ ಯಾರನ್ನೂ ಜಾತಿ ಹೆಸರಿನಲ್ಲಿ ಸಂಬೋಧನೆ ಮಾಡದಂತೆ ಹೇಳಿದ್ದಾರೆ.

ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಹಾಗೂ ವೀರಶೈವ ಮಠಾಧೀಶರುಗಳಿಗೆ ಮತ್ತು ಹಿಂದೂ ಧರ್ಮಿಯರಿಗೆ ಸೇರಿದ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿ, ರಾಘವೇಶ್ವರ ಭಾರತೀ ಸ್ವಾಮೀಜಿ, ರಮಾನಂದ ಸ್ವಾಮೀಜಿ, ರಾಜಶೇಖರ ಸ್ವಾಮೀಜಿ, ಈಶ ವಿಠ್ಠಲದಾಸ ಸ್ವಾಮೀಜಿ ಮತ್ತು ವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿಗಳಿಗೆ ಅಸ್ಪೃಶ್ಯತೆ ಅನುಭವ ಆಗಿದಿದ್ದರೆ ಅದರ ನಿವಾರಣೆ ಆಗುವ ತನಕ ಮತಾಂತರ ಮುಂದುವರೆಯಲಿ ಎಂದು ಹೇಳುತ್ತಿದ್ದರು. ಹಿಂದೂ ಧರ್ಮಕ್ಕೆ ಕಗ್ಗಂಟಾಗಿರುವ ಅಸ್ಪೃಶ್ಯತೆ ನಿವಾರಣೆಗೆ ಸರ್ಕಾರ ಮಟ್ಟದಲ್ಲಿ ಮತ್ತು ಹಿಂದೂ ಧಾರ್ಮಿಕ ಮಠಗಳು ಹಾಗೂ ಬಸವವಾದಿ ಸಂಘಟನೆಗಳು ಕಾರ್ಯಕ್ರಮ ಹಮ್ಮಿಕೊಂಡು ಇದರ ನಾಶಮಾಡುತ್ತಿದ್ದರು. ಮತಾಂತರಕ್ಕೆ ವಿರೋಧ ಮಾಡುವವರೆಲ್ಲರೂ ಅಸ್ಪೃಶ್ಯರಾಗಿದ್ದು ಹೇಳುವುದೊಂದಾದರೆ ಮಾಡುವುದು ಮತ್ತೊಂದು. ಇವರಿಗೆ ಅಸ್ಪೃಶ್ಯತೆ ಬಿಸಿ ತಟ್ಟಿದ್ದಲ್ಲಿ ಹಿಂದೂ ಧರ್ಮಿಯರು ಮಾಡುವ ದೇವಸ್ಥಾನ ಪ್ರವೇಶ ನಿಷೇಧ, ಹೋಟೆಲ್ಲುಗಳ ಪ್ರವೇಶ ನಿಷೇಧ, ಬಾವಿ ಕೆರೆ ಕಟ್ಟೆಗಳಲ್ಲಿ ನೀರು ತೆಗೆದುಕೊಳ್ಳಲು ನಿಷೇಧ ಇತ್ಯಾದಿಗೆ ಇರುವ ನಿರ್ಬಂಧ ಹೋಗಲಾಡಿಸಲು ಮುಂದಾಗಿ ಅಸ್ಪೃಶ್ಯರಿಗೆ ಸಮಾನತೆ ಕಲ್ಪಿಸಿಕೊಡುತ್ತಿದ್ದರು.

ಅಸ್ಪೃಶ್ಯರು ಸ್ಪೃಶ್ಯರಿಂದ ಶತಶತಮಾನಗಳಿಂದಲೂ ನಿಷೇಧಿಸಲ್ಪಟ್ಟವರು, ಇತರರಿಂದ ದೂರ ತಳಲ್ಪಟ್ಟವರು. ಯಾರ ಕಣ್ಣಿಗೂ ಬೀಳದಂತೆ ಇದ್ದವರು ಇಂದಿಗೂ ಯಾವುದೇ ಗ್ರಾಮಕ್ಕೂ ಭೇಟಿಕೊಟ್ಟರೂ ಎಲ್ಲಾ ಗ್ರಾಮಗಳಲ್ಲೂ ತೆಂಕಲ ಬೀದಿಗೆ ಸೇರಿದವರು ಅಂದರೆ ಅಸ್ಪೃಶ್ಯರು ಎಂಬುವುದು ಹಿಂದೂ ಧಾರ್ಮಿಕ ಸ್ವಾಮೀಜಿಗಳಿಗೆ ಗೊತ್ತಿದ್ದರೂ ಅಸ್ಪೃಶ್ಯತೆ ಬಗ್ಗೆ ಚಕಾರ ಎತ್ತದೆ ಕೇವಲ ಮತಾಂತರ ವಿರೋಧ ಮಾಡುವವರು ಬುದ್ಧ, ಬಸವ, ಶ್ರೀರಾಮಾನುಜರ ಹೆಸರು ಹೇಳಿಕೊಂಡು ಅಸ್ಪೃಶ್ಯರನ್ನು ವಂಚಿಸುವ ಸಂಪ್ರದಾಯಕ್ಕೆ ಸೇರಿದ್ದು ಅಸ್ಪೃಶ್ಯತೆ ಆಚರಣೆ ದಿನನಿತ್ಯ ಜೀವನದಲ್ಲಿ ನೋಡಿಕೊಂಡು ಕಣ್ಣಿದ್ದು ಕುರುಡರಂತೆ ವರ್ತಿಸುತ್ತಾ ಮತಾಂತರ ವಿರೋಧ ಮಾಡುವ ಹಕ್ಕು ಇವರಿಗೆ ಎಲ್ಲಿಂದ ಲಭಿಸಿತು?

ಡಾ. ಅಂಬೇಡ್ಕರ್ ಅವರು ಅಸ್ಪೃಶ್ಯತೆ ಅಂಥಹ ಅಸಮತೋಲನವಾದ, ಅಸ್ವಾಭಾವಿಕವಾದ ಕಂಡು ಸಮಾಜದಲ್ಲಿರುವ ನ್ಯೂನತೆ ಹೋಗಲಾಡಿಸಲು ಮತ್ತು ಸಂಪೂರ್ಣ ಬದಲಾವಣೆ ಮಾಡಲು ಬುದ್ಧನ ಮತ್ತು ಫ್ರಾನ್ಸಿನ ಕ್ರಾಂತಿಯ ಮೂಲ ಮೂರು ತತ್ವಗಳಾದ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ ಜನಪ್ರಿಯಗೊಳಿಸಿ ಸಂವಿಧಾನದಲ್ಲಿ ಅಳವಡಿಸಿ ಯಶಸ್ವಿಯಾದರು.

ಆದರೆ ಇಂದಿಗೂ ಯಡಿಯೂರಪ್ಪ ಅವರಂಥಹ ರಾಜಕಾರಣಿಗಳು ಹಾಗೂ ಹಿಂದೂ ಧಾರ್ಮಿಕ ಮಠಗಳ ಸ್ವಾಮೀಜಿಗಳಿಗೆ ಸಂವಿಧಾನ ಉಲಂಘನೆ ಮಾಡಿ ಕೇವಲ ಮತಾಂತರಕ್ಕೆ ನಿಷೇಧ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದು ಖಂಡನೀಯ. ಎಲ್ಲಿಯ ತನಕ ಅಸ್ಪೃಶ್ಯತೆ ಹಿಂದೂ ಸಮಾಜದಲ್ಲಿ ಇರುತ್ತದೆ ಅಲ್ಲಿಯತನಕ ಮತಾಂತರ ಮುಂದುವರೆಯಲಿ ಎಂದು ಅಸ್ಪೃಶ್ಯರು ಒತ್ತಾಯಿಸುವ ನಿಲುವು ತಾಳಬೇಕು ಮತ್ತು ಸಮಾನತೆ ಹಕ್ಕು ಕಾಯ್ದುಕೊಳ್ಳಬೇಕು.

ಎ. ಮಾದಯ್ಯ,
ಮೈಸೂರು

ಪ್ರಗತಿಪರರು ಮತ್ತೊಮೆ ಕೈ ಜೋಡಿಸಬೆಕಿದೆ

ಮಾನ್ಯ ಸಂಪಾದಕರಿಗೆ

'ಸಂವಾದ' ಬಳಗಕ್ಕೆ ನನ್ನ ಅನಂತ ಧನ್ಯವಾದಗಳು. 'ಸಂವಾದ' ಪತ್ರೀಕೋದ್ಯಮಕ್ಕೆ ತನ್ನದೇ ಆದ ಹೊಸ ಆಯಾಮವನ್ನು ನೀಡುತ್ತಿದೆ.

ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಕಳೆದರೂ ದಲಿತರ ಮೇಲೆ ದೌರ್ಜನ್ಯ ಕೊನೆಯಾಗಲೇ ಇಲ್ಲ. ದಲಿತರ ಮೈಗೆ ಬರೆ, ಕೊರಳಲ್ಲಿ ಚಪ್ಪಲಿಹಾರ, ದಲಿತ ಕುಟುಂಬದ ಮನೆಗೆ ಬೆಂಕಿ, ಮನೆಯಲ್ಲಿ ಕೂಡಿ ಹಾಕಿ ಸಜೀವ ದಹನ ಮಾಡುವುದು, ಊರಿನಿಂದ ಹೊರಗೆ ಅಟ್ಟುವುದು, ಬಹುಷ್ಕಾರ ಹಾಕುವುದು, ಮೇಲ್ಜಾತಿಯವರ ಹತ್ತಿರ ಕೆಲಸ ಮಾಡುವಾಗ ಊಟ ಆಗಲಿ ನೀರಾಗಲಿ ಕೇಳಿದರೆ, ದಲಿತರಿಗೋಸ್ಕರ ಹಳೆಯ ಚರಿಗೆ, ಲೋಟ ಬಳಸುವುದು, ನೀರನ್ನು ಕೇಳಿದಾಗ ಒಂದು ಚರಿಗೆಯಲ್ಲಿ ಮೇಲಿನಿಂದ ಸುರಿಯುವುದು, ಇನ್ನು ಹಲವಾರು ರೀತಿಯಲ್ಲಿ ದಲಿತರಿಗೆ ಚಿತ್ರಹಿಂಸೆ ನೀಡುತ್ತಾರೆ. ಈಗಲೂ ಕೂಡ ಮೇಲ್ಜಾತಿಯವರು ಕೊಡುವ ಹಿಂಸೆಯಿಂದ ದಲಿತರು ಗ್ರಾಮಗಳಲ್ಲಿ ಜೀವಿಸುವುದೇ ಕಷ್ಟವಾಗಿದೆ. ಇಂತಹವರನ್ನು ಮಟ್ಟ ಹಾಕಲು ಪ್ರಗತಿಪರರು ಮತ್ತೊಮ್ಮೆ ಕೈ ಜೋಡಿಸಬೆಕಿದೆ.

ಈಗಿನ ರಾಜಕೀಯದಲ್ಲೂ ಜಾತಿ ಬೇಧ ಭಾವ ಕೀಳು ಮೇಲು ಅಂತಾ ಹೋದರೆ ನ್ಯಾಯ ಸಿಗುವುದು ಎಲ್ಲಿ?

ದಲಿತರಿಗೆ ಹಿಂಸೆ ಕೊಡುವವರನ್ನು ಕೇಳುವವರು ಯಾರಿದ್ದಾರೆ? ನ್ಯಾಯ ದೊರಕಿಸುವವರು ಯಾರಿದ್ದಾರೆ?

ರಮ್ಯ.ಜೆ, ಬೆಂಗಳೂರು

ಪತ್ರಗಳು



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೩೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಮಂತ್ರಬಾಟಿ:

○ ನರೇಶ್ ಮಯ್ಯ



ಮೃಷ್ಟಾನ್ನ ಮೊಗೆಮೊಗೆದು ಕೊಟ್ಟಾಗಲೂ ಏಳಲಿಲ್ಲ
ಅಗೆದಗೆದು ತೆಗೆದಾಗ ನಿನ್ನಾತ್ಮದಂತಧ್ಯಾನ;
ಮೋಹವೆಂಬ ನಿನ್ನ ಮಸಣದಲ್ಲಿ.

ಮಗು, ಮಲಗಬೇಡ
ಏಗು ನಿರಂತರ-ಸಾಗು ಕಾಲಾಂತರ,
ಬಾಗುವುದೇ ಭಾಗ್ಯವೆಂದು ಬಗೆದುಕೋ;
ಮಗು, 'ಮಗುವಾಗು, ಶಾರದೆಯ ಮಗುವಾಗು'

ಶ್ರಾದ್ಧದ ಶ್ರದ್ಧೆ ಬೇಡೆನಗೆ
ಶುದ್ಧ-ನಿಶಿದ್ಧ ನೆವಗಳ ಲೇಪ ಬೇಡವೇ ಬೇಡ.

ಕಾದು ಕುಳಿತಿದ್ದೇನೆ
ನಿನ್ನಮರ ಪರಾಕ್ರಮದ ಪಂದ್ಯ ನೋಡಲಿಕ್ಕೆ,
ವಿಂಧ್ಯದೆತ್ತರಕ್ಕೆ ನಿನ್ನೆಸರ ನೋಡುವ ನಿತ್ಯ ನಂಬುಗೆಯಿಂದ.
ನೆರಳನುರುಳಿಸಿ ನಿನ್ನದೆ ಧ್ಯಾನಸ್ಥ ಆಸ್ಥನದಲ್ಲಿ
ಅಮೋಘವಾಗಿ ನೆಲೆನಿಲ್ಲು.

ಎಲೆಲೆ.. ಎನ್ನೊಡಲು ಕುಡಿಯೆ,
ಸುಖಿಸುವುದೇ ಈ ಜೀವ ನಿನ್ನಾತ್ಮ ಕಡಿಯೆ.

ಸ್ತುತಿಸು ತಾಯಿಯ.
ತಾಯಿ ಭಾರತಿಯ ಭವಿತವ್ಯ ಬಾಗಿನವ ನೀ ನೀಡುವಾ ಘಳಿಗೆ
ನನ್ನಾತ್ಮಕೂ ಇಟ್ಟು ಬಿಡು ಇಷ್ಟು ಮೃಷ್ಟಾನ್ನ.

ಎಚ್ಚರಿಕೆ!
ನಿನೇರುವೆತ್ತರದ ತುದಿಯಲ್ಲಿ,
ತಂಬುರನಾದದ ನೈವೇದ್ಯದಲ್ಲಿ
ಧ್ಯಾನಸ್ಥ ಮಧ್ಯಸ್ಥ ನಿನ್ನಾವರಿಸಬಹುದು.

ಸಂಪಾದಕೀಯ

ಅಂತರಂಗ

ಮುಖವಾಡ ಕಳಚಿದ ಐಟಿ ಉದ್ಯಮ

ಐಟಿ ಉದ್ಯಮಿಗಳ ಮುಖವಾಡವೂ ಕಳಚಿ ಬಿದ್ದಿದೆ.

ಸತ್ಯಂ ಕಂಪ್ಯೂಟರ್ಸ್‌ನ ರಾಮಲಿಂಗರಾಜು ಸೋದರರು ಸಂಸ್ಥೆಯ ಸುಮಾರು ೮ ಸಾವಿರ ಕೋಟಿ ರೂಪಾಯಿಗಳನ್ನು ಗುಳುಂ ಮಾಡುವ ಮೂಲಕ ಐಟಿ ಉದ್ಯಮಕ್ಕಿದ್ದ 'ಪಾವಿತ್ರ್ಯ'ವನ್ನು ಕಳಚಿ ಹಾಕಿದ್ದು, ದೇಶದ ಎಲ್ಲ ಭ್ರಷ್ಟ ವ್ಯವಸ್ಥೆಗಳಲ್ಲಿ ಐಟಿ ಕೂಡ ಒಂದು ಎಂದು ಸಾಬೀತು ಪಡಿಸಿದ್ದಾರೆ. ಆ ಮೂಲಕ ಷೇರು ದಲ್ಲಾಳಿಗಳಾದ ಹರ್ಷದ್ ಮೆಹೆತಾ ಮತ್ತು ಚೇತನ್ ಪಾರೀಖ್ ನಂತರದ ಬಹು ದೊಡ್ಡ ವಂಚಕರ ಸ್ಥಾನವನ್ನು ರಾಮಲಿಂಗ ರಾಜು ಮತ್ತು ಸೋದರರು ಪಡೆದುಕೊಂಡಿದ್ದಾರೆ.

ಭಾರತದಲ್ಲಿ ಇಂಥ ವಂಚಕರಿಗೆ ಕೊರತೆಯೇನೂ ಇಲ್ಲ. ಒಂದು ಕಡೆ ರಾಜಕಾರಣಿಗಳು ದೇಶವನ್ನು ಕಿತ್ತು ತಿನ್ನುತ್ತಿದ್ದರೆ. ಇನ್ನೊಂದು ಕಡೆ ಅಧಿಕಾರ ಶಾಹಿ ಅವರಿಗೆ ಸಾಥ್ ನೀಡುತ್ತಿದೆ. ಆದರೆ ಐಟಿ ಕ್ಷೇತ್ರ ಇದಕ್ಕೆ ಕಾಲಿಟ್ಟಿದ್ದು ಮಾತ್ರ ಜನರಿಗೆ ತೀವ್ರ ನಿರಾಶೆಯನ್ನುಂಟುಮಾಡಿದೆ.

ಮಧ್ಯಮ ವರ್ಗ ಮತ್ತು ಮೇಲ್ ಮಧ್ಯಮ ವರ್ಗದವರು ಇಡೀ ದೇಶಕ್ಕೆ ಪರ್ಯಾಯವೇ ಈ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಎಂದು ನಂಬಿಕೊಂಡಿದ್ದರು. ತಮ್ಮ ಜೀವನದ ಸಾಧನೆ, ಗುರಿ ಮತ್ತು ಮೋಕ್ಷ ಎಲ್ಲವೂ ಮಾಹಿತಿ ತಂತ್ರಜ್ಞಾನದ ಮೂಲಕ ಮಾತ್ರ ಸಾಧ್ಯವಾಗುತ್ತದೆ ಎಂದು ಭಾವಿಸಿದ್ದರು. ರಾಜಕಾರಣ, ಅಧಿಕಾರಶಾಹಿಗಳೆಲ್ಲ ಕೊಳೆತು ಹೋಗಿವೆ. ದೇಶವನ್ನು ಪಾರು ಮಾಡಲು ಇರುವ ಏಕೈಕ ಮಾರ್ಗ ಐಟಿ ಕ್ಷೇತ್ರ ಎಂದೇ ಮಾಧ್ಯಮಗಳೂ ಬಿಂಬಿಸುತ್ತಿದ್ದವು. ನಾರಾಯಣ ಮೂರ್ತಿ, ಅಜಿಂ ಪ್ರೇಮ್‌ಜಿಗಳ ಹೊರತಾಗಿ ದೇಶದಲ್ಲಿ ನೇತಾರರೇ ಇಲ್ಲ ಎಂದೂ ಪ್ರಚಾರ ಮಾಡಲಾಗುತ್ತಿತ್ತು! ಅಷ್ಟೇ ಏಕೆ ಯುವ ಜನರ ಆದರ್ಶ–ಆಶಾಕಿರಣವೇ ಈ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಎಂಬ ವಾತಾವರಣವನ್ನು ನಿರ್ಮಿಸಲಾಗಿತ್ತು!

ಜಾಗತಿಕ ಅರ್ಥ ವ್ಯವಸ್ಥೆಯ ಕುಸಿತದೊಂದಿಗೆ ಐಟಿ ಉದ್ಯಮದ ಕುಸಿತವೂ ಆರಂಭವಾಯಿತಾದರೂ, ಹೊಸ ವರ್ಷ ಆರಂಭವಾದ ಒಂದೇ ವಾರದಲ್ಲಿ ಮಾಧ್ಯಮಗಳಲ್ಲಿ ಕಾಣಿಸಿಕೊಂಡ ಸುದ್ದಿ ಐಟಿ ಉದ್ಯಮದ ಮುಖವಾಡವನ್ನು ಕಳಚಿ ಹಾಕಿ ದೊಡ್ಡ ಆಘಾತವನ್ನೇ ನೀಡಿತು. ದೇಶದ ನಾಲ್ಕನೇ ಬೃಹತ್ ಐಟಿ ಉದ್ದಿಮೆಯಾಗಿದ್ದ ಸತ್ಯಂ ಕಂಪ್ಯೂಟರ್ಸ್‌ನ ಮಹಾವಂಚನೆ ಇಡೀ ಉದ್ಯಮದ ನೈತಿಕತೆಯನ್ನೇ ಅಡಿಗಿಸಿ ಬಿಟ್ಟಿತು.

ಕಳೆದ ಕೆಲವು ತಿಂಗಳುಗಳಿಂದೀಚೆಗೆ ಆರಂಭವಾದ ಆರ್ಥಿಕ ಕುಸಿತದಿಂದಾಗಿ ಲಕ್ಷಾಂತರ ಮಂದಿ ಐಟಿ ಉದ್ಯೋಗಿಗಳು ಕೆಲಸ ಕಳೆದುಕೊಂಡು ಮನೆ ಸೇರಿದ್ದರೆ, ಉಳಿದವರು ವೇತನ, ಭತ್ಯೆಗಳ ಕಡಿತದಿಂದಾಗಿ ತಮ್ಮ ವೈಭವೋಪೇತ ಜೀವನ ಶೈಲಿಯಿಂದ ವಾಸ್ತವಕ್ಕೆ ಮರಳುತ್ತ ಸುಧಾರಿಸಿಕೊಳ್ಳುತ್ತಿದ್ದರು. ಈ ಹಿನ್ನೆಡೆಯಿಂದಾಗಿ ತಮ್ಮ ಮಕ್ಕಳ ಭವಿಷ್ಯವನ್ನು ಕೇವಲ ಐಟಿ–ಬಿಟಿಗಳಲ್ಲಿ ಹುಡುಕುತ್ತಿದ್ದ ಪೋಷಕರು ಹೊಸ ಹೊಸ ಕೋರ್ಸ್‌ಗಳ ಮೂಲಕ ಕಂಡುಕೊಳ್ಳುವ ಧಾವಂತದಲ್ಲಿದ್ದರು.

ಸತ್ಯಂ ಹಗರಣವನ್ನು ಅರಗಿಸಿಕೊಳ್ಳಲು ಪರದಾಡುತ್ತಿದ್ದ ಜನರಿಗೆ ಮತ್ತೊಂದು ಆಘಾತ ಕಾದಿತ್ತು. ಅದು ವಿಪ್ರೋ ಸಂಸ್ಥೆಗೆ ವಿಶ್ವಬ್ಯಾಂಕ್ ಹೇರಿದ ನಿಷೇಧ. ಇಂಥದೇ ನಿಷೇಧಕ್ಕೆ ಸತ್ಯಂ ಕಂಪ್ಯೂಟರ್ಸ್ ೮ ತಿಂಗಳ ಹಿಂದೆಯೇ ಗುರಿಯಾಗಿತ್ತು. ಪ್ರಾಜೆಕ್ಟ್ ಪಡೆಯಲು ವಿಶ್ವಬ್ಯಾಂಕ್ ಅಧಿಕಾರಿಗಳಿಗೆ ಲಂಚ ನೀಡಿದ ಅಪಾದನೆಗೆ ಸತ್ಯಂ ಗುರಿಯಾಗಿತ್ತು. ಸತ್ಯಂನ ವಂಚನೆಯ ಜಾಲ ಎಷ್ಟು ಆಳ ವಿಸ್ತಾರ ಪಡೆದಿದೆ ಎನ್ನುವುದು ಇಂದು ಯಾರ ಲೆಕ್ಕಕ್ಕೂ ಸಿಗುತ್ತಿಲ್ಲ. ಸುಮಾರು ೧೩ ಸಾವಿರ ಮಂದಿ ಉದ್ಯೋಗಿಗಳ ಲೆಕ್ಕವನ್ನೇ ಸತ್ಯಂ ನಕಲುಮಾಡಿತ್ತು ಎಂಬುದು ಬಯಲಾದ ಮೇಲಂತೂ ವಂಚನೆಯ ಅಗಾಧತೆ ಅರಿವಾಗುತ್ತಿದೆ.

ದೇಶದಲ್ಲಿ ಇಂದು ಸಾವಿರಾರು ಐಟಿ ಕಂಪೆನಿಗಳು ಕಾರ್ಯನಿರ್ವಹಿಸುತ್ತಿವೆಯಾದರೂ, ಇವತ್ತಿನ ಆರ್ಥಿಕ ಹಿಂಜರಿತದಲ್ಲಿ ತಮ್ಮ ಸುರಕ್ಷತೆ ಕಾಪಾಡಿಕೊಂಡಿರುವ ಸಂಸ್ಥೆಗಳು ಕೇವಲ ಮೂರು ಮಾತ್ರ. ನಾಲ್ಕನೆಯದೆಂದು ಗುರುತಿಸಲಾಗಿದ್ದ ಸತ್ಯಂ ಮುಳುಗಿದ ರೀತಿಯನ್ನು ನೋಡಿದರೆ ಉಳಿದ ಮೂರು ಸಂಸ್ಥೆಗಳ ಬಗ್ಗೆ ಕೂಡ ಸಾರ್ವಜನಿಕರಲ್ಲಿ ಅನುಮಾನಗಳು ಮೂಡಿವೆ. ಬಹಿರಂಗ ದರ್ಶನದಲ್ಲಿ ಮಾತ್ರ ಲಾಭ–ಸುಸ್ಥಿತಿ ಎಂದೆಲ್ಲ ಲೆಕ್ಕ ತೋರಿಸುವ ಯಾವ ಕಂಪೆನಿಯ ಒಳಗೆ ಇನ್ನೆಷ್ಟು 'ಸತ್ಯಂ ರಾಜ'ರುಗಳು ಅಡಗಿದ್ದಾರೆನ್ನುವ ಆತಂಕವೂ ಜನರನ್ನು ಕಾಡುತ್ತಿದೆ.

ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶಗಳನ್ನು ನೋಡೋಣ. ಸಣ್ಣ ಪ್ರಮಾಣದಲ್ಲಿ ಆರಂಭವಾದ ಈ ಐಟಿ ಕಂಪೆನಿಗಳು ಹೇಗೆ ಬೆಳಗಾಗುವಷ್ಟರಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಲಾಭ ಪಡೆದವು? ಭಾರತದ ಒಟ್ಟು ನೌಕರಿಗಳಲ್ಲಿ ಬಹಳ ಅತ್ಯಲ್ಪ ಸಂಖ್ಯೆಯ ಐಟಿ ನೌಕರಿಗಳು ಹೇಗೆ ಲಕ್ಷಾಂತರ ಸಂಬಳ ಗಿಟ್ಟಿಸಬಲ್ಲವು? ಶ್ರಮಕ್ಕೆ ಮೀರಿದ ಗಳಿಕೆ ಈ ಉದ್ಯಮದಲ್ಲಿ ಹೇಗೆ ಸಾಧ್ಯವಾಯಿತು? ಇಂಥ ಅವಾಸ್ತವ ಗಳಿಕೆಯ ಕ್ರಮ ಸಮಾಜದ ನೈತಿಕತೆಗೆ ದೊಡ್ಡ ಆಘಾತವಲ್ಲವೆ? ಭಾರತದಂತ ದೇಶದಲ್ಲಿ ಈ ಬಗೆಯ ಗಳಿಕೆಯ ಅಂತರ ಎಂಥ ವೈರುದ್ಯಗಳನ್ನು, ಅರಾಜಕತೆಗಳನ್ನು ಹುಟ್ಟಿಹಾಕಬಹುದು? ಈ ಸಂಸ್ಥೆಗಳ ವ್ಯವಹಾರಕ್ಕೂ ಮೀಟರ್ ಬಡ್ಡಿ ವ್ಯವಹಾರಕ್ಕೂ ಏನಾದರೂ ವ್ಯತ್ಯಾಸವಿದೆಯೆ?

ಇವು ಹತಾಷೆಯ ಪ್ರಶ್ನೆಗಳಲ್ಲ. ದಿನವೆಲ್ಲಾ ದುಡಿದರೂ ಎರಡು ಹೊತ್ತಿನ ಗಂಜಿಗೂ ಗತಿಯಿಲ್ಲದೆ, ಹಸಿವಿನಿಂದ ಸಾಯುವ ಜನ ಇರುವ ನಾಡಿನಲ್ಲಿ, ವಾರಾಂತ್ಯದ ಮೋಜಿಗೆ ಹತ್ತಾರು ಸಾವಿರ ವ್ಯಯಿಸುವ ಜನರೂ ಇರುವುದು ಎಂಥ ವಿಪರ್ಯಾಸ! ಇಂಥ ವಿಪರ್ಯಾಸವನ್ನು ಕೊಂಡಾಡುವ ಮಾಧ್ಯಮಗಳು ಹಾಗೂ ಅದನ್ನು ಪೋಷಿಸುವ ಸರ್ಕಾರ ದೇಶವನ್ನು ಎತ್ತ ಕೊಂಡೊಯ್ಯುತ್ತಿವೆ ಎಂಬ ಕಾಳಜಿ ಇಂಥ ಪ್ರಶ್ನೆಗಳನ್ನು ಹುಟ್ಟಿ ಹಾಕುತ್ತಿವೆ. ೯೦ ರ ದಶಕದಿಂದ ಆರಂಭವಾದ ಜಾಗತೀಕರಣ, ಉದಾರೀಕರಣ, ಹಾಗೂ ಖಾಸಗೀಕರಣದ ಪ್ರಕ್ರಿಯೆ ಇಡೀ ಜಾಗತಿಕ ಮನಸ್ಥಿತಿಯನ್ನು ಎಷ್ಟೊಂದು ಕ್ರೌರ್ಯ ಹಾಗೂ ಹತಾಷೆಗೆ ದೂಡುತ್ತಿವೆ ಎನ್ನುವುದಕ್ಕೆ ಐಟಿ ಉದ್ಯಮದ ಏಳು ಬೀಳುಗಳ ಉತ್ತಮ ಉದಾಹರಣೆಯಾಗುತ್ತದೆ.

ಇವತ್ತಿನ ವಿಶೇಷ ಆರ್ಥಿಕ ವಲಯಗಳ ಬಗ್ಗೆ (SEZ) ಕೂಡ ನಾವು ಎಚ್ಚರಿಕೆ ವಹಿಸದಿದ್ದರೆ ಭಾರತೀಯ ಸಮಾಜ ಮತ್ತೊಂದು ದುರಂತಕ್ಕೆ ಸಿದ್ಧವಾಗಬೇಕಾಗುತ್ತದೆ. ಕೈಗಾರಿಕಾಭಿವೃದ್ಧಿ ಮಾತ್ರ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಬಲ್ಲದು ಎಂಬುದು ಈಗಾಗಲೇ ಹುಸಿಯಾಗಿರುವ ನಂಬಿಕೆ. ಸಮಾನತೆ ಮತ್ತು ಅಭಿವೃದ್ಧಿ, ಜತೆ ಜತೆಯಲ್ಲೇ ನಡೆಯಬೇಕು ಹಾಗೂ ಸಮಾಜದ ಸರ್ವಜನರೂ ಆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಾಗಬೇಕು. ಆಗ ಮಾತ್ರ ಪ್ರಗತಿ ಸಾಧ್ಯವಾಗುತ್ತದೆಯೇ ಹೊರತು ಬರೀ ಕೈಗಾರಿಕೆಗಳ ಸ್ಥಾಪನೆಯಿಂದಲ್ಲ. ಇಂಥ ಅರಿವಿನ ಮೂಲಕ ಕ್ರಿಯಾಶೀಲರಾಗುವ ಇಚ್ಛಾಶಕ್ತಿ ಭಾರತೀಯ ನಾಯಕತ್ವಕ್ಕೆ ದಕ್ಕಲಿ ಎಂದು 'ಸಂವಾದ' ಹಾರೈಸುತ್ತದೆ.

○ ಇಂದೂಧರ ಹೊನ್ನಾಪುರ

ಜಾತಿ, ಧರ್ಮ, ತಾರತಮ್ಯ ಚರ್ಚೆ:

ಬಾಲು ಜತೆ ನಾಭೂ ಮಾತುಕತೆ!?

ಜಾತಿ, ಧರ್ಮ, ತಾರತಮ್ಯ ಕುರಿತಂತೆ 'ಸಂವಾದ'ದಲ್ಲಿ ಈ ಹಿಂದೆ ಪ್ರಕಟವಾದ ದೀರ್ಘ ಚರ್ಚೆಯನ್ನು ತಾವೆಲ್ಲ ಗಮನಿಸಿದ್ದೀರಿ. ವ್ಯಾಪಕವಾದ ಮತ್ತು ಮೌಲಿಕವಾದ ಈ ಚರ್ಚೆಯನ್ನು ಕಳೆದ ಸಂಚಿಕೆಯಲ್ಲಿ ಮುಕ್ತಾಯಗೊಳಿಸಲಾಗಿತ್ತು. ಆದರೆ ಈ ಚರ್ಚೆಗೆ ಮೂಲ ಕಾರಣರಾದ ಬಾಲಗಂಗಾಧರ ರಾವ್ ಅವರು ಈಚೆಗೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ನಮ್ಮ ಬರಹಗಾರರಾದ ಡಿ.ಎಸ್.ನಾಗಭೂಷಣ್ ಅವರಿಗೆ ಸಿಕ್ಕಿದ್ದಾಗ ನಡೆದ ಮಾತು ಕಥೆ(?) ತುಂಬಾ ಸೌಜನ್ಯ ಪೂರಿತವೂ, ಸುಸಂಸ್ಕೃತವೂ, ವಿಚಾರ ಪ್ರಚೋದಕವಾಗಿಯೂ ಇತ್ತು! ಜಾತಿ, ಧರ್ಮ, ತಾರತಮ್ಯ ಕುರಿತ ಇಡೀ ಚರ್ಚೆಗೆ ಇದು ವಿಶೇಷ ಆಯಾಮ ನೀಡುವುದರಿಂದ ಅದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಈ ಕುರಿತು ಚರ್ಚೆಯನ್ನು ಮುಂದುವರೆಸುವುದಿಲ್ಲವಾದ್ದರಿಂದ ದಯವಿಟ್ಟು ಯಾರೂ ಪ್ರತಿಕ್ರಿಯಿಸಬಾರದಾಗಿ ವಿನಂತಿ!

ಡಿ.ಎಸ್.ನಾಗಭೂಷಣ

ಭಾರತದ ಜಾತಿ ಪದ್ಧತಿಯನ್ನು ಕುರಿತ ಪ್ರೊ. ಎಸ್.ಎನ್. ಬಾಲಗಂಗಾಧರರ ಜಿಜ್ಞಾಸೆಗೆ ಸಂಬಂಧಿಸಿದಂತೆ 'ಸಂವಾದ'ದ ಕಳೆದ ಮೂರ್ನಾಲ್ಕು ಸಂಚಿಕೆಗಳಲ್ಲಿ ನಡೆದ ಚರ್ಚೆಯನ್ನು, ಡಾ.ರಾಜಾರಾಂ ಹೆಗಡೆಯವರ ಲೇಖನಕ್ಕೆ ನಾನು ನೀಡಿದ ಉತ್ತರದೊಂದಿಗೆ ಪತ್ರಿಕೆಯ ಸಂಪಾದಕರು ಮುಕ್ತಾಯಗೊಳಿಸಲು ನಿರ್ಧರಿಸಿದ್ದಾರೆ. ಹಾಗಾಗಿ ನಾನು ಇಲ್ಲಿ ಈ ಚರ್ಚೆಯನ್ನು ಮುಂದುವರೆಸುತ್ತಿಲ್ಲ. ಬದಲಿಗೆ, ಬಾಲಗಂಗಾಧರರೊಂದಿಗೆ ಇತ್ತೀಚೆಗೆ ಆಕಸ್ಮಿಕವೆಂಬಂತೆ ನಡೆದ ನನ್ನ ಮಾತುಕತೆಯನ್ನು ಯಾವುದೇ ಟೀಕೆ-ಟಿಪ್ಪಣಿ ಇಲ್ಲದೆ ಇಲ್ಲಿ ನೀಡುತ್ತಿರುವೆ. ಅದರ ಮೂಲಕವೇ ಓದುಗರು ಅವರ ಸಂಶೋಧನೆಯ ರೀತಿ ನೀತಿಗಳ ಬಗ್ಗೆ ತಮ್ಮದೇ ತೀರ್ಮಾನಗಳಿಗೆ ಬರಬಹುದು.

ಇದೇ ಜನವರಿ ೧೮ ಹಾಗೂ ೧೯ರಂದು ಕುವೆಂಪು ವಿಶ್ವವಿದ್ಯಾಲಯದಲ್ಲಿ ಬೆಲ್ಜಿಯಂನ ಘೆಂಟ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ, ಬಾಲಗಂಗಾಧರರೇ ಪೋಷಕರಾಗಿರುವ *ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ*ದ 'Dharma and Ethics' ಎಂಬ ಶೀರ್ಷಿಕೆಯ ಸಮ್ಮೇಳನ ಸರಣಿಯ ಭಾಗವಾಗಿ ಏರ್ಪಡಿಸಿದ್ದ ಭಾರತದ ರಾಜಕೀಯ ಚಿಂತಕರ ಬಗೆಗಿನ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಅವರು ಬಂದಿದ್ದರು. ೧೯ರಂದು ವಿಚಾರ ಸಂಕಿರಣ ಮುಕ್ತಾಯವಾದ ಮೇಲೆ ಎಲ್ಲರೂ ಸಭಾ ಭವನದ ಹೊರಕ್ಕೆ ಬಂದಾಗ, ಅಕಸ್ಮತ್ತಾಗಿ ಅವರು ಬಹು ಹತ್ತಿರದಲ್ಲಿ ನನಗೆ ಎದುರಾದಾಗ ನಾನು ನಮಸ್ಕರಿಸಿ ನನ್ನ ಹೆಸರು ಹೇಳಿದೆ. ಅವರೂ ವಿಶ್ವಾಸದಿಂದ ಪ್ರತಿಸ್ಪಂದಿಸಿದಾಗ, ಜಾತಿ ಪದ್ಧತಿ ಕುರಿತ ಅವರ ಜಿಜ್ಞಾಸೆಯ ಬಗೆಗಿನ ಕುರಿತ ನನ್ನ ಸಂದೇಹಗಳನ್ನು ಅವರ ಮುಂದಿಡುವ ಮನಸ್ಸಾಯಿತು. ಅಂದಿನ ಮಧ್ಯಾಹ್ನದ ಊಟದ ವೇಳೆಯಲ್ಲಿ ತೀರ್ಥಹಳ್ಳಿಯ ಗೆಳೆಯ ಶ್ರೀಧರ್ ಅವರು, 'ಸಂವಾದ'ದಲ್ಲಿ ಪ್ರಸ್ತಾಪಿಸಿದ್ದ ನಿಮ್ಮ ಪ್ರಶ್ನೆಯನ್ನು ಈಗ ಅವರನ್ನೇ ಕೇಳಿ ಉತ್ತರ ಪಡೆಯಿರಿ ಎಂದು ಒತ್ತಾಯಪೂರ್ವಕವಾಗಿ ಸೂಚಿಸಿದ್ದರು. ಆದರೆ ಈ ಸೂಚನೆಯನ್ನು ಆಗ ದೊಡ್ಡ ಮನುಷ್ಯರ ವೈಯುಕ್ತಿಕ ಸಹವಾಸ ಬೇಡವೆಂದು ತಿರಸ್ಕರಿಸಿದ್ದೆನಾದರೂ, ಈಗ ಅವರ ವಿಶ್ವಾಸದ ಪ್ರತಿಸ್ಪಂದನದ ಸಂದರ್ಭದಲ್ಲಿ ಅದನ್ನು ಕೇಳಿಯೇ ಬಿಡುವ ಉಮೇದು ಉಂಟಾಯಿತು.

ನಾನು ಬಾಲಗಂಗಾಧರರಿಗೆ ನನ್ನ ಲೇಖನದಲ್ಲಿದ್ದ ನನ್ನ ಪ್ರಶ್ನೆಯನ್ನು ಯಾರೋ ಅಂತರ್ಜಾಲಕ್ಕೆ ಹಾಕಿದುದನ್ನೂ, ಅದಕ್ಕೆ ಅವರು ಪ್ರಶ್ನೆಯೇ ಅರ್ಥವಾಗಿಲ್ಲ ಎಂದು ಉತ್ತರಿಸಿದುದನ್ನೂ ನೆನಪಿಸಿದೆ. ಅದು ಅವರ ನೆನಪಿಗೂ ಬಂದು, ಸಾಕಷ್ಟು ಉತ್ಸಾಹದಿಂದಲೇ ನನ್ನನ್ನು ಒಂದು ಪಕ್ಕಕ್ಕೆ ಕರೆದು ಕುರ್ಚಿಯೊಂದನ್ನು ಎಳೆದು ಕೂತು, ಈಗ ನಿಮ್ಮ ಪ್ರಶ್ನೆಯನ್ನು ನನಗೆ ವಿವರಿಸಿ ಎಂದರು. ಸರಳ ಕನ್ನಡದಲ್ಲಿದ್ದ ಎರಡು ವಾಕ್ಯಗಳ ನನ್ನ ಪ್ರಶ್ನೆಯನ್ನು ಇಂಗ್ಲಿಷಿಗೆ ಅನುವಾದಿಸಿ ಅವರಿಗೆ ತಲುಪಿಸಲು ಅವರ ಅನುಯಾಯಿಗಳೋ, ಅಭಿಮಾನಿಗಳೋ ಪಟ್ಟಿರುವ ಕಷ್ಟದ ಬಗ್ಗೆ; ಆದರೂ ಅದು ಅವರಿಗೆ ಅರ್ಥವಾಗದಂತಿರುವುದರ ಬಗ್ಗೆ ನನ್ನ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ ನನ್ನ ಪ್ರಶ್ನೆಯನ್ನು ಮತ್ತೆ ಅವರ ಮುಂದಿಟ್ಟೆ. ಅಲ್ಲಿಂದ ಮುಂದೆ ಕನ್ನಡದಲ್ಲೇ ನಮ್ಮಿಬ್ಬರ ನಡುವೆ ಸಂಭಾಷಣೆ ಹೀಗಿದೆ:

ನಾನು: ನನ್ನ ಪ್ರಶ್ನೆ ಇಷ್ಟೆ ನೀವು ಜಾತಿ ಇದೆ ಎನ್ನುವುದನ್ನು ಒಪ್ಪುತ್ತೀರಿ. ಜಾತಿ ತಾರತಮ್ಯವಿದೆ ಎನ್ನುವುದನ್ನೂ ಒಪ್ಪುತ್ತೀರಿ. ಆದರೆ ಈ ತಾರತಮ್ಯ ಯಾವುದರಿಂದ ಸೃಷ್ಟಿಯಾಗುತ್ತಿದೆ? ಅದಕ್ಕೊಂದು ಕಾರಣ ಮತ್ತು ಆ ಕಾರಣ ಕಾರ್ಯರೂಪಕ್ಕೆ ಬರಲು ಒಂದು mechanism ಇರಲೇ ಬೇಕಲ್ಲವೆ?

ಬಾಲ ಗಂಗಾಧರ: ಹಾಂ! ಅದನ್ನೇ ನಾವು ನಮ್ಮ ಸಂಶೋಧನೆಯ ಮೂಲಕ ಹುಡುಕುತ್ತಿರುವುದು.

ನಾ: ಈಗಾಗಲೇ ಇಲ್ಲ ಎಂದು ನೀವೇ ಹೇಳುತ್ತಿರುವುದನ್ನು ಹುಡುಕುತ್ತಿದ್ದೇವೆ ಎಂದರೆ ಏನರ್ಥ?

ಬಾ: Caste ಅನ್ನುವುದು ಒಂದು System ರೂಪದಲ್ಲಿ ಇಲ್ಲ ಎಂದು ನಾವು ಹೇಳುತ್ತಿರುವುದು.

ನಾ: ನೀವು ಭಾರತದ ಜಾತಿ ಪದ್ಧತಿ ಎಂಬುದನ್ನು Caste System ಎಂದು ಇಂಗ್ಲಿಷ್‌ಗೆ ಅನುವಾದಿಸಿಕೊಂಡು, System ಎಂಬುದಕ್ಕೆ ಇಂಗ್ಲಿಷ್ ಸಂದರ್ಭದಲ್ಲಿ ಇರುವ ಅರ್ಥವನ್ನು ಅದಕ್ಕೆ ಆರೋಪಿಸಿಕೊಂಡಿದ್ದೀರಿ. ಹಾಗಾಗಿ, ಅದೆಲ್ಲ ಜಾತಿಗೆ ಸಂಬಂಧಿಸಿದಂತೆ ಇಲ್ಲ ಎನ್ನುತ್ತಿದ್ದೀರಿ ಎಂದು ಕಾಣುತ್ತದೆ. ಅದರಿಂದ ಏನು ಪ್ರಯೋಜನ ? ವಾಸ್ತವವಾಗಿ ಇಲ್ಲಿರುವುದು ಜಾತಿ ಪದ್ಧತಿ ಅಲ್ವಾ? ಅದನ್ನಾದರೂ ಒಪ್ಪಿಕೊಳ್ಳುತ್ತೀರಾ?

ಬಾ: ಓ! ಹಾಗಾದರೆ ಪದ್ಧತಿ ಎಂದರೇನು?

ನಾ: ಪದ್ಧತಿ ಅಂದರೆ, ಪದ-ಹತಿ. ಹೆಜ್ಜೆಗಳನ್ನಿಟ್ಟು ಆದ ದಾರಿ. ನನ್ನ ತಂದೆ ಆಚರಿಸಿದ್ದನ್ನು ನಾನು ಆಚರಿಸುವುದು. ಅದನ್ನು ನನ್ನ ಮಗ ಆಚರಿಸುವುದು. ಹಿಂದಿನ ತಲೆಮಾರು ಆಚರಿಸಿದ್ದನ್ನು ಮುಂದಿನ ತಲೆಮಾರು ಆಚರಿಸುವುದು.

ಬಾ: ಜಾತಿ ಪದ್ಧತಿಗೆ ಇದು ಅನ್ವಯಿಸುವುದಿಲ್ಲವಲ್ಲ? ಜಾತಿ ಪದ್ಧತಿಗೆ ಆಚರಣೆಯ ಸಾಮಾನ್ಯ ನಿಯಮಾವಳಿ ಎಂಬುದೆಲ್ಲಿದೆ ತೋರಿಸಿ.

ನಾ: ನೀವು ಯಾವ ಮಟ್ಟದ ಸಾಮಾನ್ಯ ನಿಯಮಾವಳಿ ಬಗ್ಗೆ ಮಾತಾಡುತ್ತೀದ್ದೀರೋ ತಿಳಿಯದು. System ಎಂಬ ನಿಮ್ಮ ಕಲ್ಪನೆಗನುಸಾರವಾದ ಸಾಮಾನ್ಯ ನಿಯಮಾವಳಿ ಇಲ್ಲದಿರಬಹುದು. ಆದರೆ ಜಾತಿ ಪದ್ಧತಿ, ಇತಿಹಾಸದಲ್ಲಿ ಕಾಲ-ದೇಶ-ರಾಜಕಾರಣಕ್ಕೆ ಅನುಸಾರವಾಗಿ ಹಲವು ರೂಪಗಳನ್ನು ಪಡೆದು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ಕೆಲಸ ಮಾಡುತ್ತಿದೆ. ಭಾರತದಾದ್ಯಂತ ಜಾತಿ ಪದ್ಧತಿಗೆ ಒಂದೇ ನಿಯಮಾವಳಿ ಇದೆ ಎಂದು ಯಾರೂ ಹೇಳುತ್ತಿಲ್ಲ.

ಬಾ: ಹಾಗಾದರೆ ಅದನ್ನು ಪದ್ಧತಿ ಅಂತಲಾದರೂ ಹೇಗೇ ಕರೀತೀರಿ?

ನಾ: ನಿಮ್ಮಲ್ಲಿ ಭಾರತ ಎನ್ನುವುದು ಒಂದು ಸ್ಥಿರ ಕಲ್ಪನೆ ಆದಾಗ ಇಂತಹ ಪ್ರಶ್ನೆಗಳು ಹುಟ್ಟುತ್ತವೆ. ಜಾತಿ ಅನ್ನುವುದು ಒಂದು ನಿರಂತರ ಆಚರಣೆಯಾಗಿ ಇಲ್ಲಿಯವರೆಗೆ ಮುಂದುವರೆದು ಬಂದಿದೆ ಎನ್ನುವ ಅರ್ಥದಲ್ಲಿ ಅದು ಪದ್ಧತಿ. ಅದು ಬೇರೆ ಬೇರೆ ಕಡೆ ಬೇರೆ ಬೇರೆ ರೀತಿಯಲ್ಲಿ ರೂಪಾಂತರವಾಗಿರಬಹುದು.

ಬಾ: ಹಾಗಾದರೆ, ಒಂದೇ ಪ್ರದೇಶದಲ್ಲಿ ಹಲವು ಜಾತಿಗಳು ಒಂದೇ ರೀತಿಯ ಆಚರಣೆಗಳನ್ನು ಮಾಡುತ್ತಾರಲ್ಲ? ಅದನ್ನು ಹೇಗೆ ವಿವರಿಸ್ತೀರಾ? ಉತ್ತರ ಕರ್ನಾಟಕಕ್ಕೆ ಹೋಗಿ. ಅಲ್ಲಿ ಎಲ್ಲ

ಜಾತಿಯವರೂ ಗಣಪತಿ ಪೂಜೆ ಮಾಡ್ತಾರೆ! ನಿಮಗಿದು ಗೊತ್ತ?

ನಾ: ಮಾಡಬಹುದೇನೋ. ಅದರೆ ಅದಕ್ಕೂ ಜಾತಿ ಪದ್ಧತಿಯ ಆಚರಣೆಗೂ ಏನು ಸಂಬಂಧ?

ಬಾ: ಹಾಗಾದರೆ ಜಾತಿ ಎಂದರೆ ನಿಮ್ಮ ಪ್ರಕಾರ ಏನು?

ನಾ: ಹುಟ್ಟಿನಿಂದ ಕಸುಬು ಮತ್ತು ಸಾಮಾಜಿಕ ಸ್ಥಾನಮಾನಗಳ ನಿರ್ಧಾರ. ಅಂತಹ ಪದ್ಧತಿಯಿಂದ ಆದ ಸಾಮಾಜಿಕ ಅನಾಹುತಗಳು, ಸಮಾಜದ ಅಸಹಜ, ಅನ್ಯಾಯದ ವಿಭಾಗೀಕರಣ... ಕೆಲವರ ಕೈಯಲ್ಲೇ ಕೆಲವು ಅಧಿಕಾರಗಳು.... ಒಂದು ರೀತಿಯ heiarchy....

ಬಾ: ಯಾವ hierachyರೀ? ಎಲ್ಲಿದೆ ಅದು ತೋರಿಸಿ ಮೊದಲು...

ನಾ: ಅದೆಲ್ಲ ಇಲ್ಲ ಅಂತ ನೀವು ತೀರ್ಮಾನಿಸಿಕೊಂಡು, ನೋಡೋಕ್ಕೇ ತಯಾರಿಲ್ಲದಿದ್ದರೆ ನಾವು ತೋರಿಸೋದಾದ್ರೂ ಹ್ಯಾಗೆ? ಜಾತಿಪದ್ಧತಿನೇ hierachy... ಓದು-ಬರಹ-ಅಧ್ಯಯನ ಇಂತಹವರಿಗಷ್ಟೇ ಮೀಸಲು... ಮತ್ತೊಂದು ಮತ್ತೊಬ್ಬರಿಗೆ ಮೀಸಲು..... ಬೇರೆಯವರು ಅದನ್ನು ಮಾಡುವಂತಿಲ್ಲ ಅನ್ನೋ ವಿಧಿ-ನಿಷೇಧಗಳು... ಇದರ ಪರಿಣಾಮ ಏನಾಯ್ತು? ಕೆಲವರು ಶ್ರೇಷ್ಠರು ಅನ್ನಿಸಿಕೊಂಡ್ರು... ಇನ್ನು ಕೆಲವರು ಕೀಳು ಅನ್ನಿಸಿಕೊಂಡ್ರು... ಇದರಿಂದ ಅನೇಕ ತಾರತಮ್ಯಗಳು ಶುರುವಾದ್ವು.... ಹಾಗಾಗಿ ಇದೊಂದು ನಿಮ್ಮ ಅರ್ಥದಲ್ಲಲ್ಲದಿದ್ರೂ, ಸಾಮಾನ್ಯ ಅರ್ಥದಲ್ಲಿ ಒಂದು ವ್ಯವಸ್ಥೆಯಾಗಿಯೇ ಕೆಲಸ ಮಾಡಿದೆ ಅನ್ಸುತ್ತೆ.

ಬಾ: ಸುಮ್ಮನೆ ಮಾತಾಡಬೇಡಿ.....ಇದಕ್ಕೆಲ್ಲಿದೆ ಸಾಬೀತು? ಏನು ಮಾಹಿತಿ, ಸಂಶೋಧನೆ ಇದೆ ನಿಮ್ಮತ್ರ ಈ ಬಗ್ಗೆ? ಕೇಳಿ ಇಲ್ಲಿ, ಲೆಕ್ಕ ಯಾರಿಗೆ ಬೇಕಿತ್ತು? ವೈಶ್ಯರಿಗಲ್ವ? ಅವರು ವಿದ್ಯೆ ಕಲೀದೆ ಲೆಕ್ಕ ಬಂತಾ ಅವರಿಗೆ?

ನಾ: ನೋಡಿ, ಈ ಲೆಕ್ಕ-ಪಕ್ಕಕ್ಕೆ ಸಂಬಂಧಿಸಿದ ವಿದ್ಯೆ ಬಗ್ಗೆ ಅಲ್ಲ ನಾನು ಮಾತನಾಡ್ತಿರೋದು. ಧಾರ್ಮಿಕ ಅಧ್ಯಯನ, ಧಾರ್ಮಿಕ ಕಾನೂನು, ನಿಯಮಗಳ ರಚನೆಯ ವಿಷಯ ನಾನು ಮಾತನಾಡ್ತಿರೋದು. ಅಲ್ಲೇ ತಾನೇ ಯಜಮಾನಿಕೆ, ಅಧಿಕಾರ, ಶ್ರೇಷ್ಠತೆಗಳ ಪ್ರಶ್ನೆಗಳು ಹುಟ್ಟೋದು?

ಬಾ: ಏನೂ ಅಧ್ಯಯನ ಮಾಡದೆ ಸುಮ್ಮನೆ ಮಾತನಾಡಬೇಡಿ. ಧರ್ಮಪಾಲರ 'ದಿ ಬ್ಯೂಟಿಫುಲ್ ಟ್ರೀ' ಓದಿ. ೧೮-೧೯ನೇ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿದ್ದ ಶಾಲೆಗಳಲ್ಲಿ ಎಷ್ಟು ಜನ ಬ್ರಾಹ್ಮಣರಿದ್ದರು, ಎಷ್ಟು ಜನ ಇತರ ಜಾತಿಯವರಿದ್ದರು ಅನ್ನೋದು ಅದರಲ್ಲಿ ಇದೆ. ಅದನ್ನು ಓದಿಕೊಂಡು ಮಾತಾಡಿ.

ನಾ: ನಾನೂ ಅದನ್ನು ಓದಿದ್ದೇನೆ. ಆದರೆ ನಾನು ಮಾತನಾಡ್ತಿರೋದು ಹೊಸ ಕಾಲದ ಶಾಲೆಗಳಲ್ಲಿನ General education ಬಗ್ಗೆ ಅಲ್ಲ. ಆ ತರದ education ಎಲ್ಲರಿಗೂ ಸಾಧ್ಯವಾಗಿದ್ದಕ್ಕೇ ನಾನು ಇವೊತ್ತು ನಿಮ್ಮತ್ರ ಹೀಗೆ ಮಾತಾಡೋಕೆ ಸಾಧ್ಯವಾಗಿರೋದು...

ಬಾ: ಆಯ್ತು ಸ್ವಾಮೀ, ಎಲ್ಲ ತಿಳ್ಕೊಂಡಿದ್ದೀರಲ್ಲ... ನೀವಿನ್ನು ಎದ್ದು ಹೋಗಬಹುದು ಇಲ್ಲಿಂದ.... ನಾನೇನೂ ನಿಮ್ಮನ್ನ ಕರೀಲಿಲ್ಲ ನನ್ನತ್ರ ಬಂದು ಮಾತಾಡೀ ಅಂತ... ಅಥವಾ ನನ್ನ ವಿಚಾರಗಳನ್ನ ಒಪ್ಪಿಕೊಳ್ಳೀಂತ ನಿಮ್ಮತ್ರ

ನಾಗಭೂಷಣ್ ಡಿ.ಎಸ್

ಬಾ: ಯಾರ್ರೀ ನಿಮ್ಮನ್ನ ಇಲ್ಲಿಗೆ ಕರೆದಿದ್ದು? ನಡೀರಿ ಇಲ್ಲಿಂದ...

ನಾ: ರೀ ಸ್ವಾಮೀ, I have come here on an Invitation from your Centre... Have some manners...

ಬಾ: ಆಯ್ತು, ಮೊದಲು ಆಚೆಗೆ ನಡೀರಿ ಇಲ್ಲಿಂದ...

ನಾ: ಏನು ಮಾತಾಡ್ತಿದ್ದೀರಿ ನೀವು? ಕುವೆಂಪು ಯೂನಿವರ್ಸಿಟಿ ಕ್ಯಾಂಪಸ್ ನಿಮ್ಮ ತಾತನ ಮನೆ ಆಸ್ತಿ ಅಲ್ಲ, ಹೀಗೆಲ್ಲ order ಮಾಡೋಕೆ.... ನಿಮ್ಮನ್ನು ನೋಡಿ ನನಗೆ ಜಾತಿ ಪದ್ಧತಿ ಅಲ್ಲ, ಜಾತಿ ವ್ಯವಸ್ಥೆ ಅನ್ನೋದೇ ಇದೆ; ಅದು ನಾವು ತಿಳಿದುಕೊಂಡಿದ್ದಕ್ಕಿಂತ dirty and dangerous ಆಗಿದೆ ಅನ್ನೋದು confirm ಆಗ್ತಾ ಇದೆ...

ಬಾ: (ಹೊರಟ ನನ್ನತ್ತ ಕೈ ತೋರಿಸಿ ಕಿರುಚುತ್ತಾ): Send him out! ಹೊರಗೆ ಹಾಕ್ರೀ ಅವನನ್ನ...

ನಾ: ಏ ಹೋಗಯ್ಯಾ .... ಕುವೆಂಪು ಯೂನಿವರ್ಸಿಟೀನ ಪೂರ್ತಿ ಕೊಂಡುಕೊಂಡ ಮೇಲೆ ಹೀಗೆ order ಮಾಡು... ಆಗ ಯಾರಾದರೂ ನಿನ್ನ ಮಾತು ಕೇಳಬಹುದು....

ಬಂದು ಬೇಡಿಕೊಳ್ಳಲಿಲ್ವಲ್ಲ... ಏಳಿ ಸ್ವಾಮಿ... ಏಳಿ ಸಾಕು...

ನಾ: ಅಲ್ಲಾ ಸ್ವಾಮೀ, ಸಮಾಜಕ್ಕೆ ಸಂಬಂಧಿಸಿದಂತೆ ನಾವು ಮಾಡಿರೋ ಹೊಸ ಸಂಶೋಧನೆ ನೋಡಿ ಅಂತ ನೀವು ಎಲ್ಲ ಕಡೆ ಪ್ರಚಾರ ಮಾಡಬಹುದು, ಕೇಂದ್ರಗಳನ್ನ ಸ್ಥಾಪಿಸಬಹುದು, ವಿಚಾರ ಸಂಕಿರಣ-ಸಮ್ಮೇಳನಗಳನ್ನ ಏರ್ಪಡಿಸಬಹುದು...ಸಾರ್ವಜನಿಕರ ಹಣ ಖರ್ಚು ಮಾಡಬಹುದು. ಆದರೆ ಸಮಾಜ ಅದಕ್ಕೆ ಪ್ರತಿಕ್ರಿಯಿಸಬಾರದು, ಪ್ರಶ್ನೆ ಕೇಳಬಾರದು, ಅಲ್ವಾ?

ಬಾ: ರೀ ಪ್ರಶ್ನೆ ಕೇಳೋ ಮೊದಲು ಸಂಶೋಧನೆ ಅಂದ್ರೇನು ತಿಳ್ಕೊಳ್ರೀ... ಅದಕ್ಕೂ ಮೊದಲು ಅದಕ್ಕೊಂದು scientific way ಅಂತಾ ಇದೇಂತ ತಿಳ್ಕೋಳ್ರೀ... Science ಅಂದ್ರೆ ಏನೂಂತ ಗೊತ್ತೇನ್ರಿ ನಿಮಗೆ?

ನಾ: ಸ್ವಾಮಿ ಅದನ್ನೆಲ್ಲ ನನಗೆ ಹೇಳಬೇಡಿ. ನಾನು ವಿಜ್ಞಾನದ ವಿದ್ಯಾರ್ಥಿನೇ... I hold a Masters degree in Mathematics.

ಬಾ: ಏ ಹೋಗ್ರೀ ಬಹಳ ಜನ ನೋಡಿದ್ದೀನಿ ಈ ತರ ಮೂರು ಕಾಸಿನ ಡಿಗ್ರೀಗಳನ್ನು ತಗೊಂಡವರನ್ನ...

ನಾ: ಅಯ್ಯೋ ಹೋಗ್ರೀ ನಾನೂ ನೋಡಿದ್ದೀನೀ ನಿಮ್ಮ ಥರ ತರಕಲಾಂಡಿ ಸಂಶೋಧನೆ ಮಾಡಿರೋ ಬಹಳ ಜನರನ್ನ... ಅದೇನೋ ನಿನ್ನೆ ಅಂಬೇಡ್ಕರ್ ಬಗ್ಗೆ ಮಾತಾಡ್ತಾ, ಮೀಸಲಾತಿ ಅದಕ್ಷತೆಯನ್ನ ಸೃಷ್ಟಿಸಿದೆ ಅನ್ನೋ ನಿಮ್ಮ ಸಂಶೋಧನೆಗೆ ಆಧಾರವಾಗಿ; ಎಲ್ಲ ಒಳ್ಳೆಯ ವಿಚಾರಗಳೂ ಸಮಾಜದಲ್ಲಿ ಒಳ್ಳೆಯ ಪರಿಣಾಮಗಳನ್ನೇನೂ ಉಂಟುಮಾಡೋದಿಲ್ಲ;ಹಾಗೇ ಎಲ್ಲ ಕೆಟ್ಟ ವಿಚಾರಗಳೂ ಕೆಟ್ಟ ಪರಿಣಾಮಗಳನ್ನೇನೂ ಉಂಟು ಮಾಡೋದಿಲ್ಲ ಅನ್ನೋ ಪ್ರಮೇಯವನ್ನ ಮಂಡಿಸಿದಿರಂತಲ್ಲ... ಇಂತಹ ಇನ್ನಷ್ಟು ಅದ್ಭುತ ಸಂಶೋಧನೆಗಳನ್ನು ಮಾಡಿ ಪ್ರಚಾರ ಮಾಡಿಬಿಟ್ಟರೆ ಜಗತ್ತು ಬಹು ಬೇಗ ಉದ್ಧಾರವಾಗಿ ಬಿಡುತ್ತೆ ಬಿಡಿ...

ಬಾ: ಯಾರ್ರೀ ನಿಮ್ಮನ್ನ ಇಲ್ಲಿಗೆ ಕರೆದಿದ್ದು? ನಡೀರಿ ಇಲ್ಲಿಂದ...

ನಾ: ರೀ ಸ್ವಾಮೀ, I have come here on an Invitation from your Centre... Have some manners...

ಬಾ: ಆಯ್ತು, ಮೊದಲು ಆಚೆಗೆ ನಡೀರಿ ಇಲ್ಲಿಂದ.

ನಾ: ಏನು ಮಾತಾಡ್ತಿದ್ದೀರಿ ನೀವು? ಕುವೆಂಪು ಯೂನಿವರ್ಸಿಟಿ ಕ್ಯಾಂಪಸ್ ನಿಮ್ಮ ತಾತನ ಮನೆ ಆಸ್ತಿ ಅಲ್ಲ, ಹೀಗೆಲ್ಲ order ಮಾಡೋಕೆ.... ನಿಮ್ಮನ್ನು ನೋಡಿ ನನಗೆ ಜಾತಿ ಪದ್ಧತಿ ಅಲ್ಲ, ಜಾತಿ ವ್ಯವಸ್ಥೆ ಅನ್ನೋದೇ ಇದೆ; ಅದು ನಾವು ತಿಳಿದುಕೊಂಡಿದ್ದಕ್ಕಿಂತ dirty and dangerous ಆಗಿದೆ ಅನ್ನೋದು confirm ಆಗ್ತಾ ಇದೆ...

ಬಾ: (ಹೊರಟ ನನ್ನತ್ತ ಕೈ ತೋರಿಸಿ ಕಿರುಚುತ್ತಾ) Send him out! ಹೊರಗೆ ಹಾಕ್ರೀ ಅವನನ್ನ...

ನಾ: (ಎಲ್ಲರೂ ಗಾಬರಿಯಿಂದ ಸುಮ್ಮನೆ ನೋಡುತ್ತಿದ್ದಂತೆ, ಕಾರು ಹತ್ತುತ್ತಾ) ಏ ಹೋಗಯ್ಯಾ .... ಕುವೆಂಪು ಯೂನಿವರ್ಸಿಟೀನ ಪೂರ್ತಿ ಕೊಂಡುಕೊಂಡ ಮೇಲೆ ಹೀಗೆ order ಮಾಡು... ಆಗ ಯಾರಾದರೂ ನಿನ್ನ ಮಾತು ಕೇಳಬಹುದು....

* * *

ಇವರ ಸಂಶೋಧನೆಗಳ ಬಗ್ಗೆ ಸದ್ಯಕ್ಕೆ, ಇನ್ನು ಯಾವ ವ್ಯಾಖ್ಯಾನವೂ ಬೇಡವೆಂದು ಕಾಣುತ್ತದೆ! □

ಆರೆಸ್ಸೆಸಿನ ನೇರ ಮಾರ್ಗದರ್ಶನದಲ್ಲಿ ೩೮ ಸಮೂಹ ಸಂಘಟನೆಗಳು ಕಾರ್ಯನಿರ್ವಹಿಸುತ್ತಿದ್ದು, ಐವತ್ತು ಲಕ್ಷ ಜನರನ್ನು ತನ್ನ ಕಾರ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡಿದೆ ಆರೆಸ್ಸಸ್‌ನ ಸಿದ್ಧಾಂತದ ಕುರಿತು 'ಜಾತ್ಯಾತೀತ'ರ ನಡುವೆಯೇ ಭಿನ್ನ ಅಭಿಪ್ರಾಯಗಳಿವೆ. ಇದನ್ನು ಪ್ಯಾಸಿಸ್ಟ್ ಎಂದು ಕರೆಯಬಹುದಾ? ಇಲ್ಲವಾ ಎಂಬಂತಹ ಚರ್ಚೆಗಳು. ವಿಶೇಷವೇನೆಂದರೆ RSS ಇಂತಹ ಎಲ್ಲಾ ಅಕೆಡಮಿಕ್ ಚರ್ಚೆಗಳನ್ನು ತನ್ನ ಹುಟ್ಟಿಂದಲೇ ಉಪೇಕ್ಷಿಸುತ್ತಲೇ ಬಂದಿದೆ. ಮಾತಿಗಿಂತಲು ಕ್ರಿಯೆಗೆ ಮಹತ್ವ ನೀಡುವ RSS ಯಾವತ್ತೂ ಗೊಡ್ಡು ಚರ್ಚೆಗೆ ಇಳಿಯಲೇ ಇಲ್ಲ. RSS ಕುರಿತ ವಿಭಿನ್ನ ಲೇಖನವೊಂದನ್ನು 'ಸಂವಾದ'ದ ಓದುಗರಿಗಾಗಿ ಇಲ್ಲಿ ನೀಡುತ್ತಿದ್ದೇವೆ.

ಪ್ರಶಾಂತ್ ಹುಲ್ಕೋಡು

RSS ಕುರಿತು ಒಂದು ಟಿಪ್ಪಣಿ

ಸಮಕಾಲೀನ ಸಂದರ್ಭದಲ್ಲಿ ಆರೆಸ್ಸೆಸ್ ಅಥವಾ ರಾಷ್ಟ್ರೀಯ ಸ್ವಯಂಸೇವಕ ಸಂಘಟನೆ, ಭಾರತದ ಅತಿದೊಡ್ಡ 'ಸಾಂಸ್ಕೃತಿಕ ಸಂಘಟನೆ'. ಅತಿ ಹೆಚ್ಚು ವಿರೋಧಿಗಳನ್ನು ಹಾಗೂ ಅದೇ ಪ್ರಮಾಣದ ಜನ ಸಮೂಹವನ್ನು ಹೊಂದಿರುವ ಮತ್ತೊಂದು ಸಂಘಟನೆ ಸದ್ಯಕ್ಕಂತೂ ಇಲ್ಲ. ಕೋಮುವಾದಿಗಳು, ಬ್ರಾಹ್ಮಣವಾದಿಗಳು, ಮನುವಾದಿಗಳು, ಪ್ಯಾಸಿಸ್ಟರು ಹೀಗೆ ಹಲವಾರು ಉಪಮೇಯಗಳು ಕಳೆದ 80 ವರ್ಷಗಳಲ್ಲಿ ಆರೆಸ್ಸೆಸಿಗೆ ಅಂಟಿಕೊಂಡರೂ, ಅದರ ಜನಪ್ರಿಯತೆಯನ್ನು ಕುಗ್ಗಿಸಲು ಸಾಧ್ಯವಾಗಿಲ್ಲ. ದೇಶ-ದೇಶಪ್ರೇಮದ ಕುರಿತು ಹಲವಾರು ಪರಿಭಾಷೆಗಳಿದ್ದರೂ RSS ನೀಡಿರುವ ಪರಿಭಾಷೆ ಇಂದು ಅತ್ಯಂತ ಹೆಚ್ಚು ಜನಜನಿತವಾಗಿದೆ.

ಇವತ್ತಿಗೂ, ಆರೆಸ್ಸೆಸ್ ಕುರಿತು ಏಕಮುಖವಾದ ವಿರೋಧಿ ಅಥವಾ ಕುರುಡು ಅಭಿಮಾನದ ಬರಹಗಳು ಲಭ್ಯವೇ ಹೊರತು, 'ಸಂಘಟನೆಯ ಆಳ, ಅಗಲ, ಅದು ಬೆಳೆಯುತ್ತಿರುವ ವೇಗ, ಸೃಷ್ಠಿಸಿಕೊಂಡಿರುವ ಜನ ಸಮೂಹದ ಕುರಿತು ಗಂಭೀರ ಚಿಂತನೆಯ ಬರಹಗಳು ವಿರಳವೇ. ನಮ್ಮ ಬುದ್ದಿಜೀವಿಗಳು ಪ್ರಚುರಪಡಿಸುವ 'ಜಾತ್ಯಾತೀತವಾದ' ಜನರ ದೃಷ್ಠಿಯಲ್ಲಿ ಕೋಮುವಾದಕ್ಕೆ ಪರ್ಯಾಯವಾಗಿ ಕಾಣದಿರುವುದು ಇದೇ ಕಾರಣಕ್ಕೆ ಇರಬಹುದು.

1920 ರಲ್ಲಿ ಹಿಂದುತ್ವ ಸಿದ್ಧಾಂತ ದೇಶದ ರಾಜಕೀಯದಲ್ಲಿ ಯಾವುದೇ ಪ್ರಾಮುಖ್ಯತೆ ಹೊಂದಿರಲಿಲ್ಲ. ಹಿಂದೂ ರಾಷ್ಟ್ರದ ನಿರ್ಮಾಣಕ್ಕಾಗಿ 1925ರಲ್ಲಿ ಕೇಶವ ಬಲರಾಮ ಹೆಗಡೆವಾರ್ ಎಂಬ ವ್ಯಕ್ತಿ ಆರೆಸ್ಸೆಸ್ ಅನ್ನು ಹುಟ್ಟುಹಾಕಿದಾಗ ಆತನ ಜತೆಗಿದ್ದದ್ದು ಕೇವಲ ಐದು ಜನ. ಅವತ್ತಿಗಿನ್ನೂ ಕಾಂಗ್ರೆಸ್‌ನ ಒಳಗೆ ಹೊರಗೆ ಓಡಾಡಿಕೊಂಡಿದ ಹೆಗಡೆವಾರ್ RSS ಸ್ಥಾಪಿಸಿದಾಗ ಹಿಂದೂ ಮಹಾಸಭಾದ ದುರೀಣರೆ ಮುಸಿ ಮುಸಿ ನಕ್ಕಿದ್ದರು.

ಆದರೆ ಕೇವಲ ಅಥವಾ ಸುಮಾರು ಎಂಬತ್ತು ವರ್ಷಗಳಲ್ಲಿ ಹೆಗಡೆವಾರ್ ಹುಟ್ಟುಹಾಕಿದ ಹಿಂದುತ್ವದ ಸಿದ್ಧಾಂತ ದೇಶದ ರಾಜಕೀಯದಲ್ಲಿ ಕೇಂದ್ರ ಬಿಂದುವಾಗಿ ಹೊರಹೊಮ್ಮಿದೆ. ಇಂದು ಹಿಂದುತ್ವವನ್ನು ಒಂದೋ ವಿರೋಧಿಸಬೇಕು ಇಲ್ಲವೇ ಅಪ್ಪಿಕೊಳ್ಳಬೇಕು ಎಂಬ ವಾತಾವರಣವನ್ನು ಸೃಷ್ಠಿಸಿದೆ.

1931ರಲ್ಲಿ ಆರೆಸ್ಸೆಸ್ ನಡೆಸುತ್ತಿದ್ದದ್ದು 60 ಶಾಖೆಗಳನ್ನು. 1936ರಲ್ಲಿ ನಾಗಪುರಗಡಿಯನ್ನು ದಾಟಿ, ದೇಶದಾದ್ಯಂತ 200 ಶಾಖೆಗಳನ್ನು ನಡೆಸುತ್ತಿದ್ದ ಸಂಘದ ಸದಸ್ಯತ್ವ 25000. 1939ರಲ್ಲಿ 500 ಶಾಖೆಗಳು, 40000 ಸದಸ್ಯರನ್ನು ಇದು ಹೊಂದಿತ್ತು. ಇದಾದ ಒಂದೇ ವರ್ಷದಲ್ಲಿ ಸುಮಾರು 700 ಶಾಖೆಗಳನ್ನು ತೆರೆದ ಆರೆಸ್ಸೆಸ್ ಸದಸ್ಯತ್ವ 80000 ಕ್ಕೇರಿತು. ಅಲ್ಲಿಂದಾಚೆಗೆ ಸಂಘ ಹಿಂದುರಿಗಿ ನೋಡಲಿಲ್ಲ. ಒಂದು ಅಂದಾಜಿನ ಪ್ರಕಾರ 1979-89ರ ನಡುವೆ 10 ಲಕ್ಷದಷ್ಟಿದ್ದ ಸ್ವಯಂ ಸೇವಕರ (ನೆನೆಪಿರಲಿ, ತಮ್ಮ ಜೀವನವನ್ನೇ ಅರ್ಪಿಸಿದ) ಸಂಖ್ಯೆ 19 ಲಕ್ಷಕ್ಕೇರಿತು. 18,800 ನಗರ ಹಾಗೂ ಹಳ್ಳಿಗಳಲ್ಲಿ 25000 ಶಾಖೆಗಳನ್ನು ಅದು ನಡೆಸುತ್ತಿತ್ತು.

ಇಂದು, ಆರೆಸ್ಸೆಸಿನ ನೇರ ಮಾರ್ಗದರ್ಶನದಲ್ಲಿ 38 ಸಮೂಹ ಸಂಘಟನೆಗಳು ಕಾರ್ಯನಿರ್ವಹಿಸುತ್ತಿದ್ದು, ಐವತ್ತು ಲಕ್ಷ ಜನರನ್ನು ತನ್ನ ಕಾರ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡಿದೆ ಎಂದರೆ 'ಸಂಘದ' ಸಂಘಟನಾತ್ಮಕ ಶಕ್ತಿಯನ್ನು ಊಹೆಗೆ ಬಿಟ್ಟದ್ದು. ಆರೆಸ್ಸಸ್‌ನ ಸಿದ್ಧಾಂತದ ಕುರಿತು 'ಜಾತ್ಯಾತೀತ'ರ ನಡುವೆಯೇ ಭಿನ್ನ ಅಭಿಪ್ರಾಯಗಳಿವೆ. ಇದನ್ನು ಪ್ಯಾಸಿಸ್ಟ್ ಎಂದು ಕರೆಯಬಹುದಾ? ಇಲ್ಲವಾ ಎಂಬಂತಹ ಚರ್ಚೆಗಳು. ವಿಶೇಷವೇನೆಂದರೆ RSS ಇಂತಹ ಎಲ್ಲಾ ಅಕೆಡಮಿಕ್ ಚರ್ಚೆಗಳನ್ನು ತನ್ನ ಹುಟ್ಟಿಂದಲೇ ಉಪೇಕ್ಷಿಸುತ್ತಲೇ ಬಂದಿದೆ. ಮಾತಿಗಿಂತಲು ಕ್ರಿಯೆಗೆ ಮಹತ್ವ ನೀಡುವ RSS ಯಾವತ್ತೂ ಗೊಡ್ಡು ಚರ್ಚೆಗೆ ಇಳಿಯಲೇ ಇಲ್ಲ. ಸೌದ್ಧಾಂತಿಕ ಗಟ್ಟಿತನವಿಲ್ಲದ ಸಂಘಟನೆಯೊಂದು ತನ್ನ ಕ್ರೀಯಾಶೀಲತೆಯಿಂದಲೇ ತನ್ನ ಸಿದ್ಧಾಂತವನ್ನು ಜೀವಂತವಾಗಿ ಇಟ್ಟಿದ್ದರೆ ಅದು ಆರೆಸ್ಸೆಸ್ ಮಾತ್ರ.

ತನ್ನ ಮೂಲ ಹಿಂದುತ್ವದ ಕಲ್ಪನೆ ಸನಾತನವಾದರೂ, ಆರೆಸ್ಸೆಸ್ ಎಂದೂ ಆಧುನಿಕತೆಗೆ ಮುಖಾಮುಖಿಯಾಗಲೇ ಇಲ್ಲ. ಬದಲಿಗೆ ಆಧುನೀಕತೆಯ ಎಲ್ಲಾ ಗುಣ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಹಿಂದೆ (ಹಿಂದೂಗಳು) ಮತ್ತು (ಮುಸ್ಲಿಂರು) ಎಂದು ಕಾರ್ಯತಂತ್ರ ರೂಪಿಸುತ್ತಿದ್ದ ಸಂಘ, ಇಂದು ನಾವು ಮತ್ತು ಉಳಿದವರು ಎಂದು ರೂಪತಂತ್ರ ರೂಪಿಸುತ್ತಿದೆ. ಆರೆಸ್ಸೆಸ್ ಪ್ಯಾಸಿಸ್ಟ್ ಹೌದೋ ಅಲ್ಲವೊ ಆದರೆ ಭಾರತದಲ್ಲಿ ಪ್ಯಾಸಿಸಂ ತರುವ ಸಂಘಟ ನಾತ್ಮಕ ಶಕ್ತಿ ಇರುವುದು RSSಗೆ ಮಾತ್ರ ಎಂಬಂತಾಗಿದೆ. ಆರೆಸೆಸ್ ಸಮಾಜವನ್ನು ಒಡೆಯುವ, ಅದೇ ಸಂದರ್ಭದಲ್ಲಿ ತನ್ನೊಳಗೆ ಕಟ್ಟುವ ವಿಷೇಶ ಗುಣಲಕ್ಷಣ ಹೊಂದಿದೆ. ತನ್ನೊಳಗೆ ಯಾವತ್ತೂ ಜಾತಿಯತೆ, ಮೇಲು-ಕೀಳು ಎಂಬ ಭಾವನೆಯನ್ನು ಬೆಳೆಯಲು ಬಿಟ್ಟಿಲ್ಲ. ಅದರ ಶಾಖೆಗಳಲ್ಲಿ ಜಾತಿ ತಾರತಮ್ಯ ನಿಷಿದ್ಧ. 'ಹಿಂದೂ' ಐಡೆಂಟಿಯ ಹೊರತಾದ ಯಾವುದೇ ಐಡೆಂಟಿಟಿಗಳನ್ನು ಪೋಷಿಸುವುದಿಲ್ಲ.

ಹಾಗಂತ ಹೆಗಡೆವಾರ್ 'ಹಿಂದುತ್ವ'ದ ಪರಿಕಲ್ಪನೆಯನ್ನೇ ಇನ್ನೂ ಪಾಲಿಸುತ್ತಿದೆ ಎಂಥರ್ಥವಲ್ಲ. ಕಾಲಕ್ಕೆ ತಕ್ಕಂತೆ ವರ್ತಿಸುವ, ತಾಳಕ್ಕೆ ತಕ್ಕಂತೆ ಕುಣಿಯುವ ಕೌಶಲ್ಯ ಆರೆಸ್ಸೆಸಿಗೆ ಇರುವಷ್ಟು ಮತ್ಯಾರಿಗೂ ಇಲ್ಲ.

ತನ್ನ ಪ್ರಮುಖ ಅಂಗ ಬಿಜೆಪಿ, ತಾನು ಒಪ್ಪದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಳಸಿಕೊಂಡೆ ನಾಲ್ಕನೇ ಬಾರಿ ದೆಯಗದ್ದುಗೆ ಏರಲು ಹೊರಟಿದೆ. ತನ್ನ ಹಿಂದೂ ಪರಿಕಲ್ಪನೆಯಲ್ಲಿ ಒಳಗೊಳ್ಳದ ಆದಿವಾಸಿ, ದಲಿತರನ್ನು ವ್ಯವಸ್ಥಿತವಾಗಿ ಸಂಘಟಸಿದೆ. ಅಬ್ಬರದ ಪ್ರಚಾರವಿಲ್ಲದೆ ಕಲ್ಯಾಣ ಕಾರ್ಯಗಳು, ಶಾಲೆಗಳ ಹೆಸರಿನಲ್ಲಿ ಆರೆಸ್ಸೆಸ್ ಆದಿವಾಸಿಗಳ ಹಾಡಿನಲ್ಲಿ, ದಲಿತ ಕೇರಿಗಳಲ್ಲಿ ಬೇರುಬಿಟ್ಟಿದೆ, ಆಳವಾಗಿ.

ತನ್ನ ಮೂಲ ಹಿಂದುತ್ವದ ಕಲ್ಪನೆ ಸನಾತನವಾದರೂ, ಆರೆಸ್ಸೆಸ್ ಎಂದೂ ಆಧುನಿಕತೆಗೆ ಮುಖಾಮುಖಿಯಾಗಲೇ ಇಲ್ಲ. ಬದಲಿಗೆ ಆಧುನೀಕತೆಯ ಎಲ್ಲಾ ಗುಣ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಹಿಂದೆ ನಾವು (ಹಿಂದೂಗಳು) ಮತ್ತು ಅವರು (ಮುಸ್ಲಿಂರು) ಎಂದು ಕಾರ್ಯತಂತ್ರ ರೂಪಿಸುತ್ತಿದ್ದ ಸಂಘ, ಇಂದು ನಾವು ಮತ್ತು ಉಳಿದವರು ಎಂದು ರೂಪತಂತ್ರ ರೂಪಿಸುತ್ತಿದೆ. ಆರೆಸ್ಸೆಸ್ ಪ್ಯಾಸಿಸ್ಟ್ ಹೌದೋ ಅಲ್ಲವೊ ಆದರೆ ಭಾರತದಲ್ಲಿ ಪ್ಯಾಸಿಸಂ ತರುವ ಸಂಘಟನಾತ್ಮಕ ಶಕ್ತಿ ಇರುವುದು RSSಗೆ ಮಾತ್ರ ಎಂಬಂತಾಗಿದೆ.

ಆರೆಸೆಸ್ ಸಮಾಜವನ್ನು ಒಡೆಯುವ, ಅದೇ ಸಂದರ್ಭದಲ್ಲಿ ತನ್ನೊಳಗೆ ಕಟ್ಟುವ ವಿಷೇಶ ಗುಣಲಕ್ಷಣ ಹೊಂದಿದೆ. ತನ್ನೊಳಗೆ ಯಾವತ್ತೂ ಜಾತಿಯತೆ, ಮೇಲು-ಕೀಳು ಎಂಬ ಭಾವನೆಯನ್ನು ಬೆಳೆಯಲು ಬಿಟ್ಟಿಲ್ಲ. ಅದರ ಶಾಖೆಗಳಲ್ಲಿ ಜಾತಿ ತಾರತಮ್ಯ ನಿಷಿದ್ಧ. ಅಲ್ಲಿನಿದ್ದರು 'ಹಿಂದೂ' ಐಡೆಂಟಿಯ ಹೊರತಾದ ಯಾವುದೇ ಐಡೆಂಟಿಟಿಗಳನ್ನು ಪೋಷಿಸುವುದಿಲ್ಲ. ಹಾಗಾಗಿಯೇ ಒಮ್ಮೆ ಆರೆಸ್ಸೆಸ್ಸಿನ ತೆಕ್ಕೆಗೆ ಹೋದ ದಲಿತನೂ ಸಂಘವನ್ನು ದಲಿತ ವಿರೋಧಿ ಎಂದು ಜರಿಯುವುದಿಲ್ಲ. (ಎ.ಕೆ.ಸುಬ್ಬಯ್ಯರನ್ನು ಹೊರತು ಪಡಿಸಿ).

ಯಾಕೆಂದರೆ ತನ್ನ ಮೇಲ್ಜಾತಿಗುಣವನ್ನು ತನ್ನ ಶಾಖೆಗಳಲ್ಲಿ ಪ್ರದರ್ಶಿಸುವುದಿಲ್ಲ. ರಾಜೇಂದ್ರಸಿಂಗ್ RSSನ ನಾಲ್ಕನೇ ಸರಸಂಘಚಾಲಕರಾಗಿ ಬಂದಾಗ, ಮೊದಲ ಬಾರಿಗೆ ಬ್ರಾಹ್ಮಣೇತರ ನಾಯಕತ್ವವನ್ನು ಸಂಘ ಒಪ್ಪಿಕೊಂಡಿತು. ಇವತ್ತಿಗೆ ಗಣನೀಯ ಪ್ರಮಾಣದಲ್ಲಿ ದಲಿತರು, ಅಸ್ಪೃಶ್ಯರು, ಆದಿವಾಸಿಗಳು RSSನ ನಾಯಕತ್ವ ಸ್ಥಾನದಲ್ಲಿದ್ದಾರೆ.

ಮೀಸಲಾತಿ ಬೇಕೋ, ಬೇಡವೋ, ಅದರಲ್ಲಿ ಬರಬೇಕಾದ ಸುಧಾರಣೆಗಳೇನು? ಎಲ್ಲವೂ ಚರ್ಚೆಗೆ ಬಿಟ್ಟ ವಿಚಾರ. ಆದರೆ ಮೀಸಲಾತಿಯ ಬಗ್ಗೆ RSSನ ಕಾಲಕ್ಕೆ ತಕ್ಕಂತೆ ಬದಲಾದ ನಿಲುವುಗಳು ಅದರ ನುರಿತ ರಾಜಕೀಯ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಸ್ವಾತಂತ್ರ್ಯ ಭಾರತದಲ್ಲಿ ಮೊದಲ ಬಾರಿಗೆ ಮೀಸಲಾತಿ ವಿಚಾರ ಬಂದಾಗ RSS ಅದನ್ನು ವಿರೋಧಿಸಲಿಲ್ಲ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಮೀಸಲಾತಿಯ ಬಗ್ಗೆ ಭಾರತದ ಮಧ್ಯಮ ವರ್ಗದಲ್ಲಿ ಎದ್ದ ಅಸಮಧಾನವನ್ನು ಬಳಸಿಕೊಂಡ ಸಂಘ, ತನ್ನ ನಿಲುವುಗಳನ್ನು ವಿವಿಧ ರೂಪುಗಳಲ್ಲಿ ಪ್ರಕಟಿಸಿದ್ದು, ಆರೆಸ್ಸೆಸ್‌ನ ಸಿದ್ದಾಂತಗಳಿಗೆ ಬೌತಿಕ ಪರಿಸ್ಥಿತಿಗಳು ಹೇಗೆ ಪೂರಕವಾಗುತ್ತವೆ ಎಂಬುದಷ್ಟೆ ಗಮನಿಸಬೇಕಿದೆ.

ಇದು ಕೇವಲ ಮೀಸಲಾತಿ ವಿಚಾರದಲ್ಲಿ ಮಾತ್ರವಲ್ಲ. ಜನಸಾಮಾನ್ಯರ ದೇಶಪ್ರೇಮಕ್ಕೆ ಇವತ್ತು ಆರೆಸ್ಸೆಸ್ಸು ನೀಡುವ ಕಾರ್ಯಕ್ರಮ ಏಕಮಾತ್ರ ಪರ್ಯಾಯವಾಗಿದೆ. ಬಲತ್ಕಾರದ ಮತಾಂತರ, ಕಾಶ್ಮೀರದ ಪಂಡಿತರ ಕರುಣಾಜನಕ ಪರಿಸ್ಥಿತಿ, ಮುಸ್ಲಿಂ ಭಯೋತ್ಪಾದನೆಗಳು ಸಹಜವಾಗಿ ಮಧ್ಯಮವರ್ಗದಲ್ಲಿ ಅಸಮಾಧಾನ ಮೂಡಿಸುತ್ತದೆ. ಆದರೆ ಅಪ್ಪಿತಪ್ಪಿಯೂ 'ಜಾತ್ಯಾತೀತ'ರು ಇವುಗಳ ಕುರಿತು ಮಾತನಾಡದೆ ಇರುವುದು ಆರೆಸ್ಸೆಸಿಗೆ ವರದಾನವಾಗಿ ಮಾರ್ಪಡುತ್ತವೆ.

ಆರೆಸ್ಸೆಸ್‌ನ ಯಶಸ್ಸಿಗೆ ಜಾತ್ಯಾತೀತ ಶಕ್ತಿಗಳ (ಕಾಂಗ್ರೆಸ್?) ಸೋಲೇ ಕಾರಣ ಎಂಬ ಸಿದ್ಧಮಾದರಿಯ ಆತ್ಮವಿಮರ್ಶೆ ಸಾಮಾನ್ಯ. ಆದರೆ ಅದರ ಸಂಘಟನಾತ್ಮಕ ಯಶಸ್ಸಿನ ಹಿಂದೆ ಹಲವು ಬೌತಿಕ ಪರಿಸ್ಥಿತಿಗಳೂ ಕಾರಣ ಎಂಬುದನ್ನು ಮರೆಯಲಾಗುತ್ತದೆ.

'ಇತರರು' ಮಾತಿಗಿಂತ ಕ್ರಿಯೆಗೆ ಮಹತ್ವ ಕೊಡದ ಹೊರತು RSSನ ಬೆಳವಣಿಗೆಯನ್ನು ತಡೆಯಲು ಸಾಧ್ಯವಿಲ್ಲ. ಹಾಗೆಯೇ ಕ್ರಿಯೆಯಲ್ಲಿರುವವರು ಸಿದ್ಧ ಮಾದರಿಯ ಪರಿಭಾಷೆಗಳ ಆಚೆಗೆ ನಿಂತು, ಜನರಿಗೆ ಅರ್ಥವಾಗುವ ಭಾಷೆಯಲ್ಲಿ (of cource ಕನ್ನಡದಲ್ಲಿ), ಭೌತಿಕ ಪರಿಸ್ಥಿತಿಗಳನ್ನೂ ಗಮನದಲ್ಲಿಟ್ಟುಕೊಂಡು ಮಾತನಾಡದ ಹೊರತು ಆರೆಸ್ಸೆಸ್ಸಿನಂತೆ ಜನರ ನಾಡಿಮಿಡಿತ ಅರಿಯಲು ಸಾಧ್ಯವಾಗಲಾರದು. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಹಿಂದುಯಿಸಂ ಮತ್ತು ಸೆಕ್ಯುಲರಿಸಂ ಎಂಬ ವಾದಗ್ರಸ್ಥ ಪರಿಕಲ್ಪನೆ...

ಕಿರಣ್ ಎಂ ಗಾಜನೂರು

ಹಲವಾರು ಚಿಂತಕರು ಭಾರತದಲ್ಲಿನ ಸೆಕ್ಯುಲರಿಸಂಗೆ ಸಂಬಂಧಿಸಿದಂತಹ ಸಮಸ್ಯೆಗಳ ಜಟಿಲತೆಯನ್ನು ಗ್ರಹಿಸುವುದರಲ್ಲಿ ಗಮನಾರ್ಹವಾದ ಸಾಧನೆಗಳನ್ನು ಮಾಡಿವೆ ಎಂದು ಭಾವಿಸುತ್ತಾರೆ. ಒಮ್ಮೆ ಭಾರತದ ಸೆಕ್ಯುಲರಿಸಂನ ಚರ್ಚೆಗಳನ್ನು ಒಳ ಹೊಕ್ಕು ನೋಡಿದಾಗ ದೇಶದ ಹೆಸರಾಂತ ಚಿಂತಕರುಗಳ ಕೊಡುಗೆ ಅಪಾರವಾಗಿರುವುದು ಕಾಣಬಹುದಾಗಿದೆ. ಅದರಲ್ಲಿಯೂ ಸೆಕ್ಯುಲರಿಸಂ ಕುರಿತಾದಂತೆ ಕೆಲಸ ಮಾಡುತ್ತಿರುವ ವಿದ್ವಾಂಸರ ಪ್ರಕಾರ ಆಶಿಸ್‌ನಂದಿ ಟಿ.ಎನ್. ಮದನ್, ರಾಜೀವ್ ಭಾರ್ಗವ್ ಮೊದಲಾದವರ ನಿರ್ಣಾಯಕ ಪ್ರವೇಶದಿಂದಾಗಿ ಸೆಕ್ಯುಲರಿಸಂ ಕುರಿತಾದ ಚರ್ಚೆಯ ಗುಣಮಟ್ಟವನ್ನು ವೃದ್ಧಿಸುವುದರೊಂದಿಗೆ ಆ ಚರ್ಚೆಗೆ ಒಂದು ಗಾಂಭೀರ್ಯವನ್ನು ತಂದಿದೆ ಎಂದು ಪ್ರತಿಪಾದಿಸಿದ್ದಾರೆ.

ಪ್ರಸ್ತುತ ಲೇಖನದಲ್ಲಿ ನಾನು ಒಬ್ಬ ಸಮಾಜ ವಿಜ್ಞಾನದ ವಿದ್ಯಾರ್ಥಿಯಾಗಿ ನನ್ನ ಜ್ಞಾನದ ಮಿತಿಯಲ್ಲಿ ಭಾರತದ ಸಂದರ್ಭದಲ್ಲಿನ ಸೆಕ್ಯುಲರಿಸಂ ಕುರಿತಾದ ವಾದಗಳನ್ನು ಗುರುತಿಸಬಯಸುತ್ತೇನೆ. ಸೆಕ್ಯುಲರಿಸಂ ಎಂಬ ತಾತ್ವಿಕ ವಿಚಾರವನ್ನು ಕುರಿತು ಯೋಚಿಸುವಾಗ ಡಾ.ರಾಜಾರಾಮ ತೋಳ್ಪಾಡಿ ಮತ್ತು ವಿವೇಕ ಧಾರೇಶ್ವರ ಅವರೊಂದಿಗೆ ನಡೆಸಿದ ಚರ್ಚೆ ಈ ಲೇಖನವನ್ನು ಬಹಳವಾಗಿ ಪ್ರಭಾವಿಸಿದೆ. (ರಾಜಾರಾಮ ತೋಳ್ಪಾಡಿ ಅವರ ಲೇಖನವು ಸೇರಿದಂತೆ) ಒಟ್ಟಾರೆ ಈ ಲೇಖನದ ಉದ್ದೇಶ ಭಾರತದ ಸಂದರ್ಭದಲ್ಲಿ ಸೆಕ್ಯುಲರಿಸಂ ಕುರಿತಾದಂತಹ ಇತ್ತೀಚಿನ ವಾದಗಳು ಆ ಒಂದು ಪರಿಕಲ್ಪನೆಯ ತಾತ್ವಿಕತೆಯನ್ನೇ ಪ್ರಶ್ನಿಸುವಷ್ಟರ ಮಟ್ಟಿಗೆ ಪ್ರಭಾವಶಾಲಿಯಾಗಿರುವುದರಿಂದ ಈ ಚರ್ಚೆಗಳು ಸೆಕ್ಯುಲರಿಸಂ ಕುರಿತಾದಂತಹ ಸಂಶೋಧನೆ, ಇದುವರೆಗೂ ನಿರ್ವಹಿಸಿದ ಹಾದಿಗಿಂತ ಭಿನ್ನವಾದಂತಹ ಒಳನೋಟಗಳನ್ನು ಆ ದಾರಿಯಲ್ಲಿ ತೆರೆಯಬಹುದು ಎಂಬ ನಂಬಿಕೆ ಈ ಲೇಖನದ ಮೂಲಾಧಾರ.

ಭಾರತದ ಸಮಾಜ ವಿಜ್ಞಾನಗಳ ಜ್ಞಾನ ಮೀಮಾಂಸೆಯಲ್ಲಿ ಸೆಕ್ಯುಲರಿಸಂಗೆ ಸಂಬಂಧಿಸಿದ ಚರ್ಚೆಗಳು ತಮ್ಮದೆ ಆದಂತಹ ಸ್ಥಾನವನ್ನು ಪಡೆದಿದೆ. ಹಲವಾರು ಚಿಂತಕರು ಭಾರತದಲ್ಲಿನ ಸೆಕ್ಯುಲರಿಸಂ ಕುರಿತಾದ ಈ ಚರ್ಚೆಗಳು ಸೆಕ್ಯುಲರಿಸಂ ಸಂಬಂಧಿಸಿದಂತಹ ಸಮಸ್ಯೆಗಳ ಜಟಿಲತೆಯನ್ನು ಗ್ರಹಿಸುವುದರಲ್ಲಿ ಗಮನಾರ್ಹವಾದ ಸಾಧನೆಗಳನ್ನು ಮಾಡಿವೆ ಎಂದು ಭಾವಿಸುತ್ತಾರೆ. ಒಮ್ಮೆ ಭಾರತದ ಸೆಕ್ಯುಲರಿಸಂನ ಚರ್ಚೆಗಳು ಕಂಡುಕೊಂಡಂತಹ ಹಾದಿಗಳನ್ನು ಒಳಹೊಕ್ಕು ನೋಡಿದಾಗ ದೇಶದ ಹೆಸರಾಂತ ಚಿಂತಕರುಗಳ ಕೊಡುಗೆ ಅಪಾರವಾಗಿರುವುದು ಕಾಣಬಹುದಾಗಿದೆ. ಅದರಲ್ಲಿಯೂ ಸೆಕ್ಯುಲರಿಸಂ ಕುರಿತಾದಂತೆ ಕೆಲಸ ಮಾಡುತ್ತಿರುವ ವಿದ್ವಾಂಸರ ಪ್ರಕಾರ ಆಶಿಸ್ ನಂದಿ ಟಿ.ಎನ್.ಮದನ್, ಪಾರ್ಥಚಟರ್ಜಿ, ರಾಜೀವ್ ಭಾರ್ಗವ್ ಮೊದಲಾದವರ ನಿರ್ಣಾಯಕ ನಡು ಪ್ರವೇಶದಿಂದಾಗಿ (ಸಂವಿಧಾನ ರಚನಾ ಸಂದರ್ಭದಲ್ಲಿ ಹಾಗೂ 60 ರ ದಶಕದಲ್ಲಿ ಈ ಸೆಕ್ಯುಲರಿಸಂ ಚರ್ಚೆ ಕೇವಲ "ಯಾವ ಮಾದರಿಯ ಸೆಕ್ಯುಲರಿಸಂ" ಬೇಕು ಎಂದಾಗಿತ್ತಷ್ಟೆ, ಆದರೆ ನಂದಿಯಂತಹ ಚಿಂತಕರು ಯಾವ ಮಾದರಿಯ ಸೆಕ್ಯುಲರಿಸಂ ಅಗತ್ಯ ಎನ್ನುವುದಕ್ಕಿಂತ ಸೆಕ್ಯುಲರಿಸಂನ ಅಗತ್ಯತೆ ಇದೆಯೇ ಎಂಬ ತಾತ್ವಿಕ ಜಿಜ್ಞಾಸೆ ಪ್ರಾರಂಭಿಸಿದರು) ಸೆಕ್ಯುಲರಿಸಂ ಕುರಿತಾದ ಚರ್ಚೆಯ ಗುಣಮಟ್ಟವನ್ನು ವೃದ್ಧಿಸುವುದರೊಂದಿಗೆ ಆ ಚರ್ಚೆಗೆ ಒಂದು ಗಾಂಭಿರ್ಯವನ್ನು ತಂದಿದೆ ಎಂದು ಪ್ರತಿಪಾದಿಸಿದ್ದಾರೆ. ಅಂತೆಯೇ ಈ ಎಲ್ಲ ಚಿಂತಕರು ಒದಗಿಸಿದ ಒಳನೋಟಗಳು ಮತ್ತು ಕಾಣ್ಕೆಗಳು ಸೆಕ್ಯುಲರಿಸಂ ಕುರಿತಾದಂತೆ ಭಾರತೀಯ ದೃಷ್ಟಿಕೋನ ಒಂದನ್ನು ರೂಪಿಸುವಲ್ಲಿ ನಿರ್ಣಾಯಕವಾದಂತಹ ಪಾತ್ರವನ್ನು ವಹಿಸುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ವಿದ್ವಾಂಸರ ನಡುವಿನ ಅಥವಾ ಸಂಶೋಧನಾ ಕೇಂದ್ರಗಳ ಎಲ್ಲೆಗಳನ್ನು ಮೀರಿ ಸೆಕ್ಯುಲರಿಸಂ ವಾಗ್ವಾದದ ಹೊಳಹುಗಳು ಭಾರತೀಯ ಜನ ಜೀವನದ ನಡೆ ನುಡಿಗಳಲ್ಲಿ ಅವರ ಮಾತುಕತೆಗಳಲ್ಲಿ ಪ್ರತಿಧ್ವನಿತಗೊಂಡಿಲ್ಲ ಎಂಬುದನ್ನು ಈ ಚಿಂತಕರು ಒಪ್ಪಿಕೊಳ್ಳುತ್ತಾ ಯಾಕೆ ಹೀಗೆ? ಯಾಕೆ ಸೆಕ್ಯುಲರ್ ಚಿಂತನೆ ಭಾರತದ ನಾಗರೀಕ ಸಮಾಜದ ಮೇಲೆ ಪ್ರಭಾವ ಬೀರಲು ಯಶಸ್ವಿಯಾಗಿಲ್ಲ? ಎಂಬ ಪ್ರಶ್ನೆಯನ್ನು ನಮ್ಮೆದುರಿಗೆ ಇಡುತ್ತಾರೆ. ಈ ಪ್ರಶ್ನೆಯನ್ನು ಅನುಸರಿಸಿ ನನ್ನ ವಾದಗಳನ್ನು ಮಂಡಿಸುವ ಮೊದಲು ಸೆಕ್ಯುಲರಿಸಂ ಕುರಿತಾದ ಚರ್ಚೆಯ ವಿಶೇಷ ಗಳಿಗೆಯಲ್ಲಿ ಚಿಂತಕರು ನೀಡಿರುವ ವಾಗ್ವಾದಗಳನ್ನು ಸಂಕ್ಷಿಪ್ತವಾಗಿ ಅರ್ಥಮಾಡಿಕೊಳ್ಳುವ

1. ಪ್ರೊ.ಟಿ.ಎನ್.ಮದನ್ ಇವರು ತಮ್ಮ ಮಹತ್ವದ ಬರವಣಿಗೆಯಾದ Modern Myths and Locked Minds ಎನ್ನುವ ಪುಸ್ತಕದಲ್ಲಿ ಭಾರತದ ಸೆಕ್ಯುಲರಿಸಂನ ಸ್ವರೂಪ ಮತ್ತು ಸವಾಲುಗಳನ್ನು ಸವಿಸ್ತಾರವಾಗಿ ಚರ್ಚಿಸುತ್ತಾರೆ.

ಒಂದು ರಾಜಕೀಯ ತತ್ವವಾಗಿ ಸೆಕ್ಯುಲರಿಸಂನ ಮೂಲ ಪಾಶ್ಚಿಮಾತ್ಯ ಸಮಾಜಗಳ ವಿಕಾಸದ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದಾದರೂ ಭಾರತೀಯ ಸೆಕ್ಯುಲರಿಸಂ ಅನ್ನುವುದೊಂದು ಇದೆ ಎಂದು ವಾದಿಸುವ ಮದನ್ ಭಾರತದ ಧಾರ್ಮಿಕ ಪರಂಪರೆಗಳು ಪ್ರತಿಪಾದಿಸುವ ಬಹುತ್ವದ ಕಲ್ಪನೆ ಭಾರತೀಯ ಸೆಕ್ಯುಲರಿಸಂನ ತಾತ್ವಿಕ ನೆಲೆಯಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ನೆಹರೂ ನಾಯಕತ್ವದಲ್ಲಿ ಪ್ರತಿಪಾದಿತವಾದ ಸೆಕ್ಯುಲರಿಸಂ ಪಾಶ್ಚಿಮಾತ್ಯ ವೈಚಾರಿಕತೆಯ ಆಧಾರದಲ್ಲಿ ಆಧುನಿಕ ವಿಜ್ಞಾನದ ದ್ವಂದ್ವಾತ್ಮಕ ನೆಲೆಯಲ್ಲಿ ಮತ್ತು ಪ್ರೊಟೆಸ್ಟೆಂಟ್‌ಯಿಸಂನ ಧಾರ್ಮಿಕ ಗ್ರಹಿಕೆಗಳ ಹಿನ್ನೆಲೆಯಲ್ಲಿ ರೂಪಗೊಂಡಿದ್ದು ಪರಲೌಕಿಕ/ಲೌಕಿಕ ಎನ್ನುವ ಪಾಶ್ಚಿಮಾತ್ಯ ಸಮಾಜದ ದ್ವಂದ್ವಾತ್ಮಕತೆಯನ್ನು ಬಲವಂತವಾಗಿ ಭಾರತೀಯ ಸಮಾಜದ ಮೇಲೆ ಹೇರುತ್ತದೆ. ಇವರ ಪ್ರಕಾರ ಆಧ್ಯಾತ್ಮಿಕ ಮತ್ತು ಐಹಿಕ ಎನ್ನುವ ವಿಂಗಡಣೆ ಭಾರತೀಯ ಧಾರ್ಮಿಕ ಚಿಂತನ ಕ್ರಮಕ್ಕೆ ತೀರ ವ್ಯತಿರಿಕ್ತವಾದುದು.

ಮದನ್‌ರವರ ಪ್ರಮುಖ ವಾದ ಸ್ವಾತಂತ್ರ್ಯೋತ್ತರ ಭಾರತದಲ್ಲಿ ನೆಹರೂ ಮುಖೇನ ಕಾಂಗ್ರೇಸ್‌ನಿಂದ ಮುಂದಿಡಲ್ಪಟ್ಟ ಸೆಕ್ಯುಲರಿಸಂ ಎಂಬ ವಾದಗ್ರಸ್ತ ವಿಚಾರಧಾರೆ ಭಾರತದ ಧಾರ್ಮಿಕ ಪರಂಪರೆಗಳನ್ನಾಗಲಿ, ಸಾಂಸ್ಕೃತಿಕ ಹಿನ್ನೆಲೆಗಳನ್ನಾಗಲಿ, ಸಮುದಾಯಗಳ ಅನನ್ಯತೆಗಳನ್ನಾಗಲಿ, ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ ಹೀಗೆ ಭಾರತೀಯ ಸಾಮಾಜಿಕ ಸಂದರ್ಭಕ್ಕೆ ಒಗ್ಗದ ವಿಚಾರಧಾರೆಯನ್ನು ಬಲವಂತವಾಗಿ ಸಮುದಾಯಗಳ ಮೇಲೆ ಹೇರಿರುವ ರಾಜ್ಯದ ಈ ನಡವಳಿಕೆ ಮಾರಕ ದುಷ್ಪರಿಣಾಮಗಳಿಗೆ ಹಾದಿ ಮಾಡಿಕೊಟ್ಟಿದೆ.

ಧಾರ್ಮಿಕತೆ ಮತ್ತು ಲೌಕಿಕತೆಗಳ ಪ್ರತ್ಯೇಕತೆಯ ನೆಲೆಯಲ್ಲಿ ರೂಪಿಸಲ್ಪಟ್ಟ ಪಾಶ್ಚಿಮಾತ್ಯ ಸೆಕ್ಯುಲರಿಸಂನ ತಾತ್ವಿಕ ಗ್ರಹಿಕೆಗಳನ್ನು ದಾಟಿ ಭಾರತದ ಧಾರ್ಮಿಕ ಪರಂಪರೆಗಳ ಚರಿತ್ರೆ ಹಾಗೂ ಅವು ಉತ್ಪಾದಿಸಿದ ನೈತಿಕ ಸಾಮಾಜಿಕ ಮೌಲ್ಯಗಳ ಆಧಾರದಲ್ಲಿ ಭಾರತೀಯ ಸೆಕ್ಯುಲರ್ ದೃಷ್ಟಿಕೋನವೊಂದು ರೂಪುಗೊಳ್ಳಬೇಕೆಂದು ಮದನ್ ಅಭಿಪ್ರಾಯ ಪಡುತ್ತಾರೆ ಮತ್ತು ಪಶ್ಚಿಮ ಜನ್ಯವಾದ ಸೆಕ್ಯುಲರಿಸಂ ಎಂಬ ವಿಚಾರಧಾರೆಗೆ ಭಾರತೀಯ ಅರ್ಥವಂತಿಕೆಯನ್ನು ಒದಗಿಸಲು ಸಾಧ್ಯವಿದೆ ಎಂದು ಭಾವಿಸುತ್ತಾರೆ. ಈ ದೃಷ್ಟಿ ಕೋನಕ್ಕೆ ಭಾರತೀಯ ಧಾರ್ಮಿಕ ಪರಂಪರೆಗಳು ನೆಲೆಯಾಗಬೇಕು.

2. ಆಧುನಿಕ ವಿಜ್ಞಾನ ಜ್ಞಾನ ಪರ್ವದ ವೈಚಾರಿಕತೆ ಹಾಗೂ ರಾಷ್ಟ್ರದ ನಿರ್ಮಾಣ ಕ್ರಿಯೆಗಳನ್ನೊಳಗೊಂಡ ಆಧುನೀಕರಣದ (Modernism) ಪ್ರಕ್ರಿಯೆ ಸಾಂಪ್ರದಾಯಿಕ ನೆಲೆಗಳಿಂದ ಜನ ಸಮುದಾಯವನ್ನು ಬೇರ್ಪಡಿಸಿ ಅವುಗಳ ಆತ್ಮಸ್ಥೈರ್ಯವನ್ನು ನಷ್ಟ ಗೊಳಿಸಿವೆ. ಅಲ್ಲದೆ ಈ ಆಧುನೀಕರಣ ನೆಲೆಯಲ್ಲಿ ರೂಪಿತಗೊಂಡ ಹೊಸ ಬದುಕು ಸಮುದಾಯಗಳನ್ನು ಒಂದು ಹತಾಶ ಪರಿಸ್ಥಿತಿಗೆ ತಂದು ನಿಲ್ಲಿಸಿದೆ ಭಾರತದ ಜನ ಜೀವನ ಈ ಒಂದು ಸ್ಥಿತಿಗೆ ಸೆಕ್ಯುಲರಿಸಂ ಎಂಬ ಒಂದು

ವಿದ್ಯಮಾನ ತೋರಿಸಿಕೊಟ್ಟ ಆಧುನಿಕ ವಿಜ್ಞಾನ ಪ್ರಣೀತ ಸಾಮಾಜಿಕ ನಿಲುವು ಸಾಕಷ್ಟು ಕೊಡುಗೆಗಳನ್ನು ಕೊಟ್ಟಿದೆ ಎಂದು ಪ್ರಮುಖ ಚಿಂತಕರಾದ ಆಶಿಸ್ ನಂದಿ ವಾದಿಸುತ್ತಾರೆ.

ವಸಾಹತು ಕಾಲದಲ್ಲಿ ಬ್ರಿಟೀಷರು ತಮ್ಮ ಸ್ವಘೋಷಿತ ನಾಗರಿಕ ಮೇಲ್ತೆನದಲ್ಲಿ ಭಾರತೀಯ ಸಮುದಾಯಗಳನ್ನು ನಾಗರೀಕಗೊಳಿಸುವ ಶ್ವೇತವರ್ಣಿಯನ (white man burden theory) ಹೊರೆ ನಿರ್ವಹಿಸಿದಂತೆಯೇ ವಸಾಹತು ನಂತರದ ಭಾರತದಲ್ಲಿ ಈ ಸೆಕ್ಯುಲರ್ ಬುದ್ಧಿಜೀವಿಗಳು ಮುಂದುವರೆಯುವ ಭಾರತೀಯರನ್ನು ಮುಂದೆ ತರುವ ಮೇಲುಸ್ತುವಾರಿಕೆಯನ್ನು ಸ್ವಯಂಘೋಷಿತವಾಗಿ ನಿರ್ವಹಿಸಿದ್ದಾರೆ ಎನ್ನುವ ನಂದಿ ಸೆಕ್ಯುಲರಿಸಂ ಎಂಬುದು ಭಾರತದ ಮಧ್ಯಮ ವರ್ಗ ಒಪ್ಪಿಕೊಂಡ ನಿಲುವಾಗಿದೆ ಎನ್ನುತ್ತಾರೆ.

ಪಾಶ್ಚಿಮಾತ್ಯ ವಿಜ್ಞಾನ ವೈಚಾರಿಕತೆ ಮತ್ತು ರಾಷ್ಟ್ರೀಯತೆಯ ತಾತ್ವಿಕ ಹಿನ್ನೆಲೆಯಲ್ಲಿ ರೂಪಗೊಂಡ ಸೆಕ್ಯುಲರಿಸಂ ಹೇಗೆ ಭಾರತೀಯ ಜನ ಜೀವನಕ್ಕೆ ಪರಕೀಯವಾದುದೆಂದು ತೋರಿಸಿಕೊಡುವ ನಂದಿ ಭಾರತದಲ್ಲಿ ಪರಂಪರಾಗತವಾಗಿ ರೂಢಿಸಿ ಬಂದ ಸಹಿಷ್ಣುತೆ ಮತ್ತು ಸಹನೆಯ ಆಧಾರದ ಮೇಲೆ ಜೀವನ ಕ್ರಮವನ್ನು ಪಾಶ್ಚಾತ್ಯ ಸೆಕ್ಯುಲರಿಸಂಗೆ ಪರ್ಯಾಯವಾಗಿ ಮುಂದಿಡುತ್ತಾರೆ.

3. ಭಾರತದ ಸೆಕ್ಯುಲರಿಸಂ ತಾತ್ವಿಕತೆಯನ್ನು ತೀಕ್ಷ್ಣವಾದ ವಿಮರ್ಶೆಗೆ ಒಳಪಡಿಸಿದ ಚಿಂತಕರಲ್ಲಿ ಪ್ರಮುಖವಾದವರು ಪಾರ್ಥಚಟರ್ಜಿ ಅವರು ತಮ್ಮ ಸೆಕ್ಯುಲರಿಸಂ ಅಂಡ್ ಟಾಲಾರೆನ್ಸ್ ಎನ್ನುವ ಬರಹದಲ್ಲಿ ಭಾರತದಲ್ಲಿ ಸೆಕ್ಯುಲರಿಸಂ ತಾತ್ವಿಕತೆಯ ಲೋಪದೋಷಗಳನ್ನು ಎತ್ತಿಹಿಡಿಯುತ್ತಾರೆ. ಇವರ ಪ್ರಕಾರ ಸೆಕ್ಯುಲರಿಸಂನ ತಾತ್ವಿಕತೆಯ ಗ್ರಹಿಕೆಯ ರಾಜ್ಯದ ಕಲ್ಪನೆಗೂ ಭಾರತದ ಸಂವಿಧಾನಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಪ್ರಮುಖ ಅಂಶವಾದ Affirmative action ಪರಿಕಲ್ಪನೆಗೂ ಒಂದು ಬಗೆಹರಿಸಲಾಗದ ತಕರಾರು ಇದೆ ಎಂದು ಹೇಳುವ ಚಟರ್ಜಿ ಸೆಕ್ಯುಲರಿಸಂನ ತಾತ್ವಿಕ ನೆಲೆಯಲ್ಲಿ ಅಸ್ತಿತ್ವಕ್ಕೆ ಬರುವ ರಾಜ್ಯ ಮೂಲತಹ ತಟಸ್ಥಸ್ವಭಾವದ್ದು. ಇದು ಸಮಾನತೆಯ ಮನೋಭಾವದಿಂದ ಯಾವುದೇ ಕಾರಣಕ್ಕೂ ಯಾವುದೇ ಗುಂಪಿಗೂ ವಿಶೇಷ ಮಾನ್ಯತೆ ನೀಡದೆ ವ್ಯವಹರಿಸುತ್ತದೆ. ಈ ಸೆಕ್ಯುಲರ್ ರಾಜ್ಯದ ಕಲ್ಪನೆಗೆ ವ್ಯತಿರಿಕ್ತವಾಗಿ ಭಾರತದ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ ಒಂದು ಸಕ್ರಿಯವಾದ ಜನತೆಗೆ ಸಾಮಾಜಿಕ ನ್ಯಾಯವನ್ನು ಪೂರೈಸುವ ಒಂದು ಜವಾಬ್ದಾರಿಯುತ ರಾಜ್ಯದ ಕಲ್ಪನೆಯನ್ನು ಹೊಂದಿದೆ.

ಭಾರತದ ಸಂವಿಧಾನಿಕ ರಾಜ್ಯ ಪರಿಕಲ್ಪನೆ ಸೆಕ್ಯುಲರಿಸಂನ ಪ್ರತಿಪಾದಿಸುವ ನಿರ್ಲಿಪ್ತ ಮತ್ತು ನಿರಪೇಕ್ಷ ರಾಜ್ಯಗಳಿಗೆ ಸಂಪೂರ್ಣ ವಿರುದ್ಧವಾಗಿದ್ದು ಭಾರತದ ರಾಜ್ಯ ತನ್ನ ಸಕ್ರಿಯ ಸಾರ್ವಜನಿಕ ನಡು ಪ್ರವೇಶ ಜೊತೆಗೆ ಧರ್ಮ ನಿರಪೇಕ್ಷತೆಯ ಆಧಾರದ ಸೆಕ್ಯುಲರ್ ದೃಷ್ಟಿಕೋನವನ್ನು ಏಕಕಾಲದಲ್ಲಿ ಹೇಗೆ ನಿರ್ವಹಿಸಲು ಸಾಧ್ಯ ಎಂದು ಪ್ರಶ್ನಿಸುತ್ತಾರೆ.

4. ಭಾರತದ ಸೆಕ್ಯುಲರಿಸಂ ಕುರಿತಾದ ಚಿಂತನೆಯಲ್ಲಿ ರಾಜೀವ್ ಭಾರ್ಗವ್ ಪ್ರಮುಖವಾದ ಒಬ್ಬ ಚಿಂತಕರಾಗಿ ಹೊರ ಹೊಮ್ಮುತ್ತಾರೆ. ಅವರ ಪ್ರಕಟಿಸಿರುವ ಸೆಕ್ಯುಲರಿಸಂ ಅಂಡ್ ಇಟ್ಸ್ ಕ್ರಿಟಿಕ್ಸ್ ಎನ್ನುವ ಪ್ರಬಂಧ ಸೆಕ್ಯುಲರಿಸಂ ಕುರಿತಾದ ವಾದಕ್ಕೆ ಒಂದು ಹೊಸ ರೀತಿಯ ಹೊಳಪು ಒದಗಿಸುತ್ತದೆ. ರಾಜೀವ್ ಭಾರ್ಗವ್ ರವರ ಪ್ರಕಾರ ಸೆಕ್ಯುಲರಿಸಂ ಕುರಿತಾದ ನಮ್ಮ ಬಹುತೇಕ ಚರ್ಚೆಗಳ ಚರ್ಚ್–ಸ್ಟೇಟ್ ಮಾಡೆಲ್ ಸೆಕ್ಯುಲರಿಸಂಗೆ ಪ್ರತಿಕ್ರಿಯೆಯಾಗಿ ಬಂದದ್ದು ಈ ಚರ್ಚ್–ಸ್ಟೇಟ್ ಮಾದರಿಯ ಸೆಕ್ಯುಲರಿಸಂ ಧರ್ಮ ಮತ್ತು ರಾಜಕಾರಣಗಳ ನಡುವೆ ಸ್ಪಷ್ಟವಾದ ಗೆರೆಯನ್ನು ಎಳೆಯುತ್ತದೆ. ಇವರ ಪ್ರಕಾರ ಚರ್ಚ್ ರಾಜ್ಯ ಮಾದರಿಯಿಂದ ಮೂಡಿಬರುವ ಸೆಕ್ಯುಲರಿಸಂನ ಚಿಂತನಾದಾರೆ ಭಾರತದಂತಹ ಬಹು ಸಂಸ್ಕೃತಿಯ ಸಮಾಜಕ್ಕೆ ಒಗ್ಗುವುದಿಲ್ಲ ಎಂದು ಹೇಳುವ ಭಾರ್ಗವ್ ಯುರೋಪಿನ ಸಮಾಜಗಳಲ್ಲಿ ಧಾರ್ಮಿಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ರೂಪ ಪಡೆದ ಇನ್ನೊಂದು ಮಾದರಿ ಭಾರತೀಯ ಬಹುಧಾರ್ಮಿಕ ಸಂದರ್ಭಕ್ಕೆ ಸೂಕ್ತವಾಗಬಹುದೆಂದು ಪ್ರತಿಪಾದಿಸಿದ್ದಾರೆ. ಇದೇ ಅಲ್ಲದೆ Substantive Secularism (ಸ್ವಾತಿಕ ಸೆಕ್ಯುಲರಿಸಂ) ಪ್ರೊಸಿಜರ್ ಸೆಕ್ಯುಲರಿಸಂ(ವೈಜ್ಞಾನಿಕ ಸೆಕ್ಯುಲರಿಸಂ) ಎಂಬ ಎರಡು ರೀತಿಯ ಸೆಕ್ಯುಲರಿಸಂಗಳನ್ನು ವಿವರಿಸಿದ್ದಾರೆ.

ವಸಾಹತು ಕಾಲದಲ್ಲಿ ಬ್ರಿಟೀಷರು ತಮ್ಮ ಸ್ವ ಘೋಷಿತ ನಾಗರಿಕ ಮೇಲ್ತೆನದಲ್ಲಿ ಭಾರತೀಯ ಸಮುದಾಯಗಳನ್ನು ನಾಗರೀಕಗೊಳಿಸುವ ಶ್ವೇತವರ್ಣಿಯನ (white man burden theory) ಹೊರೆ ನಿರ್ವಹಿಸಿದಂತೆಯೇ ವಸಾಹತು ನಂತರದ ಭಾರತದಲ್ಲಿ ಈ ಸೆಕ್ಯುಲರ್ ಬುದ್ಧಿಜೀವಿಗಳು ಮುಂದುವರೆಯುವ ಭಾರತೀಯರನ್ನು ಮುಂದೆ ತರುವ ಮೇಲುಸ್ತುವಾರಿಕೆಯನ್ನು ಸ್ವಯಂ ಘೋಷಿತವಾಗಿ ನಿರ್ವಹಿಸಿದ್ದಾರೆ ಎನ್ನುವ ನಂದಿ ಸೆಕ್ಯುಲರಿಸಂ ಎಂಬುದು ಭಾರತದ ಮಧ್ಯಮ ವರ್ಗ ಒಪ್ಪಿಕೊಂಡ ನಿಲುವಾಗಿದೆ ಎನ್ನುತ್ತಾರೆ. ಪಾಶ್ಚಿಮಾತ್ಯ ವಿಜ್ಞಾನ ವೈಚಾರಿಕತೆ ಮತ್ತು ರಾಷ್ಟ್ರೀಯತೆಯ ತಾತ್ವಿಕ ಹಿನ್ನೆಲೆಯಲ್ಲಿ ರೂಪಗೊಂಡ ಸೆಕ್ಯುಲರಿಸಂ ಹೇಗೆ ಭಾರತೀಯ ಜನ ಜೀವನಕ್ಕೆ ಪರಕೀಯವಾದುದೆಂದು ತೋರಿಸಿ ಕೊಡುವ ನಂದಿ ಭಾರತದಲ್ಲಿ ಪರಂಪರಾಗತವಾಗಿರೂಢಿಸಿ ಬಂದ ಸಹಿಷ್ಣುತೆ ಮತ್ತು ಸಹನೆಯ ಆಧಾರದ ಮೇಲೆ ಜೀವನ ಕ್ರಮವನ್ನುಪಾಶ್ಚಾತ್ಯ ಸೆಕ್ಯುಲರಿಸಂಗೆ ಪರ್ಯಾಯವಾಗಿ ಮುಂದಿಡುತ್ತಾರೆ.

ಭಯ



ಗೇಣು ಹೊಟ್ಟೆಯಲ್ಲಿ
ಹಸಿದ
ಹುಲಿಗಳಿವೆ
ನನ್ನನ್ನೇ
ತಿಂದು
ಬಿಡುತ್ತವೆಂದು
ಭಯವಾಗಿದೆ!

○ ಟಿ.ಎಸ್ ರಾಜೇಂದ್ರ ಪ್ರಸಾದ್

ಒಟ್ಟಾರೆಯಾಗಿ ಮೇಲಿನ ವಾದಗಳು ಪರಸ್ಪರ ಭಿನ್ನತೆಗಳಿಂದ ಕೂಡಿದ್ದರು ಅಂತಿಮವಾಗಿ ಅವು ಸೇರುವುದು ರಿಲಿಜಿಯಸ್ಸಾಗಿ ತಟಸ್ಥವಾಗಿರುವ ಒಂದು ಪ್ರಭುತ್ವದ ಚೌಕಟ್ಟಿನಲ್ಲಿ ಮಾತ್ರ ಈ ಹಿನ್ನೆಲೆಯಲ್ಲಿ ಗಮನಿಸಿದರೆ ಸಮಕಾಲೀನ ಸಹಿಷ್ಣುತೆಯ (Tolerance) ಸಿದ್ಧಾಂತಗಳ ಮುಖ್ಯ ತತ್ವವೊಂದರ ಸುತ್ತ ಈ ಚರ್ಚೆಗಳು ಸುತ್ತುತ್ತಿವೆ. ಅದು ಯಾವುವೆಂದರೆ ಶಾಂತಿಯುತವಾದ ಬಹುತ್ವ ಸಮಾಜಕ್ಕೆ ಪ್ರಭುತ್ವದ ತಾಟಸ್ಥ್ಯ ಅಗತ್ಯ ಈ ಎಲ್ಲಾ ಚಿಂತಕರು ಇದನ್ನು ವಿರೋಧಿಸುತ್ತಿದ್ದಾರೆಯೋ ಅದನ್ನೆ ಪೋಷಿಸುತ್ತಿರುವಂತೆ ಕಾಣುತ್ತಿದೆ. ಅಂದರೆ ಭಾರತದಲ್ಲಿ ರಿಲಿಜನ್ ಇದೆ ಎಂಬ ಆಧಾರದ ಮೇಲೆ ಇವರ ವಾದಗಳು ನೆಲೆ ಕಂಡುಕೊಂಡಿವೆ ಪಾಶ್ಚಾತ್ಯ ಮಾದರಿಯ ಸೆಕ್ಯುಲರಿಸಂ ಭಾರತಕ್ಕೆ ಪರಕೀಯವಾದುದು ನಮ್ಮ ಪೂರ್ವಕಾಲದಲ್ಲಿನ ಸೆಕ್ಯುಲರ್ ಮೌಲ್ಯಗಳನ್ನು ಪುನರುಸ್ಥಾಪಿಸ ಬಯಸುವ ಇವರು ಅದಕ್ಕೆ ಭಾರತದ ಪರಂಪರೆಯ ಅಡಿಪಾಯ ಮಾಡಬಯಸುತ್ತಾರೆ. ಮತ್ತು ಈ ಅಂಶ ಅವರನ್ನು ಭಾರತ ಒಂದು ರಿಲಿಜಿಯನ್ ಹೊಂದಿದೆ ಎಂಬ ಗ್ರಹಿಕೆಯಿಂದ ಹೊರಡುತ್ತದೆ.

ಹಾಗಾದರೆ ಸೆಕ್ಯುಲರಿಸಂಗೆ ಇರುವ ಪ್ರಮುಖವಾದ ತೊಡಕುಗಳೇನು? ಏಕೆ ಅದು ವಿದ್ವಾಂಸರುಗಳಿಂದ ಹಿಡಿದು ಜನಸಮುದಾಯಗಳ ಮನದ ಧ್ವನಿಯಾಗಿ ಉಳಿದಿಲ್ಲ ಎಂಬುದು ಪ್ರಮುಖ ಪ್ರಶ್ನೆಯಾಗಿ ಕಾಡುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಪ್ರೊ. ಬಾಲಗಂಗಾಧರ ಮತ್ತು ಜೆಕಬ್‌ರವರು ತುಂಬಾ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಅವರ ಪ್ರಕಾರ ಸೆಕ್ಯುಲರಿಸಂನ ತಾತ್ವಿಕತೆಯನ್ನೆ ಪ್ರಶ್ನಿಸಬೇಕಾಗುತ್ತದೆ.

ತತ್ವಗಳ. (History of idea) ಇತಿಹಾಸ ಸೆಕ್ಯುಲರಿಸಂ ಎಂಬುದು ಕ್ರಿಶ್ಚಿಯನ್ ತತ್ವವಾಗಿರುವುದನ್ನು ನಿರೂಪಿಸುತ್ತದೆ. ಆದಾಗ್ಯೂ ಏಕೆ ಭಾರತೀಯ ಬುದ್ಧಿಜೀವಿಗಳು, ರಾಜ್ಯ ಮತ್ತು ನಾಗರೀಕರು ಅದನ್ನು ಒಳಗೊಳ್ಳ ಬಯಸುತ್ತಾರೆ. ನಮಗೆ ಇಂದು ರಿಲಿಜಿಯನ್ ಮತ್ತು ರಾಜಕೀಯವನ್ನು ನಿರ್ದಿಷ್ಟವಾಗಿ ಬೇರ್ಪಡಿಸುವ ಯಾವುದೇ ಸಮರ್ಥ ವೈಜ್ಞಾನಿಕ ಸೈದ್ಧಾಂತಿಕ ಚೌಕಟ್ಟು ಇಲ್ಲವಾಗಿದೆ ಅಲ್ಲದೆ ನಮಗೆ ಯಾವ ಅಂಶಗಳು ಹಿಂದೂ ಆಚರಣೆಗಳನ್ನು ರಿಲಿಜಿಯನ್ನಾಗಿ ನಿರೂಪಿಸುತ್ತವೆ ಎಂಬುದಕ್ಕೂ ಸಹ ಯಾವುದೇ ಆಧಾರಗಳಿಲ್ಲ. ರಿಲಿಜಿಯನ್ ಕುರಿತಾದ ಕೆಲಸಕ್ಕೆ ಬಾರದ ವ್ಯಾಖ್ಯಾನಗಳು ರಿಲಿಜಿಯನ್ ಎಂಬ ವಿದ್ಯಮಾನವನ್ನು ಕುರಿತಂತೆ ನಮಗೆ ಏನನ್ನು ತಿಳಿಸುವುದಿಲ್ಲ.

[illegible] ರಿಲಿಜಿಯನ್ ರಾಜಕೀಯದಿಂದ ಪ್ರತ್ಯೇಕಿಸಬೇಕು ಮತ್ತು ರಾಜ್ಯವನ್ನು ಸೆಕ್ಯುಲರ್‌ಮಯಗೊಳಿಸಬೇಕು. ಮೇಲಿನ ಪ್ರಶ್ನೆಗಳಿಗೆ ಉತ್ತರಿಸದೆ ಸೆಕ್ಯುಲರ್‌ವಾದಿಗಳು ಮುಂದುರವರೆಯುವಂತಿಲ್ಲ. ನಿಜವಾದ ಅಪಾಯವಿರುವುದು ಸೆಕ್ಯುಲರಿಸಂ ಕುರಿತಾದ ವಿಮರ್ಶೆ ಭಾರತವನ್ನು ಒಂದು ಹಿಂದೂ ರಿಲಿಜಿಯಸ್ ರಾಜ್ಯವನ್ನಾಗಿ ಮಾಡಲು ಬೇಕಾದ ಸಮರ್ಥನೆಯನ್ನು ಒದಗಿಸುತ್ತದೆ ಎಂಬುದು. ನನ್ನ ವಾದದ ಪೂರ್ಣ ಪಾಠ ಇದು ಮಾತ್ರವಲ್ಲ ಇದಕ್ಕಿಂತ ಮುಂದುವರೆದು ನನ್ನ ಸಲಹೆ ಎಂದರೆ ರಿಲಿಜಿಯಸ್ ಮತ್ತು ಸೆಕ್ಯುಲರ್ ನಡುವಣ ಪರಿಕಲ್ಪನಾ ವಿಭಿನ್ನತೆಗಳು ಮತ್ತು ರಾಜ್ಯವನ್ನು ಸೆಕ್ಯುಲರ್‌ಮಯಗೋಳಿಸುವುದು ಭಾರತೀಯ ಸಮಾಜವನ್ನು ಅರ್ಥಮಾಡಿಕೊಳ್ಳಲು ನಮಗೆ ಯಾವುದೇ ರೀತಿಯಲ್ಲಿ ಸಹಕರಿಸುವುದಿಲ್ಲ. ಅಲ್ಲದೆ ಸೆಕ್ಯುಲರಿಸಂ ಎಂಬ ಮಾದರಿ ಎರಡು ಸಮುದಾಯಗಳ ನಡುವಿನ ಉದ್ವೇಗವನ್ನು ನಿಯಂತ್ರಿಸಲು ಸಾಧ್ಯವಿಲ್ಲ.

ಭಾರತೀಯರಾದ ನಾವು ಒಂದು ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಾವು, ಮುಸ್ಲಿಂ ಮತ್ತು ಬ್ರಿಟೀಷ್ ಎರಡೂ ವಸಾಹತುಶಾಹಿಗಳ ಫಲಗಳಾಗಿದ್ದೇವೆ. ಇಸ್ಲಾಂ ವಸಾಹತುಶಾಹಿಯು ನಮ್ಮ ಸಂಸ್ಕೃತಿಯ ದಾಟು ಸುವಿಕೆಗೆ (ಪೀಳಿಗೆಯಿಂದ ಪೀಳಿಗೆಗೆ) ತೊಂದರೆ ಪಡಿಸಿದ್ದರೆ, ಇದರ ಪರಿಣಾಮವಾಗಿ ಬ್ರಿಟೀಷ್ ವಸಾಹತುಶಾಹಿಯು ಇನ್ನೂ ಮುಂದಕ್ಕೆ ಹೋಗಿ ಲೋಕವನ್ನು ಗ್ರಹಿಸಲು ಹೊಸರೀತಿಯ ಚೌಕಟ್ಟನ್ನು ಪರಿಚಯಿಸಿತು. ಅದಕ್ಕಿಂತ ಹೆಚ್ಚಾಗಿ ನಮ್ಮ ಲೋಕಾನುಭವವನ್ನು ಹೊಸ ವಿಧಾನದಲ್ಲಿ ಮಾತನಾಡುವುದನ್ನೂ ಸಹ ಪರಿಚಯಿಸಿತು. ಈ ಚೌಕಟ್ಟು ನಮ್ಮ ಕುರಿತು ಹೊಸ ಹೊಸ ವಿಚಾರಗಳನ್ನು ತಿಳಿಸಿತು: ಅವುಗಳೆಂದರೆ ನಾವು ಹಿಂದುಳಿದವರು, ಪುರಾತನದವರು, ಅಂಧಶ್ರದ್ದೆಯಲ್ಲಿ ಮುಳುಗಿರುವವರು ಮತ್ತು ಪ್ರಾಚೀನ ಸಾಮಾಜಿಕ ರಚನೆಗಳನ್ನು ಹೊಂದಿದವರು ಎಂಬತ್ಯಾದಿ ಸಂಗತಿಗಳನ್ನು ನಮಗೆ ತಿಳಿಸಿದವು. ಬ್ರಿಟೀಷರು ಈ ರಚನೆಗಳ ಸ್ವರೂಪಗಳನ್ನೂ ಸಹ ಬೋಧಿಸಿದರು.

ಈ ಬೋಧನೆ ನಮಗೆ ಲಭ್ಯವಾಗಿದು ವಸಾಹತುಶಾಹಿ ಪ್ರಯೋಜಿತ ಶಿಕ್ಷಣ ವ್ಯವಸ್ಥೆಯಿಂದ ಯುರೋಪಿನ ಜ್ಞಾನ ಪರ್ವದ ಪ್ರಭಾವಳಿಯ ಭಾಗವಾಗಿ ಜಗತ್ತನ್ನು ವೈಚಾರಿಕವಾಗಿ ಅಧ್ಯಯನ ಮಾಡಬೇಕು ಎಂಬ ವಾದಗಳು ಅರ್ಥಪಡೆದುಕೊಂಡವು. ಪಾಶ್ಚಿಮಾತ್ಯ ವಸಾಹತುಶಾಹಿ ಪ್ರತಿಪಾದಿತ ಶಿಕ್ಷಣವು ಭಾರತಕ್ಕೆ ಒಂದು ಭವ್ಯವಾದ ಗತ ಇತ್ತೆಂದು ಕಾಲಾ ನಂತರ ಅದು ಪುರೋಹಿತಶಾಹಿತ್ವದ ಕಾರಣದಿಂದಾಗಿ ನಶಿಸಿತೆಂದು ಅದನ್ನು ಮತ್ತೆ ಪಾಶ್ಚಿಮಾತ್ಯ ಆಧುನಿಕ, ವೈಜ್ಞಾನಿಕ ಮೌಲ್ಯಗಳ ವಿಚಾರಧಾರೆಯ ಭಾಗವಾಗಿ ಮರುಸ್ಥಾಪಿಸಬೇಕೆಂಬ ವಾದವನ್ನು ಅತ್ಯಂತ ವ್ಯವಸ್ಥಿತವಾಗಿ ಮುಂದಿಟ್ಟರು. ಕಲೋನಿಯಲ್ ವಸಾಹತುಶಾಹಿ ಶಿಕ್ಷಣದ ಮೊದಲ ಭಾಗ ನಾವು ಎಷ್ಟು ಹಿಂದುಳಿದ್ದೇವೆ ಅದಕ್ಕೆ ಕಾರಣವೇನೆಂದು ತಿಳಿಸಿದರೆ ಎರಡನೇಯ ಭಾಗ ಅದು ಆ ಸಮಸ್ಯೆಗಳಿಂದ ಹೊರಬರಲು ಮತ್ತು ಅರ್ಥಮಾಡಿಕೊಳ್ಳಲು ಆಧುನೀಕತೆಯ ಹೆಸರಿನಲ್ಲಿ ಒಂದು ಚೌಕಟ್ಟನ್ನು ಒದಗಿಸಿತು. ಇದು ಸ್ಥಳೀಯವಾದಂತಹ ಆಚರಣೆಗಳು ಕಥೆಗಳು ಸಂಪ್ರದಾಯ ಮತ್ತು ಸಂಸ್ಥೆಗಳ ಬದಲಿಗೆ (ಮೂಢನಂಬಿಕೆಗಳೆಂಬ ಕಾರಣಕ್ಕೆ) ಪಾಶ್ಚಿಮಾತ್ಯ ನಾಗರೀಕತೆಯ ಕಾನೂನು ಮತ್ತು ನಿಯಮಗಳ ವೈಚಾರಿಕತೆಯ ಹೆಸರಿನಲ್ಲಿ ಅರ್ಥಪಡೆದುಕೊಂಡವು. ಪಾಶ್ಚಾತ್ಯರು ಪ್ರಜ್ಞಾಪೂರ್ವಕವಾಗಿ ಇದನ್ನು ಮಾಡಿದ್ದಾರೆ ಎಂದು ಅವರು (ಬಾಲು) ಹೇಳುವುದಿಲ್ಲ. ಯುರೋಪಿನವರು ಬಂದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಭಾರತೀಯ ಸಮಾಜದ ಸ್ವರೂಪವನ್ನು ಹಾಗೆ ಗುರುತಿಸದೆ ಅನ್ಯ ಮಾರ್ಗವೇ ಅವರಿಗಿರಲಿಲ್ಲ ಎನ್ನುವುದು ಅವರ ವಾದ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಸೆಕ್ಯುಲರ್ ಎಂಬ ತತ್ವ ರಿಲಿಜಿಯಸ್ ಥಿಯಾಲಜಿಯ ಒಂದು ಭಾಗವಾಗಿ ಇರುವುದು ಸ್ಪಷ್ಟವಾಗುತ್ತದೆ.

ಥಿಯಾಲಜಿಯ ಭಾಷೆ ಇಂದು ಪಾಶ್ಚತ್ಯರ ಸಾಮಾನ್ಯ ಗ್ರಹಿಕೆಯ ಭಾಷೆಯಾಗಿ ಬಳಕೆಯಲ್ಲಿದೆ. ಪಾಶ್ಚತ್ಯ ಬುದ್ಧಿ ಜೀವಿಗಳು ಮತ್ತು ಪಾಶ್ಚತ್ಯ ಶಿಕ್ಷಣದಿಂದ ತರಬೇತಿ ಪಡೆದ ಬೇರೆ ಸಂಸ್ಕೃತಿಯ ಬುದ್ಧಿಜೀವಿಗಳು ಇದೇ ಥಿಯಾಲಜಿಯ ಭಾಷೆಯನ್ನು ವೈಚಾರಿಕತೆ ಮತ್ತು ವೈಜ್ಞಾನಿಕ ವಿಚಾರಗಳಂತೆ ಸರಾಗವಾಗಿ ವಿವರಿಸಬಲ್ಲವರಾಗುತ್ತಾರೆ. ಸೆಕ್ಯುಲರ್ ಎಂಬ ಪದಗುಚ್ಛವೇ (Category) ಥಿಯಾಲಜಿಯ ಭಾಷೆಯಾಗಿರುವುರಿಂದ ರಾಜಕೀಯವನ್ನು ರಿಲಿಜಿಯಸ್‌ನಿಂದ ಬೇರ್ಪಡಿಸಬೇಕೆಂಬ ವಾದವೇ ರಿಲಿಜಿಯನ್ ಅಸ್ತಿತ್ವವನ್ನು ಬಯಸುತ್ತದೆ. ಹಾಗಾದರೆ ವಸಾಹತುಶಾಹಿಗೆ ಒಳಗಾದ ಭಾರತದ ಬುದ್ಧಿ ಜೀವಿಗಳು ಬಳಸುತ್ತಿರುವ ಸೆಕ್ಯುಲರ್ ಎಂಬ ವಾದಗ್ರಸ್ತ ತಾತ್ವಿಕ ನಿಲುವು ಪಾಶ್ಚತ್ಯ ಥಿಯಾಲಜಿ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ನಿರೂಪಣೆಗೊಂಡಿದ್ದು ಭಾರತದ ಸಂದರ್ಭಕ್ಕೆ ಅಗತ್ಯವಿಲ್ಲದಾಗಿದೆ.

ಸಮಾಜ ವಿಜ್ಞಾನಗಳಲ್ಲಿರುವ ಥಿಯಾಲಜಿ ಪ್ರೇರಿತ ಪದಗುಚ್ಛಗಳ ಐತಿಹಾಸಿಕ ಒಳಗೊಳ್ಳುವಿಕೆಯನ್ನು ಸಂಶೋಧಿಸಿದಾಗ ಒಂದು ಅರ್ಥವಾಗಬಹುದಾದ ವಿವರಣೆಯನ್ನು ನೀಡಬಹುದಾಗಿದೆ. ಅಂದರೆ ಭಾರತದ ಸಮಾಜವನ್ನು ಕುರಿತಾದಂತೆ ಇದುವರೆಗಿನ ನೋಟಕ್ಕೆ ಬೇರೆಯದೆ ವೈಜ್ಞಾನಿಕ ದೃಷ್ಟಿಕೋನ ಅಥವಾ ಸೈದ್ಧಾಂತಿಕ ಚೌಕಟ್ಟು ಬೇಕಾಗುತ್ತದೆ.

ಜೆಕಬ್‌ರವರು ಪ್ರತಿಪಾದಿಸುವಂತೆ ಸೆಕ್ಯುಲರ್ ರಾಜ್ಯ ಮತ್ತು ಭಾರತದ ಸಮಾಜದ ಕುರಿತಾಗಿನ ವಿವರಣೆಗಳು ಪ್ರೊಟೆಸ್ಟೆಂಟ್ ಮೂಲದಿಂದ ಹುಟ್ಟಿದವು ಅನುವುದಕ್ಕಿಂತ ಹಿಂದೂಯಿಸಂ, ಜಾತಿವ್ಯವಸ್ಥೆ, ಮತ್ತು ಸೆಕ್ಯುಲರ್ ರಾಜ್ಯಗಳೆಂಬ ಪರಿಕಲ್ಪನೆಗಳು ಕ್ರಿಶ್ಚಿಯನ್ ಥಿಯಾಲಜಿಯ ಪೂರ್ವಗ್ರಹದ ಹಿನ್ನೆಲೆಯಿಂದ ಹೆಚ್ಚು ಪ್ರಭಾವಿಸಲ್ಪಟ್ಟವುಗಳಾಗಿವೆ. ಅಂದರೆ ಈ ಪ್ರಸ್ತುತ ಸೆಕ್ಯುಲರಿಸಂ, ಹಿಂದೂಯಿಸಂ ಮತ್ತು ಜಾತಿ ವ್ಯವಸ್ಥೆ ಕುರಿತಾದ ಸಿದ್ಧಾಂತಗಳು ಥಿಯಾಲಜಿಯ ಚೌಕಟ್ಟಿನಲ್ಲಿ ವಿವರಿಸಲ್ಪಟ್ಟಿವೆ. ಉದಾಹರಣೆಗೆ ನೋಡುವುದಾದರೆ a)ಭಾರತೀಯ ಸಮಾಜವನ್ನು ರಿಲಿಜಿಯಸ್ ಮತ್ತು ಸೆಕ್ಯುಲರ್‌ಗಳಾಗಿ ವಿಭಾಗಿಸುವುದರ ಮೂಲಕ ಅರ್ಥಮಾಡಿಕೊಳ್ಳಲು ಸಾಧ್ಯವೇ? b) ಇಲ್ಲಿ re-lief ಎಂದರೆ ರಾಜಕೀಯ ಕಾರಣಗಳಿಗೆ ಧರ್ಮವನ್ನು ಬಳಸುವುದು ತಪ್ಪು, c) ಬ್ರಾಹ್ಮಣ ಪುರೋಹಿತರು ಜಾತಿ ವ್ಯವಸ್ಥೆಯ ಮೂಲಕ ರಿಲಿಜಿಯಸ್ ಕಾನೂನುಗಳನ್ನು ಭಾರತ ಸಮಾಜದ ಮೇಲೆ ಹೇರಿದರು. ಎಂಬತ್ಯಾದಿ ನಂಬಿಕೆಗಳು ಪ್ರೊಟೆಸ್ಟೆಂಟ್ ಥಿಯಾಲಜಿಕಲ್ ಚೌಕಟ್ಟಿನಲ್ಲಿ ರೂಪ ಪಡೆದಿವೆ ಎಂದು ತೋರಿಸಲು ಇಂದು ಸಾಧ್ಯವಿದೆ. ಈ ಒಂದು ಹಾದಿಯಲ್ಲಿ ರಿಲಿಜಿಯನ್ ಮತ್ತು ಸೆಕ್ಯುಲರ್‌ಗಳನ್ನು ಪ್ರತ್ಯೇಕಗೋಳಿಸುವಂತಹ ಒಂದು ವೈಜ್ಞಾನಿಕ ಸೈದ್ಧಾಂತಿಕ ಚೌಕಟ್ಟು ನಮಗಿಲ್ಲ ಒಂದು ವೇಳೆ ನಾವು ಇವೆರಡನ್ನು ಭಿನ್ನವೆಂದು ಗ್ರಹಿಸಿದರೆ ಕ್ರಿಶ್ಚಿಯನ್ ಥಿಯಾಲಜಿಯ ಹಿನ್ನೆಲೆಯಲ್ಲಿ ಮಾತ್ರ ನಮಗೆ ಅವುಗಳನ್ನು ಅರ್ಥಮಾಡಿಕೊಳ್ಳುವ ಸಾಧ್ಯ.

ಕಳೆದ 16 ಶತಮಾನಗಳು ಅದಕ್ಕಿಂತ ಹಿಂದಿನಿಂದ ಈ ಒಂದು ಚೌಕಟ್ಟು ಥಿಯಾಲಜಿಯಾ ಸಹಾಯದಿಂದ ರಿಲಿಜಿಯಸ್ ಮತ್ತು ಪೊಲಿಟಿಕಲ್‌ಗಳನ್ನು ವಿಭಾಗಿಸಿ ಇಡೀ ಪಾಶ್ಚತ್ಯ ರಾಜಕೀಯ ಚಿಂತನೆಯನ್ನು ಸೆಕ್ಯುಲರ್‌ಮಯವಾದ ನಿಲುವಾಗಿ ಪ್ರಭಾವಿಸಿದೆ. ಈ ಒಂದು ಥಿಯಾಲಜಿಯ ಭಾಷೆ ಇಂದು ಪಾಶ್ಚತ್ಯರ ಸಾಮಾನ್ಯ ಗ್ರಹಿಕೆಯ ಭಾಷೆಯಾಗಿ ಬಳಕೆಯಲ್ಲಿದೆ. ಪಾಶ್ಚತ್ಯ ಬುದ್ಧಿ ಜೀವಿಗಳು ಮತ್ತು ಪಾಶ್ಚತ್ಯ ಶಿಕ್ಷಣದಿಂದ ತರಬೇತಿ ಪಡೆದ ಬೇರೆ ಸಂಸ್ಕೃತಿಯ ಬುದ್ಧಿಜೀವಿಗಳು ಇದೇ ಥಿಯಾಲಜಿಯ ಭಾಷೆಯನ್ನು ವೈಚಾರಿಕತೆ ಮತ್ತು ವೈಜ್ಞಾನಿಕ ವಿಚಾರಗಳಂತೆ ಸರಾಗವಾಗಿ ವಿವರಿಸಬಲ್ಲವರಾಗುತ್ತಾರೆ. ಸೆಕ್ಯುಲರ್ ಎಂಬ ಪದಗುಚ್ಛವೇ (Category) ಥಿಯಾಲಜಿಯ ಭಾಷೆಯಾಗಿರುವುರಿಂದ ರಾಜಕೀಯವನ್ನು ರಿಲಿಜಿಯಸ್‌ನಿಂದ ಬೇರ್ಪಡಿಸಬೇಕೆಂಬ ವಾದವೇ ರಿಲಿಜಿಯನ್ ಅಸ್ತಿತ್ವವನ್ನು ಬಯಸುತ್ತದೆ. ಹಾಗಾದರೆ ವಸಾಹತುಶಾಹಿಗೆ ಒಳಗಾದ ಭಾರತದ ಬುದ್ಧಿಜೀವಿಗಳು ಬಳಸುತ್ತಿರುವ ಸೆಕ್ಯುಲರ್ ಎಂಬ ವಾದ ಗ್ರಸ್ತ ತಾತ್ವಿಕ ನಿಲುವು ಪಾಶ್ಚತ್ಯ ಥಿಯಾಲಜಿ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ನಿರೂಪಣೆಗೊಂಡಿದ್ದು ಭಾರತದ ಸಂದರ್ಭಕ್ಕೆ ಅಗತ್ಯವಿಲ್ಲದಾಗಿದೆ.

ಇದಕ್ಕಿರುವ ಪರಿಹಾರವೆಂದರೆ ಸಮಾಜ ವಿಜ್ಞಾನಗಳಲ್ಲಿರುವ ಥಿಯಾಲಜಿ ಪ್ರೇರಿತ ಪದಗುಚ್ಛಗಳ ಐತಿಹಾಸಿಕ ಒಳಗೊಳ್ಳುವಿಕೆಯನ್ನು ಸಂಶೋಧಿಸಿದಾಗ ಒಂದು ಅರ್ಥವಾಗಬಹುದಾದ ವಿವರಣೆಯನ್ನು ನೀಡಬಹುದಾಗಿದೆ. ಅಂದರೆ ಭಾರತದ ಸಮಾಜವನ್ನು ಕುರಿತಾದಂತೆ ಇದುವರೆಗಿನ ನೋಟಕ್ಕೆ ಬೇರೆಯದೆ ವೈಜ್ಞಾನಿಕ ದೃಷ್ಟಿಕೋನ ಅಥವಾ ಸೈದ್ಧಾಂತಿಕ ಚೌಕಟ್ಟು ಬೇಕಾಗುತ್ತದೆ. □

ಅಲ್ಲಮನೆಂಬ 'ಅಜ್ಜ'ಗೆ

○ ಬಿ.ಮಹೇಶ್ ಹರವೆ

ಓ ಶಬ್ದಮುಗ್ಧನೆ
ಶಬ್ದಸಂದಣಿಗೆ ಎನ್ನ ಸಿಲಿಕಿಸಿ
ಆ ನೀಲಿಯಲಿ ನಿರಳವಾದೆಯೇಕೆ?

ಮಾತಿಗೆ ಮೌನದ ಉಡುಪ ತೊಡಿಸಿದೆ
ನಡಿಗೆಗೆ ಚಲುವಳಿಯ ಗೆಜ್ಜೆ ಕಟ್ಟಿದೆ
ಬುದ್ಧ-ಅಲ್ಲಮರ, ಗಾಂಧಿ-ಲೋಹಿಯಾರ
ಮಾತು ಮಣಿಹಗಳ
"ನನಗೆ ಗೊತ್ತಿಲ್ಲಾರೀ" ಎಂದು ನಗುತ್ತಲೆ
ಎನ್ನೊಳಗೆ ಇಳಿಸಿದಿರಿ
ಎನ್ನ ಕೈಗೆ ಕನ್ನಡಿಯ ಕೊಟ್ಟು
ಕಣ್ಣು ಕಟ್ಟಿದಿರೇಕೆ?



ಅರಿವ ಕಾಲಕೆ ತೊರೆಯ ಸೆಲೆ ಬತ್ತಿದೆ!
ಹರಿವ ಕಾಲದಲಿ ಮೊಗೆವರಿಲ್ಲದೆ ಮನ ಮಿಡುಕಿತೆ?
ದಶಕ ದಶಕಗಳಾಚೆ ನಿಂತು ಕೈಚಾಚಿ ನೀವು ಕೂಗಿ ಕರೆವಾಗ
ಕಾಲವ ದಾಟಲಾಗದೆ ತಡಬಡಾಯಿಸುತ್ತಿದ್ದ ನಮ್ಮ ಕಂಡು
ನಗುವೇಕೆ ನಿಮಗೆ ಬರಲಿಲ್ಲ? ಕರುಣೇ ಏಕೆ ನಿಮಗೆ ಬರಲಿಲ್ಲ?
ವರ್ತಮಾನಕ್ಕಿಳಿದು, ಬೆರಳು ತುದಿ ಹಿಡಿದು
ನಡೆವ ನಿಮ್ಮ ದಾಪುಗಾಲಿನ ರಭಸಕೆ
ನಮ್ಮ ಭಯ, ಅಜ್ಞಾನಗಳು ಮಾಯ.

ಭೂಗೋಳದ ಶಿರದಲಿ ಕುಳಿತ್ತಿದ್ದರೂ
ಐ.ಡಿ.ಹಳ್ಳಿಯ ನೆನಪು ಮಾಸಲಿಲ್ಲ.
ಬಂಡೆ, ಪೊದರು, ತಂಗಡಿಗಿಡ, ಕ್ರಿಮಿಕೀಟ ಮಣ್ಣುಗಳಲ್ಲಿ
ಊರ ವಾಸನೆಯ ಸೆಳೆತ.
ನಿನ್ನದಲ್ಲದ ಊರು ನಿನ್ನೊಳಗಿರಲಿಲ್ಲ ಗುರುವೆ;
ನಿನಗಾದವರೂ ಕೂಡ.
ಆದರೆ, ನಿಮ್ಮ ಪ್ರೀತಿಯ ಕಾಲ ದೇಶಗಳು ನಿಮಗೆ ಹಗೆಗಳಾದವೇ?

ಆ ಇರುಳು, ಹಗಲು ಹರಿಯುವ ಮುನ್ನವೇ
ನಿಮಗೊಲಿಯಿತೆ?
ಇಲ್ಲಾ, ಹಗಲಿನ ಕಲ್ಮಷವ ಕಂಡು
ನೀವೇ ಇರುಳಿಗೆ ಒಲಿದಿರಾ?
ಒಗಟಿನ ಲೋಕದಲಿ ಒಗಟೊಂದ ರೂಪಿಸಿ ಹೊರಟಿರೇ...
ನಮ್ಮ ಅರಿವಿನ ಅರಿವಾಗಿ ಬರಲಾರಿರ...

(ಶ್ರೀ.ಜಿ. ಶ್ರೀನಿವಾಸ ಕುಮಾರ ಅವರ ನೆನೆದು.
೧೨.೦೧.೦೯ಕ್ಕೆ ಅವರು ಅಮೂರ್ತವಾಗಿ ಒಂದು ವರುಷ)

ಮತಾಂತರ: ಬಿಡುಗಡೆಯ ಹಾದಿ

ಸಾ ರಾ ಅಬೂಬಕ್ಕರ್

ಮತಾಂತರ ಒಂದು ದೊಡ್ಡ ರಾಷ್ಟ್ರೀಯ ದುರಂತ ಎಂಬಂತೆ ಇಂದು ಕೆಲವು ಮಾಧ್ಯಮಗಳು ಮತ್ತು ಸಂಘ ಸಂಸ್ಥೆಗಳು ಬಿಂಬಿಸುತ್ತಿವೆ. ಮತಾಂತರ ಖಂಡಿತವಾಗಿಯೂ ಒಂದು ಸಮಸ್ಯೆ ಇಲ್ಲ. ಈ ದೇಶದ ಪ್ರಜೆಗಳು ತಮಗೆ ಇಷ್ಟವಿರುವ ಧರ್ಮವನ್ನು ಅನುಸರಿಸಬಹುದು ಎಂಬುದು ನಮ್ಮ ಸಂವಿಧಾನ. ಈ ಸಂವಿಧಾನ ಈ ದೇಶದ ನಾಗರಿಕರಿಗೆ ಈ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ. ಆ ಸ್ವಾತಂತ್ರ್ಯವನ್ನು ಈ ದೇಶದ ನಾಗರಿಕರಿಗೆ ನಿಷೇಧಿಸುವ ಹಕ್ಕು ಯಾರಿಗೂ ಇಲ್ಲ; ಇರಕೂಡದು.

ಇಂದು ಧರ್ಮದ ಹೆಸರಿನಲ್ಲಿ, ಮತಾಂತರದ ಹೆಸರಿನಲ್ಲಿ ಜನ ಸಾಮಾನ್ಯರ ಕೊಲೆಗಳೂ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರಗಳೂ ಆರಾಧನಾ ಸ್ಥಳಗಳ ಮೇಲೆ ಆಕ್ರಮಣಗಳೂ ನಡೆಯುತ್ತಿವೆ. ಇಡೀ ಊರಿಗೆ ಬೆಂಕಿ ಹಚ್ಚಿ ಜನರನ್ನು ನಿರಾಶ್ರಿತರಾಗಿಸಿ ಅವರು ಶಿಬಿರಗಳಲ್ಲಿ ಬದುಕು ನೂಕುವಂತಹ ಪರಿಸ್ಥಿತಿಗೆ ಅವರನ್ನು ತಳ್ಳಲಾಗಿದೆ. ಹಿಂದಿನ ಕಾಲದಲ್ಲಿ ಬೇರೆ ದೇಶದ ರಾಜರು ಮತ್ತವರ ಸೈನಿಕರು ಅಮಾಯಕ ನಾಗರಿಕರ ಮೇಲೆ ಇಂತಹ ದೌರ್ಜನ್ಯವೆಸಗುತ್ತಿದ್ದರು. ಆದರೆ ಇಂದು ತಮ್ಮ ಸಹ ನಾಗರಿಕರು, ನಿನ್ನೆಯ ವರೆಗೆ ತಮ್ಮ ಸ್ನೇಹಿತರಾಗಿದ್ದ ತಮ್ಮ ನೆರೆಕರೆಯವರೇ ಇಂತಹ ದುಷ್ಕೃತ್ಯಕ್ಕೆ ಮುಂದಾಗುತ್ತಾರೆಂದರೆ ಅವರು ಮತಾಂಧತೆಯಿಂದ ಕುರುಡಾಗಿ ಮಾನವೀಯತೆಯನ್ನು ಮರೆತರೆಂದು ತಿಳಿದುಕೊಳ್ಳಬೇಕೆ? ಈ ದೇಶದ ನಾಗರಿಕರ ಮನದಾಳದಲ್ಲಿ ಇಂತಹ ಕ್ರೌರ್ಯ ಮನೆ ಮಾಡಿದ್ದಾದರೂ ಹೇಗೆ? ಈಚೆಗೆ ಒರಿಸ್ಸಾದಲ್ಲಿ ನಡೆದ ಘಟನೆ ಈ ಜನರ ಕ್ರೌರ್ಯಕ್ಕೊಂದು ಉದಾಹರಣೆ ಮತಾಂತರದ ಆರೋಪ ಹೊರಿಸಿ ಕ್ರೈಸ್ತ ಧರ್ಮಗುರುಗಳ ಮೇಲೆ ಆಕ್ರಮಣ ಮಾಡಿದ್ದಲ್ಲದೆ ಕ್ರೈಸ್ತ ಸನ್ಯಾಸಿನಿಯನ್ನು ಹಾಡು ಹಗಲಲ್ಲಿ ಅತ್ಯಾಚಾರ ಮಾಡುವಷ್ಟು ಇವರ ಮನಸ್ಸು ವಿಷಮಯಗೊಂಡದ್ದು ಹೇಗೆ? ಕ್ರೌರ್ಯ ಇದೊಂದೇ ಅಲ್ಲ. ಗುಜರಾತಿನಲ್ಲಿ ಗರ್ಭಿಣಿ ಮಹಿಳೆಯ ಹೊಟ್ಟೆ ಸೀಳಿ ಹುಟ್ಟಲಿದ್ದ ಮಗುವನ್ನು ತ್ರಿಶೂಲದಿಂದ ಚುಚ್ಚಿ ತೆಗೆದು, ಅದನ್ನು ಅರೆ ಜೀವವಾಗಿದ್ದ ಆ ತಾಯಿಯನ್ನು ಬೆಂಕಿಗೆಸೆದ ಕ್ರೌರ್ಯವನ್ನು ಬಣ್ಣಿಸಲು ನನ್ನಲ್ಲಿ ಶಬ್ದಗಳಿಲ್ಲ. ಓರ್ವ ಮಹಿಳೆಯ ಮೇಲಾದ ಈ ದೌರ್ಜನ್ಯದ ಕುರಿತು ಕರ್ನಾಟಕದ ಒಂದೇ ಒಂದು ಮಹಿಳಾ ಸಂಘಟನೆಯೂ ಇದನ್ನೂ ಖಂಡಿಸುವಂತಹ ಒಂದೇ ಒಂದು ಹೇಳಿಕೆ ನೀಡಿದ್ದೂ ನನ್ನ ಗಮನಕ್ಕೆ ಬಂದಿಲ್ಲ.

ಇಂತಹದೇ ಒಂದು ಕ್ರೂರ ದೃಶ್ಯ ಕಳೆದ ವಾರ ಟಿವಿಯಲ್ಲಿ ಕಾಣಿಸಿಕೊಂಡಿದೆ. ಚೆನ್ನೈನ ಲಾ ಕಾಲೇಜಿನ ಓರ್ವ ದಲಿತ ವಿದ್ಯಾರ್ಥಿಯನ್ನು ಇತರ ಹಲವಾರು ವಿದ್ಯಾರ್ಥಿಗಳು ಕಬ್ಬಿಣದ ಸರಳು ಮತ್ತು ಮರದ ದೊಣ್ಣೆಗಳಿಂದ ಬಡಿದು ಆತನು ಬೋಧವಿಲ್ಲದೆ ನೆಲಕುರುಳಿದಾಗ, ಹಾವನ್ನು ಹೊಡೆಯುವಂತೆ, ಆತನ ಮೇಲೆ ಮತ್ತೆ ಮತ್ತೆ ಹೊಡೆದರು. ಇದನ್ನು ಪೋಲೀಸರು ದೂರ ನಿಂತು ನಗುತ್ತಾ

ನಿನ್ನೆಯವರೆಗೆ ತಮ್ಮ ಸ್ನೇಹಿತರಾಗಿದ್ದ ತಮ್ಮ ನೆರೆಕರೆಯವರೇ ಇಂತಹ ದುಷ್ಕೃತ್ಯಕ್ಕೆ ಮುಂದಾಗುತ್ತಾರೆಂದರೆ ಅವರು ಮತಾಂಧತೆಯಿಂದ ಕುರುಡಾಗಿ ಮಾನವೀಯತೆಯನ್ನು ಮರೆತರೆಂದು ತಿಳಿದುಕೊಳ್ಳಬೇಕೆ? ಮತಾಂತರದ ಆರೋಪ ಹೊರಿಸಿ ಕ್ರೈಸ್ತ ಧರ್ಮ ಗುರುಗಳ ಮೇಲೆ ಆಕ್ರಮಣ ಮಾಡಿದ್ದಲ್ಲದೆ ಕ್ರೈಸ್ತ ಸನ್ಯಾಸಿನಿಯನ್ನು ಹಾಡು ಹಗಲಲ್ಲಿ ಅತ್ಯಾಚಾರ ಮಾಡುವಷ್ಟು ಇವರ ಮನಸ್ಸು ವಿಷಮಯಗೊಂಡದ್ದು ಹೇಗೆ? ಕ್ರೌರ್ಯ ಇದೊಂದೇ ಅಲ್ಲ. ಗುಜರಾತಿನಲ್ಲಿ ಗರ್ಭಿಣಿ ಮಹಿಳೆಯ ಹೊಟ್ಟೆ ಸೀಳಿ ಹುಟ್ಟಲಿದ್ದ ಮಗುವನ್ನು ತ್ರಿಶೂಲದಿಂದ ಚುಚ್ಚಿ ತೆಗೆದು, ಅದನ್ನು ಅರೆ ಜೀವವಾಗಿದ್ದ ಆ ತಾಯಿಯನ್ನು ಬೆಂಕಿಗೆಸೆದ ಕ್ರೌರ್ಯವನ್ನು ಬಣ್ಣಿಸಲು ನನ್ನಲ್ಲಿ ಶಬ್ದಗಳಿಲ್ಲ. ಓರ್ವ ಮಹಿಳೆಯ ಮೇಲಾದ ಈ ದೌರ್ಜನ್ಯದ ಕುರಿತು ಕರ್ನಾಟಕದ ಒಂದೇ ಒಂದು ಮಹಿಳಾ ಸಂಘಟನೆಯೂ ಖಂಡಿಸುವಂತಹ ಒಂದೇ ಒಂದು ಹೇಳಿಕೆ ನೀಡಿದ್ದೂ ನನ್ನ ಗಮನಕ್ಕೆ ಬಂದಿಲ್ಲ.

ನೋಡುತಿದ್ದ ದೃಶ್ಯ; ಮನುಷ್ಯರು ಕೇವಲ ಜಾತಿ, ಧರ್ಮದ ಹೆಸರಿನಲ್ಲಿ ಇಂತಹ ಪಿಶಾಚಿಗಳಾಗಲೂ ಈ ದೇಶದಲ್ಲಿ ಸಾಧ್ಯವಾಗಿದೆಯಲ್ಲಾ? ಇಂತಹ ಘಟನೆ ಬೇರೆ ಯಾವ ದೇಶದಲ್ಲಾದರೂ ನಡೆದೀತೇ? ಇಂತಹ ದೃಶ್ಯಗಳು ಕೆಲವು ದಿನ ನನ್ನ ನಿದ್ರೆ ಕೆಡಿಸುತ್ತವೆ. ಅಹಿಂಸೆಯನ್ನು ಸಾರಿದ ಬುದ್ಧ ಹುಟ್ಟಿದ ನಾಡಿನಲ್ಲಿ, ಅಹಿಂಸೆಯನ್ನು ಬೋಧಿಸುತ್ತಲೇ ಪ್ರಾಣತೆತ್ತ ಗಾಂಧೀಜಿಯ ನಾಡಿನಲ್ಲಿ ಇಂತಹ ಹಿಂಸಾವಾದಿಗಳು ಹುಟ್ಟಿದ್ದಾದರೂ ಹೇಗೆ?

ಈಗ ಮತಾಂತರದ ವಿಷಯಕ್ಕೆ ಬರೋಣ. ಮೊತ್ತ ಮೊದಲಾಗಿ, ಯಾಕೆ ಓರ್ವ ಮನುಷ್ಯ ಮತಾಂತರಗೊಳ್ಳುತ್ತಾನೆ ಎಂದು ಯೋಚಿಸಬೇಕು. ಓರ್ವ ಮನುಷ್ಯನಿಗೆ ತಾನು ಬದುಕುತ್ತಿರುವ ಸಮುದಾಯದಲ್ಲೇ ನೆಮ್ಮದಿಯಿಂದ ಬದುಕು ಸಾಗಿಸುವ ವಾತಾವರಣ ಇದ್ದರೆ ತಮ್ಮ ಧಾರ್ಮಿಕ ನಂಬಿಕೆಯನ್ನು ಬದಲಾಯಿಸಲು ಸಿದ್ಧರಾಗುತ್ತಾರೆಯೇ? ತಾನು ಹುಟ್ಟಿ ಬೆಳೆದ ಸಮಾಜ, ಧಾರ್ಮಿಕ ನಂಬಿಕೆ, ಸಂಸ್ಕೃತಿ ಎಲ್ಲವನ್ನು ತ್ಯಜಿಸಿ ಆತನು ಇನ್ನೊಂದು ಧಾರ್ಮಿಕ ನಂಬಿಕೆಯತ್ತ ವಾಲಬೇಕಾದರೆ ಆತನು ಆ ಸಮಾಜದಲ್ಲಿ ಅಂತಹ ನೋವುಂಡಿರಬೇಕಲ್ಲವೇ? ಅಂತಹ ದೌರ್ಜನ್ಯ ಮತ್ತು ಶೋಷಣೆಯ ಕೆಲವು ಚಿತ್ರಗಳನ್ನು ನಿಮ್ಮ ಮುಂದಿಡುವೆ.

ಈ ದೇಶದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕೆ ಕೊನೆ ಎಂಬುದಿಲ್ಲ. ಮನುಷ್ಯರ ತಲೆಯ ಮೇಲೆ ಇತರ ಮನುಷ್ಯರ ಮಲ ಹೊರಿಸುವ ಪದ್ಧತಿ ನಮ್ಮ ದೇಶದಿಂದ ಇನ್ನೂ ಮರೆಯಾಗಿಲ್ಲ ಎಂಬ ವರದಿ ಇದೆ. ಮಲ ಹೊರಿಸುವುದು ಮಾತ್ರವಲ್ಲ ಮಲ ತಿನ್ನಿಸಲೂ, ಈ ಜನರು ಹಿಂಜರಿಯಲಿಲ್ಲ. ಇಂತಹ ಘಟನೆ ಬೇರೆ ಯಾವ ದೇಶದಲ್ಲಿ ನಡೆದಿದೆ ಎಂದು ಭೈರಪ್ಪನೊಡನೆ ಕೇಳಬೇಕಾಗಿ ಕೆಲವು ವಾರಗಳ ಹಿಂದೆ ಪತ್ರಿಕೆಯಲ್ಲಿ ಬಂದ ವರದಿ ಎಲ್ಲರಿಗೂ ನೆನಪಿರಬಹುದು. ದಲಿತ ಹೆಣ್ಣು ಮಗಳೊಬ್ಬಳು ಸರಕಾರೀ ನಲ್ಲಿಯಿಂದ ನೀರೆತ್ತಿಕೊಂಡ ಕಾರಣಕ್ಕಾಗಿಯೇ ಆಕೆಯನ್ನು ಹಿಂಸಿಸಿ 101 ರೂಪಾಯಿ ದಂಡ ವಿಧಿಸಿದ್ದಕ್ಕಾಗಿ ಅವಮಾನಿತಳಾದ ಆಕೆ ನೊಂದು ಆತ್ಮಹತ್ಯೆ ಮಾಡಿಕೊಂಡಳು. ನೀರೆಂಬುದು ಪ್ರಕೃತಿಯ ಕೊಡುಗೆ. ಜೀವಜಲ, ಆ ನೀರೂ ಕೂಡಾ ಈ ದಲಿತರು ಉಪಯೋಗಿಸದಂತೆ ತಡೆಯೊಡ್ಡಲಾಗುತ್ತಿದೆ. ಈ ದೇಶದಲ್ಲಿ ನೀರಿಗೂ ಭಿಕ್ಷೆ ಬೇಡಬೇಕಾದ ಪರಿಸ್ಥಿತಿ ದಲಿತರದು.

ದಲಿತ ಹುಡುಗನೊಬ್ಬ S.S.L.C ಪಾಸಾದ ಕಾರಣಕ್ಕಾಗಿಯೇ ಆತನ ಕೊಲೆ ಮಾಡಲಾಗಿದೆ. ದಲಿತ ಹುಡುಗನೊಬ್ಬನು ಶಾಲೆಯಲ್ಲಿ ತನ್ನ ಮಗನಿಗಿಂತ ಅಧಿಕ ಮಾರ್ಕು ಪಡೆದ ಕಾರಣಕ್ಕಾಗಿಯೇ ಆಗ ಹುಡುಗನ ತಂದೆ ದಲಿತನ ಮನೆಗೆ ಬಂದು ಆ ಮನೆಯ ಹದಿಹರೆಯದ ಹೆಣ್ಣು ಮಗಳನ್ನು ಹೊರಗೆಳೆದು ಆಕೆಯ ಮೈ ಮೇಲೆ ಕೈಹಾಕಿ ಆಕೆಯನ್ನು ಅವಮಾನಿಸಿದನು. ಆಕೆಯ ತಾಯಿ ಬಂದು, ತನ್ನ ಮಗನು ಇನ್ನು ಮುಂದೆ ಆ ಯಜಮಾನನ ಮಗನಿಂಗಿಂತ ಹೆಚ್ಚು ಮಾರ್ಕು ಪಡೆಯುವುದಿಲ್ಲವೆಂದು ಹೇಳಿ ಆತನ ಕ್ಷಮೆಕೇಳಿದ ಬಳಿಕ ಆ ಹುಡುಗಿಯನ್ನು ಬಿಟ್ಟನು! ಇಂತಹ ಘಟನೆಗಳು ಬೇರೆ ಯಾವ ದೇಶದಲ್ಲಾದರೂ ನಡೆಯುತ್ತವೆಯೇ?

ಕಂಬಾಲಪಳ್ಳಿಯಲ್ಲಿ ದಲಿತರ ಗುಡಿಸಲುಗಳಿಗೆ ಬೆಂಕಿ ಹಚ್ಚಲಾಯಿತು. ಕೈರ್ಲಾಂಜಿಯಲ್ಲಿ ದಲಿತನೊಬ್ಬನ ಹೆಂಡತಿ ಮತ್ತು ಮೂರು ಮಕ್ಕಳನ್ನು ಕೊಲೆ ಮಾಡಲಾಯಿತು. ಮಹಾರಾಷ್ಟ್ರದಲ್ಲಿ ದಲಿತರ ಮೇಲಿನ ದೌರ್ಜನ್ಯ ವರ್ಷ ಕಳೆದಂತೆ ಅಧಿಕಗೊಳ್ಳುತ್ತಿದೆ. ಕಳೆದ ಏಪ್ರಿಲ್ ತಿಂಗಳಲ್ಲಿ ಮಹಾರಾಷ್ಟ್ರದ ಬಂಡಾರಾ ಎಂಬಲ್ಲಿ ಶಾಲೆಯಲ್ಲಿ ಪರೀಕ್ಷೆ ಬರೆಯಲು ಹೋದ ವಿದ್ಯಾರ್ಥಿಗಳ ಮೇಲೆ ಮತ್ತು ಅವರ ಉತ್ತರ ಪತ್ರಿಕೆಯ ಕಾಗದದ ಮೇಲೆ ಅವರನ್ನು ಶುದ್ಧೀಕರಿಸಲಿಕ್ಕಾಗಿ ದನದ ಮೂತ್ರವನ್ನು ಸಿಂಪಡಿಸಲಾಯಿತು. ಅಲ್ಲಿ ಹಿಂದೆ ಇದ್ದ ಮುಖ್ಯೋಪಾಧ್ಯಾಯಿನಿಯಾಗಿದ್ದವರು ದಲಿತರಾಗಿದ್ದುದೇ, ಈ ಸಂಗವಳಿಕೆಗೆ ಕಾರಣವಾಗಿತ್ತು. ಅವರು ವರ್ಗಾವಣೆಗೊಂಡು ಹೋದ ಬಳಿಕ. ಆಕೆ ಮುಟ್ಟಿದ ಕಾಗದ ಮತ್ತು ಈ ಹುಡುಗರನ್ನು ದನದ ಮೂತ್ರದಿಂದ ಶುದ್ಧೀಕರಿಸಲಾಯಿತು!

ದಲಿತರು ತಮ್ಮ ಮುಂದೆ ಉತ್ತಮ ಬಟ್ಟೆ ಉಟ್ಟು ಚಪ್ಪಲಿ ಹಾಕಿ ನಡೆದರೆ, ಸೈಕಲಿನಲ್ಲಿ ಕಾಲೇಜಿಗೆ ಹೋದರೆ, ಕೊನೆಗೆ ಮೊಬೈಲ್ ಕೈಯಲ್ಲಿ ಹಿಡಿದರೂ ಮೇಲ್ಜಾತಿಯವರಿಗೆ ಸಹನೆಯಾಗುವುದಿಲ್ಲ. ಯಾವುದೋ ಒಂದು ನೆಪ ಹುಡುಕಿ ಅವರ ಮೇಲೆ ಬಹಿಷ್ಕಾರ ಹಾಕಿ ಅವರಿಗೆ ಊರಿನಲ್ಲಿ ಕೆಲಸ ದೊರೆಯದಂತೆ ಮಾಡುವುದು. ಅವರು

ಈ ದೇಶದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕೆ ಕೊನೆ ಎಂಬುದಿಲ್ಲ. ಮನುಷ್ಯರ ತಲೆಯ ಮೇಲೆ ಇತರ ಮನುಷ್ಯರ ಮಲ ಹೊರಿಸುವ ಪದ್ಧತಿ ನಮ್ಮ ದೇಶದಿಂದ ಇನ್ನೂ ಮರೆಯಾಗಿಲ್ಲ ಎಂಬ ವರದಿ ಇದೆ. ಮಲ ಹೊರಿಸುವುದು ಮಾತ್ರವಲ್ಲ ಮಲ ತಿನ್ನಿಸಲೂ, ಈ ಜನರು ಹಿಂಜರಿಯಲಿಲ್ಲ. ಇಂತಹ ಘಟನೆ ಬೇರೆ ಯಾವ ದೇಶದಲ್ಲಿ ನಡೆದಿದೆ ಎಂದು ಭೈರಪ್ಪನೊಡನೆ ಕೇಳಬೇಕಾಗಿ ಕೆಲವು ವಾರಗಳ ಹಿಂದೆ ಪತ್ರಿಕೆಯಲ್ಲಿ ಬಂದ ವರದಿ ಎಲ್ಲರಿಗೂ ನೆನಪಿರಬಹುದು. ದಲಿತ ಹೆಣ್ಣು ಮಗಳೊಬ್ಬಳು ಸರಕಾರೀ ನಲ್ಲಿಯಿಂದ ನೀರೆತ್ತಿಕೊಂಡ ಕಾರಣಕ್ಕಾಗಿಯೇ ಆಕೆಯನ್ನು ಹಿಂಸಿಸಿ 101 ರೂಪಾಯಿ ದಂಡ ವಿಧಿಸಿದ್ದಕ್ಕಾಗಿ ಅವಮಾನಿತಳಾದ ಆಕೆ ನೊಂದು ಆತ್ಮಹತ್ಯೆ ಮಾಡಿಕೊಂಡಳು. ನೀರೆಂಬುದು ಪ್ರಕೃತಿಯ ಕೊಡುಗೆ. ಜೀವಜಲ, ಆ ನೀರೂ ಕೂಡಾ ಈ ದಲಿತರು ಉಪಯೋಗಿಸದಂತೆ ತಡೆಯೊಡ್ಡಲಾಗುತ್ತಿದೆ. ಈ ದೇಶದಲ್ಲಿ ನೀರಿಗೂ ಭಿಕ್ಷೆ ಬೇಡಬೇಕಾದ ಪರಿಸ್ಥಿತಿ ದಲಿತರದು.

ವ್ಯಾಪಾರ ಮಾಡದಂತೆ ನಿರ್ಬಂಧಿಸುವುದೆಲ್ಲವೂ ನಡೆಯುತ್ತದೆ. ಅಂತಹ ಸಂದರ್ಭಗಳಲ್ಲಿ ದಲಿತರಿಗೆ ಕೂಲಿ ದೊರೆಯದಂತೆ ಮಾಡಿ ಅವರು ಉಪವಾಸ ಬೀಳುವಂತೆ ಮಾಡಲಾಗುತ್ತದೆ. ಕೈರ್ಲಾಂಜಿ, ಕಂಬಾಲಪಳ್ಳಿ, ಬೆಂಡಿಗೇರಿ ಎಲ್ಲಿ, ಸತ್ತದನಗಳ ಚರ್ಮ ಸುಲಿದರೆಂಬ ಕಾರಣಕ್ಕಾಗಿಯೇ ದಲಿತರನ್ನು ಕೊಲೆ ಮಾಡಿದ ದೇಶ ನಮ್ಮದು.

ದಲಿತರ ಮೇಲೆ ಇಂತಹ ದೌರ್ಜನ್ಯವೆಸಗಿದವರ ಮೇಲೆ ಕಾನೂನು ಕ್ರಮ ಜರುಗಿಸಲು ನಮ್ಮ ಸಂವಿಧಾನದಲ್ಲಿ ಅವಕಾಶವಿದೆ. ಆದರೆ ಪೋಲೀಸ್ ಇಲಾಖೆ ಈ ದೌರ್ಜನ್ಯ ಎಸಗಿದವರ ಮೇಲೆ ಸಮನಾಗಿ F.I.R ದಾಖಲಿಸುವುದೇ ಇಲ್ಲ. ಹಲವು ದಿನಗಳ ಬಳಿಕ, ಪತ್ರಿಕೆಗಳು ಮತ್ತೆ ಮತ್ತೆ ಈ ಕುರಿತು ಜನರ ಗಮನ ಸೆಳೆದ ಬಳಿಕ ಅರೆ ಮನಸ್ಸಿನಿಂದ F.I.R ದಾಖಲಿಸಿಕೊಳ್ಳುತಾರೆ. ಮೇಲ್ಜಾತಿಯವರ ಒತ್ತಡ ಮತ್ತು ಪೋಲೀಸರ ಔದಾಸೀನ್ಯದಿಂದಾಗಿ ಸಮನಾದ ತನಿಖೆ ನಡೆಯದೆ, ಸಮನಾದ ಸಾಕ್ಷ್ಯಗಳಿಲ್ಲವೆಂಬ ಕಾರಣದಿಂದ ನ್ಯಾಯಾಲಯ ಅಪರಾಧಿಗಳನ್ನು ಬಿಡುಗಡೆಗೊಳಿಸುತ್ತದೆ. ಅಪರಾಧಿಗಳು ಮತ್ತೊಮ್ಮೆ ದೌರ್ಜನ್ಯಕ್ಕೊಳಗಾದವರ ಮುಂದೆ ತಮ್ಮ ಶಕ್ತಿ ಪ್ರದರ್ಶನ ಮಾಡುತ್ತಾರೆ.

ಮಹಾರಾಷ್ಟ್ರದ C.I.D ವರದಿಯ ಪ್ರಕಾರ 2006 ರಲ್ಲಿ ದಲಿತರ ಮೇಲೆ 1053 ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದರೆ 2007ರಲ್ಲಿ 1,166 ಪ್ರಕರಣಗಳು ದಾಖಲಾಗಿವೆ. ವರ್ಷ ಕಳೆದಂತೆ ಇಂತಹ ದೌರ್ಜನ್ಯ ಪ್ರಕರಣಗಳು ಅಧಿಕಗೊಳ್ಳುತ್ತಲೇ ಹೋಗುತ್ತಿದೆ. ಈ ದೌರ್ಜನ್ಯಗಳ ವಿರುದ್ಧ ಎಂತಹ ಕಾನೂನು ರೂಪಿಸಿದರೂ ಪ್ರಯೋಜನವಾಗುತ್ತಿಲ್ಲ. ಯಾಕೆಂದರೆ ದಲಿತರ ವಿರುದ್ಧ ಜನರ ಮನದಾಳದಲ್ಲಿ ತುಂಬಿದ ದ್ವೇಷದ ವಿಷ ಅಧಿಕಗೊಳ್ಳುತ್ತಲೇ ಇದೆ.

ಈ ದೇಶದಲ್ಲಿ ದಲಿತರು ಮನುಷ್ಯರಂತೆ ಬದುಕಲು ಇನ್ನೂ ಸಾಧ್ಯವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು ಮತಾಂತರಕ್ಕೆ ತುಡಿಯುವುದು ಸಹಜತಾನೇ? ಮತಾಂತರಗೊಂಡು ಅನ್ಯ ಧರ್ಮದಲ್ಲಿ ಸೇರ್ಪಡೆಗೊಂಡರೆ ಅವರ ಮಕ್ಕಳಿಗೆ ಶಿಕ್ಷಣ, ಆರೋಗ್ಯ, ಮಾತ್ರವಲ್ಲ ಗೌರವಯುತ ಬದುಕು ದೊರೆಯಬಹುದೆಂಬ ನಿರೀಕ್ಷೆ ಅವರದಾಗಿರಬಹುದು. ನಾವು ಅವರನ್ನು ಸಮನಾಗಿ ಬದುಕಲು ಬಿಡದಿರುವಾಗ ಬೇರೆಡೆಗೆ ಹೋಗಿ ಅವರು ಹೊಸ ಬದುಕು ಕಂಡುಕೊಳ್ಳುವುದನ್ನು ತಡೆಯಲು ನಮಗೇನು ಅಧಿಕಾರವಿದೆ?

ದಲಿತರ ಮತಾಂತರವನ್ನು ತಡೆಯಬೇಕೆಂದು ಈ ದೇಶದ ಸವರ್ಣೀಯರು ಚಳವಳಿ ಹೂಡುತ್ತಿದ್ದಾರೆ. ಮಠಾಧಿಪತಿಗಳೂ ಇದಕ್ಕೆ ಬೆಂಬಲ ನೀಡುತ್ತಿದ್ದಾರೆ. ತಮ್ಮ ಕುಟುಂಬಕ್ಕೆ, ತಮ್ಮ ಸಮಾಜಕ್ಕೆ, ತಮ್ಮ ಧರ್ಮಕ್ಕೆ ಯಾವುದೇ ರೀತಿಯಲ್ಲೂ ಸಂಬಂಧಪಡದ ದಲಿತರ ಮೇಲೆ ಮತಾಂತರ ಮಾಡಬಾರದೆಂದು ನಿರ್ಬಂಧ ಹೇರಲು ಯಾರಿಗೂ ಅಧಿಕಾರವಿಲ್ಲ. ನಮ್ಮ ಕುಟುಂಬದಲ್ಲಿಯೇ ಯಾರಾದರೊಬ್ಬರು ಮತಾಂತರಗೊಂಡರೆ ತಡೆಯುವ ಅಧಿಕಾರ ನಮಗಿಲ್ಲ. ಮಠಾಧೀಶರುಗಳ ಸಂಬಂಧಿಕರೇ ಯಾರಾದರೊಬ್ಬರು ಮತಾಂತರಗೊಂಡಿದ್ದರೆ ಅವರು ಹೋರಾಡಲಿ. ಆದರೆ ತಮ್ಮ ಇಡೀ ಸಮಾಜದಿಂದ ಹೊರಗಿಟ್ಟು, ಅವರ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ, ಕೊಲೆ, ಮನೆಗೆ ಬೆಂಕಿ ಹಚ್ಚುವಿಕೆ ಮೊದಲಾದ ದೌರ್ಜನ್ಯಗಳನ್ನೆಸಗುತ್ತಾ ಪ್ರಕೃತಿಯ

[illegible] ಅವರನ್ನು [illegible] ಅವರಿಗೆ [illegible] [illegible]? ತಮ್ಮ ಈ ಅವಮಾನ ಮತ್ತು [illegible] ಯಿಂದ ಹೊರಬರಲು ಅವರಿಗೆ ಮತಾಂತರ [illegible] ದಾರಿಯಾಗಿದೆ. ಇಷ್ಟಕ್ಕೂ ಅವರು ಮತಾಂತರ ಗೊಂಡರೂ ಈ ದೇಶದಿಂದ ಹೊರಟು ಹೋಗುವುದಿಲ್ಲ ತಾನೇ? ಇನ್ನು, ನೀವೇಕೆ ಅವರ ಮತಾಂತರದ ಕುರಿತು ತಲೆ ಕೆಡಿಸಿಕೊಳ್ಳಬೇಕು?

"ನೀವು ಕ್ರೈಸ್ತರಾಗಬೇಡಿ, ಬುದ್ಧ ಭಾರತದವನಾದ ಕಾರಣ ನೀವು ಬೌದ್ಧ ಧರ್ಮಸ್ವೀಕರಿಸಬುದು." ಎನ್ನುತ್ತಿದ್ದ ಸ್ವಾಮೀಜಿಗಳು ಈಗ "ನೀವು ಬೌದ್ಧ ಧರ್ಮ ಸ್ವೀಕರಿಸಿ ಬೇಡಿ. ಆರ್ಯರಾಗಿ ಬಿಡಿ!" ಎನ್ನಲಾರಂಭಿಸಿದ್ದಾರೆ. ಇವರೆಲ್ಲರೂ ಬೌದ್ಧರಾಗಿ ಬಿಟ್ಟರೆ ಇಂಡಿಯಾದಲ್ಲಿ ಹಿಂದೂಗಳ ಸಂಖ್ಯೆ ಕಮ್ಮಿಯಾಗಿ ರಾಜಕಾರಣಿಗಳ ಓಟ್ ಬ್ಯಾಕ್ ದಿವಾಳಿಯಾದೀತೆಂಬ ಭಯ ಇವರನ್ನು ಕಾಡ ತೊಡಗಿರಬಹುದು. ಬುದ್ಧನ ವಿಗ್ರಹದ ಮೇಲೆ ಕೂಡಾ ಆಕ್ರಮಣ ಪ್ರಾರಂಭವಾಗಿದೆ! ಅಂತೂ ದಲಿತರು ಇವರ ಕೈಯಿಂದ ಜಾರಿ ಹೋಗಬಾರದು ಎಂಬುದಷ್ಟೆ ಇವರ ಆತಂಕ.

ಇನ್ನು ಬಲವಂತದ ಮತಾಂತರದ ಕುರಿತು ಹೇಳ ಲೇಬೇಕಾಗುತ್ತದೆ ಬಲವಂತದ ಮತಾಂತರ ಎಲ್ಲಿ ನಡೆ ದಿದೆ? ತಮ್ಮ ತಮ್ಮ ಧರ್ಮಗಳ ಕುರಿತು ಪ್ರಚಾರ ಮಾಡುವ ಸ್ವಾತಂತ್ರ್ಯ ಇಲ್ಲಿ ಎಲ್ಲರಿಗೂ ಇದೆ. ಇಂದಿನ ದಿನಗಳಲ್ಲಿ ಬಲವಂತವಾಗಿ ಯಾರನ್ನಾದರೂ ಮತಾಂತರಗೊಳಿಸಲು ಸಾಧ್ಯವೇ? ಭೂಮಿಯ ಮೇಲೆ ಮಾನವನ ಹುಟ್ಟಿ ನಿಂದಲೂ ತನ್ನ ದೈವ ವಿಶ್ವಾಸ ಮತ್ತು ಧಾರ್ಮಿಕ ನಂಬಿಕೆಗಳು ಬದಲಾಗುತ್ತಲೇ ಇವೆ. ಒಬ್ಬ ವ್ಯಕ್ತಿಯ ಧಾರ್ಮಿಕ ಬೋಧನೆಯನ್ನು ಇಡೀ ಜಗತ್ತು ಅನುಸರಿಸಿದ ಉದಾಹರಣೆ ಇಂದಿಗೂ ಇಲ್ಲ. ಜನರು ತಮ್ಮ ಧಾರ್ಮಿಕ ನಂಬಿಕೆಗಳನ್ನು ಬದಲಾಯಿಸಿಕೊಳ್ಳುತ್ತಲೆ ಇದ್ದಾರೆ. ಸಮಾಜದಲ್ಲಿ ಹಿಂಸೆ, ಅಧರ್ಮ, ಅನೈತಿಕತೆ ಮೇರೆಮೀರಿದಾಗ ಅಲ್ಲಿ ಸಂತನೊಬ್ಬ ಹುಟ್ಟಿಕೊಂಡು ಆ ಸಮಾಜವನ್ನು ಅಹಿಂಸೆ, ಮತ್ತು ನೈತಿಕತೆಗೆ ತಿರುಗಿಸಲು ಪ್ರಯತ್ನಿಸಿದ್ದು, ದೇವರ ಅಸ್ತಿತ್ವವನ್ನು ಕುರಿತು ಬೋಧಿಸಿಯೇ ಆ ಸಮಾಜವನ್ನು ಸರಿದಾರಿಗೆ ತಂದದ್ದು ಇವೆ ಲ್ಲವೂ ಐತಿಹಾಸಿಕವಾಗಿ ಜರಗುತ್ತಲೇ ಇದ್ದ ಘಟ ನೆಗಳು ಆಗ ಜನರು ತಮಗೆ ಸರಿ ಎಂದು ಕಂಡ ಬೋಧನೆಯೆಡೆಗೆ ತಿರುಗುವುದು ನಡೆಯುತ್ತಿತ್ತು. ಆಧುನಿಕ ಕಾಲಘಟ್ಟದಲ್ಲಿ ಬಲವಂತದ ಮತಾಂತರವೆಂಬುದು ಸುಳ್ಳಿ ನಕಂತೆ. ಕ್ರೈಸ್ತರಾಗಿದ್ದ ಆದಿವಾಸಿಗಳನ್ನು ಬಲವಂತವಾಗಿ ಹಿಂದೂ ಧರ್ಮಕ್ಕೆ ಮತಾಂತರಗೊಳಿಸಲಾಗುತ್ತಿದೆ ಯೆಂದು ಕೇಳಿದ್ದೇನೆ. ಬಲವಂತವಾಗಿಯಲ್ಲ ನೇರವಾ ಗಿಯೇ ಕ್ರೈಸ್ತ ಮಿಶನರಿಗಳು ಮತಾಂತರಗೊಳಿಸಿದ ಉದಾಹರಣೆ ಇಲ್ಲವೇ ಇಲ್ಲವೆನ್ನಬಹುದು. ನಾನು ಕಲಿತ ನಮ್ಮೂರಿನ ಶಾಲೆಯೇ ಇದಕ್ಕೊಂದು ಉದಾ ಹರಣೆ.

ಕಾಸರಗೋಡಿನ ಬಾಸೆಲ್ ಮಿಶನ್ ಹೈಸ್ಕೂಲು ಸ್ಥಾಪನೆಯಾಗಿ 100 ವರ್ಷಗಳಾಗುತ್ತಿವೆ. ನನ್ನ ತಂದೆ ಯಿಂದ ಮೊದಲ್ಗೊಂಡು ನಾವು 5 ಜನ ಮಕ್ಕಳೂ ಈ ಶಾಲೆಯಲ್ಲಿ ಕಲಿತಿದ್ದೇವೆ. ನಾವು ಕಲಿಯುತ್ತಿದ್ದ ಸಂದರ್ಭ ದಲ್ಲಾಗಲಿ, ಅಥವಾ ಈ 100 ವರ್ಷಗಳಲ್ಲಾಗಲಿ ಅಲ್ಲಿ ಒಂದೇ ಒಂದು ಮತಾಂತರ ಪ್ರಕರಣ ನಡೆದ ದಾಖಲೆ ಇಲ್ಲ. ಅಲ್ಲಿನ ಅಧ್ಯಾಪಕರಲ್ಲಿ ಕ್ರೈಸ್ತರಾಗಿದ್ದವರು ನಾಲ್ಕೈದು ಜನರು ಮಾತ್ರ. ಉಳಿದವರೆಲ್ಲರೂ ಹಿಂದೂಗಳೇ ಆಗಿ ದ್ದರು. ಈ ಶಿಕ್ಷಕರು ಎಂದೂ ತಮ್ಮ ಧರ್ಮದ ಕುರಿತೂ, ಧರ್ಮದ ಶ್ರೇಷ್ಠತೆಯ ಕುರಿತೂ ನಮ್ಮೊಡನೆ ಮಾತನಾಡಿ ದ್ದಿಲ್ಲ. ಏಸುಕ್ರಿಸ್ತನ ಒಂದೇ ಒಂದು ಚಿತ್ರ ಕೂಡಾ ಇಡೀ ಶಾಲೆಯಲ್ಲಿರಲಿಲ್ಲ. ನನಗೆ ರಾಮಾಯಣ, ಮಹಾಭಾರತದ ಕುರಿತ ಪಾಠಗಳ ನೆನಪಿದೆ. ಆದರೆ ಏಸುಕ್ರಿಸ್ತನ ಕುರಿತ ಪಾಠದ ನೆನಪಿಲ್ಲ. ಆ ಶಾಲೆಯ ಅಧ್ಯಾಪಕರು ಇಂದಿಗೂ ಹಾಗೆಯೇ ಜಾತ್ಯಾತೀತರಾಗಿರಬಹುದೇಂದುಕೊಂಡಿದ್ದೇನೆ.

ನಮ್ಮೂರಿನಲ್ಲಿ ಕಾನ್ವೆಂಟ್ ಇರಲಿಲ್ಲ. ಖಾನ್ ಬಹ ದ್ದೂರ್ ಮಹಮ್ಮದ್ ಶಮನಾಡ್ ಎಂಬುವರು ತಮ್ಮ ಮೊಮ್ಮಗಳ ವಿದ್ಯಾಭ್ಯಾಸಕ್ಕಾಗಿ ಕಾಸರಗೋಡಿನಲ್ಲಿ ಕ್ರೈಸ್ತ ಸನ್ಯಾಸಿನಿಯರ ಕಾನ್ವೆಂಟ್ ಸ್ಥಾಪನೆಗೆ ಒತ್ತಾಯಿಸಿ ಅದಕ್ಕೆ ಬೇಕಾದ ಭೂಮಿಯನ್ನೂ ನೀಡಿದರು. ಚರ್ಚಿನ ಸ್ಥಾಪ ನೆಯೂ ಆಯಿತು. ಆದರೆ ಇಂದಿನವರೆಗೆ ಅಲ್ಲಿ ಮತಾಂ ತರ ನಡೆದ ಒಂದೇ ಒಂದು ಘಟನೆಯೂ ನನಗೆ ತಿಳಿ ದಂತೆ ನಡೆದಿಲ್ಲ. ನನ್ನ ಮಕ್ಕಳೆಲ್ಲರೂ ಕ್ರೈಸ್ತ ವಿದ್ಯಾ ಸಂಸ್ಥೆ ಗಳಲ್ಲೇ ಶಿಕ್ಷಣ ಪಡೆದಿದ್ದಾರೆ. ಈಗ ನನ್ನ ಮೊಮ್ಮಕ್ಕಳೂ ಅಲ್ಲೇ ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಇಂದಿನವರೆಗೂ ಕ್ರೈಸ್ತರೂ ಮತಾಂತರಗೊಳ್ಳಲು ಹೇಳಿದರೆಂಬ ದೂರು ನನಗೆ ಬಂದಿಲ್ಲ. ಅಂತಹ ಪ್ರಸಂಗ ನಮಗೆದುರಾಗಿಲ್ಲ.

ಕ್ರೈಸ್ತ ಮಿಶನರಿಗಳು ಈ ದೇಶದ ಹಿಂದುಳಿದ, ದಲಿತ, ಹಾಗೂ ಅಲ್ಪ ಸಂಖ್ಯಾತರಿಗೆ ಮಾಡಿದ ಉಪಕಾರ ವನ್ನು ಮಾತುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಅವರು ಈ ದೇಶಕ್ಕೆ ಕಾಲಿಡದಿದ್ದಿದ್ದರೆ ನಾವು ಇಂದಿಗೂ ಅಕ್ಷರದ ಮುಖ ಕಾಣುತ್ತಿರಲಿಲ್ಲ. ಅವರು ನಮಗೆ ದೊರಕಿಸಿಕೊಟ್ಟ ಈ ಸೌಲಭ್ಯವೇ ಇಂದು ಇಲ್ಲಿನ ಮೇಲ್ಜಾತಿಯವರ ಹೊಟ್ಟೆಯುರಿಗೆ ಕಾರಣವಾಗಿರಬಹುದ್ದೆಂದುಕೊಂಡಿದ್ದೇನೆ. ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಈ ಜನಸಮುದಾಯ ತಮಗೆ ಸ್ಪರ್ಧೆ ನೀಡುತ್ತಿವೆ ಎಂಬುದೂ ಕೂಡಾ ಮೇಲ್ಜಾ ತಿಗಳ ಅಸಹನೆಗೆ ಕಾರಣವಾಗಿರಬಹುದೆಂದುಕೊಂಡಿ ದ್ದೇನೆ. ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರೆಲ್ಲ ರಿಗೂ ಈ ದೇಶದಲ್ಲಿ ಸಮಾನರಾಗಿ ಬದುಕಿ ಬಾಳಲು ಹಕ್ಕಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಎಲ್ಲವೂ ಈ ದೇಶದ ಪ್ರಜೆಗಳಾಗಿ ನಮ್ಮ ಹಕ್ಕುಗಳಿಗಾಗಿವೆ. ಈ ಹಕ್ಕುಗಳನ್ನು ಬಿಟ್ಟು ಕೊಡಲು ನಾವು ಸಿದ್ಧರಿಲ್ಲ. ನಮ್ಮ ಈ ಹಕ್ಕುಗಳಿಗಾಗಿ ನಾವೆಲ್ಲರು ಒಂದಾಗಿ ಹೋರಾಡಬೇ ಕಾಗಿದೆ. ದಲಿತರು, ಹಿಂದುಳಿದವರು ಈಗಲಾದರೂ ಎಚ್ಚ ರಗೊಳ್ಳಬೇಕು. ತುಳಿತಕ್ಕೊಳಗಾದವರು ತುಳಿದ ಕಾಲುಗಳ ತುರಿಕೆಯನ್ನು ಅರ್ಥ ಮಾಡಿಕೊಳ್ಳಬೇಕು. ಜಾತ್ಯಾತೀತತೆ, ಸಮಾನತೆ, ಸಮಾನ ಅವಕಾಶಗಳಿಗಾಗಿ ನಾವೆಲ್ಲರೂ ಒಂದಾಗಿ ಹೋರಾಡುವುದು ಇಂದಿನ ಅವಶ್ಯಕತೆಯಾ ಗಿದೆ. ಆ ಗುರಿ ನಮ್ಮದಾಗಿರಲಿ.

ಕ್ರೈಸ್ತರು ಈ ದೇಶಕ್ಕೆ ಕಾಲಿಟ್ಟಂದಿನಿಂದ ಬಲ ವಂತದ ಮತಾಂತರಕ್ಕೆ ಮುಂದಾಗಿದ್ದರೆ, ಇಂದು ದೇಶದ ಜನಸಂಖ್ಯೆಯ ಅರ್ಧಭಾಗದಷ್ಟು ಜನರೂ ಕ್ರೈಸ್ತರಾಗಿರು ತ್ತಿದ್ದರು. ಆದರೆ ಅವರು ಜನಸಂಖ್ಯೆಯ 3% ರಷ್ಟೂ ಇಲ್ಲ ಎಂಬುದು ಇದು ಎಷ್ಟೊಂದು ನಿರಾಧಾರ ಹೇಳಿಕೆ ಎಂಬುದನ್ನು ಸಾಬೀತು ಪಡಿಸುತ್ತದೆ. ನಾನು ಮತ್ತೊಮ್ಮೆ ಹೇಳುತ್ತೇನೆ. ಮತಾಂತರವೆಂಬುದು ಎಂದಿಗೂ ಸಮಸ್ಯೆ ಯಲ್ಲ. ನೋವುಂಡ, ಅವಮಾನಿತರಾದ ಮಾನವ ಜೀವಿ ಗಳಿಗೆ ಅದೊಂದು ಬಿಡುಗಡೆಯ ಹಾದಿ ಎಂದು ನಾನು ತಿಳಿದುಕೊಂಡಿದ್ದೇನೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಸುಖೀ ರೈತ- ಸುಖೀ ರಾಜ್ಯ

ಕರ್ನಾಟಕ ಸರ್ಕಾರವು ಕೃಷಿಗೆ ಹಿಂದೆಂದಿಗಿಂತಲೂ ಹೆಚ್ಚಿನ ಆದ್ಯತೆ ನೀಡಿದೆ. ಸಾಂಪ್ರದಾಯಿಕ ಕೃಷಿ ವಿಧಾನದೊಂದಿಗೆ ಆಧುನಿಕ ಯಾಂತ್ರೀಕೃತ ಕೃಷಿ ವಿಧಾನವನ್ನು ಮೇಳೈಸಿ ರೈತರು ಅತ್ಯಧಿಕ ಇಳುವರಿ ಪಡೆಯಲು ಸರ್ಕಾರ ಕೃಷಿ ವಲಯದಲ್ಲಿ ಹಲವು ವಿನೂತನ ಕ್ರಮಗಳನ್ನು ಜಾರಿಗೊಳಿಸಿದೆ.

ಕೃಷಿ ಅಭಿವೃದ್ಧಿಯ ಪ್ರಮುಖ ಅಂಶಗಳು

- ಸಮಗ್ರ ಕೃಷಿ ಅಭಿವೃದ್ಧಿಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಕೃಷಿ ಮಿಷನ್
- ೫೦ ಲಕ್ಷ ಒಣಭೂಮಿ ಕೃಷಿಕರಿಗೆ ಸಾವಿರ ರೂಪಾಯಿ ಗೊಬ್ಬರ, ಮತ್ತು ಬೀಜ ಖರೀದಿಗೆ ಸಹಾಯಧನ
- ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ೨ ರೂ. ನಂತೆ ಪ್ರೋತ್ಸಾಹ ಧನ.
- ಕೃಷಿ ಆವರ್ತ ನಿಧಿಗೆ ೫೦೦ ಕೋಟಿ ರೂಪಾಯಿ ಮೀಸಲು
- ಕೃಷಿಕರು, ನೇಕಾರರು, ಮೀನುಗಾರರಿಗೆ ಶೇ. ೩ ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ.
- ಸಾವಯುವ ಕೃಷಿ ಉತ್ತೇಜನಕ್ಕೆ ವಿಶೇಷ ಆಯೋಗ.
- ರೈತರಿಗೆ ತರಬೇತಿ ಮತ್ತು ಅಧ್ಯಯನ ಪ್ರವಾಸ ಕಾರ್ಯಕ್ರಮ

ಕರ್ನಾಟಕ ವಾರ್ತೆ
Karnataka Information

'ಕುರುಡು ಕಾಂಚಾಣ ಧುತ್ ಅಂತ ಬಿತ್ತೋ...'

ಹರ್ಷಕುಮಾರ್ ಕುಗ್ವೆ

ಅಮೆರಿಕಾದ ಷೇರು ಪೇಟೆ ಜನವರಿಯಿಂದೀಚೆಗೆ ೪೦೦ ಲಕ್ಷ ಕೋಟಿ ರೂಗಳಷ್ಟು ಕುಸಿದಿದೆ. ೨೦೦೮ ರಲ್ಲೇ ೧೨ ಲಕ್ಷ ಜನರು ಕೆಲಸ ಕಳೆದು ಕೊಂಡಿದ್ದಾರೆ. ೬೭ ಲಕ್ಷ ಜನರು ಅರೆ ಉದ್ಯೋಗಿಗಳಾಗಿದ್ದಾರೆ. ಅಮೇರಿಕಾದ ೨೬ ರಾಜ್ಯಗಳೂ ೩೮೧ ಮಹಾನಗರಗಳೂ ತೀವ್ರ ಆರ್ಥಿಕ ಹಿಂಜರಿತದಲ್ಲಿವೆ. ಎಲ್ಲಾ ಬಲಿಷ್ಟ ಆರ್ಥಿಕತೆಗಳಲ್ಲಿ ಹಲವು ಬೃಹತ್ ಹಣಕಾಸು ಕಂಪನಿಗಳು ಒಂದೋ ದಿವಾಳಿಯಾಗುತ್ತಿವೆ ಇಲ್ಲವೇ ವಿಲೀನಗೊಳ್ಳುತ್ತಿವೆ. ಜರ್ಮನಿ, ಜಪಾನು, ಬ್ರಿಟನ್‌ಗಳೂ ಅಧಿಕೃತವಾಗಿ ಹಿಂಜರಿತದಲ್ಲಿವೆ. ಚೀನಾ, ರಷ್ಯಾ ಹಾಗೂ ಭಾರತಗಳನ್ನೊಳಗೊಂಡ ಏಷ್ಯಾದ ದೇಶಗಳ ರಫ್ತು ಮಾರುಕಟ್ಟೆ ಕುಸಿದಿದೆ. ಬಹುತೇಕ ಕಂಪನಿಗಳು, ಕೈಗಾರಿಕೆಗಳು ಉದ್ಯೋಗ ಕಡಿತಗೊಳಿಸುತ್ತಿವೆ. ಉತ್ಪಾದನೆಯನ್ನು ಶೇ. ೫೦ ರವರೆಗೂ ಕಡಿಮೆ ಮಾಡಿವೆ.

ಕಳೆದ ಸೆಪ್ಟೆಂಬರ್ ಮಧ್ಯಭಾಗದಲ್ಲಿ ಅಮೆರಿಕಾದಲ್ಲಿ ಸ್ಫೋಟಗೊಂಡ ಹಣಕಾಸು ಕ್ಷೇತ್ರದ ಬಿಕ್ಕಟ್ಟು ಕ್ಷಿಪ್ರಗತಿಯಲ್ಲಿ ಐರೋಪ್ಯ ದೇಶಗಳನ್ನು, ಏಷಿಯಾ, ಅಫ್ರಿಕಾದ ದೇಶದ ಹಲವಾರು ದೇಶಗಳನ್ನು ಆವರಿಸಿಕೊಂಡು ಜಾಗತಿಕಮಟ್ಟದಲ್ಲಿ ಪೂರ್ಣ ಪ್ರಮಾಣದ ಬಿಕ್ಕಟ್ಟಾಗಿ ಪರಿಣಮಿಸಿದೆ. ದಿನದಿಂದ ದಿನಕ್ಕೆ ಹೊರಬರುತ್ತಿರುವ ಅಂಕಿ ಅಂಶಗಳು ಅಘಾತಕರಿಯಾಗಿವೆ. ಅಮೆರಿಕಾದ ಷೇರುಪೇಟೆ ಜನವರಿಯಿಂದೀಚೆಗೆ 400 ಲಕ್ಷ ಕೋಟಿ ರೂಗಳಷ್ಟು ಕುಸಿದಿದೆ. 2008 ರಲ್ಲೇ 12 ಲಕ್ಷ ಜನರು ಕೆಲಸ ಕಳೆದುಕೊಂಡಿದ್ದಾರೆ. 67 ಲಕ್ಷ ಜನರು ಅರೆ ಉದ್ಯೋಗಿಗಳಾಗಿದ್ದಾರೆ. ಅಮೇರಿಕಾದ 26 ರಾಜ್ಯ ಗಳೂ 381 ಮಹಾನಗರಗಳೂ ತೀವ್ರ ಆರ್ಥಿಕ ಹಿಂಜರಿತದಲ್ಲಿವೆ. ಎಲ್ಲಾ ಬಲಿಷ್ಟ ಆರ್ಥಿಕತೆಗಳಲ್ಲಿ ಹಲವು ಬೃಹತ್ ಹಣಕಾಸು ಕಂಪ ನಿಗಳು ಒಂದೋ ದಿವಾಳಿಯಾಗುತ್ತಿವೆ ಇಲ್ಲವೇ ವಿಲೀನಗೊಳ್ಳುತ್ತಿವೆ. ಜರ್ಮನಿ, ಜಪಾನು, ಬ್ರಿಟನ್‌ಗಳೂ ಅಧಿಕೃತವಾಗಿ ಹಿಂಜರಿತದಲ್ಲಿವೆ. ಚೀನಾ, ರಷ್ಯಾ ಹಾಗೂ ಭಾರತಗಳನ್ನೊಳಗೊಂಡ ಏಷ್ಯಾದ ದೇಶ ಗಳು ರಫ್ತು ಮಾರುಕಟ್ಟೆ ಕುಸಿದಿದೆ. ಬಹುತೇಕ ಕಂಪನಿಗಳು, ಕೈಗಾ ರಿಕೆಗಳು ಉದ್ಯೋಗ ಕಡಿತಗೊಳಿಸುತ್ತಿವೆ. ಉತ್ಪಾದನೆಯನ್ನು ಶೇ.50 ರವರೆಗೂ ಕಡಿಮೆ ಮಾಡಿವೆ. ಪರಿಣಾಮವಾಗಿ ವಿಶ್ವದಲ್ಲಿ ಈ ಬಿಕ್ಕಟ್ಟಿನಿಂದಾಗಿ ಕೆಲಸ ಕಳೆದುಕೊಳ್ಳುತ್ತಿರುವವರ ಸಂಖ್ಯೆ 2 ಕೋಟಿಯನ್ನು ಮೀರುವ ಅಂದಾಜಿದೆ. ದಿನಕ್ಕೆ 50ರೂ ಕೂಲಿಗೆ ದುಡಿಯುವವರು 4 ಕೋಟಿ ಹೆಚ್ಚಲಿದ್ದಾರೆ. ಸ್ಪೇನ್ ಎಂಬ ಇಡೀ ದೇಶವೇ ಕುಸಿದುಬಿದ್ದಿದೆ. ಭಾರತದಲ್ಲಿ ಅಗಸ್ಟ್ ನಿಂದೀಚೆಗೆ ರಫ್ತುವಲಯದ 65 ಸಾವಿರ ಉದ್ಯೋಗಿಗಳು ಬೀದಿಗೆ ಬಿದ್ದಿದ್ದಾರೆ. ಬೆಂಗಳೂರಿನಂತಹ ನಗರಗಳಲ್ಲಿಯೂ ಸಹ ಸಾವಿರಾರು ಸಂಖ್ಯೆಯ ಸಾಫ್ಟ್‌ವೇರಿಗರು ಕೆಲಸ ಕಳೆದುಕೊಂಡಿದ್ದಾರೆ. ಕಾಲ್‌ಸೆಂಟರ್‌ಗಳು ಮುಚ್ಚಲ್ಪಡುತ್ತಿವೆ. ಗಾರ್ಮೆಂಟ್ ಉದ್ದಿಮೆಯೂ ಸ್ಥಗಿತತೆಯಲ್ಲಿದೆ...

ಇನ್ನಷ್ಟು ಬಿಕ್ಕಟ್ಟನ್ನು ತಡೆಯಲು ಅಮೇರಿಕ, ಯುರೋಪ್ ದೇಶಗಳು ಸಹಸ್ರ ಸಹಸ್ರ ಕೋಟಿಗಳಷ್ಟು ಹಣವನ್ನುಹಣಕಾಸು ಮಾರುಕಟ್ಟೆಗೆ ಸುರಿಯತೊಡಗಿದ್ದಾರೆ. ಬ್ಯಾಂಕ್ ಬಡ್ಡಿದರ ಕಡಿತಗೊಳಿಸುತ್ತಿದ್ದಾರೆ. ಡಿಸೆಂಬರ್ 11 ರಂದು ಸ್ವೀಡನ್ ದೇಶವು 3.4 ಬಿಲಿಯನ್ ಡಾಲರುಗಳನ್ನು ಆಟೋಮೊಬೈಲ್ ಕೈಗಾರಿಕೆಗೆ ಸುರಿಯಿತು. ಅಮೆರಿಕವು ಈಗಾಗಲೇ ಕೋಟ್ಯಾಂತರ ಡಾಲರುಗಳ ಬೇಲೌಟ್ (Bailout) ಸುರಿದಿದೆ. ಆದರೆ, ವಿಶ್ವ ಆರ್ಥಿಕ ಬಿಕ್ಕಟ್ಟು ಕಾಳ್ಗಿಚ್ಚಿನೋಪಾದಿಯಲ್ಲಿ ವ್ಯಾಪಿಸುತ್ತಲೇ ಇದೆ. ನೊಬೆಲ್ ಪ್ರಶಸ್ತಿ ವಿಜೇತ ಪಾಲ್ ಕ್ರುಗ್‌ಮನ್ "ಈ ಪ್ರಮಾಣದಲ್ಲಿ ಅರ್ಥವ್ಯವಸ್ಥೆ ಕುಸಿಯುವುದೆಂದು ನಾನೂ ಊಹಿಸಿರಲಿಲ್ಲ. ಎಂದಿದ್ದನ್ನು ಸ್ಮರಿಸಬಹುದು. ಇಂತಹ ಒಂದು ಬಿಕ್ಕಟ್ಟು ಎಲ್ಲಿಂದ, ಹೇಗೆ ಮತ್ತು ಏಕೆ ಶುರುವಾಯ್ತು? ಬಿಕ್ಕಟ್ಟಿನ ಅಂತರ್ಗತ ಕಾರಣ ಪರಿಣಾಮ ಪರಿಹಾ ರೋಪಾಯಗಳೇನು? ಎಂದು ವಿವರಿಸುವ ನಿಟ್ಟಿನಲ್ಲಿ ಈ ಲೇಖನ.



ಅಮೇರಿಕದ ಘಟನಾವಳಿಗಳು :

ಅಮೇರಿಕಾದ ಬಿಕ್ಕಟ್ಟು ಅಪಾಯಕಾರಿ ಹಂತದಲ್ಲಿ ಅನಾವರಣಗೊಂಡಿದ್ದು ಸೆಪ್ಟೆಂಬರ್ ಮಧ್ಯಭಾಗದಲ್ಲಿಯಾದರೂ ಅದರ ಕುರುಹುಗಳು 2008ರ ಪ್ರಾರಂಭದಲ್ಲೇ ಕಾಣಿಸಿಕೊಂಡಿದ್ದವು. ಜನವರಿಯಲ್ಲಿ ಷೇರು ವ್ಯವಹಾರ ತೀವ್ರವಾಗಿ ಕುಸಿಯಿತು. ಮಾರ್ಚ್12 ರಂದು ಅಮೆರಿಕದ 5 ಪ್ರಸಿದ್ಧ ಹೂಡಿ ಬ್ಯಾಂಕುಗಳಲ್ಲಿ (Investment Bank) ಒಂದಾದ ಬೇರ್ ಸ್ಟರ್ನ್ ನೆಲಕಚ್ಚಿತು. (ಇತರ ನಾಲ್ಕು ಬ್ಯಾಂಕುಗಳು – ಗೋಲ್ಡ್‌ಮನ್ ಸ್ಯಾಚ್, ಮೆರಿಲ್‌ಲಿಂಚ್, ಲಿಮಾನ್ ಬ್ರದರ್ಸ್, ಹಾಗೂ ಮಾರ್ಗನ್ ಸ್ಟ್ಯಾನ್ಲಿ – ಇಂದು ಎಲ್ಲವೂ ಕುಸಿದಿದೆ) ಮುಂದಿನ ಮೂರು ತಿಂಗಳು ನಮ್ಮ ಪೊಲೀಸರು ಹೇಳುವಂತೆ ಗಂಭೀರತೆಯಿಂದ ಕೂಡಿದ್ದರೂ ಪರಿಸ್ಥಿತಿ ನಿಯಂತ್ರಣದಲ್ಲಿತ್ತು. ಜುಲೈ ಒಂದರಂದು ಅತಿದೊಡ್ಡ ಗೃಹಸಾಲ/ಅಡಮಾನ ಮಾರಾಟಗಾರ ಸಂಸ್ಥೆಯಾದ ಕಂಟ್ರಿವೈಡ್ ಫೈನಾನ್ಸಿಯಲ್ ಕುಸಿದು ಬಿತ್ತು. ಅದನ್ನು ಬ್ಯಾಂಕ್ ಆಫ್ ಅಮೆರಿಕಾ ಕೊಂಡುಕೊಂಡಿತು. ಇದರ ಬೆನ್ನಲ್ಲೇ ಇನ್ನೊಂದು ಪ್ರಸಿದ್ಧ ಇಂಡಿಮ್ಯಾಕ್ ಬ್ಯಾಂಕ್ ವಿಫಲಗೊಂಡಿತು. (ಇದು ಅಮೆರಿಕಾ ಚರಿತ್ರೆಯಲ್ಲೇ ಎರಡನೆಯ ಅತಿದೊಡ್ಡ ಬ್ಯಾಂಕ್ ವೈಫಲ್ಯ ಎನಿಸಿಕೊಂಡಿತು) ಸೆಪ್ಟಂಬರ್‌ನಲ್ಲಿ ಪರಿಸ್ಥಿತಿಯೊಳಗಿನ ಬದಲಾವಣೆಗಳು ತೀವ್ರತೆ ಪಡೆದುಕೊಂಡವು. ಸೆಪ್ಟಂಬರ್ ೮ರಂದು ಎರಡು ಸರ್ಕಾರಿ ಬೆಂಬಲಿತ ಸಂಸ್ಥೆಗಳಾದ (Govt Supported Enterprises) ಫ್ರೆಡ್ಡಿ

ಮಾಕ್ ಹಾಗೂ ಫ್ಯಾನಿಮೇಗಳನ್ನು ಸರ್ಕಾರ ರಾಷ್ಟ್ರೀಕರಣಗೊಳಿಸಬೇಕಾಗಿ ಬಂತು. ಸೆಪ್ಟಂಬರ್ 14–15ರಂದು 158 ವರ್ಷಗಳ ಇತಿಹಾಸ ಹೊಂದಿರುವ 600 ಬಿಲಿಯನ್ ಡಾಲರುಗಳ ಒಡೆತನದ ಲಿಮಾನ್ಸ್ ಬ್ರದರ್ಸ್ ತನ್ನ ದಿವಾಳಿತನ (Bankruptcy) ಘೋಷಿಸಿಕೊಂಡಿತು. ಈ ಲಿಮಾನ್ ಅಮೇರಿಕಾದ 4ನೆಯ ಅತಿದೊಡ್ಡ ಹೂಡಿಕೆ ಬ್ಯಾಂಕು. 2008 ರ ಮೊದಲು ಮೂರು ತಿಂಗಳಲ್ಲಿ ಅದು 2400 ಕೋಟಿರೂಗಳ ನಿವ್ವಳ ಲಾಭವನ್ನು ಘೋಷಿಸಿಕೊಂಡಿತು!. 15ರಂದು ಷೇರು ಬೆಲೆಗಳು ಪಾತಾಳಕ್ಕಿಳಿದವು. 16ರಂದು ವಿಮಾವಲಯದ ಅತಿದೊಡ್ಡ ಸಂಸ್ಥೆ AIG (American International Group) ಕುಸಿದು ಬಿತ್ತು. ಫೆಡರಲ್ ರಿಸರ್ವ್‌ಬ್ಯಾಂಕು 85 ಬಿಲಿಯನ್ ಡಾಲರುಗಳನ್ನು ಸುರಿದು ಅದನ್ನು ವಶಕ್ಕೆ ಪಡೆಯಿತು. ಲಿಮಾನ್ ಹಾಗೂ AIG ಯ ಕುಸಿತಗಳು ಇಡೀ ಅಮೆರಿಕಾದ ಅರ್ಥವ್ಯವಸ್ಥೆಯಲ್ಲೇ ಅಲ್ಲೋಲಕಲ್ಲೋಲವನ್ನುಂಟು ಮಾಡಿದವು. ಸೆ. 17ರ ಬೆಳಗಿನಿಂದ 18ರ ಸಂಜೆಯವರೆಗಿನ 36 ಗಂಟೆಗಳು ಭೀಕರ ಅಪಾಯದ ಹಂತವನ್ನು ತಲುಪಿದ್ದವು. ಫೆಡರಲ್ ಬ್ಯಾಂಕ್‌ನ ಛೇರ್ಮನ್ ಬೆನ್‌ಬೆರ್ನಾರ್ಡ್ ಅದಕ್ಕೆ ಪ್ರತಿಕ್ರಿಯಿಸಿದ್ದು ಹೀಗೆ — " **ಈ ಹೊತ್ತಿನಲ್ಲಿ ಸರ್ಕಾರ ಹಣಕಾಸು ಮಾರುಕಟ್ಟೆಯನ್ನು ರಕ್ಷಿಸಿಕೊಳ್ಳಲು ವಿಫಲಗೊಂಡಲ್ಲಿ, ಭವಿಷ್ಯದಲ್ಲಿ ಮುಂದೆಂದೂ ಹಣಕಾಸು ಮಾರುಕಟ್ಟೆ ಎಂಬುದೇ ಉಳಿಯುವುದಿಲ್ಲ**".

ಈ ಸಮಯದಲ್ಲಿ ಮುಖ್ಯವಾಗಿ CDS (Collateral Default Swaps) ವಿಮಾದರಗಳು ಝುಂಯ್ ಎಂದು ಮೇಲೆರಿದವು. ಇಡೀ ಅಮೇರಿಕಾ ಹಣಕಾಸು ವ್ಯವಸ್ಥೆಯೇ ಅಪಾರ ಅವಿಶ್ವಾಸ, ಅಪ ನಂಬಿಕೆಗಳಿಗೆ ಈಡಾಗಿದ್ದನ್ನು ಇದು ಸೂಚಿಸಿತು. 17ರಂದೇ ಅತಿ ದೊಡ್ಡ ಮ್ಯೂಚುವಲ್ ಫಂಡ್ (Money Market Mutual Fund-MMMF) ಸಂಸ್ಥೆಯಾದ ರಿಸರ್ವ್ ಪ್ರೈಮರಿ ಫಂಡ್ ಕುಸಿಯಿತು. ಪರಿಣಾಮವಾಗಿ MMMF ನ ಬಂಡವಾಳ ಪೂರೈಕೆಯನ್ನೇ ಬಹುತೇಕ ಅವಲಂಬಿಸಿದ್ದ "ಕಮರ್ಷಿಯಲ್ ಪೇಪರ್ – CP (ಹಣ ಕಾಸು ಸಂಸ್ಥೆಗಳಿಗೆ ಅಲ್ಪ ಕಾಲೀನ ಸಾಲ ನೀಡುವ ಮಾರುಕಟ್ಟೆ) ಸ್ಥಗಿತಗೊಂಡಿತು. ಅಲ್ಲಿಗೆ ಇಡೀ ಆರ್ಥಿಕತೆಯೇ ನಿಶ್ಚಲಗೊಂಡಿತು. ಇವೆಲ್ಲದರ ಪರಿಣಾಮ ವಾಣಿಜ್ಯ ಬ್ಯಾಂಕುಗಳ ಮೇಲೂ ಉಂಟಾಗಿ ಅಲ್ಲೂ ಪರಸ್ಪರ ವಿಶ್ವಾಸ ಇಲ್ಲವಾಯಿತು. ಇಂಟರ್ ಬ್ಯಾಂಕ್ ವ್ಯವಸ್ಥೆಯು ಭಾರದಿಂದ ಕುಸಿಯಿತು. Finance Squeeze ! ಹಣಕಾಸು ಸಂಸ್ಥೆಗಳು ತಮ್ಮ ತತ್ಕಾಲದ ಕ್ರೆಡಿಟನ್ನು ಸೃಷ್ಟಿಸಿಕೊಳ್ಳಲು ವಿಫಲವಾದವು. ಇದನ್ನೇ ಕ್ರೆಡಿಟ್ ನಿಶ್ಚಲತೆ Credit Frreeze ಸ್ಥಿತಿ ಎನ್ನಲಾಗುವುದು. ಈ ಮದ್ಯೆ ಅಮೇರಿಕದ 80 ಬ್ಯಾಂಕುಗಳು ದಿವಾಳಿಯಾಗಿವೆ. ನಂತರದಲ್ಲಿ ಅಮೇರಿಕದ ಸರ್ಕಾರವು ಜನರ ತೆರಿಗೆ ಹಣವನ್ನು ಬಿಲಿಯನ್ ಡಾಲರುಗಟ್ಟಲೆ ಸುರಿದೂ ಸುರಿದೂ ಹಣಕಾಸು ಮಾರುಕಟ್ಟೆಯನ್ನು ಸ್ವಲ್ಪ ತಹಂಬಂದಿಗೆ ತರಲಾಗಿದೆ ಅಷ್ಟೆ. ಹಣಕಾಸು ಮಾರುಕಟ್ಟೆಯ ಈ ಬಿಕ್ಕಟ್ಟು ನೈಜ ಆರ್ಥಿಕತೆಯ ಮೇಲೂ ಅಗಿದೆ. ಮೊದಲೇ ಸ್ಥಗಿತತೆಯಲ್ಲಿದ್ದ ರಿಯಲ್ ಎಕಾನಮಿ (ಸರಕು -ಸೇವೆಗಳ ಉತ್ಪಾದನೆ) ಮತ್ತಷ್ಟು ಹಿಂದ್ದರಿಯಿತು. ಆಟೊ ಮೊಬೈಲ್ ಕೈಗಾರಿಕೆಯಂತಹ ಉದ್ದಿಮೆಗಳೂ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಅಮೇರಿಕಾ, ಬ್ರಿಟನ್‌ಗಳು ಸರಕುಗಳ

Finance Squeeze ! ಹಣಕಾಸು ಸಂಸ್ಥೆಗಳು ತಮ್ಮ ತತ್ಕಾಲದ ಕ್ರೆಡಿಟನ್ನು ಸೃಷ್ಟಿಸಿಕೊಳ್ಳಲು ವಿಫಲವಾದವು. ಇದನ್ನೇ ಕ್ರೆಡಿಟ್ ನಿಶ್ಚಲತೆ Credit Frreeze ಸ್ಥಿತಿ ಎನ್ನಲಾಗುವುದು. ಈ ಮದ್ಯೆ ಅಮೇರಿಕದ 80 ಬ್ಯಾಂಕುಗಳು ದಿವಾಳಿಯಾಗಿವೆ. ನಂತರದಲ್ಲಿ ಅಮೆರಿಕದ ಸರ್ಕಾರವು ಜನರ ತೆರಿಗೆ ಹಣವನ್ನು ಬಿಲಿಯನ್ ಡಾಲರುಗಟ್ಟಲೆ ಸುರಿದೂ ಸುರಿದೂ ಹಣಕಾಸು ಮಾರುಕಟ್ಟೆಯನ್ನು ಸ್ವಲ್ಪ ತಹಂಬಂದಿಗೆ ತರಲಾಗಿದೆ ಅಷ್ಟೆ. ಹಣಕಾಸು ಮಾರುಕಟ್ಟೆಯ ಈ ಬಿಕ್ಕಟ್ಟು ನೈಜ ಆರ್ಥಿಕತೆಯ ಮೇಲೂ ಅಗಿದೆ. ಮೊದಲೇ ಸ್ಥಗಿತತೆಯಲ್ಲಿದ್ದ ರಿಯಲ್ ಎಕಾನಮಿ (ಸರಕು–ಸೇವೆಗಳ ಉತ್ಪಾದನೆ) ಮತ್ತಷ್ಟು ಹಿಂದ್ದರಿಯಿತು. ಆಟೊಮೊಬೈಲ್ ಕೈಗಾರಿಕೆಯಂತಹ ಉದ್ದಿಮೆಗಳೂ ಬಿಕ್ಕಟ್ಟಿನಲ್ಲಿ ಸಿಲುಕಿದೆ.

ಆಮದನ್ನು ಕುಂಠಿತಗೊಳಿಸಿದ ಪರಿಣಾಮ ಭಾರತದಂತ ದೇಶಗಳ ಮೇಲಾಗಿದೆ.

ಹೀಗೆ ಸರಪಳಿಯೋಪಾದಯಲ್ಲಿ ಒಂದೊಂದು ಉದ್ದಿಮೆಗಳು ಕುಸಿಯಿತ್ತಾ ಬಂದ ಅಮೇರಿಕಾದಲ್ಲಿ ಈ ಸ್ಥಿತಿ ಏರ್ಪಡಲು ಕಾರಣಳೇನು ? ಕಳೆದೊಂದು ದಶಕದಿಂದೀಚೆಗೆ ಅಮೆರಿಕದ ಗೃಹಸಾಲ ಮಾರುಕಟ್ಟೆಯೊಳಗಿನ (Subprime Mortgage Market) ಬಿಕ್ಕಟ್ಟುಗಳು ತಕ್ಷಣದ ಕಾರಣವಾದರೆ ಒಟ್ಟಾರೆಯಾಗಿ ಕ್ಯಾಟಲಿಸಂ ವ್ಯವಸ್ಥೆಯ ಅಂತರ್ಗತ ವೈರುಧ್ಯಗಳು ಅದರಲ್ಲೂ 80 ರ ದಶಕದಿಂದೀಚೆಗೆ ಅಮೇರಿಕಾ ತನ್ನನ್ನು ಕೇಂದ್ರವಾಗಿಟ್ಟು ಕೊಂಡು ಇಡೀ ವಿಶ್ವದಲ್ಲಿ ಜಾರಿಗೆ ತಂದ ನವ ಉದಾರ ವಾದಿ ನೀತಿಗಳು ಮೂಲ ಕಾರಣ. ಈ ಎರಡನ್ನು ಕೊಂಚ ವಿಶ್ಲೇಷಿಸಿ ನೋಡೋಣ.

ಸಬ್‌ಪ್ರೈಮ್ ಗೃಹಸಾಲ ಬಿಕ್ಕಟ್ಟು–ಹಾಗೆಂದರೇನು ?

ವಾಸ್ತವದಲ್ಲಿ ಅಮೆರಿಕಾದ ಎಲ್ಲಾ ಹಣಕಾಸು ಉದ್ದಿಮೆಗಳೂ ಸಹ ಒಂದಲ್ಲಾ ಒಂದು ರೀತಿಯಲ್ಲಿ ಈ ಸಬ್‌ಪ್ರೈಮ್ ಗೃಹಸಾಲ ಮಾರುಕಟ್ಟೆಯೊಳಗೆ ಕಾಲಿಟ್ಟಿದ್ದವು. ಅದು ಮಗುಚಿ ಬಿದ್ದ ಪರಿಣಾಮವಾಗಿ ಎಲ್ಲವೂ ಉರುಳಿ ಬಿದ್ದವು. 1990ರ ಡಾಟ್‌ಕಾಮ್ ಬಲೂನ್ ಒಡೆದ ತರುವಾಯ ಅಮೇರಿಕಾದಲ್ಲಿ ಗೃಹಸಾಲ ಮಾರುಕಟ್ಟೆಯು ರಾಕೆಟ್ ವೇಗದಲ್ಲಿ ಬೆಳೆಯಿತು. ವಾಣಿಜ್ಯ ಬ್ಯಾಂಕುಗಳು, ಫೆಡರಲ್ ರಿಸರ್ವ್ ಬ್ಯಾಂಕಿನ ನೀತಿಯನ್ವಯ ಮನೆಸಾಲಗಳನ್ನು ಕಡಿಮೆ ಬಡ್ಡಿದರದಲ್ಲಿ ನೀಡತೊಡಗಿದವು. ಇದರಲೊಂದು ಸೂರಿನ ಕನಸು ಕಂಡ ಅಮೆರಿಕನ್ ಪ್ರಜೆಗಳು ಈ ಸಾಲಗಳಿಗೆ ಮುಗಿಬಿದ್ದರು. ಇದನ್ನು ಕಂಡ ಹಣಕಾಸು ಸಂಸ್ಥೆಗಳು ಗೃಹಸಾಲ ಮಾರುಕಟ್ಟೆಯಲ್ಲಿ ಕಾಲಿಟ್ಟವು. ಅದು ನಡೆದದ್ದು ಹೀಗೆ. ಮನೆಸಾಲ ನೀಡಿದ್ದ ವಾಣಿಜ್ಯ ಬ್ಯಾಂಕುಗಳಿಂದ ಸಾಲಪತ್ರಗಳನ್ನು ಫ್ರೆಡಿಮ್ಯಾಕ್, ಫ್ಯಾನಿಮೇಯಂತಹ GSEಗಳು ಕೊಂಡುಕೊಂಡವು. ಇದರಿಂದ ಬ್ಯಾಂಕುಗಳಿಗೆ ಯಾವುದೇ ರಿಸ್ಕಿಲ್ಲದೇ ಹಣ ಪಾವತಿಯಾದದ್ದರಿಂದ, ಪ್ರೇರಿತರಾಗಿ ಮತ್ತಷ್ಟು ಸಾಲಗಳನ್ನು ಯಾವುದೇ ಮುಂಜಾಗ್ರತೆಯನ್ನೂ ವಹಿಸದೇ ನಿರಾಧಾರವಾಗಿ ಸಬ್‌ಪ್ರೈಮ್ ಸಾಲಗಳೆಂದು ಕರೆದು ನೀಡತೊಡಗಿದವು. ಕ್ರಮೇಣ ಮನೆಗಳ ಬೇಡಿಕೆ ವೃದ್ಧಿಸಿತು. ಒಂದು ಹಂತದಲ್ಲಿ "ಆದಾಯಗಳು ಉದ್ಯೋಗಗಳೇ, ಕೆಲಸವಾಗಲೀ, ಇಲ್ಲದಿದ್ದೂ ಸರಿ. ನಾವು ಸಾಲ ನೀಡುತ್ತೇವೆ. (No Income No Job or Assets -NINJA Louns) ಎಂದು ಬ್ಯಾಂಕುಗಳು ಸಾರಿದ್ದವು. ರಿಯಲ್ ಎಸ್ಟೇಟ್‌ನ ಬೆಲೆ ಹೀಗೇ ಏರುತ್ತಲೇ ಹೋಗುತ್ತದೆ. ಮತ್ತು ಬೇಡಿಕೆಯೂ ಹೆಚ್ಚುತ್ತಲೇ ಹೋಗುತ್ತದೆ ಎಂಬ ಭ್ರಾಮಕಸನ್ನಿಗೆ ಹಣಕಾಸು ಸಂಸ್ಥೆಗಳ ಒಳಗಾಗಿ ಬೃಹತ್ ಪ್ರಮಾಣದ ಸಟ್ಟಾ ವ್ಯಾಪಾರ (Speculative Trading)ವನ್ನು ಈ ಗೃಹಸಾಲ ಮಾರುಕಟ್ಟಯನ್ನಾಧರಿಸಿ ನಡೆಸಿದವು. ಮೇಲೆ ಹೇಳಿದ ಫ್ರೆಡ್ಡಿ, ಫ್ಯಾನಿಯಂತ ದಲ್ಲಾಳಿಗಳು ತಾವು ಕೊಂಡಿದ್ದ ಸಾಲ ಪತ್ರಗಳನ್ನು ಕಾಲ, ಸಮಯ, ದರಗಳಿಗೆ ತಕ್ಕಂತೆ ಕಂತುಗಳಾಗಿ ವಿಂಗಡಿಸಿ Mortgage Backed securities (MBS) ಎಂದು ಹೆಸರಿಸಿ ಬೇರ್ ಸ್ಟರ್ಸ್, ಲಿಮಾನ್ ನಂತಹ ಹೂಡಿಕೆ ಬ್ಯಾಂಕುಗಳಿಗೆ ಲಾಭಕ್ಕೆ ಮಾರಿದವು. ಈ ಹೂಡಿಕೆ ಬ್ಯಾಂಕುಗಳು **MBS** ಗಳನ್ನೇ ಬಾಂಡುಗಳಾಗಿ ಪರಿವರ್ತಿಸಿ ಪ್ರಪಂಚದಾದ್ಯಂತ ಪೆನ್ಷನ್ ಫಂಡು, ಮ್ಯೂಚುವಲ್ ಫಂಡು, ಹೆಜ್‌ಫಂಡುಗಳ ರೂಪದಲ್ಲಿ ಭಾರತದ ICICI ನಂತಹ ಹಣಕಾಸು ಸಂಸ್ಥೆಗಳಿಗೆ ಒಂದಕ್ಕೆ 30 ಪಟ್ಟು ಲಾಭಕ್ಕೆ ಮಾರಿದವು. ಹೀಗೆ ಮಾರುವಾಗ CDO (Collaterol Debt Obligations) ಎಂದು ಆಕರ್ಷಕವಾಗಿ ಹೆಸರಿಸಿದ್ದರು. ಈ ಸಂದರ್ಭದಲ್ಲಿ ಪ್ರಪಂಚದೆಲ್ಲಡೆಯಿಂದ ಈ ಸಬ್‌ಪ್ರೈಮ್ ಹಣಕಾಸು ಮಾರುಕಟ್ಟೆಯಲ್ಲಿ ಒಟ್ಟುಗೂಡಿದ ಹಣ ಏನಿಲ್ಲವೆಂದರೂ ನಾಲ್ಕೂವರೆ ಲಕ್ಷಕೋಟಿ ರೂಪಾಯಿಗಳು!. ಈ ಬಾಂಡುಗಳನ್ನು ಮಾರುವ ಮುನ್ನ ಮನೆಸಾಲ ತೆಗೆದುಕೊಂಡವರು ಡಿಫಾಲ್ಟರ್‌ಗಳಾದರೆ ಆಗುವ ನಷ್ಟವನ್ನು ತಡೆಯಲು ಈ ಹೂಡಿಕೆ ಬ್ಯಾಂಕುಗಳು **AIG**ಯಂತಹ ವಿಮಾ ಸಂಸ್ಥೆಗಳಲ್ಲಿ ಪ್ರತಿ ಬಾಂಡುಗಳ ಮೇಲೆ ವಿಮೆ ಮಾಡಿಸಿದ್ದರು. ವಿಮಾ ಕಂಪನಿಗಳೂ ಸಹ ಏರುಗತಿಯ ಮಾರುಕಟ್ಟೆಯನ್ನು ಕಂಡು ಸೇ. 2 ಪ್ರೀಮಿಯಮ್‌ಗೆ ವಿಮೆ ನೀಡಿದವು. 10 ಲಕ್ಷ ರೂಗಳ ಒಂದು ವಿಮೆಗೆ 20 ಸಾವಿರ ರೂ ಪಾವತಿಸಬೇಕಿತ್ತು. ಈ ವಿಮೆಯನ್ನು Collateral Default Swaps (CDS) ಎಂದು ಕರೆದರು. **ಹೀಗೆ, ಒಂದೇ ಆಸ್ತಿಯು ಹಣಕಾಸು ಮಾರು ಕಟ್ಟೆಯಲ್ಲಿ ಹತ್ತು ಹಲವು ರೂಪಗಳನ್ನು ಹೊಂದಿ ಅಸಲು ಬೆಲೆಯ ಹಲವು ಪಟ್ಟು ಊದಿಕೊಂಡು ಲಿವರೇಜ್ಡ್ ಅಸೆಟ್** (Leveraged Asset) **ಆಯಿತು.** ಲಿಮಾನ್ ಬ್ರದರ್ಸ್ ಕಂಪನಿಯು ತನ್ನ ಒಂದು ತಿಂಗಳ ವಹಿವಾಟಿಗೆ ನೂರು ಬಿಲಿಯನ್ (ಹತ್ತು ಸಾವಿರ ಕೋಟಿ) ಡಾಲರುಗಳನ್ನು ಸುರಿಯುತ್ತಿತ್ತು ಎಂದರೆ ಆ ಹಣಕಾಸು ಮಾರುಕಟ್ಟೆಯಲ್ಲಿ ಹರಿದ ಬಂಡವಾಳದ ಪ್ರಮಾಣವನ್ನು ಊಹಿಸಿ.

ಆದರೆ, ಮನೆಗಳು ವಿಪರೀತವಾಗುತ್ತಿದ್ದಂತೆ, 2006 ರ ಮಧ್ಯಭಾಗದಿಂದ ರಿಯಲ್ ಎಸ್ಟೇಟ್ ಬೀಳಲಾರಂಭಿಸಿತು. ಆಸ್ತಿಯ ಬೇಡಿಕೆ ಹೆಚ್ಚಳದಿಂದುಂಟಾದ ಹಣದುಬ್ಬರವನ್ನು ನಿಯಂತ್ರಿಸಲು ಬಡ್ಡಿದರವನ್ನು ಬ್ಯಾಂಕುಗಳು

[illegible] ಕಟ್ಟಲಾಗ ಹರಸಾಹಸ ಪಡುವಂತಾಯಿತು. ಪರಿಣಾಮ ಮನೆಗಳ ಜಪ್ತಿ - **Forecloser**. 2007ರ ಡಿಸೆಂಬರ್‌ನಲ್ಲಿ ಅಮೆರಿಕಾದಲ್ಲಿ ಬಾಕಿ ಬರಬೇಕಿದ್ದ ಈ ಸಬ್‌ಪ್ರೈಮ್ ಗೃಹಸಾಲದ ಒಟ್ಟು ಮೊತ್ತ 70 ಲಕ್ಷ ಕೋಟಿ ರೂಗಳು! ಅದೇ ವರ್ಷ 13 ಲಕ್ಷ ಮನೆಗಳು ಜಪ್ತಿಯಾದವು. ಇದೀಗ ಹೀಗೆ ಜಪ್ತಿಯಾಗಿ ಬೀದಿಗೆ ಬಿದ್ದವರ ಸಂಖ್ಯೆ 45 ಲಕ್ಷ ದಾಟುತ್ತಲಿದೆ! ಮನೆಗಳ ಬೆಲೆಗಳು ಶೇ. 40 ರಷ್ಟು ಕುಸಿದಿವೆ. ಆದರೆ ಕೊಳ್ಳುವವರೇ ಗತಿ ಇಲ್ಲ. 1.86 ಕೋಟಿ ಮನೆಗಳು ಹೀಗೆ ಧೂಳು ಹಿಡಿದಿವೆ. ಆ ಮನೆಗಳಲ್ಲಿರಬೇಕಾದವರು ಬೀದಿ ಮೂಲೆಗಳಲ್ಲಿ ಅಂಡಲೆಯುತ್ತಿದ್ದಾರೆ. ಕಾರುಗಳನ್ನೋ, ರೈಲು ಬೋಗಿಗಳನ್ನೋ ರಾತ್ರಿ ಕಳೆಯುವ ಬಂಗಲೆಗಳಾಗಿಸಿಕೊಂಡಿದ್ದಾರೆ!. ಬಂಡವಾಳಶಾಹಿಯ ಆರಾಜಕ ವ್ಯವಸ್ಥೆ ಸೃಷ್ಟಿಸಿರುವ ವಿಪರ್ಯಾಸವಿದು ! ಇದೊಂದು ಕ್ರೌರ್ಯವು ಸಹ. ಹೀಗೆ ಬಿಕ್ಕಟ್ಟಿನಲ್ಲಿ ಸಿಲುಕಿದ ಮಾರುಕಟ್ಟೆಯಿಂದಾಗಿ, ಸಬ್‌ಪ್ರೈಮ್ ಮಾರುಕಟ್ಟೆಯಲ್ಲಿ ಕಾಲಿಟ್ಟಿದ್ದ ಬ್ಯಾಂಕುಗಳು ಅಸಲು ಕಾರಣದಾದವು. ವಿಮಾ ಕಂಪನಿಗಳು ವಿಮೆಯ ಅರ್ಜಿಗಳನ್ನು ನಿಭಾಯಿಸದಾದರು. ಫಂಡುಗಳು ಹೂಡಿದ ಹಣ ವಾಪಾಸು ಬರದೇ ಎಲ್ಲವೂ ಮುಳುಗಲಾರಂಭಿಸಿದವು. ಲಾಭದ ಆಸೆಯಿಂದ ಪೆನ್‌ಷನ್ ಹಣವನ್ನು ಹೂಡಿದ್ದ ಲಕ್ಷಾಂತರ ಮಂದಿಯ ಹಣ ಕೊಚ್ಚಿಕೊಂಡುಹೋಯಿತು. ಮೊದಲೇ ತಿಳಿಸಿದ ರೀತಿಯಲ್ಲಿ ಸೆಪ್ಟಂಬರ್‌ನಲ್ಲಿ ಎಲ್ಲವೂ ಕ್ಲೈಮಾಕ್ಸ್‌ಗೆ ಬಂದು **Credit Freeze** ಹಂತ ತಲುಪಿತು. ಇತ್ತೀಚಿನ ವರದಿಯಂತೆ ಈ ಬಿಕ್ಕಟ್ಟಿನಲ್ಲಿ ನಷ್ಟಗೊಂಡ ಕ್ರೆಡಿಟ್ ಹಣ ಸು. 150 ಲಕ್ಷ ಕೋಟಿ ರೂಗಳು. (3.1 ಟ್ರಿಲಿಯನ್ ಡಾಲರುಗಳು)

ಹಾಗಾದರೆ ಕೇವಲ ಸಬ್‌ಪ್ರೈಮ್ ಮಾರುಕಟ್ಟೆಯ ಲೋಪದೋಷಗಳೇ ಇಷ್ಟೆಲ್ಲಾ ಅನಾಹುತಕ್ಕೆ ಕಾರಣವೇ? ಖಂಡಿತಾ ಅಲ್ಲ. ಅದು ಏನಿದ್ದರೂ ಒಂದು ನಿರ್ದಿಷ್ಟ ಪರಿಸ್ಥಿತಿಯ ಕಾರಣ ಮಾತ್ರ, ಇಡೀ ಸಮಸ್ಯೆಯ ಮೂಲವಿರುವುದು ಕ್ಯಾಪಿಟಲಿಸಂನ ಗರ್ಭದಲ್ಲಿ. ಅದನ್ನು ಅರ್ಥಮಾಡಿಕೊಳ್ಳದ ಹೊರತು. ಎದುರಾಗಿರುವ ಜಾಗತಿಕ ಸ್ವರೂಪವನ್ನು ಅರಿಯುವುದಾಗಲೀ, ಪರಿಹಾರಗಳನ್ನು ಕಂಡುಕೊಳ್ಳುವುದಾಗಲೀ ಅಸಾಧ್ಯ.

"ಇದುವರೆಗೂ ಅಮೆರಿಕಾ ಎಂದರೆ ಹಲವರ ಪಾಲಿಗೆ ಒಂದು ಅದ್ಭುತ ಕನಸು. ಕೆಲವರ ಪಾಲಿಗೆ ಜೀವನದ ಸಾಧನೆಯಾಗಿತ್ತಲ್ಲವೇ? ಅದೇ ಅಮೇರಿಕಾ ಇಂದು ಎಲ್ಲರ ಪಾಲಿಗೆ ಒಂದು ದುಃಸ್ವಪ್ನವಾಗಿ ಕಾಡತೊಡಗಿದೆ. ಕೆಲವೇ ವರುಷಗಳ ಹಿಂದೆ ತಮ್ಮ ಅನುಭೋಗಿ ಸಂಸ್ಕೃತಿಯನ್ನು ಆ ತಂತ್ರಜ್ಞಾನ ಬೆಂಬಲಿತ ಐಶರಾಮಿತನವನ್ನು ಪ್ರದರ್ಶಿಸಿ ನಮ್ಮನ್ನೆಲ್ಲಾ ನಿಬ್ಬೆರಗಾಗಿಸಿದ್ದ ಅಮೆರಿಕನ್ನರಲ್ಲಿ ಕನಿಷ್ಟ 60ರಲ್ಲಿ ಒಬ್ಬನಾದರೂ ಇಂದು ಬೀದಿಗೆ ಅನಾಮತ್ತಾಗಿ ಎಸೆಯಲ್ಪಟ್ಟಿದ್ದಾನೆ. ತನ್ನದೇ ದೇಶದ ಬಂಡವಾಳಿಗರ ದೆಸೆಯಿಂದ. ತಲೆಯ ಮೇಲೊಂದು ಸೂರಿಲ್ಲದೇ, ಜೇಬು ಖಾಲಿಯಾಗಿ ಪರದಾಟ ನಡೆಸುವ ಆಫ್ರಿಕಾ, ಲ್ಯಾಟಿನ್ ಅಮೆರಿಕಾ, ಏಷಿಯಾದ ಕೋಟ್ಯಾಂತರ ಜನರ ಸಾಲಿಗೆ ಅಮೇರಿಕನ್ನರೂ ಸೇರ್ಪಡೆಯಾಗಿದ್ದಾರೆ. ಇದು ಹೀಗೆ ಮುಂದುವರೆದರೆ ಬಂದೊದಗಲಿರುವ ದಾರುಣತೆಯನ್ನು ಜಾಗತಿಕ ಅಸಹಾಯಕತೆ, ಹಿಂಸೆಗಳನ್ನು, ತಪ್ಪಿಸಲು ಎಲ್ಲರೂ ಅಣಿಯಾಗಬೇಕಾಗಿದೆ.

ಕ್ಯಾಪಿಟಲಿಸಂನ ಬೆಳವಣಿಗೆ – ಒಂದು ಸ್ಥೂಲ ನೋಟ

15,16 ನೇ ಶತಮಾನಗಳಲ್ಲಿ ಯುರೋಪ್ ಕೇಂದ್ರಿತವಾಗಿ ತಕ್ಕಡಿ ಹಿಡಿದು ಬೆಳೆದು ಬಂದ ವ್ಯಾಪಾರಿ ಬಂಡವಾಳವು (**Mercantile Capital**) 19ನೇ ಶತಮಾನದ ಕೈಗಾರಿಕಾ ಕ್ರಾಂತಿಯ ಸಾಥ್ ಪಡೆದು, "ಕೈಗಾರಿಕಾ ಬಂಡವಾಳ" (**Industrial CapitaL**) ವಾಗಿ ಬೆಳೆಯಿತು. ನಂತರ ಬೃಹತ್ ಪ್ರಮಾಣದಲ್ಲಿ ಕಾರ್ಮಿಕರ ಶ್ರಮವನ್ನು ದೋಚಿದ ಪರಿಣಾಮವಾಗಿ ಅಪಾರ ಮಿಗುತಾಯ (**Surplus**) ಶೇಖರಣೆಗೊಂಡು "ಲಾಭ" ಎಂದು ಕರೆಸಿಕೊಂಡು 20ನೇ ಶತಮಾನದ ಆರಂಭದಲ್ಲಿ ಹಣಕಾಸು ಬಂಡವಾಳ (**Finance Capital**) ವಾಗಿ ರೂಪುಗೊಂಡಿತು. ಬೃಹತ್ ಬ್ಯಾಂಕುಗಳ ಬಂಡವಾಳವು ಕೈಗಾರಿಕಾ ಬಂಡವಾಳದೊಂದಿಗೆ ಸಮ್ಮಿಳಿತಗೊಂಡಿತು. ಸಾವಿರಾರು ಬಂಡವಾಳಿಗರ ಜಾಗದಲ್ಲಿ ಹತ್ತಾರು ಏಕಸ್ವಾಮ್ಯ ಕಂಪನಿಗಳು ರೂಪುಗೊಂಡವು. ದೊಡ್ಡ ಏಕಸ್ವಾಮ್ಯ (Monopoly Capitalists) ಬಂಡವಾಳಿಗರು ಕಾರ್ಪೋರೇಟ್‌ಗಳ ಮ್ಯಾನೇಜರ್‌ಗಳಾದರು. ಈ ಹಣಕಾಸು ಬಂಡವಾಳದಾರರ ಕಾರ್ಪೋರೇಟ್ ವ್ಯವಸ್ಥೆಯು ಇಡೀ ಜಗತ್ತಿನ ಮಾರುಕಟ್ಟೆಯನ್ನು ಕಬಳಿಸಿತು. ಆದರೆ ವಿವಿಧ ದೇಶಗಳ ಶ್ರೀಮಂತ ಬಂಡವಾಳಿಗರ ನಡುವಿನ ಮಾರುಕಟ್ಟೆಗಾಗಿನ ಪೈಪೋಟಿಯು ಎರಡು ಮಹಾಯುದ್ಧಗಳಿಗೂ ಕಾರಣವಾಯಿತು. ಎರಡನೇ ಮಹಾಯುದ್ಧದ ಬಳಿಕ ಇಡೀ ಬಂಡವಾಳಶಾಹಿ ವ್ಯವಸ್ಥೆಯ ಕೇಂದ್ರದಲ್ಲಿ ನಿಂತದ್ದು ಅಮೇರಿಕಾ. (ಮೊದಲ ಮಹಾಯುದ್ಧಗಳಲ್ಲಿ ಪ್ರಪಂಚದ 1/3 ಭಾಗದಷ್ಟು ದೇಶಗಳ ಜನರು ಕ್ಯಾಪಿಟಲಿಸಂನಿಂದ ದೂರವಾಗಿ ಸೋವಿಯತ್ ಒಕ್ಕೂಟ, ಚೀನಾ, ಮುಂತಾದೆಡೆ ಬಂಡವಾಳ ಶಾಹಿಗೆ ಸಡ್ಡು ಹೊಡೆದರಾದರೂ ಕೊನೆಯವರೆಗೂ ಉಳಿಯದೇ ಮತ್ತದೇ ಹೊಂಡದಲ್ಲಿ ಬಿದ್ದಿವೆ.) 1950, 60 ದಶಕಗಳಲ್ಲಿ ಅದುವರೆಗೂ ಐರೋಪ್ಯದೇಶಗಳ ವಸಾಹತುಗಳಾಗಿದ್ದ ಏಷಿಯಾ, ಆಫ್ರಿಕಾ, ಲ್ಯಾಟಿನ್, ಅಮೆರಿಕಾ ದೇಶಗಳು "ಸ್ವಾತಂತ್ರ" ಪಡೆದು ಪರೋಕ್ಷ ನಿಯಂತ್ರಣದ ಅರೆ ವಸಾಹತು (**Semi Colonial**) ಗಳಾದವು. ಆ ದೇಶಗಳಲ್ಲಿ ಬೆಳೆದೊಂದು ದಲ್ಲಾಳಿ ದೊಡ್ಡ ಬಂಡವಾಳಿಗ ವರ್ಗಕ್ಕೆ ಅಧಿಕಾರ ಲಭಿಸಿತು. (ಉದಾ : ಭಾರತದಲ್ಲಿ ಕಾಂಗ್ರೆಸ್ ಮತ್ತು ನಂತರ ಎಲ್ಲಾ ಪಾರ್ಲಿಮೆಂಟರಿ ಪಕ್ಷಗಳು) ಮತ್ತೊಂದು ಸಾಮ್ರಾಜ್ಯಶಾಹಿ ಅಗ್ರ ರಾಷ್ಟ್ರವಾಗಿದ್ದ **USSR** 1990 ರಲ್ಲಿ ಕುಸಿದು "ಶೀತಲ ಸಮರ" ಮುಗಿದ ಮೇಲೆ ಅಮೇರಿಕಾ ಜಗತ್ತಿಗೆಲ್ಲಾ ದೊಡ್ಡಣ್ಣನಾಯಿತು ತನ್ನ ಆರ್ಥಿಕ, ಸೈನಿಕ ಬಲಗಳ ಮೂಲಕ ಅದು ಮೆರೆಯಿತು. ಅಮೆರಿಕಾದ ಡಾಲರ್ ಜಗತ್ತನ್ನಾಳಲು ಶುರು ಮಾಡಿತು. ಆದರೆದುರು ಅದುರಿದ ಯುರೋಪ್ ಖಂಡದ ದೇಶಗಳು ಐರೋಪ್ಯ ಒಕ್ಕೂಟ (Europian Union) ರಚಿಸಿಕೊಂಡು ಡಾಲರ್ ಎದುರು "ಯುರೋ" ವನ್ನು ಸ್ಪರ್ಧೆಗಿಳಿಸಿದರು. ಎರಡನೇ ಮಹಾಯುದ್ಧದ ಬಳಿಕ ಅಮೆರಿಕಾದಿಂದ ವದೆ ತಿಂದಿದ್ದ ಜಪಾನ್ ಕೂಡ ಶೀಘ್ರಗತಿಯಲ್ಲಿ ಬೆಳವಣಿಗೆ ಹೊಂದಿ ಇವುಗಳಿಗೆ ಪ್ರಪಂಚ ಮಾರುಕಟ್ಟೆಯಲ್ಲಿ ಪೈಪೋಟಿ ನೀಡಿತು. IMF, ವಿಶ್ವಬ್ಯಾಂಕುಗಳಂತಹ ಜಾಗತಿಕ ಹಣಕಾಸು ಸಂಸ್ಥೆಗಳ ಮೂಲಕ, GATT, WTO ಗಳ ಮೂಲಕ ಬಹುಪಾಲು ದೇಶಗಳ ಹಣೆಬರಹವನ್ನು ಈ ಬಲಾಢ್ಯರು (ಅದರಲ್ಲೂ ಅಮೆರಿಕ) ಬರೆದರು. 1970ರ ದಶಕದ ಮಧ್ಯಭಾಗದಲ್ಲಿ ಈ ಬಂಡವಾಳಶಾಹಿ ಬಿಕ್ಕಟ್ಟಿಗೆ ಸಿಲುಕಿ ಅದರಿಂದ ಹೊರಬರಲು ಜಾಗತೀಕರಣ ಎಂಬ ಕಳ್ಳದಾರಿ ಹುಡುಕೊಂಡಿತು.

ಬಿಕ್ಕಟ್ಟಿನಲ್ಲಿ ಕ್ಯಾಪಿಟಲಿಸಂ – ಆಂತರಿಕ ವೈರುಧ್ಯಗಳು:

1945ರಿಂದ 1968ರ ನಡುವಿನ ಅವಧಿಯನ್ನು, ಬಂಡವಾಳವಾದದ "ಸುವರ್ಣಯುಗ" ಎಂದು ಕರೆಯಲಾಗುತ್ತದೆ. ಯುದ್ಧ ನಂತರದಲ್ಲಿ ಬಲಾಢ್ಯರ ಮಾರುಕಟ್ಟೆಗಳು ಮರು ವಿಭಜನೆಗೊಂಡು, ದೊಡ್ಡಮಟ್ಟದಲ್ಲಿ ಅಮೆರಿಕಾದ ಶಸ್ತ್ರಾಸ್ತ್ರಗಳು ಬಿಕರಿಯಾಗಿದ್ದ ಪರಿಣಾಮ ಅರ್ಥವ್ಯವಸ್ಥೆಯಲ್ಲಿ ಸಾಪೇಕ್ಷ ಸ್ಥಿರತೆ ನೆಲೆಯೂರಿತ್ತು. ಅದು ಒಂದು ರೀತಿಯಲ್ಲಿ ಪ್ರಭುತ್ವ ನಿಯಂತ್ರಿತ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳ (ಉದ್ಯೋಗ, ಶಿಕ್ಷಣ, ಆರೋಗ್ಯ, ನೀಡುವ) ವ್ಯವಸ್ಥೆಯಾಗಿತ್ತು, ರಾಷ್ಟ್ರೀಕರಣಗಳು ವ್ಯಾಪಕವಾದವು. ವೇತನಗಳು ಏರಲಾರಂಭಿಸಿದವು. ದೇಶಗಳ ರಾಷ್ಟ್ರೀಯ ಆದಾಯದಲ್ಲಿ ವೇತನ (**Wages**)ಗಳು ಪಾತ್ರ ವಹಿಸಿದ್ದವು. ಆದರೆ ಬಂಡವಾಳ ಶಾಹಿಗಳಿಗೆ ಈ ಅವಧಿ ಯಲ್ಲಿ ಲಾಭ ಹೆಚ್ಚಿ ಅವರ ಬಂಡವಾಳವು ಹಲವು ಪಟ್ಟು ವೃದ್ಧಿಸಿತ್ತಾದರೂ ಲಾಭದ ದರ ಮಾತ್ರ ಕುಸಿಯಿತು. ಏಕೆಂದರೆ ಬಂಡವಾಳಿಗರು ಉತ್ಪಾದನೆಯನ್ನು ಹೆಚ್ಚಿಸಲು

> **1945–68ರ ನಡುವಿನ ಅವಧಿಯನ್ನು, ಬಂಡವಾಳವಾದದ "ಸುವರ್ಣಯುಗ" ಎಂದು ಕರೆಯಲಾಗುತ್ತದೆ. ಯುದ್ಧ ನಂತರದಲ್ಲಿ ಬಲಾಢ್ಯರ ಮಾರುಕಟ್ಟೆಗಳು ಮರು ವಿಭಜನೆಗೊಂಡು, ದೊಡ್ಡಮಟ್ಟದಲ್ಲಿ ಅಮೆರಿಕಾದ ಶಸ್ತ್ರಾಸ್ತ್ರಗಳು ಬಿಕರಿಯಾಗಿದ್ದ ಪರಿಣಾಮ ಅರ್ಥವ್ಯವಸ್ಥೆಯಲ್ಲಿ ಸಾಪೇಕ್ಷ ಸ್ಥಿರತೆ ನೆಲೆಯೂರಿತ್ತು. ಅದು ಒಂದು ರೀತಿಯಲ್ಲಿ ಪ್ರಭುತ್ವ ನಿಯಂತ್ರಿತ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳ ವ್ಯವಸ್ಥೆ ಯಾಗಿತ್ತು. ರಾಷ್ಟ್ರೀಕರಣಗಳು ವ್ಯಾಪಕವಾದವು. ವೇತನಗಳು ಏರಲಾರಂಭಿಸಿದವು. ದೇಶಗಳ ರಾಷ್ಟ್ರೀಯ ಆದಾಯದಲ್ಲಿ ವೇತನಗಳು ಪಾತ್ರ ವಹಿಸಿದ್ದವು. ಆದರೆ ಬಂಡವಾಳಶಾಹಿಗಳಿಗೆ ಈ ಅವಧಿಯಲ್ಲಿ ಲಾಭ ಹೆಚ್ಚಿ ಅವರ ಬಂಡವಾಳವು ಹಲವು ಪಟ್ಟು ವೃದ್ಧಿಸಿತ್ತಾದರೂ ಲಾಭದ ದರ ಮಾತ್ರ ಕುಸಿಯಿತು. ಏಕೆಂದರೆ ಬಂಡವಾಳಿಗರು ಉತ್ಪಾದನೆಯನ್ನು ಹೆಚ್ಚಿಸಲು ಯಂತ್ರಗಳ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಿ ಶ್ರಮದ ಪಾತ್ರವನ್ನು ಕಡಿಮೆ ಮಾಡಿದರು. ಇದು ಶ್ರಮದ ಉತ್ಪಾದಕತೆಯನ್ನೇನೋ ಹೆಚ್ಚಿಸಿತ್ತು. ಆದರೆ ಬಂಡವಾಳದ ಉತ್ಪಾದಕತೆಯನ್ನು ತಗ್ಗಿಸಿತು.**

ಯಂತ್ರಗಳ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಿದರು. ಶ್ರಮದ (**Labour**) ಪಾತ್ರವನ್ನು ಕಡಿಮೆ ಮಾಡಿದರು. ಇದು ಶ್ರಮದ ಉತ್ಪಾದಕತೆ (**Productivity of Labour**) ಯನ್ನೇನೋ ಹೆಚ್ಚಿಸಿತ್ತು. ಆದರೆ ಬಂಡವಾಳದ ಉತ್ಪಾದಕತೆಯನ್ನು ತಗ್ಗಿಸಿತು. ಅಂದರೆ ಉದಾಹರಣೆಗೆ ಒಂದು ಗಂಟೆಯ ಶ್ರಮದಿಂದ ನೂರು ಪೆನ್ನು (ಸರಕು)ಗಳು ಉತ್ಪಾದನೆಯಾಗುತ್ತಿದ್ದ ಅವಧಿಯಲ್ಲಿ ಯಂತ್ರೀಕರಣದಿಂದ ಸಾವಿರ ಪೆನ್ನುಗಳು ಉತ್ಪಾದನೆಯಾದವು. ಆದರೆ ಸಾವಿರ ಪೆನ್ನುಗಳನ್ನು ಉತ್ಪಾದಿಸಲು ಈ ಮೊದಲು 5000 ರೂಗಳನ್ನು ಬಂಡವಾಳವಾಗಿ ಹೂಡುತ್ತಿದ್ದ ಜಾಗದಲ್ಲಿ ಯಂತ್ರೀಕರಣಕ್ಕೆಂದು ಒಂದು ಲಕ್ಷ ರೂಗಳನ್ನು ಹೂಡಬೇಕಾಗಿ ಬಂದಿತು. ಇದು ಬಂಡವಾಳದ ಉತ್ಪಾದಕತೆ (**Productivity of Capital**) ಯನ್ನು ತಗ್ಗಿಸಿತು ಪರಿಣಾಮವಾಗಿ ಲಾಭದ ದರವು ಕುಸಿಯಿತು. ಅದನ್ನು ಹೀಗೆ ಹೇಳಬಹುದು.

$$\text{ಲಾಭದ ದರ} = \frac{\text{ಲಾಭ}}{\text{ಬಂಡವಾಳ}} = \frac{\text{ಲಾಭ}}{\text{ಉತ್ಪನ್ನ}} \times \frac{\text{ಉತ್ಪನ್ನ}}{\text{ಬಂಡವಾಳ}}$$

ಹೀಗೆ ಲಾಭದ ದರದಲ್ಲಿನ ಕುಸಿತವು ಕ್ಯಾಪಿಟಲಿಸಂನ್ನು ತೀವ್ರವಾದ ಬಿಕ್ಕಟ್ಟಿಗೆ ಸಿಲುಕಿಸಿತು. 70ರ ದಶಕದ ಕೊನೆ ಭಾಗದಲ್ಲಿ ಈ ಬಿಕ್ಕಟ್ಟಿನಿಂದ ಹೊರಬರಲು ಕ್ಯಾಪಿಟಲಿಸಂನ ಉನ್ನತ ವರ್ಗವು ನವ ಉದಾರವಾದಿ (**Neo-Liberal**) ನೀತಿಗಳಾದ ಜಾಗತಿಕರಣ–ಉದಾರಿಕರಣ–ಖಾಸಗಿಕರಣಗಳನ್ನು ಜಗತ್ತಿನ ಜನರ ಮೇಲೆ ಹೇರಿತು. ತನ್ನ ಬಿಕ್ಕಟ್ಟನ್ನು 2008ರವರೆಗೂ ಮುಂದೂಡಿತು.

ಉತ್ಪಾದನೆಯ ಜಾಗತೀಕರಣ – ಹಣಕಾಸು ಕ್ರೋಢೀಕರಣ

ಅಮೇರಿಕಾ ಕೇಂದ್ರಿತ ನವ ಉದಾರವಾದಿ ಜಾಗತೀಕರಣ ನೀತಿಗಳು ಏಕಸ್ವಾಮ್ಯ ಕಾರ್ಪೋರೇಟ್‌ಗಳಿಗೆ ಜಗತ್ತಿನಾದ್ಯಂತ ಲಾಭದ (ಲೂಟಿಯ) ಹೊಸ ಅವಕಾಶಗಳನ್ನು ತಂದಿತು. ಲಾಭದ ದರಗಳು ಮೇಲೇರಿದವು. ಆದರೆ ಅದು ಜಗತ್ತಿನ ಶ್ರಮಿಕ ವರ್ಗಕ್ಕೆ ಅಪಾರ ಯಾತನೆಯನ್ನು ತಂದೊಡ್ಡಿತು. ಸೇವಾ ಕ್ಷೇತ್ರದಲ್ಲಿ ಕೆಲವೇ ಉದ್ಯೋಗಗಳು ಸೃಷ್ಟಿಯಾದರೂ, ಲಕ್ಷಾಂತರ ಕಾರ್ಮಿಕರು ಬೀದಿಗೆ ಬಿದ್ದರು. ವೇತನಗಳು ಏರಿಕೆಯನ್ನು ಕಾಣಲಿಲ್ಲ ಕಲ್ಯಾಣ ಕಾರ್ಯಗಳು ಕಡಿತಗೊಂಡವು. **I.T., B.T.**ಗಳಂತಹ ಕ್ಷೇತ್ರಗಳು ಪ್ರಾಮುಖ್ಯತೆ ಪಡೆದು ಕೃಷಿ, ಕೈಗಾರಿಕೆಗಳು ಕಡೆಗಣಿಸಲ್ಪಟ್ಟವು. ರೈತಾಪಿ ಆತ್ಮಹತ್ಯೆಯ ದಾರಿ ಹಿಡಿಯಿತು. ಸರ್ಕಾರಗಳು ಉಚಿತವಾಗಿ ನೀಡಬೇಕಾಗಿದ್ದ ಆರೋಗ್ಯ ಶಿಕ್ಷಣಗಳು ಲಾಭದ ಹೂಡಿಕೆಯ ಕ್ಷೇತ್ರಗಳಾದವು. ಟ್ರೇಡ್ ಯೂನಿಯನ್‌ಗಳು ಕಾನೂನುಗಳ ನೆರವಿನಿಂದ ಹತ್ತಿಕ್ಕಲ್ಪಟ್ಟವು. ಇಲ್ಲವೇ ಮ್ಯಾನೇಜ್‌ಮೆಂಟ್‌ನ ಮರ್ಜಿಗೊಳಗಾದವು. ದಿನಗೂಲಿ ವ್ಯವಸ್ಥೆ ಸಾಂಸ್ಥೀಕರಣಗೊಂಡು ನವ ಬ್ರಾಹ್ಮಣಶಾಹಿ ವ್ಯವಸ್ಥೆಯೊಂದು ರೂಪುಗೊಂಡಿತು. ದುಡಿಯುವ ವರ್ಗದ ಅಧಿಕಾರ ಹಾಗೂ ಆದಾಯಗಳು ಮಿತಿಗೊಳಪಟ್ಟವು. ಉತ್ಪಾದನೆಯ ಜಾಗತಿಕ ಮಟ್ಟದಲ್ಲಿ ಸಾಮಾಜಿಕರಣಗೊಂಡ ಪರಿಣಾಮವಾಗಿ ಚೀನಾ, ಭಾರತ, ಸೋವಿಯತ್ ಬ್ಲಾಕ್‌ನ ಕೆಲದೇಶಗಳಲ್ಲಿ ದೊರೆತ ಶ್ರಮವನ್ನೊಳಗೊಂಡ, ಜಾಗತೀಕವಾಗಿ ಸಮ್ಮಿಳಿತಗೊಂಡ ಅಗ್ಗದ ಶ್ರಮದ ಉತ್ಪಾದನೆಯ ಅರ್ಥವ್ಯವಸ್ಥೆಯು ಸೃಷ್ಟಿಯಾಯಿತು. ತೃತೀಯ ಜಗತ್ತಿನ ದೇಶಗಳು ಮುಂದುವರೆದ ದೇಶಗಳಿಗೆ ಅಗ್ಗದ ಶ್ರಮವೊದಗಿಸುವ, ಕಚ್ಚಾ ವಸ್ತುಗಳನ್ನೊದಗಿಸುವ ಹಾಗೂ ಸರಕುಗಳಿಗೆ

ಹಣಕಾಸು ಮಾರುಕಟ್ಟೆಯಲ್ಲಿ ಹೆಚ್ಚೆಚ್ಚು ಹಣ ಹಾಕಿದಷ್ಟೂ ಹೆಚ್ಚೆಚ್ಚು ಲಾಭ ಕಂಡ ಹೂಡಿಕೆ ಸಂಸ್ಥೆಗಳೂ, ಲಿಮಾನ್ ಬ್ರದರ್ಸ್‌ನಂತಹ ದೈತ್ಯ ಕಂಪನಿಗಳೂ ಹೆಚ್ಚೆಚ್ಚು ಸಾಲದ ಮೊರೆ ಹೋದರು. ಸಾಲ ನೀಡಲೆಂದೇ ಕಮರ್ಷಿಯಲ್ ಪೇಪರ್ ಮಾರುಕಟ್ಟೆ ಸೃಷ್ಟಿಯಾಯಿತು. ಒಟ್ಟಾರೆಯಾಗಿ "ಸರ್ವಂ ಕ್ರೆಡಿಟ್ ಮಯಂ" ಎಂಬಂತಾಯಿತು. ಅಮೇರಿಕಾದಲ್ಲಿ 1997ರ ಸುಮಾರಿಗೆ ಸಾಲವು ಒಟ್ಟು ರಾಷ್ಟ್ರೀಯ ಉತ್ಪನ್ನ (GDP)ದ ಶೇ. 100ರಷ್ಟಿತ್ತು. ಅದು 2008ರಲ್ಲಿ ಇಡೀ GDPಯ 350% ಬೆಳೆದಿತ್ತು. (ಕೆಳಗಿನ ಟೇಬಲ್ ನೋಡಿ.) ಅಂದರೆ ಮೂರುವರೆ ಪಟ್ಟು ಹೆಚ್ಚು. ಅಂದರೆ ಈ ಸಾಲದ ಬಲೂನು ಹೇಗೆ ಊದಿ ಕೊಂಡಿತ್ತು ಯೋಚಿಸಿ.

ಮಾರುಕಟ್ಟೆಯನ್ನೊದಗಿಸುವ ಕೇಂದ್ರಗಳಾದವು. ಏಳೆಂಟು ಶ್ರೀಮಂತ ದೇಶಗಳೂ (**G-8** ದೇಶಗಳು) ಈ ಆರ್ಥಿಕತೆಯ ಪಿರಮಿಡ್‌ನ ತುತ್ತತುದಿಯಲ್ಲಿ ಕುಳಿತು ಎಲ್ಲವನ್ನೂ ನಿಯಂತ್ರಿಸಿದರು. ಜಗತ್ತಿನ ಮೂಲೆ ಮೂಲೆಗಳಲ್ಲಿ ಲೂಟಿ ಹೊಡೆದ ಲಾಭವು ಅವರ ಹಣಕಾಸು ಮಾರುಕಟ್ಟೆಯನ್ನು ತಲುಪಿ ಪುನಃ ಲಾಭಗಳಿಸಲು ಶುರುಮಾಡಿತು. ಉದಾಹರಣೆಗೆ ಚೀನಾದ ಒಂದು **SEZ** ನಲ್ಲಿ ಉತ್ಪಾದನೆಯಾಗುವ ಒಂದು **iPod** ಅಮೇರಿಕ ಮಾರುಕಟ್ಟೆ ತಲುಪಿ 299 ಡಾಲರ್‌ಗೆ ಬಿಕರಿಯಾಗುತ್ತದೆ. ಅದರಲ್ಲಿ ಕೇವಲ 40 ಡಾಲರ್ ಮಾತ್ರ ಚೀನಾ ಸರ್ಕಾರಕ್ಕೆ ಸೇರುತ್ತದೆ. 260 ಡಾಲರ್ ಆ ಐಪಾಡನ್ನು ವಿನ್ಯಾಸಗೊಳಿಸಿ, ಸಾಗಿಸಿ, ಮಾರುಕಟ್ಟೆಗೆ ಒಯ್ದ ಅಮೇರಿಕಾದ ಕಂಪನಿಯ ಪಾಲಾಗುತ್ತದೆ.

ಈ ಪ್ರತಿಕ್ರಿಯೆಯ ಹಂತದಲ್ಲಿ ಎರಡು ವಿದ್ಯಮಾನಗಳು ಮುಂದೆ ಬಂದವು. ಒಂದೆಡೆ ಇಡೀ ಜಾಗತಿಕ ಅರ್ಥವ್ಯವಸ್ಥೆಯನ್ನು "ಸಾಲ"ದ ಬಲೆಯು ವ್ಯಾಪಿಸಿಕೊಂಡಿತು. ಇನ್ನೊಂದೆಡೆ ಹಣಕಾಸು ಕ್ರೋಢೀಕರಣ (**Financialization**)ವು ಹಣಕಾಸು ಮಾರುಕಟ್ಟೆಯ ಪ್ರಾಬಲ್ಯವನ್ನು ಹೆಚ್ಚಿಸಿತು. ನೈಜ ಆರ್ಥಿಕತೆ (ಸರಕು ಉತ್ಪಾದನೆ)ಯು ಸ್ಥಗಿತತೆಯನ್ನನುಭವಿಸಿತು. ಒಂದೆಡೆ ವ್ಯವಸ್ಥೆಯಲ್ಲಿ ನೆಲೆಯೂರಿರುವ ಸ್ಥಗಿತತೆ (**Stagnation**) ಹಾಗೂ ಹಣದುಬ್ಬರ (**Inflation**) ಗಳು ಸೇರಿ ಸ್ಟ್ಯಾಗ್‌ಪ್ಲೇಷನ್ (**Stagflation**)ನ್ನು ನೆಲೆಗೊಳಿಸಿದವು.

ಸಾಲದ ಆರ್ಥಿಕತೆ & ಹಣಕಾಸು ಕ್ರೋಢೀಕರಣ :

ಸರಕು ಉತ್ಪಾದನಾ ಚಟುವಟಿಕೆ ಹಾಗೂ ಸೇವೆಗಳನ್ನು ಅಗ್ಗದ ಶ್ರಮ (**Cheap Labour**) ಹಾಗೂ ಮಾರುಕಟ್ಟೆಯ ದೃಷ್ಟಿಯಿಂದ ತೃತೀಯ ಜಗತ್ತಿನ ದೇಶಗಳಿಗೆ ಬಲಾಢ್ಯ ದೇಶಗಳ ಬಂಡವಾಳಶಾಹಿಯು ವರ್ಗಾವಣೆ ಮಾಡಿತು. ಇದರಿಂದ ಮುಂದುವರೆದ ದೇಶಗಳಲ್ಲಿ ನಿರುದ್ಯೋಗ ಹೆಚ್ಚಿತು. ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲು ವೇತನವನ್ನು ಏರಿಸದಾದರು. ಇದರಿಂದ ಬಂಡವಾಳಿಗರಿಗೆ ಲಾಭ ಬಂದಿತಾದರೂ ಗ್ರಾಹಕರ ಜೇಬು ಮಾತ್ರ ಖಾಲಿಯಾಯಿತು. ತಾವು ಉತ್ಪಾದಿಸಿದ ಅನುಭೋಗಿ ವಸ್ತುಗಳನ್ನು ಕೊಳ್ಳಲು ತಮಗೇ ಹಣವಿಲ್ಲ. ಆದರೆ ಬಂಡವಾಳಿಗರ ಲಾಭ ಹೆಚ್ಚಿಸಲೇ ಬೇಕಾದ್ದರಿಂದ ಈಗ ಉಳಿದದ್ದು ಒಂದೇ ದಾರಿ. ಅದೆಂದರೆ ಜನರಿಗೆ ಕೊಡದೇ ಉಳಿಸಿದ ಅಪಾರ ಮೊತ್ತದ ಹಣವನ್ನು ಅವರಿಗೇ 'ಕ್ರೆಡಿಟ್' ರೂಪದಲ್ಲಿ ಕೊಡುವುದು!. ಆ ಸಾಲ ತೀರಿಕೆಗೆ ಜನರು ತಮ್ಮ ತಿಂಗಳ ವರಮಾನದಲ್ಲಿ ಒಂದು ಪಾಲು ತೆಗೆದಿಡುವುದು. ಆದರೆ ವರಮಾನಕ್ಕಿಂತ ಹತ್ತಾರು, ನೂರಾರು ಪಟ್ಟು ಸಾಲ ಬೆಳೆಯಿತು. ಕಾರುಕೊಳ್ಳಲು ಸಾಲ, ಮನೆ ಕೊಳ್ಳಲು ಸಾಲ, ಸಾಲವೋ ಸಾಲ. ಹಣಕಾಸು ಸಂಸ್ಥೆಗಳು ಜನರ ವಾಹನ ಸಾಲ, ಗೃಹಸಾಲ, ಕ್ರೆಡಿಟ್ ಕಾರ್ಡ್ ಸಾಲಗಳನ್ನು 'ಸೆಕ್ಯುರಿಟಿ'ಗಳಾಗಿ ಬಳಸಿಕೊಂಡರು. ಇನ್ನೊಂದೆಡೆ ಬಂಡವಾಳವಾದವು. ಲಾಭದ ಹೊಸ ಅವಕಾಶಗಳನ್ನು ಕಂಡುಕೊಂಡದ್ದು, ಉತಾದನೆಯಿಂದ ವಿಮುಖಗೊಂಡ ಹಣಕಾಸು ಮಾರುಕಟ್ಟೆ (**Finance Market**) ಯಲ್ಲಿ. ಅದರಲ್ಲಿ ಸಟ್ಟಾ ವ್ಯಾಪಾರ (**Speculation**) ಎಂಬ ಜೂಜು ನಡೆಸಿ ಲಾಭ ಸೂರೆ ಹೊಡೆಯುವುದು. ಅದೂ ಸಾಂಸ್ಥಿಕ ಹೂಡಿಕೆಯ (**Forign Institutional Investment-FII**). ಹೆಸರಿನಲ್ಲಿ. FIRE (ಫೈನಾನ್ಸ್, ಇನ್‌ವೆಸ್ಟ್‌ಮೆಂಟ್, ರಿಯಲ್ ಎಸ್ಟೇಟ್) ಕ್ಷೇತ್ರಗಳಲ್ಲಿ ರಾಶಿ ರಾಶಿ ಬಂಡವಾಳ ಹರಿಯಿತು. ಇದು ಅಪಾರ ಪ್ರಮಾಣದ ಕಲ್ಪಿತ ಬಂಡವಾಳ (**Fictious Capital**) ಕ್ಕೆ ಎಡೆ ಮಾಡಿಕೊಟ್ಟಿತು. ಒಂದು ದಿನ ಬಂಡವಾಳವು ಥಾಯ್ಲೆಂಡಿನ ರಿಯಲ್ ಎಸ್ಟೇಟ್‌ನಲ್ಲಿ ಹರಿದು ಜಪಾನ್ ಸ್ಟಾಕ್ ಎಕ್ಸ್‌ಛೇಂಜ್ ತಲುಪಿ, ಮರುದಿನ ಬ್ರೆಜಿಲ್‌ನಲ್ಲಿಯೂ ಮತ್ತೆ ಮಾರನೇ ದಿನ ಗೃಹಸಾಲ ಮಾರುಕಟ್ಟೆಯಲ್ಲಿಯೂ ಹರಿಯಿತು. ಇದಕ್ಕೆ ಕಂಪ್ಯೂಟರ್ ತಂತ್ರಜ್ಞಾನ ವ್ಯಾಪಕವಾಗಿ ಬಳಕೆಯಾಯಿತು. ಷೇರು ಮಾರುಕಟ್ಟೆ ಅಥವಾ ಸ್ಟಾಕ್ ಮಾರುಕಟ್ಟೆಯಲ್ಲಿ ಸ್ಟಾಕ್ ಎಕ್ಸ್‌ಛೇಂಜ್ ದರಗಳು ದಿನನಿತ್ಯ ಥಕಥೈ ನೃತ್ಯವಾಡಲು ತೊಡಗಿದವು. ಅಲ್ಪ ಕಾಲದಲ್ಲಿಯೇ ಕೆಲವರು ಬಿಲಿಯಾದಿಪತಿಗಳಾದರೆ, ಷೇರುದರ ಪಾತಾಳಕ್ಕಿಳಿದ ದಿನ ಲಕ್ಷಾಂತರ ಜನರು ನಷ್ಟ ಅನುಭವಿಸತೊಡಗಿದರು. ಈ ಬೃಹತ್ ಪ್ರಮಾಣದ ಬಂಡವಾಳ ಕೇಂದ್ರೀಕರಣೆಯು ಉಳ್ಳವರ ಮತ್ತು ಇಲ್ಲದವರ ನಡುವೆ ಅಗಾಧವಾದ ಕಂದಕವನ್ನುಂಟು ಮಾಡಿತು. ಅಮೇರಿಕಾದಲ್ಲಿ 2001ರಲ್ಲಿ ಹಣಕಾಸು ವ್ಯವಸ್ಥೆಯ ತುತ್ತತುದಿಯಲ್ಲಿದ್ದ ಶೇ.1 ರಷ್ಟು ಹಣಕಾಸು ಬಂಡವಾಳವು ಕೆಳಹಂತದ ಶೇ. 80 ರಷ್ಟು ಜನರ ಒಟ್ಟು ಆದಾಯದ ನಾಲ್ಕು ಪಟ್ಟು ಇತ್ತು. 2006ರಲ್ಲಿ ಅಮೇರಿಕಾದ 60 ಅತ್ಯಂತ ಶ್ರೀಮಂತರ ಬಳಿ 630 ಬಿಲಿಯ ಡಾಲರುಗಳಷ್ಟು ಮೊತ್ತದ ಸಂಪತ್ತು ಶೇಖರಣೆಗೊಂಡಿತ್ತು!. ಅದೇ ರೀತಿಯಲ್ಲಿ ಇತರ ದೇಶಗಳಲ್ಲಿಯೂ ಸಹ, ಭಾರೀ ಕಂದಕ ಸೃಷ್ಟಿಯಾಯ್ತು.

ಹಣಕಾಸು ಮಾರುಕಟ್ಟೆಯಲ್ಲಿ ಹೆಚ್ಚೆಚ್ಚು ಹಣ ಹಾಕಿದಷ್ಟೂ ಹೆಚ್ಚೆಚ್ಚು ಲಾಭ ಕಂಡ ಹೂಡಿಕೆ ಸಂಸ್ಥೆಗಳೂ, ಲಿಮಾನ್ ಬ್ರದರ್ಸ್‌ನಂತಹ ದೈತ್ಯ ಕಂಪನಿಗಳೂ ಹೆಚ್ಚೆಚ್ಚು ಸಾಲದ ಮೊರೆ ಹೋದರು. ಸಾಲ ನೀಡಲೆಂದೇ ಕಮರ್ಷಿಯಲ್ ಪೇಪರ್ ಮಾರುಕಟ್ಟೆ ಸೃಷ್ಟಿಯಾಯಿತು. ಒಟ್ಟಾರೆಯಾಗಿ "ಸರ್ವಂ ಕ್ರೆಡಿಟ್ ಮಯಂ" ಎಂಬಂತಾಯಿತು. ಅಮೇರಿಕಾದಲ್ಲಿ 1997ರ ಸುಮಾರಿಗೆ ಸಾಲವು ಒಟ್ಟು

(29ನೇ ಪುಟಕ್ಕೆ)

ನಕ್ಸಲ್ಸ್ ಮತ್ತು ಪ್ರಭುತ್ವ

ಭಾರತದ ಆಳುವ ವರ್ಗಗಳು ಬಿಕ್ಕಟ್ಟಿನಲ್ಲಿ ಮುಳಗಿದೆ. ಈ ಬಿಕ್ಕಟ್ಟಿನ ಪರಿಣಾಮದಿಂದ ಹಣದುಬ್ಬರ ಬೆಲೆ ಏರಿಕೆ, ನಿರುದ್ಯೋಗ ಬಡತನ ಹೆಚ್ಚುತ್ತಿವೆ, ಇದರ ಪರಿಣಾಮವಾಗಿ ರಾಜಕೀಯ ವಲಯಗಳಲ್ಲಿ ಆ ಬಿಕ್ಕಟ್ಟು ಸ್ಫೋಟ ಗೊಳ್ಳುತ್ತಿದೆ. ಸಾಮ್ರಾಜ್ಯ ಶಾಹಿ ದೇಶಗಳಲ್ಲಿ ದುರ್ಬಲರು, ಆದಿವಾಸಿಗಳು ಹಿಂದೆಂದಿಗಿಂತಲೂ ಇಂದು ಸಮರಶೀಲ ಹೋರಾಟಗಳಲ್ಲಿ ತೊಡಗಿದ್ದಾರೆ. ಪಶ್ಚಿಮ ಬಂಗಾಳದ ನಂದಿಗ್ರಾಮ ಸಿಂಗೂರಿನಲ್ಲಿ ರೈತರ ಹೋರಾಟ, SEZ ವಿರೋಧಿ ಹೊರಾಟ, ಬ್ಯಾಂಕ್ ನೌಕರರು, ಸಾರಿಗೆ ನೌಕರರು ಕಾರ್ಮಿಕರ ಹೋರಾಟ, ವಿದ್ಯಾರ್ಥಿಗಳ, ವೈದ್ಯರ, ವಕೀಲರ ಅಂಗನವಾಡಿ ನೌಕರರ ಹೋರಾಟ, ಕೋಮುವಾದ ವಿರೋಧಿ, ಮುಂತಾದ ರಾಷ್ಟ್ರೀಯತೆಯ ಹೋರಾಟಗಳು ಜಾತಿವಾದ ವಿರೋಧಿ, ರಕ್ಷಿತ ಅರಣ್ಯ, ಜೈವಿಕ ಉದ್ಯಾನವನ ವಿರೋಧಿ ಹೋರಾಟಗಳು ಹೀಗೆ ನೂರಾರು ಬಂಡಾಯಗಳು ದೇಶದ್ಯಾಂತ ನಡೆಯುತ್ತಿವೆ.

ಚಂದ್ರ ಶೇಖರ್

ನಕ್ಸಲೀಯರೆಂದರೆ ಶ್ರದ್ದೆಯುಳ್ಳ ಕ್ರಾಂತಿಕಾರಿ ಕಮ್ಯುನಿಷ್ಟರು, ನಿರ್ಭಯ ಹೋರಾಟಗಾರರು, ಅವರೆಲ್ಲರೂ ವೈಯುಕ್ತಿಕ ಜೀವನದಲ್ಲಿ ಸತ್ಯಪರತೆ, ಪ್ರಾಮಣಿಕತೆ ಮತ್ತು ಸುಸಂಸ್ಕೃತ ಹೊಂದಿದವರಾಗಿದ್ದಾರೆ. ಅವರೆಲ್ಲರೂ ಜನತೆಯ ಸೇವೆಗಾಗಿ ಸಮಾಜ ಒಳಿತಿಗಾಗಿ ತಮ್ಮ ಜೀವನವನ್ನು ತ್ಯಾಗ ಮಾಡಿರುವವರು. 1967 ರಿಂದ ಇಂದಿನ ವರೆಗೂ ಪ್ರಭುತ್ವದ ಲಕ್ಷಾಂತರ ಪೊಲೀಸ್ ಮಿಲಿಟರಿ ಪಡೆಗಳು ಅದರ ದೇಶಿ-ವಿದೇಶಿ ಅತ್ಯಾಧುನಿಕ ಆಯುಧಗಳ ಪ್ರತಿರೋಧವನ್ನು ಎದುರಿಸುತ್ತ ಸಾವನ್ನು ಗೇಲಿ ಮಾಡುತ್ತ ಕ್ರಾಂತಿ ನಿನಗೆ 'ಲಾಲ್ ಸಲಾಮ್' ಎನ್ನುತ್ತ ಶೋಷಕ ವ್ಯವಸ್ಥೆಗೆ ಇತಿಶ್ರೀ ಹಾಡಿ ನವ ಸಮಾ ಜದ ನಿರ್ಮಾಣಕ್ಕೆ ತಮ್ಮನ್ನು ತೊಡಿಗಿಸಿಕೊಂಡವರು.

ಇಂದು ಪ್ರಪಂಚ ಬಿಕ್ಕಟ್ಟನಲ್ಲಿದೆ. ಅದರಲ್ಲೂ ಅಮೆರಿಕಾದ ಅರ್ಥಿಕತೆ ಪತನದಡೆಗೆ ಸಾಗುತ್ತಿದೆ. ಇದರ ಪರಿಣಾಮವಾಗಿ ಭಾರತದ ಆಳುವ ವರ್ಗಗಳು ಬಿಕ್ಕಟ್ಟಿನಲ್ಲಿ ಮುಳಗಿದೆ ಈ ಬಿಕ್ಕಟ್ಟಿನ ಪರಿಣಾಮದಿಂದ ಹಣದುಬ್ಬರ ಬೆಲೆ ಏರಿಕೆ, ನಿರುದ್ಯೋಗ ಬಡತನ ಹೆಚ್ಚುತ್ತಿವೆ, ಇದರ ಪರಿಣಾಮವಾಗಿ ರಾಜಕೀಯ ವಲಯಗಳಲ್ಲಿ ಆ ಬಿಕ್ಕಟ್ಟು ಸ್ಫೋಟಗೊಳ್ಳುತ್ತಿದೆ. ಸಾಮ್ರಾಜ್ಯಶಾಹಿ ದೇಶಗಳಲ್ಲಿ ದುರ್ಬಲರು, ಆದಿವಾಸಿಗಳು ಹಿಂದೆಗಿಂತಲೂ ಇಂದು ಸಮರಶೀಲ ಹೋರಾಟಗಳಲ್ಲಿ ತೊಡಗಿದ್ದಾರೆ. ಪಶ್ಚಿಮ ಬಂಗಾಳದ ನಂದಿಗ್ರಾಮ ಸಿಂಗೂರಿನಲ್ಲಿ ರೈತರ ಹೋರಾಟ, SEZ ವಿರೋದಿ ಹೊರಾಟ, ಬ್ಯಾಂಕ್ ನೌಕರರು, ಸಾರಿಗೆ ನೌಕರರು ಕಾರ್ಬುಕರ ಹೋರಾಟ, ವಿದ್ಯಾರ್ಥಿಗಳ, ವೈಧ್ಯರ, ವಕೀಲರ, ಅಂಗನವಾಡಿ ನೌಕರರ ಹೋರಾಟ, ಕೋಮುವಾದ ವಿರೋಧಿ, ಅಸ್ಸಾಂ ನಾಗ, ಭೊಡೋ, ಮುಂತಾದ ರಾಷ್ಟ್ರೀಯತೆಯ ಹೋರಾಟಗಳು ಜಾತಿವಾದ ವಿರೋಧಿ, ಕುದುರೆಮುಖ ರಾಷ್ಟ್ರೀಯ ಉಧ್ಯಾನವನ ವಿರೋಧಿ ಹೊರಾಟ, ರಕ್ಷಿತ ಅರಣ್ಯ, ಜೈವಿಕ ಉಧ್ಯಾನವನ ವಿರೋಧಿ ಹೋರಾಟಗಳು ಹೀಗೆ ನೂರಾರು ಬಂಡಾಯಗಳು ದೇಶದ್ಯಾಂತ ನಡೆಯುತ್ತಿವೆ.

ಇಂದು ಮಲೆನಾಡಿನಲ್ಲಿ ಜನರು ವಿವಿಧ ರೀತಿಯ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಉಳಲು ಜಮೀನ್ ಇಲ್ಲ. ಇದ್ದ ಅಲ್ಪ ಸ್ವಲ್ಪ ಜಮಿನಿಗೆ ಹಕ್ಕು ಪತ್ರ ಇಲ್ಲ, ಸ್ಥಳಿಯ ಭೂಮಾಲಿಕರ ಮತ್ತು ಕಂಟ್ರಾಕ್ಟರಗಳಿಂದ ಲೇಬಾದೆಬಿಗಾರರಿಂದ ಅರಣ್ಯ ಇಲಾಖೆಯುವರಿಂದ ಜನರು ಅನುಭವಿಸುತ್ತಿರುವ ಶೋಷಣೆಯನ್ನು ಕೊನೆಗೊಳಿ ಸ್ವಲು ಪ್ರಭುತ್ವ ಕೆಲಸ ಮಾಡಲಿಲ್ಲ ಇದರ ಬದಲಾಗಿ ಕಾಡಿನಲ್ಲಿ ಶತ ಶತಮಾನಗಳಿಂದ ವಾಸಿಸುತ್ತಿರುವ ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಯೋಜನೆಗಳಾದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಕ್ಷಿತ ಅರಣ್ಯ, ಚೆಕ್ ಡ್ಯಾಮಗಳು ಉಷ್ಣ ವಿದ್ಯುತ್ ಸ್ಥಾವಕಗಳನ್ನು ಜಾರಿಗೆ ತರಲು ಪ್ರಯತ್ನಿಸಿತು. ಇವೆಲ್ಲವು ಸ್ಥಳಿಯ ದಲ್ಲಾಳಿ ಬಂಡವಾಳ ಶಾಹಿಗಳ ಮತ್ತು ಸಾಮ್ರಜ್ಯಶಾಹಿಗಳ ಹಿತಶಕ್ತಿ ಕಾಪಡುವಕ್ಕೆ ಹೊರತು ಬೇರೆನೂ ಅಲ್ಲ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಗಣಿಗಾರಿಕೆ, ಬತ್ತಿ ಹೋಗುತ್ತಿರುವ ತುಂಗ ಮೂಲ ಶತಶತಮಾನಗಳಿಂದ ಅರಣ್ಯದಲ್ಲಿ ನೆಲೆಸಿರುವ ಭೂ ಹಕ್ಕಿನ ಪ್ರಶ್ನೆ. ಕೃಷಿಕಾರ್ಮಿಕರ ಕನಿಷ್ಠ ವೇತನ, ಕೃಷಿ ಉತ್ಪನ್ನಗಳಿಗೆ ಬೆಲೆ ಇಲ್ಲದೆ ಇರುವುದು ಹೀಗೆ ನೂರೆಂಟು ಸಮಸ್ಯೆಗಳಿಂದ ಮಲೆನಾಡು ಬಾದಿಸುತ್ತಿದೆ. ದೇಶಕ್ಕೆ ಸ್ವಾತಂತ್ರ ಬಂದು 60 ವರ್ಷಗಳಿಂದ ಯಾವ ರಾಜಕೀಯ ಪಕ್ಷವು ಜನರ ಸಮಸ್ಯೆಗಳನ್ನು ಬಗೆಹರಿಸಲು ಹೋಗಲೇ ಇಲ್ಲ. ಇಂತಹ ಸಮಯದಲ್ಲಿ "ನಿಮ್ಮೊಂದಿಗೆ ನಾವಿದ್ದೇವೆ" ಎಂದು ಆಶಾಕಿರಣವಾಗಿ ಬಂದತವರು ನಕ್ಸಲೀಯರು.

ಮೊದಲು ನಕ್ಸಲೀಯರು ಆಯುದ ರಹಿತವಾಗಿ ಹೋರಾಟಗಳನ್ನು ಮಾಡುತ್ತಿದ್ದರು. ರಾಷ್ಟ್ರೀಯ ಉದ್ಯಾನವನ, ಜೈವಿಕ ಉದ್ಯಾನವನ, ರಕ್ಷಿತ ಅರಣ್ಯಗಳು, ವನ್ಯದಾಮಗಳು ಬೃಹತ್ ಡ್ಯಾಮ್‌ಗಳು, ಚೆಕ್‌ಡ್ಯಾಮ್ ಯೋಜನೆಗಳು, ನಂದಿಕೂರು ಉಷ್ಣ ವಿದ್ಯುತ್ ಯೋಜನೆ, ಗುಂಡ್ಯಾ ಖಾಸಗಿ ಜಲ ವಿದ್ಯುತ್ ಯೋಜನೆ ವಿಷೇಶ ಆರ್ಥಿಕ ವಲಯಗಳನ್ನು ರದ್ದು ಮಾಡಬೇಕು. ಕೈಗಾ, ಬೆಡ್ತಿ ಮತ್ತು ಸೀಬರ್ಡ್ ಯೋಜನೆಗಳಲ್ಲಿ ಮತ್ತು ತತ್ಕೋಳ, ಭದ್ರ ಇತ್ಯಾದಿ ಪ್ರದೇಶಗಳಲ್ಲಿ ಒಕ್ಕಳಲ್ಪಟ್ಟ ಜನರಿಗೆ ನ್ಯಾಯಯುತವಾಗಿ ಪುನರವಸತಿ ಕಲ್ಪಿಸಿ ಎಂದು ಹೋರಾಟ ಮಾಡುತ್ತಿರುವ ಆದಿವಾಸಿಗಳನ್ನು ಪ್ರಭುತ್ವವು ಅವರ ಸಮಸ್ಯೆಗಳನ್ನು ಪರಿಹರಿಸುವ ಬದಲು ಅವರ ಮೇಲೆ ಅರಣ್ಯ

ಇಲಾಖೆ, ಪೊಲೀಸ್ ಇಲಾಖೆ, ಭೂಮಾಲೀಕರಿಂದ ಕಿರುಕುಳ ನೀಡಲು ಪ್ರಾರಂಭಿಸಿತು. ಸುಳ್ಳು ಕೇಸು ಹಾಕಿ ಕೋರ್ಟ್ ಅಲೆಯುವಂತೆ ಮಾಡಿದರು. ಚಿತ್ರಹಿಂಸೆ ನೀಡಿದರು. ಆದಿವಾಸಿಗಳ ಮೇಲೆ ನಡೆಯುತ್ತಿರುವ ಹಿಂಸೆ ಪ್ರತಿಕಾರವಾಗಿ ಸೇಡು ತೀರಿಸಿಕೊಳ್ಳಲು ಇಂದು ಮಲೆನಾಡಿನ ಜನತೆ ನಿಶಸ್ತ್ರ ಹೋರಾಟವನ್ನು ಪ್ರಾರಂಭಿಸಿದ್ದಾರೆ. ಇದಕ್ಕೆಲ್ಲ ಆಳುವ ವ್ಯವಸ್ಥೆಯೇ ಜವಾಬ್ದಾರಿ ಆರ್ಥಿಕ ಸಮಸ್ಯೆಗಳ ಮೇಲಿನ ಚಳುವಳಿಯು ಪ್ರಭುತ್ವದ ವಿರುದ್ಧ ನಿಶಸ್ತ್ರ ಬಂಡಾಯವಾಗಿ ಮಾರ್ಪಟ್ಟಿದೆ.

ನಕ್ಸಲೀಯ ಚಳುವಳಿಯಲ್ಲಿ ಆರ್ಥಿಕವಾಗಿ ಶೋಷಣೆಗೆ ಒಳಪಟ್ಟವರು. ಸಾಮಾಜಿಕವಾಗಿ ದಮನಕ್ಕೆ ಒಳಗಾದವರು ದಲಿತರು ಭೂಹೀನ ರೈತರು ಮಧ್ಯಮ ವರ್ಗದವರು ಜಾಸ್ತಿ ಇದ್ದಾರೆ. ಇವರು ಪ್ರಭುತ್ವ ಮತ್ತು ಭೂಮಾಲಿಕ ದಮನದಿಂದ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿಗಳ ದಲ್ಲಾಳಿ ಅಧಿಕಾರಿರಾದ ಬಂಡವಾಳ ಶಾಹಿಗಳಿಂದ ಊಳಿಗಮಾನ್ಯತೆ ದೊರೆಗಳಿಂದ ನಡೆಯುತ್ತಿರುವ ದಮನದಿಂದ ಜನರನ್ನು ವಿಮೋಚನೆ ಮಾಡಿ ಹಾಗೂ ಜನರ ಮನಸ್ಸಿನಲ್ಲಿರುವ ಹಿಂದುಳಿದ ಚಿಂತನೆ ಸ್ವಾರ್ಥ ಕುಲಾಭಿಮಾನ ಪ್ರಾದೇಶಿಕ ಜಾತಿವಾದ ಧಾರ್ಮಿಕ ಮೌಢ್ಯಗಳನ್ನು ಹೊಗಲಾಡಿಸಲು ಪ್ರಯತ್ನ ಪಡುತ್ತಾರ ಅನಿಸುತ್ತದೆ. ನಕ್ಸಲೀಯರ ಸಮಸ್ಯೆ ಸಾಮಾಜಿಕ-ಆರ್ಥಿಕ ಸಮಸ್ಯೆ ಹೊರತು ಕಾನೂನು ಸಮಸ್ಯೆಯಲ್ಲ. ಅವರನ್ನು ಕೊಲ್ಲುವುದರ ಮೂಲಕ ಸಮಸ್ಯೆ ಬಗೆಹರಿಯುವುದಿಲ್ಲ. ಅವರು ಎತ್ತಿರುವ ಸಮಸ್ಯೆಗಳನ್ನು ಪರಿಹರಿಸಬೇಕು. ಅವರ ಮೇಲಿನ ಪ್ರತಿ ಗಾಯವು ಗುಂಡಿನಕಾಳಗವು ನೋವನ್ನು ಉಂಟು ಮಾಡುತ್ತದೆ. ಈ ನೋವಿನಿಂದ ಉನ್ನತ ತ್ಯಾಗದ ಶಕ್ತಿ ಹುಟ್ಟುತ್ತದೆ ಹಾಗೂ ಶತೃವಿನ ಬಗ್ಗೆಗೆ ದ್ವೇಷ ಇನ್ನಷ್ಟು ತೀವ್ರವಾಗುತ್ತದೆಂದು ನಕ್ಸಲೀಯರಿಗೆ ನಂಬಿಕೆ ಇದೆ.

ಮಲೆನಾಡಿನಲ್ಲಿ ಬ್ರಾಹ್ಮಣ ಬಂಟ, ಒಕ್ಕಲಿಗ ಜೈನ ಸಮುದಾಯದವರು ಭೂಮಾಲಿಕಾಗಿದ್ದಾರೆ. ದಲಿತರು ಮತ್ತು ಆದಿವಾಸಿಗಳು ಭೂ ಹೀನ ಮತ್ತು ಬಡ ರೈತರಾಗಿದ್ದಾರೆ. ದಲಿತರು ಉಳುವ ಶೆ.10 ರಷ್ಟು ಭೂಮಿಗೆ ಹಕ್ಕು ಪತ್ರಗಳಿಲ್ಲ. ಶೇ.32ರಷ್ಟು ಭೂಮಿಗೆ ಪಟ್ಟಾ ಇಲ್ಲ. ಮತ್ತು ಶೇ.30 ರಷ್ಟುಯಿರುವ ಭೂಹೀನ ಮತ್ತು ಬಡ ರೈತರು ಕೇವಲ ಶೇ.5ರಷ್ಟು ಭೂಮಿಯ ಒಡೆತನ ಹೊಂದಿದ್ದಾರೆ. ಶೇ.5ರಷ್ಟು ಇರುವ ಭೂಮಾಲಿಕರು ಶೇ.35ರಷ್ಟು ಭೂಮಿಯನ್ನು ಹೊಂದಿದ್ದಾರೆ. 50ರಷ್ಟುಯಿರುವ ಮಧ್ಯಮ ರೈತಾಪಿವರ್ಗ ಶೇ. 34ರಷ್ಟು ಭೂಮಿಯನ್ನು ಹೊಂದಿದ್ದಾರೆ. ಶೇ. 15 ರಷ್ಟುಯಿರುವ ಶ್ರೀಮಂತ ರೈತರು ಶೇ. 19 ರಷ್ಟು ಭೂಮಿಯನ್ನು ಹೊಂದಿದ್ದಾರೆ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದರೆ ಒಂದಡೆ ಭೂಮಾಲಿಕರ ಕೈಯಲ್ಲಿ ಭೂಮಿ ಕೇಂದ್ರಿಕರಣಗೊಂಡಿದ್ದರೆ ಇನ್ನೊಂದು ಕಡೆ ಬಡವರಿಗೆ ಉಳಲು ತುಂಡು ಭೂಮಿ ಇಲ್ಲ. 1974ರ ಭೂಸುಧಾರಣೆಕಾಯಿದೆ ಭೂಮಾಲಿಕರ ಜೊತೆಗೆ ಕೈ ಜೋಡಿಸಿರುವುದರಿಂದ ಭೂಮಾಲಿಕರ ಮನೆಗಳಲ್ಲಿ ಜೀತಗಾರರಾಗಿದ್ದ ದಲಿತರಿಗೆ ಯಾವುದೇ ಭೂಮಿಯನ್ನು ಕೊಡಲಿಲ್ಲ. ಭೂ ಸುಧಾರಣೆ ಕಾಯಿದೆಯು ಉಳುವವನಿಗೆ ಭೂಮಿ ಕೊಟ್ಟಿತು ಎಂಬ ಘೋಷಣೆ ಅವಾಸ್ತವಿಕವಾದದ್ದು.

ಮಲೆನಾಡಿನಲ್ಲಿ ಭತ್ತ, ಅಡಿಕೆ, ಎಲಕ್ಕಿ, ಗೋಡಂಬಿ, ಕಾಳು ಮೆಣಸು, ಬಾಳೆ, ವೆನಿಲ್ಲಾ, ತೆಂಗಿನ ಬೆಳೆ, ಇವೆಲ್ಲವುಗಳನ್ನು ಅತಿ ಹೆಚ್ಚಾಗಿ ಬೆಳೆಯುತ್ತಾರೆ. ಈ ಮೇಲಿನ ಬೆಳೆಗಳಿಗೆ WTO ಜಾಗತೀಕರಣ ಪ್ರಭಾವದಿಂದ ನ್ಯಾಯಯುತವಾದ ಬೆಲೆಗಳು ಸಿಗುತ್ತಿಲ್ಲ. ಇದರ ಪ್ರಭಾವ ಭೂಹೀನ ಬಡ ರೈತರ ಮೇಲೆ ದುಷ್ಪಾರಿಣಾಮ ಬೀರಿದೆ 1999 ರಲ್ಲಿ ಗಂಡಸರಿಗೆ ರೂ.75-80,ಗಳು ಕೂಲಿ ಕೊಡುತ್ತಿದ್ದರೆ 2001, ರಲ್ಲಿ ಅದು ರೂ.50-60ಗಳಿಗೆ ಇಳಿದಿದೆ. ಹಾಗೂ 1999 ರಲ್ಲಿ ಹೆಂಗಸರಿಗೆ ರೂ.60-ಗಳು ಕೊಡುತ್ತಿದ್ದರೆ ಅದು 2001ರಲ್ಲಿ ರೂ.35-40 ಗಳಿಗೆ ಕೂಲಿದರ ಇಳಿ ದಿದೆ. ಮಲೆನಾಡಿನಲ್ಲಿ ಅರಣ್ಯ ಕಿರು ಉತ್ಪನ್ನಗಳ ಸಂಗ್ರ ಹಣೆ, ಆದಿವಾಸಿಗಳು, ಭೂಹೀನ ರೈತರ, ಬಡರೈತರ, ಮಧ್ಯಮ ರೈತರ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಆದರೆ ಭೂಮಾಲಿಕರು ಜನರಿಂದ ಕಿರು ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಖರಿದಿಸಿ ಹೊರಗೆ ಸಾಗಿಸಿ ಹೆಚ್ಚಿನ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಆಳುವ ವರ್ಗಗಳು ಈ ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಮಲೆ ನಾಡು-ಕರಾವಳಿ ಅಭಿವೃದ್ಧಿ ಮಾಡುವ ಬದಲು ಅಭಿವೃದ್ಧಿ ಹೆಸರಲ್ಲಿ ಇಲ್ಲಿರುವ ಖನಿಜ, ನೀರು, ಸಸ್ಯಕಾಡುಗಳನ್ನು ಲೂಟಿ ಹೊಡೆಯುವ ಸಾಮ್ರಾಜ್ಯಶಾಹಿಯ ಯೋಜನೆಗಳನ್ನು ಜಾರಿಗೆ ತಂದು ಮಲೆನಾಡು-ಕರಾವಳಿ ಜನರ ಬದುಕನ್ನು ನಾಶ ಮಾಡುತ್ತಿದ್ದಾರೆ.

'ನಿನ್ನ ಗುಲಾಮ ನಾನು' ಎಂದು ಬದುಕುತ್ತಿದ್ದ ಆದಿವಾಸಿಗಳ ದಲಿತರ ಶೋಷಿತರ ಬದುಕಿನಲ್ಲಿ ಸ್ವಾಭಿಮಾನ ಮೂಡಿಸುತ್ತ ಹಾಗೂ ಆದಿವಾಸಿಗಳ, ದಲಿತರ ಬದುಕನ್ನು ಸ್ಥಿರಗೊಳಿಸುವ ಆಶ್ವಾಸನೆ ತುಂಬಿಸುತ್ತ ನಾಳೆಯ ಬಗ್ಗೆ ಕನಸು ಮೂಡಿಸುತ್ತ ಆದಿವಾಸಿಗಳ ಸಮಸ್ಯೆಯನ್ನು ಮತ್ತು ಜಾಗತೀಕರಣವನ್ನು ರಾಷ್ಟ್ರೀಯ ಪ್ರಧಾನ ಧಾರೆಯ ಸಮಾಜ-ಸಮತವಾದ, ಬಡವರ ರಾಜ್ಯ ತರಬೇಕೆಂದು ಮತ್ತು ಸಮಾನತೆಗಾಗಿ, ಭೂಮಿಗಾಗಿ, ಸಂವಿಧಾನ ಬದ್ಧ ಹಕ್ಕುಗಾಗಿ, ಹೋರಾಡುತ್ತಿರುವ ನಕ್ಸಲೀಯರನ್ನು ಏಕೆ ಕೊಲೆ ಮಾಡುತ್ತಿದ್ದಾರೆ, ಆಳುವ ವರ್ಗಗಳು...? ಮತ್ತು ನಕ್ಸಲೀಯ ಚಳುವಳಿಯನ್ನು ಬೆಂಬಲಿಸುತ್ತಿರುವ ಪ್ರಗತಿಪರ ಸಂಘಟನೆಗಳ ಬುದ್ಧಿ ಜೀವಿಗಳನ್ನು ಏಕೆ ಜೈಲಿಗೆ ಹಾಕುತ್ತಿದ್ದೀರಿ...? ಇಂದು ಆದಿವಾಸಿಗಳ ಸಮಸ್ಯೆಗಳನ್ನು ಹೊರಪ್ರಪಂಚಕ್ಕೆ ಗೊತ್ತಾಗಿದ್ದು ನಕ್ಸಲೀಯರಿಂದಲೆ ವಿನಾಃ ಯಾವ ರಾಜಕಾರಣಿಗಳಿಂದಲ್ಲ, ಶೋಷಿತರಲ್ಲಿ ಸ್ವಾಭಿಮಾನ ಮೂಡಿಸಿ ಅವರಿಗೆ ರಾಜಕೀಯ ಪ್ರಜ್ಞೆ ಮೂಡಿಸಿ ಮಾನವ ಹಕ್ಕು ಉಲ್ಲಂಗನೆ ವಿರುದ್ಧ ಮಾತನಾಡಿದರೆ ನಕ್ಸಲೀಯರ ಬೆಂಬಲಿಗರೆ...? ಒಟ್ಟಾರೆ ಕ್ರಾಂತಿಕಾರಿಗಳಿಗೆ ಗುಂಡೇಟು, ಕಳ್ಳ ಕದಿಮರಿಗೆ, ಸಂಘಪರಿವಾರದ ಭಯೋತ್ಪಾದಕರಿಗೆ, ಕೋಮುವಾದಿಗಳಿಗೆ ಪ್ರಭುತ್ವದ ರಕ್ಷಣೆ, ಇದು ದೇಶದಲ್ಲಿರುವ ವಾಸ್ತವ ಪರಿಸ್ಥಿತಿ.

ಎಂಭತ್ತರ ದಶಕದಿಂದ ಹವಾಲ, ಸೆಂಟ್‌ಕಿಟ್ಸ್, ಯೂರಿಯ, ತಾನ್ಸಿ, Jmm, ಮೂವು, ಶವಪೆಟ್ಟಿಗೆ ಭೂಪರ್ಸ್, ಮ್ಯಾಚ್ ಫಿಕ್ಸಿಂಗ್, ಛಾಪಕಾಗದ ಇತ್ಯಾದಿ ಹಗರಣಗಳ ಫೈಲುಗಳು ನ್ಯಾಯಲಯದಲ್ಲಿ ವಿಚಾರಣೆಗಾಗಿ ಕಾದು ದೂಳು ತಿನ್ನುತ್ತಿವೆ. ನ್ಯಾಯಂಗ ಇಂದು ಶಾಸಕಾಂಗ ಮತ್ತು ಕಾರ್ಯಾಂಗದ ಕೈಗೊಂಬೆಯಾಗಿದೆ. ಈ ಮೇಲಿನ ಹಗರಣಗಳಲ್ಲಿ ಬಾಗಿಯಾದ ಎಲ್ಲಾ ರಾಜಕಾರಣಿಗಳು ರಾಜರೋಷವಾಗಿ ದೇಶವನ್ನು ಆಳುತ್ತಿದ್ದಾರೆ. ಹಾಗೂ ಮಾಲೆಗಾಂವ್ ನಾಂದೇಡ್, ಅಜ್ಮೀರ್, ಹೈದರಾಬಾದಿನ ಮೊಕ್ಕ ಮಸಿದಿ, ಇಂಡಿಯ ಪಾಕಿಸ್ತಾನದ ಸೇತುವೆಯಾದ ಸಂಜೋತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಬಾಂಬ್‌ಗಳನ್ನು ಸ್ಫೋಟಿಸಿ ಅಮಾಯಕ ಜನರ ಸಾವಿಗೆ ಕಾರಣರಾದ ಸಂಘಪರಿವಾರದ ಭಯೋತ್ಪಾದಕರು ಗೋದ್ರಾಹತ್ಯಾಕಾಂಡದಲ್ಲಿ ಬಾಗಿಯಾದ, ಬಾಬ್ರಿ ಮಸಿದಿಯನ್ನು ಧ್ವಂಸ ಮಾಡಿದ ಕೋಮುವಾದಿಗಳು ರಾಜರೋಷವಾಗಿ ತಿರುಗಾಡುತ್ತಿದ್ದಾರೆ. ಆದರೆ "ನಿನ್ನ ಗುಲಾಮ ನಾನು" ಎಂದು ಬದುಕುತ್ತಿದ್ದ ಆದಿವಾಸಿಗಳ ದಲಿತರ ಶೋಷಿತರ ಬದುಕಿನಲ್ಲಿ ಸ್ವಾಭಿಮಾನ ಮೂಡಿಸುತ್ತ ಹಾಗೂ ಆದಿವಾಸಿಗಳ, ದಲಿತರ ಬದುಕನ್ನು ಸ್ಥಿರಗೊಳಿಸುವ ಆಶ್ವಾಸನೆ ತುಂಬಿಸುತ್ತ ಒಳ್ಳೆಯ ನಾಳೆಯ ಬಗ್ಗೆ ಕನಸು ಮೂಡಿಸುತ್ತ ಆದಿವಾಸಿಗಳ ಸಮಸ್ಯೆಯನ್ನು ಮತ್ತು ಜಾಗತೀಕರಣವನ್ನು ರಾಷ್ಟ್ರೀಯ ಪ್ರಧಾನೆದಾರೆಯ ಅಜೆಂಡಾಗೆ ತರುತ್ತ ಸಮ-ಸಮಾಜ, ಸಮತವಾದ, ಬಡವರ ರಾಜ್ಯ ತರಬೇಕೆಂದು ಮತ್ತು ಸಮಾನತೆಗಾಗಿ, ಭೂಮಿಗಾಗಿ, ಸಂವಿಧಾನ ಬದ್ಧ ಹಕ್ಕುಗಾಗಿ, ಹೋರಾಡುತ್ತಿರುವ ನಕ್ಸಲೀಯರನ್ನು ಏಕೆ ಕೊಲೆ ಮಾಡುತ್ತಿದ್ದಾರೆ ಆಳುವವರ್ಗಗಳು...? ಮತ್ತು ನಕ್ಸಲೀಯ ಚಳುವಳಿಯನ್ನು ಬೆಂಬಲಿಸುತ್ತಿರುವ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರನ್ನು ಮತ್ತು ಬುದ್ಧಿಜೀವಿಗಳನ್ನು ಏಕೆ ಜೈಲಿಗೆ ಹಾಕುತ್ತಿದ್ದೀರಿ...? ಇಂದು ಆದಿವಾಸಿಗಳ ಸಮಸ್ಯೆಗಳನ್ನು ಹೊರಪ್ರಪಂಚಕ್ಕೆ ಗೊತ್ತಾಗಿದ್ದು ನಕ್ಸಲೀಯರಿಂದಲೆ ಹೊರೆತು ಯಾವ ರಾಜಕಾರಣಿಗಳಿಂದಲ್ಲ, ಆದಿವಾಸಿಗಳಲ್ಲಿ ಮತ್ತು ಶೋಷಿತರಲ್ಲಿ ಸಂಘಟನೆ, ಒಗಟ್ಟು ಸ್ವಾಭಿಮಾನ ಮೂಡಿಸಿ ಅವರಿಗೆ ರಾಜಕೀಯ ಪ್ರಜ್ಞೆ ಮೂಡಿಸಿ ರಸ್ತೆ, ವಿದ್ಯುತ್, ಸಾರಿಗೆ, ಭೂಮಿ, ಅನ್ನ, ನೀರು ಕೇಳಿದರೆ ಅಪರಾದವೆ....? ಮಾನವ ಹಕ್ಕು ಉಲ್ಲಂಗನೆ ವಿರುದ್ಧ ಮಾತನಾಡಿದರೆ ನಕ್ಸಲೀಯರ ಬೆಂಬಲಿಗರೆ...? ಒಟ್ಟಾರೆ ಕ್ರಾಂತಿಕಾರಿಗಳಿಗೆ ಗೊಂಡೇಟು ಕಳ್ಳ ಕದಿಮರಿಗೆ, ಸಂಘಪರಿವಾರದ ಭಯೋತ್ಪಾದಕರಿಗೆ ಕೋಮುವಾದಿಗಳಿಗೆ ಪ್ರಭುತ್ವದ ರಕ್ಷಣೆ, ಇದು ದೇಶದಲ್ಲಿರುವ ವಾಸ್ತವ ಪರಿಸ್ಥಿತಿ.

ನಮ್ಮ ದೇಶದಲ್ಲಿ ಜಾಸ್ತಿ ಶೋಷಿತರಾದವರು ರೈತರು ಇಂದು ಅವರ ಹೊಟ್ಟೆಗೆ ಊಟವಿಲ್ಲ. ಕುಡಿಯಲು ನೀರಿಲ್ಲದೆ ದಿವಾಳಿಯಾಗಿದ್ದಾರೆ. ಭಾರತದ ಹಳ್ಳಿಗಳಲ್ಲಿ

ರೈತರ ಬದುಕು ದಿವಾಳಿಯಾಗಿ ಹೋಗುತ್ತಿದೆ. ದೇಶದಲ್ಲಿ ಭೂಮಾಲೀಕರು, ಬಡ್ಡಿಕೋರರು, ಲೇವಾದೇವಿಗಾರರ ಸರಕಾರದ ಗೂಂಡಾಗಳಿಂದ ರೈತರು ತತ್ತರಿಸಿದ್ದಾರೆ. ರೈತರು ಬೆಳೆದ ಬೆಳೆಗಳಿಗೆ ನ್ಯಾಯಯುತವಾದ ಬೆಲೆ ಇಲ್ಲ. ಕಾರ್ಖಾನೆಗಳು ಮುಚ್ಚಿವೆ. ಇದರಿಂದ ಕಾರ್ಮಿಕರು, ರೈತರು ಬೀದಿ ಪಾಲಾಗಿದ್ದಾರೆ. ಇವೆಲ್ಲವು ಪ್ರಭುತ್ವ ಮಾಡುತ್ತಿರುವ ಕಗ್ಗೊಲೆಗಳು. ಒಕ್ಕಲಬ್ಬಿಸುವಿಕೆ SEZವಿರುದ್ಧ, ಕಾರಿಡಾರು ವಿರುದ್ಧ, ಭೂಮಾಲಿಕರ ಬಡ್ಡಿಕೋರರ, ಲೇವಾದೆವಿಗಾರರ, ಸರಕಾರಗಳ, ಕಂಪನಿಗಳ, ಅರಣ್ಯ ಇಲಾಖೆ, ಪೋಲಿಸ್ ದೌರ್ಜನ್ಯ ವಿರುದ್ಧ ಜನರು ಪ್ರತಿಭಟನೆ ಮಾಡಿದರೆ ಪ್ರಭುತ್ವವು ಜನರ ಸಮಸ್ಯೆಗಳನ್ನು ಪರಿಹರಿಸುವ ಬದಲು, ಹೋರಾಡುತ್ತಿರುವ ವ್ಯಕ್ತಿಗಳನ್ನು ದಮನಮಾಡುತ್ತ, ಸುಳ್ಳು ಕೇಸ್, ಕೊಲೆ ಬೆದರಿಕೆ, ಕಿರುಕುಳ, ಚಿತ್ರ ಹಿಂಸೆ ಬಂಧನ, ಎನ್‌ಕೌಂಟರ್‌ಗಳನ್ನು ಪ್ರಭುತ್ವ ಮಾಡುತ್ತಿದೆ. ಈ ಅವಕಾಶಗಳನ್ನು ಆಳುವ ವರ್ಗಗಳು ಕೊಡದೇಯಿದ್ದಾಗ ನಕ್ಸಲೀ ಯರು ತಮ್ಮ ಹೋರಾಟಕ್ಕೆ ಸಶಸ್ತ್ರ ರೂಪ ನಿಡಿದ್ದು ಎಂದೆನಿಸುತ್ತಿದೆ.

ಕಳೆದ 62 ವರ್ಷಗಳಲ್ಲಿ ಬಡವರು ಇನ್ನಷ್ಟು ಬಡವರಾಗಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿ ಕೂಲಿ ಕಾರ್ಮಿಕರು ಹಸಿವಿನಿಂದ ಬಳಲಿ ಬೀದಿಗಳಲ್ಲಿ ಸಾಯುವಂತಾಗಿ, ಸಣ್ಣ ರೈತರು ಎಲ್ಲವನ್ನು ಕಳೆದುಕೊಂಡು ಭಿಕಾರಿಗಳಾಗಿ. ಭೂಮಾಲೀಕರು ಮತ್ತಷ್ಟು ಭೂಮಾಲಿಕಾರಾಗಿ, ದರ್ಪಿಷ್ಟರಾಗಿ ಬೆಳೆದಿದ್ದಾರೆ. ಪರೋಕ್ಷವಾಗಿ ಲೂಟಿ ಹೊಡೆಯುತ್ತಿದ್ದ ಅಮೇರಿಕಾ ಮುಂತಾದ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಇನ್ನಷ್ಟು ಮಿಲಿಟರಿಕರಣಗೊಂಡು ಇಂದು ಗರ್ಜಿಸುತ್ತ ದೇಶವನ್ನು ಲೂಟಿ ಹೊಡೆಯುತ್ತಿವೆ. ಭಾರತದೇಶದ ಜನತೆಯನ್ನು ಸಂಪನ್ಮೂಲಗಳನ್ನೂ ಅಮೇರಿಕಾ ಸಾಮ್ರಾಜ್ಯಶಾಹಿ ಬಹುರಾಷ್ಟ್ರೀಯ ಕಂಪನಿಗಳಿಗೆ ಆಳುವವರು ಒತ್ತೆಯಿಟ್ಟಿದ್ದಾರೆ. ಒಂದು ಈಸ್ಟ್ ಇಂಡಿಯಾ ಕಂಪೆನಿಯ ಬದಲಾಗಿ ಇಂದು 5000 ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಸಂಪನ್ಮೂಲ ಶ್ರಮಗಳನ್ನು ಲೂಟಿಹೊಡೆಯುತ್ತಿವೆ ಸ್ಥಳಿಯ ರಾಜಕಾರಣಿಗಳು ಪ್ರಜಾಪ್ರಭುತ್ವದ ಮುಸುಕಿನಲ್ಲೇ ಸಾಮ್ರಾಜ್ಯಶಾಹಿಗಳ ಸೇವೆಗೈಯುತ್ತಿದ್ದಾರೆ.

1990ರ ನಂತರ ಮುಕ್ತ ಆರ್ಥಿಕ ನೆಲೆಗಳನ್ನು ಹೇರುವ ಮೂಲಕ ಸಾಮ್ರಾಜ್ಯಶಾಹಿಗಳು ತಮ್ಮ ಹಿಡಿತವನ್ನು ಸ್ಥಾಪಿಸಿದರು. ಭಾರತ ವಸಾಹತುವಾಗಿ, ಅರೆವಸಾಹತುವಾಗಿ ನಂತರ ಈಗ ನವವಸಾಹತುವಾಗಿ ಮುಂದುವರೆಯುತ್ತಿದೆ. ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಭಾರತದ ಜನತೆಯನ್ನು ನಿರಂತರಾವಾಗಿ ಶೋಷಣೆ ಮಾಡುತ್ತಿದ್ದಾರೆ. ಶೋಷಣೆ, ಸಂಪನ್ಮೂಲಗಳ ಲೂಟಿ ವಿರುದ್ಧ ಜನರು ದನಿಯತ್ತುತ್ತಿದ್ದಾರೆ. ಜನರ ದನಿಯನ್ನು, ನಕ್ಸಲೀಯರ, ಕಾಶ್ಮೀರ, ಈಶನ್ಯಭಾರತದ ಇತರ ಜನಪರ ಹೋರಾಟಗಳ ಪ್ರತಿರೋಧಗಳನ್ನು ಮಿಲಿಟರಿ ಪೋಲಿಸ್‌ರ ಮೂಲಕ ದಮನ ಮಾಡಲು ಅಮೇರಿಕಾ ನೇತೃತ್ವದ ಸಾಮ್ರಾಜ್ಯ ಶಾಹಿ ರಾಷ್ಟ್ರಗಳು ಭಾರತದಂತ ರಾಷ್ಟ್ರಗಳಿಗೆ ನಿರ್ದೇಶಿಸುತ್ತಿವೆ ಅದುದರಿಂದ ದೇಶದಲ್ಲಿ ವಾರ್ಷಿಕ ಬಜೆಟ್‌ನಲ್ಲಿ ವರ್ಷದಿಂದ ವರ್ಷಕ್ಕೆ ರಕ್ಷಣೆಗೆ ಹೆಚ್ಚು ಹಣ ಮೀಸಲಿರುಸುತ್ತಾರೆ. ಇದರಿಂದ ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಪೋಲೀಸ್ ಮಿಲಿಟರಿ ನೇಮಕ ಹೆಚ್ಚಾಗುತ್ತಿದೆ. ಇಂದು ದೇಶದಲ್ಲಿ ಪ್ರಭುತ್ವ ಮತ್ತು ಜನತೆಯ ನಡುವಿನ ಅಂತರ ಜಾಸ್ತಿಯಾಗುತ್ತಿದೆ. ಇಂದಿನ ಪ್ರಭುತ್ವ ಆಳುವವರು ಪರವಾಗಿ ಇದೆ ಜನರ ಪರವಾಗಿಲ್ಲ. ಜನರು ತಮ್ಮ ಅಸ್ತಿತ್ವಕ್ಕಾಗಿ ಎಲ್ಲೋ ಹುಟ್ಟಿ ಬೆಳೆದು ಬಂದು ತಮಗಾಗಿ ಪ್ರಾಣವನ್ನೇ ಕೊಡುತ್ತಿರುವ ನಕ್ಸಲೀಯರನ್ನು ಬೆಂಬಲಿಸುತ್ತಿದ್ದಾರೆ. ಆದಿವಾಸಿಗಳು ನಕ್ಸಲೀಯರನ್ನು ತಮ್ಮ ಮಡಿಲಲ್ಲಿಟ್ಟುಕೊಂಡು ಇಂದು ಕಾಪಾಡುತ್ತಿದ್ದಾರೆ. ಇಂದು ಮಲೆನಾಡಿನಲ್ಲಿ ಕೆಂಪು ಬಣ್ಣದ ಹೆಂಚು ಗುಡಿಸಲು ಮೇಲೆ ಸುತ್ತಿಗೆ ಕುಡುಗೋಲಿನ ಕೆಂಪು ಧ್ವಜ ಹಾರಲು ಬೆನ್ನುಗಂಟಿದ ಹೊಟ್ಟೆಯೇ ಕಾರಣ ಎನ್ನುವುದು ಸ್ಪಷ್ಟವಾಗಿ ಹೊಳೆಯುವ ಸತ್ಯಾ.

ಭೀಕರ ಅನ್ಯಾಯ ಮತ್ತು ದಬ್ಬಾಳಿಕೆ, ದಮನ, ದೌರ್ಜನ್ಯ ಇವೇ ಶೋಷಣೆಯ ಮೂಲ ಇಂತಹ ಶೋಷಣೆ, ದಬ್ಬಾಳಿಕೆ, ಅನ್ಯಾಯಗಳು, ದೌರ್ಜನ್ಯಗಳು, ದಹನಗಳು ಅಸಮಾನತೆ ದೂರವಾಗುವವರೆಗೆ, ಶಾಂತತೆಯ ಆಸೆಯು ವಿಫಲ, ನಿರಾಸೆ ಮತ್ತು ವಿಫಲತೆ ಮೂಲಕ ಹಿಂಸಾಕೃತ್ಯಗಳಲ್ಲಿ ಜನರು ತೊಡಗಿದರೆ ಅದು ಯಾವ ಆಶ್ಚರ್ಯ...? ಜನರಿಗಾದ ಹಿಂಸೆ ಅನ್ಯಾಯ, ಮೋಸ, ದೌರ್ಜನ್ಯಗಳನ್ನು ತೊಳೆಯದಕ್ಕಾಗಿ ಜನರು ಎಷ್ಟೋ ರಕ್ತಹರಿಸ್ತಾರೆ. ಅದು ಅವರ(ಜನರ) ರಕ್ತ, ಅವರ ನಾಳಗಳಿಂದಲೇ ಹೀರಲ್ಪಟ್ಟ ರಕ್ತ. ಅದ್ದರಿಂದ ಜನರು ತಮಗೆ ಸರಿಕಂಡದನ್ನು ಮಾಡುವುದಕ್ಕೆ ಮತ್ತು ಹಿಂಸೆಯಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದ್ಧಕೆ ಹಕ್ಕುಯಿದೆ.

ಈ ಭೂಮಿಯ ಮೇಲೆ ಎಲ್ಲಿ ಅನ್ಯಾಯ ಮೋಸ, ದೌರ್ಜನ್ಯ, ಅಸಮಾನತೆ ಶೋಷಣೆಯಿದೆಯೋ ಅಲ್ಲಿ ಒಂದಲ್ಲ ಒಂದು ದಿನ ನಕ್ಸಲೀಯರು ಹುಟ್ಟೆ ಹುಟ್ಟುತ್ತಾರೆ; ನಕ್ಸಲೀಯರ ಹೋರಾಟ ಹಿಂಸಾತ್ಮಾಕವಾಗುವದಕ್ಕೆ ಪ್ರಭುತ್ವವೇ ಕಾರಣ, ಏಕೆಂದರೆ ನ್ಯಾಯ ಬದ್ಧವಾದ, ಪ್ರಜಾಸತ್ತಾತ್ಮಕವಾದ ಹೋರಾಗಳಿಗೆ ತೆಗೆದುಕೊಂಡ ಹಿಂಸಾತ್ಮಕ ಕ್ರಮಗಳಿಂದ, ಹಸಿದ ಮಗುವಿಗೆ ತನ್ನ ತಾಯಿ ಮೊಲೆಯನ್ನು ಕಚ್ಚುತ್ತದೆ ಇದು ಹಿಂಸೆಯೇ.....?

ಆತ್ಮ ರಕ್ಷಣೆಗಾಗಿ ಎದುರಾಳಿಯ ಕೈತಡೆಯುವ ಅಧಿಕಾರ ಪ್ರತಿಯೊಬ್ಬ ವ್ಯಕ್ತಿಗೆ ಇದೆ. ಹಾಗಾಗಿ ಪಾರ್ವತಿ, ಸಾಕೇತ್ ರಾಜನ್, ಮನೋಹರ್, ತಮ್ಮ ಆತ್ಮಾ ರಕ್ಷಣೆಗಾಗಿ ಫೈರ್ ಮಾಡಿದ್ದಾರೆ. ನಂತರ ಈ ಮೇಲಿನ ಹಾಗೂ ಇನ್ನುಳಿದ ನಕ್ಸಲೀಯರನ್ನು ಸೆರಸಿಕ್ಕ ನಂತರ ಆಳುವವರ್ಗಗಳು ಕಪಟ ಎನ್‌ಕೌಂಟರ್‌ನಲ್ಲಿ ಕೊಲೆ ಮಾಡಿದ್ದಾರೆ.

ನಕ್ಸಲರನ್ನು ಹುಡುಕಿ ಹೊರಟ ಪೊಲೀಸ್-ನಾಯಿ

ನಕ್ಸಲೀಯರನ್ನು ಕೊಲೆ ಮಾಡದೇ ಬಂಧಿಸಿದ್ದರೆ. ಅದಕ್ಕೆ ಪ್ರತಿಕಾರವಾಗಿ ನಕ್ಸಲೀಯರು ಕೂಡ ಹಿಂಸಾಕೃತ್ಯಗಳಲ್ಲಿ ತೊಡಗುತ್ತಿರಲಿಲ್ಲ ಅನಿಸುತ್ತದೆ. ಮೊದಲು ಹಿಂಸೆಯನ್ನು ಸೃಷ್ಟಿಸಿದ್ದು ಪ್ರಭುತ್ವವೇ ಹೊರತು ನಕ್ಸಲೀಯರು ಅಲ್ಲ. ಯಾವತ್ತೂ ಹಿಂಸೆ -ಹಿಂಸೆಯನ್ನೆ ಬೆಳೆಸುತ್ತಿದೆ. ಪ್ರತಿಯೊಬ್ಬ ಮನುಷ್ಯ ಒಂದು ತೊಟ್ಟು ರಕ್ತ ಹೀರಿದಕ್ಕೆ ಸೊಳ್ಳೆಗಳನ್ನು ಹಿಸುಕಿಹಾಕುವ ಸಂದರ್ಭದಲ್ಲಿ ತಮ್ಮ ಸಂಗಾತಿಗಳನ್ನು ಪ್ರಭುತ್ವ ನಿರ್ಮೂಲನೆ ಮಾಡಿದರೆ ಅದಕ್ಕೆ ಪ್ರತಿಕಾರ, ದಾಳಿ ಮಾಡದೇ ನಕ್ಸಲೀಯರು ಸುಮ್ಮನೇ ಇರುತ್ತಾರೆಯೇ..? ಆಳುವವರ್ಗಗಳ ಮೇಲೆ ನಡೆಯುವ ಪ್ರತಿಕಾರ ದಾಳಿ ಶೋಷಿತರಲ್ಲಿ ಸಂಘಟನೆ ಸ್ವಾಭಿಮಾನ ಉತ್ಸವ ಹೆಚ್ಚಾಗುತ್ತದೆ ಎಂಬ ನಕ್ಸಲೀಯರ ನಂಬಿಕೆ ಹಾಗಾಗಿ ನಕ್ಸಲೀಯರ ದಾಳಿಗೆ-ಪ್ರತಿ ದಾಳಿ ಮಾಡುತ್ತಾಲೇ ಇರುತ್ತಾರೆ.

ನಕ್ಸಲೀಯರ ಪ್ರಭಾವವಿರುವ ಪ್ರದೇಶಗಳಿಗೆ ಅಭಿವೃದ್ಧಿಗೆಂದು ಪ್ರಭುತ್ವ ಹಣ ಬಿಡುಗಡೆ ಮಾಡಿ ಆ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸದೇ ನಕ್ಸಲೀಯ ಚಳುವಳಿಯನ್ನು ದಮನ ಮಾಡುವುದಕ್ಕೆ ಪೊಲೀಸರಿಗೆ ಅತ್ಯಾಧುನಿಕ ಆಯುಧಗಳು, ಕಾರು, ಜೀಪು, ಪೋಲೀಸ್ ಸ್ಟೇಷನ್ ದುರಸ್ತಿ ನಿರ್ಮಾಣಗಳಿಗೆ ಉಪಯೋಗಿಸಿಸುತ್ತಿದೆ. ಚಿರತೆ ಮಾಂಸಹಾರಿ ಆದರೆ ಚಿರತೆ-ಇನ್ನೊಂದು ಚಿರತೆಯನ್ನು ತಿನ್ನುವುದಿಲ್ಲ. ಆದರೆ ಮನುಷ್ಯ (ಪ್ರಭುತ್ವ)-ಮನುಷ್ಯ(ನಕ್ಸಲೀಯರು)ನನ್ನು ಹುಡುಕಿ-ಹುಡುಕಿ ಸಾಯಿಸುತ್ತಿದ್ದಾನೆ. ಹಾಗದರೆ ಮನುಷ್ಯನಿಗೂ ಮತ್ತು ಪ್ರಾಣಿಗೂ ಇರುವ ವ್ಯತ್ಯಾಸವೇನು...?

ಪ್ರಭುತ್ವ ನಕ್ಸಲೀಯರಿಗೆ ಬಂದೂಕು ತ್ಯಜಿಸಿ ಮಾತುಕತೆಗೆ ಬನ್ನಿ ಅಹಿಂಸಾತ್ಮಕವಾಗಿ ಹೋರಾಟ ಮಾಡಿ ಎಂದು ಹೇಳುತ್ತಿದೆ. ಈ ಹೋರಾಟದಲ್ಲಿ ಜನರ ಸಮಸ್ಯೆ ಮುಖ್ಯ ಹೊರತು ಬಂದೂಕು ಅಲ್ಲ. ಈ ವ್ಯವಸ್ಥೆಯಲ್ಲಿ ಸಮನತೆಗಾಗಿ, ಸಂವಿಧಾನ ಬದ್ದ ಹಕ್ಕುಗಾಗಿ, ಭೂಮಿಗಾಗಿ ನ್ಯಾಯುತವಾಗಿ ರಾಜಿರಹಿತ ಹೋರಾಟ ಮಾಡಿದ ಹೋರಾಟಗಾರರಿಗೆ ಪ್ರಭುತ್ವವು ಹೋರಾಟವು ಅಹಿಂಸಾತ್ಮಕವಾಗಿದ್ದರೆ ಜೈಲು ನಂತರ ಗಲ್ಲು. ಒಂದು ವೇಳೆ ಆ ಹೋರಾಟ ಬಂದೂಕಿನ ಬೆಂಬಲದಿಂದಯಿದ್ದರೆ ಆ ಹೋರಾಟಗಾರರನ್ನು ಕಪಟ ಎನ್‌ಕೌಂಟರ್‌ನಲ್ಲಿ ಹಾಗೂ ಪ್ರಭುತ್ವ ತನ್ನ ವಿವಿಧ ರೀತಿಯ ದಾಳಿಗಳಿಂದ ಕೊಲೆ ಮಾಡುತ್ತಿದೆ. ಏಕೆಂದರೆ ಚರಿತ್ರೆ ಹೇಳುತ್ತಿದೆ ಅಂದು ಕೋಪರ್ ನಿಕಸ್ ಸೂರ್ಯನ ಸುತ್ತು ಭೂಮಿಸುತ್ತುತ್ತಿದೆ ಎಂದು ಸತ್ಯಾ ಹೇಳಿದ. ಇವರ ಮಾತು ಆಳುವವರ್ಗಗಳ ಮಾತುಗೆ ವಿರುದ್ಧವಾಗಿತ್ತು. ಆದುದರಿಂದ ಆಳುವವರ್ಗಗಳು ಕೋಪರ್‌ನಿಕಸ್‌ಗೆ ವಿಷ ಕೊಟ್ಟು ಸಾಯಿಸಿದರು. ಹಾಗೂ ಅಹಿಂಸತ್ಮಕವಾಗಿ ಹೋರಾಟ ಮಾಡಿದ ಲಾಲ ಲಜಪತರಾಯ್, ಕಾರ್ಮಿಕ ನಾಯಕ ಶಂಕರಗುಹಾನಿಯೋಗಿ ಉಲ್ಲಾಳ ಹಬ್ಬಕ್ಕರ ಇನ್ನೂ ಹಲವಾರು ವ್ಯಕ್ತಿಗಳನ್ನು ಪ್ರಭುತ್ವ ಕೊಲೆ ಮಾಡಿದೆ. ಹಾಗೂ ಜಲಿಯನ್ ವಾಲಬಾಗ್‌ನಲ್ಲಿ ಸೇರಿದ್ದ ಸಾವಿರಾರು ಜನರ ಮೇಲೆ ಗುಂಡು ಹಾರಿಸಿ ರಕ್ತಪಾತ ಮಾಡಿದೆ, ಹಾಗೂ 90ರ ದಶಕದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಬಹುರಾಷ್ಟ್ರೀಯ ತೈಲ ಕಂಪನಿಗಳ ವಿರುದ್ಧ ಖ್ಯಾತ ಕ್ರಾಂತಿಕಾರಿ ಸಾಹಿತಿ, ಕವಿ, ಕೆನ್‌ಸಾರೋವಿಟಾ ರವರ ಹೋರಾಟಕ್ಕೆ ಬಂದೂಕಿನ ಬೆಂಬಲವಿಲ್ಲದೇ ಇದ್ದರೂ ಕೂಡ ಅವರನ್ನು ಅಲ್ಲಿನ ಪ್ರಭುತ್ವ ಗಲ್ಲು

> ಅಸ್ತಿತ್ವದಲ್ಲಿರುವ ಆಳುವವರ್ಗಗಳು ಶಾಂತಿಯುತ ಹೋರಾಟಕ್ಕೆ ಸ್ಪಂದಿಸದೇ ಇರುವುದರಿಂದ ಹಾಗೂ ಅವರ ರಾಜಕೀಯ ಆರ್ಥಿಕ, ಸಾಮಾಜಿಕ ಅಧಿಕಾರವನ್ನು ನಿರ್ಮೂಲನೆ ಮಾಡಬೇಕಾದರೆ "ಸಶಸ್ತ್ರ" ಹೋರಾಟ ಅನಿವಾರ್ಯ ಎನ್ನುತ್ತಾರೆ ನಕ್ಸಲೀಯರು. ಸಾಮ್ರಾಜ್ಯಶಾಹಿಗಳ ಸಹಾಯದೊಂದಿಗೆ ಭಾರತದ ಆಳುವವರ್ಗಗಳು ಶೋಷಿತರ ಮೇಲೆ ನಡೆಸುತ್ತಿರುವ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ದಮನದ ವಿರುದ್ಧ ಸಂಘಟಿಸಿ ಭೂಮಾಲಿಕರ ದಲ್ಲಾಳಿ ಅಧಿಕಾರಿಶಾಹಿ ಬಂಡವಾಳಶಾಹಿ ಪ್ರಭುತ್ವ ಅಧಿಕಾರವನ್ನು ಬಲತ್ಕಾರದ ಮೂಲಕ, ಸಶಸ್ತ್ರ ಹೋರಾಟದ ಮೂಲಕ ಕಿತ್ತು ಹಾಕಿ ಪ್ರಜಾರಾಜ್ಯ ತರಬೇಕೆಂಬುದು ನಕ್ಸಲೀಯರ ಉದ್ದೇಶವಾದಂತಿದೆ ನಕ್ಸಲೀಯರ ಹೋರಾಟ ಸಾಮಜಿಕ–ಆರ್ಥಿಕ ಸಮಸ್ಯೆಯೇ ಹೊರೆತು ಕಾನೂನು ಸುವ್ಯವಸ್ಥೆಯ ಸಮಸ್ಯೆಯಲ್ಲ. ಅವರ ಹೋರಾಟವನ್ನು ಮುರಿಯಲು ಪ್ರಭುತ್ವ ಪ್ರಯತ್ನ ಪ್ರಯತ್ನಿಸಿದಷ್ಟು ಜನರ ಪ್ರತಿರೋದ ಜಾಸ್ತಿಯಾಗುತ್ತದೆ. ಅವರು ಎತ್ತಿರುವ ಸಮಸ್ಯೆಗಳನ್ನು ಪರಿಹರಿಸಿದರೆ ಮಾತ್ರ ನಕ್ಸಲೀಯ ಚಳುವಳಿಯನ್ನು, ನಾಶಮಾಡಬಹುದು.

ಗೇರಿಸಿತು. ಆದರೆ ಪಾರ್ವತಿ, ಸಾಕೇತ್ ರಾಜನ್, ಮನೋಹರ್‌ರವರ ಹೋರಾಟಕ್ಕೆ ಬಂದೂಕಿನ ಬೆಂಬಲ ವಿದ್ದ ಕಾರಣಕ್ಕೆ ಇವರನ್ನು ಪ್ರಭುತ್ವ ಕಪಟ ಎನ್‌ಕೌಂಟರ್‌ನಲ್ಲಿ ಕೊಲೆ ಮಾಡಲಾಯಿತು. ಒಟ್ಟಾರೆ ಈ ವ್ಯವಸ್ಥೆಯಲ್ಲಿ ಸಮಾನತೆಗಾಗಿ ಸಂವಿಧಾನ ಬದ್ಧವಾಗಿ ಹಕ್ಕುಗಾಗಿ ಭೂಮಿಗಾಗಿ ನ್ಯಾಯಬದ್ಧವಾಗಿ ರಾಜಿರಹಿತ ಹೋರಾಟಗಾರರಿಗೆ ಆ ಹೋರಾಟ ಅಹಿಂಸಾತ್ಮಕವಾಗಿದ್ದರೆ ಗಲ್ಲು, ಹಿಂಸಾತ್ಮಕವಾಗಿದ್ದರೆ ಕೊಲೆ, ಒಟ್ಟಾರೆ ವ್ಯವಸ್ಥೆಯ ವಿರುದ್ಧ ದನಿ ಎತ್ತಿದವರನ್ನು ಪ್ರಭುತ್ವ ನಿರ್ಮೂಲನೆ ಮಾಡುತ್ತಿದೆ.

ಭೂಮಿ ಹೋರಾಟ, ಸಾಮ್ರಾಜ್ಯವಾದ, ಪ್ರಭುತ್ವ ವಿರೋಧಿ, ಮಾನವ ಹಕ್ಕು ಕೋಮುವಾದ, ಜಾತಿವಾದ, ಪರಿಸರ ನಾಶ, ಊಳಿಗೆ ಮಾನ್ಯತೆ ವಿರುದ್ಧ ಇತ್ಯಾದಿ ಯಾವುದೇ ಚಳುವಳಿಗಳನ್ನು ಜನರ ಹೋರಾಟವನ್ನ ರಾಜಿ ರಹಿತವಾಗಿ ಮುನ್ನೆಡಸಲು, ಆ ಹೋರಾಟಗಳನ್ನು ಕಾಪಾಡಿಕೊಳ್ಳಲು ಕ್ರಾಂತಿಕಾರಿ ಸಿದ್ದಾಂತ ಮತ್ತು ಸಶಸ್ತ್ರ ಹೋರಾಟ ಬೆಂಬಲದಿಂದ ಮಾತ್ರ ಸಾಧ್ಯ. ಇರದೆ ಇದ್ದರೆ ಆ ಹೋರಾಟಗಳನ್ನು ಪ್ರಭುತ್ವ ತನ್ನ ದಾಳಿಗಳಿಂದ ಅ ಹೋರಾಟಗಳು ನಾಶವಾಗುವ ಸಾಧ್ಯತೆಗಳಿವೆ. ಏಕೆಂದರೆ ರೈತ ಬಂಡಾಯ ದಲಿತ. ಸಾಮ್ರಾಜ್ಯ ಶಾಹಿ ವಿರೋದಿ ಇನ್ನು ಎಷ್ಟೋ ಹೋರಾಟಗಳು ನಾಶವಾಗಿರುವುದು ನಮ್ಮ ಕಣ್ಣು ಮುಂದಿವೆ. "ಒಬ್ಬ ಮಗು ಹುಟ್ಟುವಾಗ ತಾಯಿ ಗರ್ಭದಿಂದ ರಕ್ತಸ್ರಾವ ಆಗುವುದು ಅನಿವಾರ್ಯ ಹಾಗೆಯೇ ಶೋಷಣೆರಹಿತ ನೂತನ ಸಮಾಜ ನಿರ್ಮಾಣವಾಗಬೇಕಾದರೆ ರಕ್ತಪಾತ ಅನಿವಾರ್ಯ"

ಒಬ್ಬ ರೈತ ತನ್ನ ಜಮಿನು ಉಳುಮೆ ಮಾಡುವಾಗ ತನಗೆ ಅಡ್ಡ ಬಂದ ಹಾವು ತನ್ನನ್ನು ಮತ್ತು ಎತ್ತುಗಳನ್ನು ಕಚ್ಚುವುದಕ್ಕೆ ಬಂದಾಗ ಮಾತ್ರ ಆ ರೈತ ತನ್ನಲ್ಲಿರುವ ಬಾರುಕೋಲುನಿಂದ ಆ ಹಾವನ್ನು ಸಾಯಿಸುತ್ತಾನೆ ಹೊರತು ತನ್ನ ಜಮಿನುನಲ್ಲಿ ದೂರ ಹಾದು ಹೋಗುವ ಹಾವನ್ನು ಸಾಯಿಸುವುದಿಲ್ಲ. ಹಾಗೆಯೇ ನಕ್ಸಲೀಯರು ಕೂಡ ಎಲ್ಲಿ ತಮ್ಮ ಚಳುವಳಿಗೆ ಅಡ್ಡ ಭೂಮಾಲಿಕರು, ರಾಜಕಾರಣಿಗಳು, ಪೊಲೀಸ್‌ರು ಬರುತ್ತಾರೋ ಅವರನ್ನು ಮಾತ್ರ. ತಮ್ಮ ಆತ್ಮ ರಕ್ಷಣೆಗಾಗಿ ಇಟ್ಟುಕೊಂಡಿರುವ ಬಂದೂಕಿನಿಂದ ಕೊಲೆ ಮಾಡುತ್ತಾರೆ ಅನಿಸುತ್ತದೆ.

ನಕ್ಸಲೀಯರಿಂದ ಜನರಿಗೆ ಅನ್ನ ಕೊಡಲು ಆಗದೆ ಇರಬಹುದು. ಆದರೆ ಖಂಡಿತ ಅವರನ್ನು ಕೆರಳಿಸಿ ಎಬ್ಬಿಸುತ್ತಾರಲ್ಲ ಅದು ಬಹಳ ಅನ್ಯೋನ್ಯವಾದದ್ದು. ನಕ್ಸಲೀಯರ ಚಳುವಳಿ ಹಿಂಸಾತ್ಮಕವಾಗಿದ್ದರೂ ಅವರ ಹಿನ್ನಲೆ ಶೋಷಣೆರಹಿತ ಸಮಾಜ ತರುವುದು ಮತ್ತು ಕೊಳೆತು ನಾರುತ್ತಿರುವ ಸಮಾಜ ವ್ಯವಸ್ಥೆಯನ್ನ ಬದಲಾಯಿಸುವದಕ್ಕೆ ನಕ್ಸಲೀಯರು ಪಡುತ್ತಿರೋ ಶ್ರಮ ನಿಜಕ್ಕೂ ಬಹಳ ಉದ್ದಾತ್ತವಾದದ್ದು.

ಅಸ್ತಿತ್ವದಲ್ಲಿರುವ ಆಳುವವರ್ಗಗಳು ಶಾಂತಿಯುತ ಹೋರಾಟಕ್ಕೆ ಸ್ಪಂದಿಸದೇ ಇರುವುದರಿಂದ ಹಾಗೂ ಅವರ ರಾಜಕೀಯ ಆರ್ಥಿಕ, ಸಾಮಾಜಿಕ ಅಧಿಕಾರವನ್ನು ನಿರ್ಮೂಲನೆ ಮಾಡಬೇಕಾದರೆ "ಸಶಸ್ತ್ರ" ಹೋರಾಟ ಅನಿವಾರ್ಯ ಎನ್ನುತ್ತಾರೆ ನಕ್ಸಲೀಯರು. ಸಾಮ್ರಾಜ್ಯಶಾಹಿಗಳ ಸಹಾಯದೊಂದಿಗೆ ಭಾರತದ ಆಳುವವರ್ಗಗಳು ಶೋಷಿತರ ಮೇಲೆ ನಡೆಸುತ್ತಿರುವ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ದಮನದ ವಿರುದ್ಧ ಸಂಘಟಿಸಿ ಭೂಮಾಲಿಕರ ದಲ್ಲಾಳಿ ಅಧಿಕಾರಿಶಾಹಿ ಬಂಡವಾಳ ಶಾಹಿ ಪ್ರಭುತ್ವ ಅಧಿಕಾರವನ್ನು ಬಲತ್ಕಾರದ ಮೂಲಕ, ಸಶಸ್ತ್ರ ಹೋರಾಟದ ಮೂಲಿಕ ಕಿತ್ತು ಹಾಕಿ ಪ್ರಜಾರಾಜ್ಯ ತರಬೇಕೆಂಬುದು ನಕ್ಸಲೀಯರ ಉದ್ದೇಶವಾದಂತಿದೆ ನಕ್ಸಲೀಯರ ಹೋರಾಟ ಸಾಮಜಿಕ–ಆರ್ಥಿಕ ಸಮಸ್ಯೆ ಹೊರೆತು ಕಾನೂನು ಸುವ್ಯವಸ್ಥೆಯಲ್ಲ. ನಕ್ಸಲೀಯರಿಗೆ ಬಂದೂಕಿನ ಮೂಲಕ ಉತ್ತರ ಕೊಡುವುದು ಸರಿಯಲ್ಲ. ಅವರ ಹೋರಾಟವನ್ನು ಮುರಿಯಲು ಪ್ರಭುತ್ವ ಪ್ರಯತ್ನ ಪ್ರಯತ್ನಿಸಿದಷ್ಟು ಜನರ ಪ್ರತಿರೋಧ ಜಾಸ್ತಿಯಾಗುತ್ತದೆ. ಆದುದರಿಂದ ಅವರು ಎತ್ತಿರುವ ಸಮಸ್ಯೆಗಳನ್ನು ಪರಿಹರಿಸಿದರೆ ಮಾತ್ರ ನಕ್ಸಲೀಯ ಚಳುವಳಿಯನ್ನು ನಾಶಮಾಡಬಹುದು.

ಇಷ್ಟಕ್ಕೂ ನಕ್ಸಲೀಯರನ್ನು ಪ್ರಭುತ್ವವು ಯಾಕೆ ಕೊಲೆ ಮಾಡುತ್ತಾರೆ ಎಂದರೆ ಕ್ರಾಂತಿಕಾರಿ ಕವಿ ಚರಬಂಡ ರಾಜು ಮಾತುಗಳಲ್ಲಿ ಹೇಳಬೇಕೆಂದರೆ ಇಷ್ಟೆಲ್ಲಾ ಯಾತಕ್ಕೆಂದರೆ ನಕ್ಸಲೀಯರು ಅವರ ಹಾಡಿಗೆ ಪಲ್ಲವಿಯಾಗಲಾರದಕ್ಕೆ, ಅವರ ಪಲ್ಲಕ್ಕಿಗೆ ಬೋವಿಯಾಗಲಾರದಕ್ಕೆ. □

ದಂಡೆಯಲ್ಲಿ ಕುಳಿತ ಹುಡುಗಿಯರು



ತುಟಿಯರಳಿ
ನಗು–ನಂದನ; ಈ ದಂಡೆ,
ಈ ಬಿಂಬ; ಈ ಅಲೆಯುಂಗುರ
ಕನಸೂರಿನ ಹರಿದಾರಿ

ಗಲ್ಲಕ್ಕೆ ಹಚ್ಚಿದ ಹಸಿ ಕೈ,
ನೀರಾಡಿಸುವ ಬೆಣ್ಣೆ ಬೆರಳು
ವ್ಯಕ್ತದಲ್ಲೇನೋ ನೋಟ
ಅವ್ಯಕ್ತದ ಅದೆಷ್ಟೋ ಚಿತ್ರ–
ಬಣ್ಣಬಣ್ಣದ ಕೊನರು

ಎಣಿಕೆಗಿಲ್ಲದ ಕನಸುಗಳ
ಹೊತ್ತು ಕುಳಿತ
ಈ
ಹುಡುಗಿಯರ ಸಂಜೆಗನಸುಗಳ
ಮಹಾಪೂರ ಉಬ್ಬರಿಸಿ
ಒದ್ದೆಯಾಗಿಸುವುದಬೇಡ
ನನಸಾಗಲಿ
ನಾಳೆಯ ಕನಸುಗಳು–
ಬಿಂಬ ಚಿತ್ತಾರವಾಗುವಲ್ಲಿ.

○ ದಯಾನಂದ

ಧರ್ಮ-ದೇವರುಗಳ ಸುತ್ತ ಮುತ್ತ...

ಡಾ. ಬಸವರಾಜ ಸಬರದ



ಪ್ರಸ್ತುತ ಸಂದರ್ಭದಲ್ಲಿ ಧರ್ಮ-ದೇವರುಗಳನ್ನು ಕುರಿತಂತೆ ನೇತ್ಯಾತ್ಮಕವಾದ ಭಾವನೆಗಳೇ ಹೆಚ್ಚಾಗಿವೆ. ತಾಯಿಯ ಹಾಲೇ ನಂಜಾದ ಸ್ಥಿತಿಯನ್ನು ಇತ್ತೀಚಿನ ಬೆಳವಣಿಗೆಗಳಲ್ಲಿ ಕಾಣಬಹುದಾಗಿದೆ. ಜನಸಾಮಾನ್ಯರ ಮತಾಂತರದ ಬಗೆಗೆ ಹೆಚ್ಚಿನ ಚರ್ಚೆ ನಡೆದಿದೆಯೇ ಹೊರತು; ಅವರ ಹಸಿವು-ಬಡತನ-ನಿರುದ್ಯೋಗದಂತಹ ವಿಷಯಗಳು ದೂರ ಸರಿದಿವೆ. ಜನ ಸಮುದಾಯದ ಬದುಕನ್ನು ರೂಪಿಸಬೇಕಾಗಿದ ಧರ್ಮ-ದೇವರುಗಳು ಇಂದು ಜನಸಾಮಾನ್ಯರ ಜೀವ ತಿನ್ನತ್ತಲಿವೆ. ಧರ್ಮ-ದೇವರುಗಳು ವಿಷಯ ಬಂದಾಗ ವಾಸ್ತವತೆಗಿಂತ-ಭಾವನಾತ್ಮಕತೆ ಮುಖ್ಯವಾಗುತ್ತದೆ. ಹಾಗಾಗಿ ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಗಳು ಸರಿಯಾದ ದಿಕ್ಕಿನತ್ತ ಸಾಗುತ್ತಿಲ್ಲ.

ಈ ಜಗತ್ತಿನಲ್ಲಿ ಹುಟ್ಟಿದ ಯಾವುದೇ ಧರ್ಮವಿರಲಿ, ಅದು ಜನತೆಗೆ ಒಳ್ಳೆಯದನ್ನು ಮಾಡುವ ಉದ್ದೇಶದಿಂದಲೇ ಹುಟ್ಟಿಕೊಂಡಿರುತ್ತದೆ. ದಯೆ-ಅಂತಃಕರಣಗಳೇ ಅದರ ಸ್ಥಾಯೀಭಾವಗಳಾಗಿರು ತ್ತವೆ. ಆದರೆ ಮುಂದೆ ಆ ಧರ್ಮ ಅನುಯಾಯಿಗಳೇ ತಮ್ಮ ಸ್ವಾರ್ಥಕ್ಕಾಗಿ ಧರ್ಮವನ್ನೇ ಅಧರ್ಮವನ್ನಾಗಿ ಮಾರ್ಪಡಿಸುತ್ತಾರೆ. ದೇವರನ್ನೇ ವ್ಯಾಪಾರೀ ಕೇಂದ್ರವಾಗಿಸುತ್ತಾರೆ. ಆಗ ದೊಡ್ಡ-ದೊಡ್ಡ ದೇವಾಲಯಗಳು ಇಂಡಸ್ಟ್ರೀಗಳಾಗಿ(ಉದ್ದಿಮೆ) ಮಾರ್ಪಡುತ್ತವೆ. ಮತಾಂತರವೆಂಬುದು ರಾಜಕೀಯ ತಂತ್ರಗಾರಿಕೆಯಾಗಿ ಬೆಳೆಯುತ್ತ ಹೋಗು ತ್ತದೆ. ಸ್ವಾರ್ಥ ರಾಜಕೀಯದ ತೀವ್ರತೆಯಿಂದ ದೇವಾಲಯ-ಮಸೀದಿ -ಚರ್ಚ್‌ಗಳಲ್ಲಿ ಬಾಂಬ್ ಸೃಷ್ಟಿಯಾಗುತ್ತವೆ. ಕೋಮುಸೌಹಾರ್ದತೆಯನ್ನುಂಟು ಮಾಡಬೇಕಾಗಿದ್ದ ಧರ್ಮಗಳು, ಕೋಮುಗಲಭೆಗಳಿಗೆ ಮುಖ್ಯ ಕಾರಣಗಳಾಗುತ್ತವೆ. ಜಗದ್ಗುರುಗಳೆಂದು ಕರೆದುಕೊಳ್ಳುವವರು, ಮಠಾಧೀಶರಾ ಮಡಿಯಾಚರಿಸುವವರು, ಪಾದ್ರಿಗಳಾಗಿ ತಂತ್ರ ಹೂಡುವವರು, ಮುಲ್ಲಾ-ಮೌಲ್ವಿಗಳಾಗಿ ಭಯೋತ್ಪಾದನೆಯ ಹುಟ್ಟಿಗೆ ಕಾರಣರಾಗುವವರು ಇಂದು ನಮ್ಮ ಸುತ್ತ-ಮುತ್ತಲಿದ್ದಾರೆ. ಹೊಲಕ್ಕೆ ಬೇಲಿಯಾಗಬೇಕಾಗಿ, ಇವರೇ ಇಂದು ಹೊಲ ಮೆಯ್ಯತೊಡಗಿದ್ದಾರೆ. ಈ ಸತ್ಯವನ್ನು ಜನಸಾಮಾನ್ಯರು ಅರ್ಥೈಸಿಕೊಳ್ಳಬೇಕಾಗಿದೆ.

'ಇಂದು ಹಿಂದೂ ಧರ್ಮಕ್ಕೆ ಕುತ್ತು ಬಂದಿದೆ, ಹಿಂದೂ ಧರ್ಮನಾಶವಾಗುತ್ತದೆ. ಇದಕ್ಕೆಲ್ಲ ಮತಾಂತರವೇ ಕಾರಣವಾಗಿದೆಯೆಂದು' ಅನೇಕರು ಬೊಬ್ಬೆಹೊಡೆಯುತ್ತಲಿದ್ದಾರೆ. ಇಂತವರಿಗೆ ಧರ್ಮದ ಬಗೆಗೆ ಪ್ರಾಥಮಿಕ ಜ್ಞಾನವೇ ಇರುವುದಿಲ್ಲ. ಹಿಂದೂ ಧರ್ಮವೆಂದು ಹೇಳಿದವರಾರು? ಈ ದೇಶದಲ್ಲಿ ಹಿಂದೂ ಧರ್ಮವೆಂಬುದಿದೆಯೆ? ಈ ಪ್ರಶ್ನೆಗಳನ್ನು ಕೇಳಿಕೊಂಡರೆ ಸತ್ಯ ಹೊರಬರು ತ್ತದೆ. ಹಿಂದೂ ಎಂಬುದು ಸಿಂಧೂ ಪ್ರದೇಶದ ಪರ್ಯಾಯ ನಾಮವೇ ಹೊರತು ಅದು ಧರ್ಮವಲ್ಲ. ಹಿಂದೂ ಪ್ರದೇಶ, ಹಿಂದೂಸ್ಥಾನವೆಂಬುದು ಒಂದು ದೇಶದ ಹೆಸರಾಗಿದೆಯೇ ಹೊರತು, ಅದು ಒಂದು ಧರ್ಮದ ಹೆಸರಲ್ಲ. ಈ ಹಿಂದೂಸ್ಥಾನ ದಲ್ಲಿ ಅನೇಕ ಧರ್ಮಗಳಿವೆ. ವಿವಿದ ರೂಪದ ದೇವರುಗಳಿದ್ದಾರೆ. ಅವುಗಳಲ್ಲಿ ಶೈವ ಧರ್ಮ-ಬೌದ್ಧ ಧರ್ಮ-ಜೈನ ಧರ್ಮ ವೈದಿಕ ಧರ್ಮ-ವೀರಶೈವ ಧರ್ಮ ಹೀಗೆ ಇವುಗಳ ಸಂಖ್ಯೆ ಬೆಳೆಯುತ್ತಲ್ಲೇ ಹೋಗುತ್ತದೆ. ಈ ಎಲ್ಲ ಧರ್ಮಗಳ ಪ್ರಾರಂಭದ ಆಶಯಗಳು ಜನ ತೆಗೆ ಒಳಿತನ್ನುಂಟು ಮಾಡುವಂತವುಗಳೇ ಆಗಿದ್ದವು. ಆದರೆ ಕಾಲ ಘಟ್ಟದಲ್ಲಿ ಈ ಧರ್ಮಗಳ ಅನುಯಾಯಿಗಳೇ ಇವುಗಳ ಮಾಲಿಕರಾಗಿ ಬಿಟ್ಟರು. ಆಗ ಧರ್ಮದ ಮೂಲ ಉದ್ದೇಶ ಮರೆಮಾಚಿ ಮಾಲಿಕರ ಆಸೆ-ಆಮಿಷಗಳೇ ಆಯಾ ಧರ್ಮಗಳ ಸಿದ್ಧಾಂತಗಳಾಗಿ ಬಿಟ್ಟವು. ಹಾದಿ ಹಿಡಿಸಬೇಕಾಗಿದ್ದ ಇಂತಹ ಧರ್ಮಗಳೇ ಹೀಗೆ ಹಾದಿ ಬಿಟ್ಟಾಗ, ಅಲ್ಲಿರುವ ಮುಖಂಡರು ಅವುಗಳ ಹಾದಿ ತಪ್ಪಿಸಿದಾಗ ಕೋಮು ಗಲಭೆಗಳು ಪ್ರಾರಂಭವಾದವು, ಭಯೋತ್ಪಾದನೆ ಬೆಳೆದು ನಿಂತಿತು. ಆಗ ಮತಾಂತರಕ್ಕೆ ಹೆಚ್ಚಿನ ಮಹತ್ವ ಬಂತು.



ಆಸ್ತಿಕರಾಗುವುದು ಸರಿಯೋ, ನಾಸ್ತಿಕರಾಗುವುದು ಸರಿಯೋ ಎಂಬ ಚರ್ಚೆಗಿಂತ, ಇಂದು ಮನುಷ್ಯರಾಗುವುದು ಬಹಳ ಮುಖ್ಯವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಜಾಗತಿಕವೆಂದೆನಿಸಿಕೊಂಡು ಪ್ರಸಿದ್ಧಿ ಪಡೆದಿರುವ ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮದ ಮುಖಂಡರನ್ನು ನೋಡಿದರೆ ಭಯ ಹುಟ್ಟುತ್ತದೆ. ಜಗತ್ತಿಗೇ

ಈ ಜಗತ್ತಿನಲ್ಲಿ ಹುಟ್ಟಿದ ಯಾವುದೇ ಧರ್ಮವಿರಲಿ, ಅದು ಜನತೆಗೆ ಒಳ್ಳೆಯದನ್ನು ಮಾಡುವ ಉದ್ದೇಶದಿಂದಲೇ ಹುಟ್ಟಿಕೊಂಡಿರುತ್ತದೆ. ಆದರೆ ಮುಂದೆ ಆ ಧರ್ಮ ಅನುಯಾಯಿಗಳೇ ತಮ್ಮ ಸ್ವಾರ್ಥಕ್ಕಾಗಿ ಧರ್ಮವನ್ನೇ ಅಧರ್ಮವನ್ನಾಗಿ ಮಾರ್ಪಡಿಸುತ್ತಾರೆ. ದೇವರನ್ನೇ ವ್ಯಾಪಾರೀ ಕೇಂದ್ರವಾಗಿಸುತ್ತಾರೆ. ಮತಾಂತರವೆಂಬುದು ರಾಜಕೀಯ ತಂತ್ರಗಾರಿಕೆಯಾಗಿ ಬೆಳೆಯುತ್ತ ಹೋಗುತ್ತದೆ. ಕೋಮು ಸೌಹಾರ್ದತೆಯನ್ನುಂಟು ಮಾಡಬೇಕಾಗಿದ್ದ ಧರ್ಮಗಳು, ಕೋಮು ಗಲಭೆಗಳಿಗೆ ಮುಖ್ಯ ಕಾರಣಗಳಾಗುತ್ತವೆ. ಜಗದ್ಗುರುಗಳೆಂದು ಕರೆದುಕೊಳ್ಳುವವರು, ಮಠಾಧೀಶರಾಗಿ ಮಡಿಯಾಚರಿಸುವವರು, ಪಾದ್ರಿಗಳಾಗಿ ತಂತ್ರ ಹೂಡುವವರು, ಭಯೋತ್ಪಾದನೆಯ ಹುಟ್ಟಿಗೆ ಕಾರಣರಾಗುವವರು ಇಂದು ನಮ್ಮ ಸುತ್ತ-ಮುತ್ತಲಿದ್ದಾರೆ.

ಶಾಂತಿಯನ್ನು ಸಾರಿದ ಏಸು ಕ್ರಿಸ್ತ, ಅಂತಃಕರಣವೇ ಧರ್ಮವೆಂದು ಹೇಳಿದ ಆ ಮಹಾತ್ಮನ ಮಾತುಗಳ ಇಂದು ಇಲ್ಲಿ ಕಳೆದು ಹೋಗಿವೆ? ಕ್ರಿಶ್ಚಿಯನ್ ಧರ್ಮದ ಮುಖಂಡರಾದವರು ಇಂದು ಜಗತ್ತಿನಲ್ಲಿ ಏನು ನಡೆಸಿದಾರೆ. ಬುಷ್ ಮತ್ತು ಕ್ಲಿಂಟನ್‌ರ ಅಧಿಕಾರವಧಿಯಲ್ಲಿ ನಡೆದಿರುವ ರಕ್ತಪಾತಗಳಿಗೆ ಲೆಕ್ಕವಿದೆಯೆ? ಯುದ್ಧವನ್ನೇ ಒಂದು ಉತ್ಪಾದನಾ ಕೇಂದ್ರವನ್ನಾಗಿ ಮಾಡಿಕೊಂಡ ಇಂತಹ ಹಿರಿಯಣ್ಣರನ್ನು ಪ್ರಶ್ನಿಸುವರಾರ ಇವರ ಸ್ವಾರ್ಥ ಅಧಿಕಾರದಲ್ಲಿ ಮೂರನೇ ಜಗತ್ತಿನ ದೇಶಗಳೆಲ್ಲ ನಲುಗಿ ಹೋಗಿವೆ. ಇರಾನ-ಇರಾಕಗಳ ಸ್ಥಿತಿಗೆ ಕಾರಣರಾರು? ಏಸುವಿನ ಹೆಸರಿನಲ್ಲಿ ಪ್ರಾರ್ಥಿಸುವ ನೈತಿಕ ಹಕ್ಕು ಇಂತವರಿಗಿದೆಯೆ?

ಸೋದರತ್ವವನ್ನು ಸಾರಿದ ಇಸ್ಲಾಂ ಧರ್ಮ ಸ್ಥಿತಿ ಇಂದು ಏನಾಗಿದೆ? ಅಲ್ಲಿಯ ಮತಾಂಧರರು ಭಯೋತ್ಪಾದಕರಾಗಿ ರಕ್ತಪಾತ ನಡೆಸಿದ್ದಾರೆ. ಸ್ವಂತ ಸೋದರರನ್ನೇ ಕೊಚ್ಚಿಹಾಕುವವರೆಗೆ ದ್ವೇಷ ಬೆಳೆದು ಬಿಟ್ಟಿದೆ. ಸೋದರರಂತಿದ್ದ ಭಾರತೀಯ-ಪಾಕಿಸ್ತಾನಿ ಪ್ರಜೆಗಳಲ್ಲಿ ಇಂತವರು ದ್ವೇಷ ಕಿಚ್ಚು ಹಚ್ಚುತಿದ್ದಾರೆ. ಅಲ್ಲಿಯ ಮೂಲಭೂತವಾದಿಗಳು ಮುಸ್ಲೀಂ ಯುವಕರಲ್ಲಿ ಮೌಢ್ಯತೆಯನ್ನು ಬಿತ್ತುತ್ತಿದ್ದಾರೆ. ಮುಲ್ಲಾ-ಮೌಲಿಗಳು ಮುಸ್ಲೀಂ ಮಹಿಳೆಯರ ಬೆಳವಣಿಗೆಗೆ ಅಡ್ಡಗಾವಲು ಹಾಕುತ್ತಿದ್ದಾರೆ. ಪೈಗಂಬರ ಸಾರಿದ ಸೋದರತ್ವದ ಈ ಧರ್ಮ ಇಂದು ಯಾವ ಹಂತ ತಲುಪಿದೆ? ಕ್ರಿಶ್ಚಿಯನ್ ಮತ್ತು ಮುಸ್ಲೀಂ ಸಮುದಾಯಗಳ ಜನಸಾಮಾನ್ಯರನ್ನು ಇಂದಿನ ರಾಜಕೀಯ ಪಕ್ಷಗಳು ಓಟು ಬ್ಯಾಂಕ್‌ಗಳಾಗಿ ಪರಿವರ್ತಿಸುತ್ತಿವೆ. ರಿಜರ್ವೇಷನ್‌ದ ಹೆಸರಿನಲ್ಲಿ ನಡೆಯುವಷ್ಟು ರಾಜಕಾರಣ ಮತ್ತಾವ ವಿಷಯದಲ್ಲಿಯೂ ನಡೆಯುವುದಿಲ್ಲ.

ಶತ-ಶತಮಾನಗಳಿಂದ ದಲಿತರನ್ನು ಅಸ್ಪೃಶ್ಯರನ್ನು ದಹಿಸಿದ್ದ-ಮಹಿಳೆಯರನ್ನು ಭೋಗದವಸ್ತುವನ್ನಾಗಿ ಕಂಡ ಭಾರತ ದೇಶದ ಪುರೋಹಿತಶಾಹಿ ಧರ್ಮಗಳು ಏನು ನಡೆಸಿವೆ? ವೈದಿಕ ಧರ್ಮವನ್ನೇ ಹಿಂದೂ ಧರ್ಮವೆಂದು ಪ್ರತಿಪದಿಸುತ್ತ, ಈ ದೇಶದ ಅಮಾಯಕರು ಮತಾಂತರ ಗೊಳ್ಳುವದೇ ಮಹಾಪಾಪವೆನ್ನುವಂತೆ ಇಲ್ಲಿಯಸ್ವಾಮಿಗಳು ಜಗದ್ಗುರುಗಳು ಮತ್ತು ಮಠಾಶ್ರಮದ ಸಾಹಿತಿಗಳು ಮಾತಾನಾಡುತ್ತಿದ್ದಾರೆ. ಬಸವಣ್ಣನ ಪರಂಪರೆಯವರೆಂದು ಹೇಳಿಕೊಳ್ಳುವ ವೀರಶೈವ ರಾಜಕಾರಣಿಗಳು ಇಂದು ಸಂಪೂರ್ಣ ಕೇಸರೀಕರಣ ಗೊಂಡಿದ್ದಾರೆ. ಗುಡಿ-ಗುಂಡಾರಗಳ ಬೆನ್ನು ಹತ್ತಿದ್ದಾರೆ; ಯಜ್ಞ-ಯಾಗಗಳ ಮೊರೆ ಹೋಗಿದ್ದಾರೆ. ಅಂದು ಕ್ಷತ್ರಿಯರ ಮೂಲಕ ರಾಜ್ಯವನ್ನಾಳಿದ ಪುರೋಹಿತಶಾಹಿ ಮನಸ್ಸುಗಳು ಇಂದು ಬಸವಣ್ಣನ ಅನುಯಾಯಿಗಳ ಮೂಲಕವೇ ಲೂಟಿಯನ್ನು ಪ್ರಾರಂಭಿಸಿವೆ.

ಇಂತಹ ವಿವಿಧ ಧರ್ಮಗಳಲ್ಲಿರುವ ರಾಜಕೀಯ ನಾಯಕರನ್ನು ನೋಡಿದರೆ ಜನಸಾಮಾನ್ಯರಿಗೆ ಅಂತಹ ಧರ್ಮಗಳ ಬಗೆಗೆನೇ ಜಿಗುಪ್ಸೆ ಪ್ರಾರಂಭವಾಗುತ್ತದೆ. ಯಾವ ಧರ್ಮಗಳು ಅಂದು ಜಗತ್ತಿನಲ್ಲಿ ಸತ್ಯ-ಶಾಂತಿ-ಅಹಿಂಸೆ-ಸೋದರತ್ವ-ದಯೆ-ಅಂತಃಕರಣದಂತಹ ಮೌಲ್ಯಗಳನ್ನು ಹುಟ್ಟುಹಾಕಿದ್ದವೋ, ಇಂದು ಆ ಧರ್ಮಗಳೆ ರಾಜಕೀಯ-ಧಾರ್ಮಿಕ-ಮುಖಂಡರ ಮುಖಾಂತರ ಅವು ದಿವಾಳಿಯ ಅಂಚಿನಲ್ಲಿವೆ. ಪ್ರಜ್ಞಾವಂತರು ಅವುಗಳನ್ನು ನಂಬದ ಸ್ಥಿತಿಗೆ ತಲುಪಿದ್ದಾ ಹೋರಾಟಗಾರರು ಅಸಾಹಯಕರಾಗಿದ್ದಾರೆ. ಅಸಂಖ್ಯಾತ-ಅಮಾಯಕರು ದಿಕ್ಕೂ ತೋಚದ ಸ್ಥಿತಿಗೆ ತಲುಪಿದ್ದಾರೆ. ಇದನ್ನೇ ಸಾಂಸ್ಕೃತಿಕ ವಿಸ್ಮೃತಿಯೆಂದು ಕರೆಯಲಾಗುತ್ತದೆ. ನಮ್ಮ ಧರ್ಮಗಳೇ ನಮಗೆ ಭೂತಗಳಾಗಿ, ನಮ್ಮ ಸೋದರರೇ ನಮಗೆ ವೈರಿಗಳಂತೆ ಕಾಣಲು ಮಾಡಿದವರಾರು? ಇದರ ಹಿಂದಿರುವ ಕಾರಣಗಳಾವುವು? ಈ ವಿಷಯದ ಬಗೆಗೆ ಚರ್ಚೆ ನಡೆಯುವುದು ಮುಖ್ಯವೆನಿಸುತ್ತದೆ.

ಇಂದು ಧರ್ಮ-ದೇವರುಗಳನ್ನು ಕುರಿತಂತೆ ಅನ್ವಯಿಕ ಚರ್ಚೆ ನಡೆಯಬೇಕಾಗಿದೆ. ಯಾವುದೇ ಕಾಲದಲ್ಲಿ ಬರೆದಿದ್ದ ಗ್ರಂಥವೊಂದನ್ನು ಧರ್ಮಗ್ರಂಥವೆಂದು ಭಾವಿಸುವುದು ಮೊದಲನೇ ಮೌಢ್ಯತೆಯಾಗಿದೆ. ಯಾರೋ ಬರೆದಿಟ್ಟ ಗ್ರಂಥವನ್ನು ದೇವರೇ ಬರೆದಿದ್ದಾನೆಂದು ನಂಬುವುದು ಎರಡನೇ ಮೌಢ್ಯತೆಯಾಗಿದೆ. ಇಂತಹ ಮೌಢ್ಯತೆಗಳಿಂದಲೇ ಮೂಲಭೂತವಾದ ಬೆಳೆಯಲು ಪ್ರಾರಂಭಿಸುತ್ತದೆ. ನನ್ನ ಧರ್ಮ ಶ್ರೇಷ್ಠ, ನನ್ನ ದೇವರು ಶ್ರೇಷ್ಠ, ನಾನು ಶ್ರೇಷ್ಠ ಎಂಬ ಅಹಂಭಾವ ಬೆಳದು ನಿಂತಾಗ ಇತರ ಧರ್ಮೀಯರು ತೃಣಸಮಾನರಾಗಿ ಕಾಣುತ್ತಾರೆ. ಆಗ ನಾವೇನು ಕಡಿಮೆಯೆಂದು ಇತರರು ತೋರಿಸುತ್ತಾರೆ. ಹೀಗೆ ಬೆಳೆದು ನಿಂತ ಮೂಲಭೂತವಾದಿ ತನವು ಕೋಮುವಾದದ ದಳ್ಳುರಿಗೆ ಕರಣವಾಗುತ್ತದೆ. ಕೋಮು-ಕೋಮುಗಳಲ್ಲಿ, ಧರ್ಮ-ಧರ್ಮಗಳಲ್ಲಿ ದೇಶ-ದೇಶಗಳಲ್ಲಿ ಇಂದು ದಳ್ಳುರಿ ಎದ್ದು ಉರಿಯುತ್ತಿರುವುದು ಇದೇ ಕಾರಣಕ್ಕಾಗಿಯೆಂಬುದನ್ನು ಮನಗಾಣಬೇಕಾಗಿದೆ.

ಎಲ್ಲ ಧರ್ಮಗಳು-ದೇವರುಗಳು ಈ ಅಹಂಭಾವವನ್ನು ತೊರೆಯಲು ಹೇಳಿದವು, ಪ್ರತಿಷ್ಠೆಯನ್ನು ದೂರವಿಡಲು ತಿಳಿಸಿದವು, ಮನುಷ್ಯ-ಮನುಷ್ಯರಲ್ಲಿ ದಯೆ-ಅಂತಃಕರಣವನ್ನು ಬೆಳೆಸಿದವು, ಆದರೆ ಇಂದು ಆಗುತ್ತಿರುವುದೇನು? ಅದೇ ಧರ್ಮ-ದೇವರುಗಳ ಹೆಸರಿನಲ್ಲಿ ಸುಲಿಗೆ ನಡೆದಿದೆ, ಶೋಷಣೆ ನಿರಂತರವಾಗಿದೆ, ಅಮಾಯಕರು ನಿತ್ಯವೂ ಸಾಯುತ್ತಿದ್ದಾರೆ.

> **ಅಮಾಯಕರ ಮೌಢ್ಯತೆಯನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ರಾಜಕೀಯ ಪಕ್ಷಗಳು ಸಮುದಾಯ-ಸಮುದಾಯಗಳ ನಡುವೆ ಯಾವಾಗಲೂ ಅಂತರವನ್ನುಳಿಸಲು ಪ್ರಯತ್ನಿಸುತ್ತವೆ. ರಿಜರ್ವೇಷನ್ ಹೆಸರಿನಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಅಸ್ಪೃಶ್ಯರನ್ನು-ಅಲ್ಪಸಂಖ್ಯಾತರನ್ನು ಮುಖ್ಯವಾಹಿನಿಯಿಂದ ದೂರ ಸರಿಸುತ್ತಲೇ ಬಂದಿವೆ. ಸ್ವಾರ್ಥ ರಾಜಕೀಯದ ಕಾರಣದಿಂದಾಗಿ ಇಂದು ಧರ್ಮದೇವರು ಅರ್ಥಕಳೆದುಕೊಂಡಿವೆ. ಮಂದಿರ-ಮಸೀದಿ-ಚರ್ಚ್‌ಗಳನ್ನು ಕಟ್ಟಿಸಿಕೊಡುವುದರಿಂದ ಈ ದೇಶದ ಜನ ಉದ್ಧಾರವಾಗಲಾರರು. ರಾಜಕೀಯ ಘೋಷಣೆಗಳಿಂದ ಈ ದೇಶ ಅಭಿವೃದ್ಧಿಯಾಗಲಾರದು. ಶಿಕ್ಷಣ-ಉದ್ಯೋಗ-ಅವಕಾಶಗಳನ್ನು ಕಲ್ಪಿಸಿ ಕೊಡುವದರ ಮೂಲಕ ಈ ಜನರನ್ನು ಬೆಳೆಸಬೇಕಾಗುತ್ತದೆ.**

ನನ್ನ ಧರ್ಮ ಶ್ರೇಷ್ಠ-ನಾನು ಶ್ರೇಷ್ಠ ಎಂದು ಮೂಲಭೂತವಾದಿಗಳು ಮಾತನಾಡಿದರೆ, ನಿನ್ನ ಧರ್ಮ ಕನಿಷ್ಠ-ನೀನೂ ಕನಿಷ್ಠನೆಂದು ಕೋಮುವಾದಿಗಳು ಬೊಗಳೆ ಬಿಡುತ್ತಾರೆ. ಹೀಗೆ ಮೂಲಭೂತವಾದ ಮತ್ತು ಕೋಮುವಾದ ಕೂಡಿಕೊಂಡಾಗ ನಿತ್ಯವೂ ಗುಂಡಿನ ಮಳೆ ಸುರಿಯತೊಡಗುತ್ತದೆ, ಬೀದಿ-ಬೀದಿಗಳಲ್ಲಿ ರಕ್ತ ಹರಿಯುತ್ತದೆ.

ಧರ್ಮನಿರಪೇಕ್ಷತೆ-ಜಾತ್ಯಾತೀತಕತೆ ಎಂಬಂತಹ ಪದಗಳು ಇಂದು ಕೇವಲ ಹೇಳಲು ಮಾತ್ರ ಉಳಿದುಕೊಂಡಿವೆ. ಅಮಾಯಕರ ಮೌಢ್ಯತೆಯನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ರಾಜಕೀಯ ಪಕ್ಷಗಳು ಸಮುದಾಯ-ಸಮುದಾಯಗಳ ನಡುವೆ ಯಾವಾಗಲೂ ಅಂತರವನ್ನುಳಿಸಲು ಪ್ರಯತ್ನಿಸುತ್ತವೆ. ರಿಜರ್ವೇಷನ್ ಹೆಸರಿನಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಅಸ್ಪೃಶ್ಯರನ್ನು-ಅಲ್ಪಸಂಖ್ಯಾತರನ್ನು ಮುಖ್ಯವಾಹಿನಿಯಿಂದ ದೂರ ಸರಿಸುತ್ತಲೇ ಬಂದಿವೆ. ಸ್ವಾರ್ಥ ರಾಜಕೀಯದ ಕಾರಣದಿಂದಾಗಿ ಇಂದು ಧರ್ಮ-ದೇವರು ಅರ್ಥಕಳೆದುಕೊಂಡಿವೆ. ಮಂದಿರ-ಮಸೀದಿ-ಚರ್ಚ್‌ಗಳನ್ನು ಕಟ್ಟಿಸಿಕೊಡುವುದರಿಂದ ಈ ದೇಶದ ಜನ ಉದ್ಧಾರವಾಗಲಾರರು. ರಾಜಕೀಯ ಘೋಷಣೆಗಳಿಂದ ಈ ದೇಶ ಅಭಿವೃದ್ಧಿಯಾಗಲಾರದು. ಶಿಕ್ಷಣ-ಉದ್ಯೋಗ-ಅವಕಾಶಗಳನ್ನು ಕಲ್ಪಿಸಿ ಕೊಡುವುದರ ಮೂಲಕ ಈ ಜನರನ್ನು ಬೆಳೆಸಬೇಕಾಗುತ್ತದೆ. ನೆಲ-ಜಲ-ವಿದ್ಯುತ್ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ನಾಡನ್ನು ಕಟ್ಟಬೇಕಾಗುತ್ತದೆ. ಬಡತನದ ಬೇಗುದಿಗೆ ಬೆಂದು, ಇಂದು ನಿರುದ್ಯೋಗಿ ಯುವಕರು ನಕ್ಸ್‌ಲೈಟ್‌ರಾಗುತ್ತಿದ್ದಾರೆ. ಮೌಢ್ಯತೆ ಮತ್ತು ಹಸಿವುಗಳಿಗೆ ತತ್ತರಿಸಿ ಇಂದು ಯುವಕರು ಭಯೋತ್ಪಾದಕರಾಗುತ್ತಿದ್ದಾರೆ. ಇವೆಲ್ಲಾ ನಾವೇ ಸೃಷ್ಟಿಸಿಕೊಂಡ ಭೂತಗಳಾಗಿವೆ. ಇದಕ್ಕೆಲ್ಲ ನಮ್ಮ ಸ್ವಾರ್ಥ ಮನಸ್ಸೇಕಾರಣವಾಗಿದೆ.

ಮುಂಜಾನೆದ್ದು ಕೂಡಲೇ ಏಸುವನ್ನು ಪ್ರಾರ್ಥಿಸುವ ಅಮೇರಿಕಾ-ಇಂಗ್ಲಾಂಡದ ರಾಜಕೀಯ ನಾಯಕರು ಯುದ್ಧೋತ್ಪಾದನೆಗೆ ತೊಡಗಿದರೆ; ನಮಾಜು ಮಾಡುತ್ತಲೇ ಬಂದೂಕು ಎತ್ತಿಕೊಳ್ಳುವ ಪೈಗಂಬರನ ವಾರಸುದಾರರು ಭಯೋತ್ಪಾದಕರಾಗಿದ್ದಾರೆ. ಇಂತಹ ಯುದ್ಧೋತ್ಪಾದಕರು ಮತ್ತು ಭಯೋತ್ಪಾದರಿಂದ ಭಾರತ-ಪಾಕಿಸ್ತಾನದಂತಹ ಬಡದೇಶಗಳು ತತ್ತರಿಸಿ ಹೋಗಿವೆ.

ಕ್ರಿಶ್ಚಿಯನ್ ಧರ್ಮದಲ್ಲಿರುವ ದಯೆ-ಅಂತಃಕರಣ ಹಾಗೂ ಇಸ್ಲಾಂ ಧರ್ಮದಲ್ಲಿರುವ ಸೋದರತ್ವ-ಸಮಾನತೆಯಂತಹ ಮೌಲ್ಯಗಳನ್ನು ಹೊಂದಿರದ ವೈದಿಕ-ಧರ್ಮ, ಈ ನಾಡಿನ ಅವೈದಿಕ ಧರ್ಮಗಳ ಮೇಲೆ ಆಧಿಪತ್ಯ ಸ್ಥಾಪಿಸಿ ಹಿಂದೂ ಧರ್ಮವೆಂಬ ಹೊಸ ಪದವನ್ನು ಬಳಸಿ, ಹಿಂದೂಸ್ಥಾನದಲ್ಲಿರುವವರೆಲ್ಲ ಹಿಂದೂಗಳೆಂಬ ಹಸಿ ಸುಳ್ಳುಗಳನ್ನು ದೊಡ್ಡದಾಗಿ ಹೇಳುತ್ತಬಂದಿದೆ. ವೈದಿಕ ಧರ್ಮದ ಕಂದಾಚಾರಗಳನ್ನು-ಮೌಢ್ಯತೆಯನ್ನು-ಅಸಮಾನತೆಯನ್ನು ಭಾರತದ ಬೌದಿಕ ಧರ್ಮ-ಬೌದ್ಧಧರ್ಮ-ಜೈನಧರ್ಮ-ಲಿಂಗಾಯತ ಧರ್ಮಗಳು ಪ್ರತಿಭಟಿಸುತ್ತಲೇ ಬಂದಿವೆ. ಮತಾಂತರದ ಚರ್ಚೆ ಬಂದಾಗ ಈ ಅವೈದಿಕ ಧರ್ಮದಲ್ಲಿಯ ಸಂಪ್ರದಾಯವಾದಿಗಳು ತಾವೂ ಕೂಡ

ಹಿಂದೂ ಧರ್ಮಕ್ಕೆ ಸೇರಿದವರೆಂಬ ಭ್ರಮೆಯಲ್ಲಿ ಉಳಿಯುತ್ತಾರೆ. ಹೀಗೆ ಶತಮಾನಗಳಿಂದ ಅನೇಕ ಭ್ರಮೆಗಳನ್ನು ಸೃಷ್ಟಿಸಿ, ಅಸ್ಪೃಶ್ಯತೆಗೆ-ಅಸಮಾನತೆಗೆ ಕಾರಣವಾಗಿರುವ ವೈದಿಕ ಧರ್ಮವು, ಮಹಾತ್ಮ ಬುದ್ಧನನ್ನೇ ಹನ್ನೊಂದನೇ ಅವತಾರದಲ್ಲಿ ತೋರಿಸಿ ಈ ದೇಶದ ಮುಗ್ಧ ಜನತೆಯ ಮೇಲೆ ಬೌದ್ಧಿಕ ಸವಾರಿ ನಡೆಸಿದೆ.

ಹಾಗೆ ನೋಡಿದರೆ "ಹಿಂದೂ" ಎಂಬ ಪದ ಹುಟ್ಟಿದ್ದೇ ಹದಿನಾರನೇ ಶತಮಾನದಲ್ಲಿ. ಪರ್ಶಿಯನ್ನರು ಈ ಪದವನ್ನು ಮೊದಲಿಗೆ ಬಳಸಿದರು. ವೈದಿಕ ಪುರೋಹಿತ ಶಾಹಿಗಳಿಗೆ ಈ "ಹಿಂದೂ" ಪದ ದೊಡ್ಡ ಅಸ್ತ್ರವಾಗಿ ಬಿಟ್ಟಿತು. ಸಮಾನತೆಯ ವಿಷಯ ಬಂದಾಗ, ದಲಿತರ ಸಮಸ್ಯೆ ಬಂದಾಗ ಮಾರುದ್ದ ಹಾರುವ ಈ ಮಡಿವಂತ ಪುರೋಹಿತಶಾಹಿಗಳು; ತಮಗೆ-ತಮ್ಮ ಧರ್ಮಕ್ಕೆ ಕುತ್ತು ಬಂದಾಗ "ನಾವೆಲ್ಲಾ ಹಿಂದೂಗಳು" ಎಂಬ ಪದ ಹಾಡಲು ಪ್ರಾರಂಭಿಸುತ್ತಾರೆ. ಈ ಧರ್ಮ ಸೂಕ್ಷ್ಮಗಳು ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಭಾವಾವೇಷ ಗೊಂಡ ಸಾಮಾನ್ಯ ಜನ ಇವರು ಹೇಳಿದಂತೆ ಕುಣಿಯ ತೊಡಗುತ್ತಾರೆ.

ಇದು ಈ ದೇಶದ ದೊಡ್ಡ ದುರಂತ. ಜನ ಸಮುದಾಯದ ಮೌಢ್ಯತೆ-ಮುಗ್ಧತೆಗಳ ದುರುಪಯೋಗವನ್ನು ಪುರೋಹಿತಶಾಹಿ ವ್ಯವಸ್ಥೆ ಈ ದೇಶದಲ್ಲಿ ಶತಮಾನಗಳಿಂದ ಮಾಡಿಕೊಳ್ಳುತ್ತಲೇ ಬಂದಿದೆ. ಹಿಂದೂ ಪ್ರದೇಶವನ್ನು ಹಿಂದೂ ಧರ್ಮವೆಂದು ಬಿಂಬಿಸುವುದು, ಬುದ್ಧನನ್ನು ಹನ್ನೊಂದನೇ ಅವತಾರವೆಂದು ಸಾರುವುದು ಈ ದೇಶದ ಪುರೋಹಿತಶಾಹಿ ವ್ಯವಸ್ಥೆಯ ಮುಖ್ಯ ಪ್ರಣಾಳಿಕೆಯಾಗಿದೆ. ಇಂತಹ ಪ್ರಣಾಳಿಕೆಯ ಮೂಲಕ ಈ ದೇಶದ ಅಮಾಯಕರನ್ನು-ಕೂಲಿ ಕಾರ್ಮಿಕರನ್ನು-ಅಸ್ಪೃಶ್ಯರನ್ನು ಭಾವಾನಾತ್ಮಕವಾಗಿ ಪ್ರಚೋದಿಸಿ ಮುಸ್ಲೀಂರ ವಿರುದ್ಧ, ಮತಾಂತರದ ವಿರುದ್ಧ ಎತ್ತಿಕಟ್ಟಿ ಈ ದೇಶದಲ್ಲಿ ಕೋಮುಗಲಭೆ ನಡೆಯಲು ಈ ಪುರೋಹಿತಶಾಹಿ ವ್ಯವಸ್ಥೆಯೇ ಕಾರಣವಾಗಿದೆ. ಮತಾಂತರದ ಪ್ರಕ್ರಿಯೆಯನ್ನು ವಿರೋಧಿಸುವ ಈ ಮನಸ್ಸುಗಳು, ಮತಾಂತರದ ಕಾರಣಗಳನ್ನು ತಿಳಿದುಕೊಳ್ಳುವುದಿಲ್ಲ. ಮತಾಂತರಕ್ಕೆ ಕೇವಲ ಹಣದಾಸೆ-ರಕ್ಷಣೆ ಮಾತ್ರ ಕಾರಣವಾಗಿರದೆ, ಶತಮಾನಗಳಿಂದ ಅನುಭವದ ಅಸ್ಪೃಶ್ಯತೆಯ ನೋವು-ಯಾತನೆಗಳು ಮುಖ್ಯ ಕಾರಣಗಳಾಗುತ್ತವೆ.

ಬುದ್ಧ-ಬಸವ-ಗಾಂಧಿ-ಅಂಬೇಡ್ಕರ್ ಜನಿಸಿದ ಈ ದೇಶದಲ್ಲಿ ಇಂದು ಭಯೋತ್ಪಾದಕರು-ಮೂಲಭೂತವಾದಿಗಳು-ಕೋಮುವಾದಿಗಳು ಕಾಣಿಸಿಕೊಳ್ಳುತ್ತಿದ್ದಾರೆ. ಸಮಾನತೆಯ ದಾರಿ ತೋರಿದ ಈ ಮಹಾತ್ಮರನ್ನು ಮರೆತು, ಗೊಡ್ಡು ಆಚರಣೆಗಳಿಗೆ ಜನಸಾಮಾನ್ಯರನ್ನು ತಳ್ಳಿ ಸೋದರ-ಸೋದರರ ನಡುವೆಯೇ ರಕ್ತಪಾತ ಹರಿಯಲು ಈ ಅಸಮಾನತೆಯ ವ್ಯವಸ್ಥೆ ಮುಖ್ಯಕಾರಣವಾಗಿದೆ.

ಈ ಮತ-ಧರ್ಮದಾಚರಣೆಗಳನ್ನು ಮನೆಯೊಳಗಡೆ ಮಾತ್ರ ಸೀಮಿತಗೊಳಿಸಿಕೊಂಡು ಭಾರತದ ಸಂವಿಧಾನವೇ ನಮ್ಮ ಧರ್ಮ, ಭಾರತದೇಶವೇ ನನ್ನ ದೇವರು ಎಂದು ಭಾವಿಸಿಕೊಂಡಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಮಾನವೀಯತೆ-ಅಂತಃಕರಣದಂತಹ ಮೌಲ್ಯಗಳನ್ನು ಹುಟ್ಟುಹಾಕಿದಾಗ ಮಾತ್ರ ಹೊಸಬೆಳಕು ಕಾಣಿಸಿಕೊಳ್ಳುತ್ತದೆ. □

ಸಮಾಧಿಯಿಂದ ಸಿಡಿದ ಸೇಡಿನ ನುಡಿ!



ದಲಿತರನ್ನು ಸುಟ್ಟ ಬೆಂಕಿ
ದೇಶವನ್ನೇ ಸುಟ್ಟಿತು
ಅಂದು ದಲಿತರ ಘೋಷಣೆಯಾಗಿತ್ತು
ಶೋಷಣೆ ಹಾಗೆಯೇ ಮುಂದುವರೆದಿತ್ತು.
ಕಂಬಾಲಪಲ್ಲಿ ಉರಿದು ಭಸ್ಮವಾಯಿತು
ದಲಿತರ ಕೂಗೂ ತಣ್ಣಗಾಯಿತು
ದಲಿತಣ್ಣನನ್ನು ಸುಟ್ಟ ಬೆಂಕಿಯಿಂದ
ಹರಿದ ನೋವಿನ ಹೊಗೆ ನಗುತ್ತಲಿತ್ತು
ಎದೆ ನಡುಗಿ, ಮನ ನಡುಗಿ
ನರಳಿದ ನನ್ನವರು
ನಗುವನ್ನು ತೊರೆದು ನರಕ ಅನುಭವಿಸಿದರು
ಜೀವಂತ ಸಮಾಧಿ ಮೇಲಿನ ಸಂಪಿಗೆ ಹೂ
ಸುಹಾಸನೆ ಸೂಸುತ್ತಾ ಪ್ರತಿಜ್ಞೆ ಮಾಡಿ ಹೇಳುತ್ತಿದೆ
ದೇಹ ಸುಟ್ಟು ಬೂದಿಯಾದರೇನಂತೆ...
ನಮ್ಮ ಸೇಡಿನ ಭಾವನೆಗಳು ಸತ್ತಿಲ್ಲ.
ಸ್ವಾಭಿಮಾನದ ಸಿಂಹದ ಮರಿಗಳು ನಾವು
ಹೂತ ಗೋರಿಯಿಂದ ಸಿಡಿದು ಬಂದು
ಕುಲಗೇಡಿಗಳನ್ನು ಜೀವಂತ ಸಮಾಧಿ ಮಾಡದೇ
ಸಮಾಧಾನ ಹೊಂದಲಾರೆವು.

○ ಮಡಿವಾಳಪ್ಪ ಎಸ್.ಕೆ

‘ಕುರುಡು ಕಾಂಚಾಣ ಧುತ್ ಅಂತ ಬಿತ್ತೋ...!

(21ನೇ ಪುಟದಿಂದ)

ರಾಷ್ಟ್ರೀಯ ಉತ್ಪನ್ನ (**GDP**)ದ ಶೇ. 100ರಷ್ಟಿತ್ತು. ಅದು 2008ರಲ್ಲಿ ಇಡೀ **GDP**ಯ 350 % ಬೆಳೆದಿತ್ತು. ಅಂದರೆ ಮೂರುವರೆ ಪಟ್ಟು ಹೆಚ್ಚು. ಅಂದರೆ ಈ ಸಾಲದ ಬಲೂನು ಹೇಗೆ ಊದಿ ಕೊಂಡಿತ್ತು ಯೋಚಿಸಿ. *ಮುಖ್ಯವಾಗಿ ಈ ಪರಿಸ್ಥಿತಿಯೇ ಇಡೀ ಜಾಗತಿಕ ಅರ್ಥವ್ಯವಸ್ಥೆಯನ್ನು ಅದರಲ್ಲೂ ಅಮೆರಿಕ ಅರ್ಥವ್ಯವಸ್ಥೆಯನ್ನು ಅತ್ಯಂತ ಅಸ್ಥಿರ(Fragile) ಗೊಳಿಸಿತ್ತು. ಒಂದೇ ಸೂಜಿ ಚುಚ್ಚಿದರೆ ಛಿಣಾಛಿಣ ಆಗುವಷ್ಟು. ಈಗ ಆಗಿದ್ದೂ ಅದೇ. ಸಬ್‌ಪ್ರೈಮ್ ಮಾರುಕಟ್ಟೆ ಬಿಕ್ಕಟ್ಟು ಎಂಬ ಸೂಜಿ ಚುಚ್ಚಿದೆ ಅಷ್ಟೆ !*

ಅಮೇರಿಕನ್ನರು ಸಾಲ ಮಾಡಿ ಮನೆಗಳನ್ನು ಕೊಂಡರು. ಸಾಲಪತ್ರಗಳು ಮೇಲೆ ಹೇಳಿದ ರೀತಿ ಹಣಕಾಸು ಮಾರುಕಟ್ಟೆಯ ಕೈಯಲ್ಲಿ ಬಾಂಡುಗಳಾಗಿ ಜಗತ್ತಿನಾದ್ಯಂತ ಹರಿದು, ಸಟ್ಟಾ ವ್ಯಾಪಾರಕ್ಕೊಳಪಟ್ಟು ಅಪಾರ ಲಾಭವನ್ನು ಕಲೆಹಾಕಿ, ಇಡೀ ಅರ್ಥವ್ಯವಸ್ಥೆಯು ಬಲೂನಿನಂತೆ ಊದಿಕೊಂಡು..... ಅಷ್ಟರಲ್ಲಿ ಮಾರುಕಟ್ಟೆ ಕುಸಿಯಿತು. ಹಣಕಾಸು ಮಾರುಕಟ್ಟೆಯಲ್ಲಿ ಹೂಡಿಕೆ ನಿಂತಿತು. ವಹಿವಾಟು ನಡೆಸಲು ತತ್ಕಾಲದ ಕ್ರೆಡಿಟ್ ಪೂರೈಕೆಯನ್ನು ಲಿಮಾನ್, ಫ್ರೆಡ್ಡಿ, **AIG** ಯಾರೂ ಗಳಿಸಿಕೊಳ್ಳಲಾಗಲಿಲ್ಲ. ಪರಿಣಾಮ ಕ್ರೆಡಿಟ್ **freeze**. ಕುರುಡು ಕಾಂಚಾಣ ಧುತ್ ಅಂತ ಬಿತ್ತು. ಗೃಹ ಮಾರುಕಟ್ಟೆಯಿಂದ ಮೊದಲ್ಗೊಂಡು–ಇಡೀ ಹಣಕಾಸು ಮಾರುಕಟ್ಟೆ ವ್ಯಾಪಿಸಿ–ಅಂತರ ರಾಷ್ಟ್ರೀಯ ಮಾರುಕಟ್ಟೆ ತಲುಪಿ ಷೇರುಪೇಟೆಯಲ್ಲಿ ರಕ್ತದಕೋಡಿ ಹರಿಸಿ, ಉತ್ಪಾದನಾ ವಲಯಗಳನ್ನು ಸ್ಥಗಿತಗೊಳಿಸಿ, ಚೀನಾ ಭಾರತ, ದೇಶಗಳಂತಹ ದೇಶಗಳ ರಫ್ತು ಉದ್ದಿಮೆಗೆ ಪೆಟ್ಟು ನೀಡಿ **I.T., B.T., BPO,** ಗಾರ್ಮೆಂಟ್.... ರಿಯಲ್‌ಎಸ್ಟೇಟ್ ಎಲ್ಲವನ್ನೂ ವ್ಯಾಪಿಸಿದ ಈ ಬಿಕ್ಕಟ್ಟು ... ನಮ್ಮ ಮುಂದಿದೆ. , ಮುಂದುವರಿಯುತ್ತಲೇ ಇದೆ... ಎಲ್ಲಿಯವರೆಗೆ ?

ತಾತ್ಕಾಲಿಕ ಚೇತರಿಕೆಯೋ? ಶಾಶ್ವತ ಪರಿಹಾ ರವೋ?

ಪ್ರಸಕ್ತ ಆರ್ಥಿಕ ಬಿಕ್ಕಟ್ಟು ಹಲವಾರು ಶ್ರೀಮಂತ ಉದ್ದಿಮೆಗಳು ಕುಸಿಯಲು ಕಾರಣವಾದರೆ ಇನ್ನು ಕೆಲವರು ಇನ್ನಷ್ಟು ಬಲಗೊಳ್ಳುತ್ತಿದ್ದಾರೆ. ಸಣ್ಣ ಮೀನುಗಳನ್ನು ದೊಡ್ಡ ತಿಮಿಂಗಲಗಳು ನುಂಗುತ್ತಿವೆ. ಬಿಲಿಯಾದಿಪತಿಗಳಲ್ಲಿ ಕೆಲವರು ಮಿಲಿಯಾದಿಪತಿಗಳಾಗಿದ್ದಾರೆ. ಎಲ್ಲಾ ಸರ್ಕಾರಿ ಪಂಡಿತರು ಹಣಕಾಸು ಮಾರುಕಟ್ಟೆಯನ್ನು ಇನ್ನಷ್ಟು ಕುಸಿತದಿಂದ ತಡೆಗಟ್ಟಲು ಬಡ್ಡಿದರ ಇಳಿಸುವ, **Bailout** ನೀಡುವಂತಹ ಪರಿಹಾರ ಕಾರ್ಯಗಳಿಗೆ ಮುಂದಾಗಿದ್ದಾರೆ.

ಹಣವಂತರಿಗಾಗುವ ನಷ್ಟವನ್ನು ಹೇಗಾದರೂ ಮಾಡಿ ಕಡಿಮೆಗೊಳಿಸುವ ಪ್ರಯತ್ನದಲ್ಲಿ ಸರ್ಕಾರಗಳು ನಿಂತಿವೆ. ಆದರೆ ಈ ಬಿಕ್ಕಟ್ಟಿನಿಂದ ನಿಜಕ್ಕೂ ತೊಂದರೆಗೊಳಗಾಗುವ ಜನಸಾಮಾನ್ಯರ ಬಗ್ಗೆ ಅವರಿಗೆ ಕಾಳಜಿಯಿಲ್ಲ. ಅಮೆರಿಕಾದಲ್ಲಿ ಮನೆ ಕಳೆದುಕೊಂಡವರು, ಯುರೋಪ್, ಜಪಾನು, ಆಫ್ರಿಕಾ, ಲ್ಯಾಟಿನ್ ಅಮೆರಿಕಾ, ಭಾರತ, ಚೀನಾ ಮುಂತಾದೆಲ್ಲ ಕಡೆ ಉದ್ಯೋಗ ವಂಚಿತರಾಗುತ್ತಿರುವವರು, ಬೆಂಗಳೂರಿನಂತ ನಗರಗಳಲ್ಲಿಯೂ ಸಾವಿರಾರು ಸಂಖ್ಯೆಯಲ್ಲಿ ಅತಂತ್ರರಾಗುತ್ತಿರುವ ಸಾಫ್ಟ್‌ವೇರ್ ಬೆಂಚರ್ಸ್, ಕಾಲ್ ಸೆಂಟರ್ (**BPO**) ಉದ್ಯೋಗಿಗಳು, ರಿಯಲ್ ಎಸ್ಟೇಟ್ ಕುಸಿತದ ಪರಿಣಾಮವಾಗಿ ಕಟ್ಟಡ ಕೆಲಸಗಳು ನಿಂತು ಬೀದಿಗೆ ಬಿದ್ದಿರುವ ಉತ್ತರ ಕರ್ನಾಟಕದ ಹಳ್ಳಿಗಳಿಂದ ಗುಳೇಹೋದ ಕಾರ್ಮಿಕರು, ಗಾರ್ಮೆಂಟ್ ಉದ್ದಿಮೆಯ ಕುಂಠಿತದಿಂದಾಗಿ ಆಭದ್ರರಾಗಿರುವ ಗಾರ್ಮೆಂಟ್ ಕಾರ್ಮಿಕರು, ರಫ್ತು ಉದ್ದಿಮೆಗೆ ಬಿದ್ದ ಹೊಡೆತದಿಂದಾಗಿ ಕಂಗೆಟ್ಟಿರುವ ಜವಳಿಸಿದ್ದ ಉಡುಪು ಕಾರ್ಮಿಕರು ಮತ್ತು ಉದ್ದಿಮೆದಾರರು, ಆಟೋಮೊಬೈಲ್ ಕೈಗಾರಿಕೆ ಫಲಾನುಭವಿಗಳು.... ಹೀಗೆ, ಈ ಬಿಕ್ಕಟ್ಟಿನಿಂದಾಗಿ ನಮ್ಮ ಜನರ ಬದುಕುಗಳು ಹದಗೆಡುತ್ತಿವೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತ, ಹಣದುಬ್ಬರಗಳು ಬದುಕನ್ನು ಇನ್ನಷ್ಟು ದುರ್ಬರಗೊಳಿಸಲಿವೆ. ಇದೇ ಜಾಗತಿಕ ಬಂಡವಾಳದ ದುರಾಸೆಯ ಪರಿಣಾಮದಿಂದಾಗಿ ಸ್ಫೋಟಗೊಂಡಿರುವ ಜಾಗತಿಕ ಆಹಾರ ಬಿಕ್ಕಟ್ಟು ಹಾಗೂ ಪರಿಸರದ ಬಿಕ್ಕಟ್ಟು (Ecological Crisis)ಗಳು ಧರೆಯ ಮೇಲಿನ ಸರ್ವರ ಬದುಕನ್ನು ನರಕಸದೃಶಗೊಳಿ ಸಬಲ್ಲವು.

ಇಂತಹ ಪರಿಸ್ಥಿತಿಯಲ್ಲಿ ಜಾರ್ಜ್ ಬುಷ್ ಮೊದಲುಗೊಂಡು ಮನಮೋಹನನಾದಿಯಾಗಿ ಎಲ್ಲಾ ದೇಶಗಳ ನಾಯಕರು ಮರುಚಿಂತನೆ ನಡೆಸಿ, ಜಗತ್ತನ್ನು ಇಂತಹ ಬಿಕ್ಕಟ್ಟಿಗೆ ಸಿಲುಕಿಸಿದ ತಮ್ಮ ನೀತಿಗಳ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿತ್ತು. ಪ್ರಪಂಚ ಮಟ್ಟದಲ್ಲಿ ಗಣನೀಯವಾಗಿ ಕುಸಿದಿರುವ ಸಾರಾಸರಿ ಬೇಡಿಕೆ (**Agregate Demand**) ಯನ್ನು ಹೆಚ್ಚಿಸಲು ಸರಕುಸೇವೆಗಳ ಮೇಲಿನ ಪ್ರಭುತ್ವ ವೆಚ್ಚವನ್ನು ಅಧಿಕಗೊಳಿಸುವ, ಕಲ್ಯಾಣ ಕಾರ್ಯ ಕ್ರಮಗಳನ್ನು ಜಾರಿಗೊಳಿಸುವ, ನೈಜ ಆರ್ಥಿಕತೆಯನ್ನು ಬಲಗೊಳಿಸಿ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕ್ರಮ ಗಳನ್ನು ಕೈಗೊಳಬೇಕಿತ್ತು. ಬಂಡವಾಳಶಾಹಿಹಿತ ಚಿಂತಕನೇ ಆದ ಅರ್ಥಶಾಸ್ತ್ರಜ್ಞ ಜಾನ್‌ಮೆನಾರ್ಡ್ ಕೇನ್ಸ್ ಹೇಳಿದ್ದಂತಹ ಇಂತಹ ಕನಿಷ್ಠ ಕ್ರಮಗಳಿಗೂ ನಮ್ಮ ಪಂಡಿತರು ಸಿದ್ಧರಿಲ್ಲ.

ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದು ಸೃಷ್ಟಿಸಿರುವ ಅರಾಜಕ ಮಾರುಕಟ್ಟೆ ವ್ಯವಸ್ಥೆಯೇ ಮಾನವ ಸಮಾಜಕ್ಕಂಟಿರುವ ನಿಜವಾದ ರೋಗವಾಗಿದೆ. "ಬಿಕ್ಕಟ್ಟು" ಏನಿದ್ದರೂ ಮೇಲೆ ಕಾಣಿಸಿಕೊಳ್ಳುವ ರೋಗ ಲಕ್ಷಣ ಮತ್ರ, ಈ ಭಯಂಕರ ರೋಗದ ವಿವರಗಳನ್ನು, ಪರಿಹಾರೋಪಾಯಗಳನ್ನು 160 ವರ್ಷಗಳ ಹಿಂದೆಯೇ ಕಾರ್ಲ್‌ಮಾರ್ಕ್ಸ್ ಹಾಗೂ ಎಂಗೆಲ್ಸ್ ತಿಳಿಸಿದ್ದಾರೆ. "ಬಂಡ ವಾಳವಾದವು ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತದೆ" ಎಂದು ಮಾರ್ಕ್ಸ್ ಹೇಳಿದ್ದನ್ನು ಅರ್ಥಮಾಡಿಕೊಳ್ಳಬೇಕಿದೆ.

ಬಂಡವಾಳವಾದ ಎಂಬ ರೋಗವನ್ನು ತೊಲಗಿಸಬೇಕು

ಹೌದು. ಅದೊಂದೇ ಮಾನವಕೋಟಿಯ ಮುಂದಿನ ಏಕೈಕ ಹಾಗೂ ಶಾಶ್ವತ ಪರಿಹಾರವಾಗಿದೆ. ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದು ಸೃಷ್ಟಿಸಿರುವ ಅರಾಜಕ ಮಾರುಕಟ್ಟೆ ವ್ಯವಸ್ಥೆಯೇ ಮಾನವಸಮಾಜಕ್ಕಂಟಿರುವ ನಿಜವಾದ ರೋಗವಾಗಿದೆ. "ಬಿಕ್ಕಟ್ಟು" ಏನಿದ್ದರೂ ಮೇಲೆ ಕಾಣಿಸಿಕೊಳ್ಳುವ ರೋಗ ಲಕ್ಷಣ ಮತ್ರ, ಈ ಭಯಂಕರ ರೋಗದ ವಿವರಗಳನ್ನು, ಪರಿಹಾರೋಪಾಯಗಳನ್ನು 160 ವರ್ಷಗಳ ಹಿಂದೆಯೇ ಮನುಕುಲದ ಮಹಾನ್ ಉಪಾಧ್ಯಾಯರಾದ ಕಾರ್ಲ್‌ಮಾರ್ಕ್ಸ್ ಹಾಗೂ ಎಂಗೆಲ್ಸ್ ತಿಳಿಸಿದ್ದಾರೆ. "ಬಂಡವಾಳವಾದವು ತನ್ನ ಗೋರಿ ಯನ್ನು ತಾನೇ ತೋಡಿಕೊಳ್ಳುತ್ತದೆ" ಎಂದು ಮಾರ್ಕ್ಸ್ ಹೇಳಿದ್ದನ್ನು ಅರ್ಥಮಾಡಿಕೊಳ್ಳಬೇಕಿದೆ. ಸಮಾಜಕ್ಕಂಟಿರುವ ಈ ರೋಗವನ್ನು ಮೇಜರ್ ಸರ್ಜರಿ ಮಾಡಿಯೇ ತೊಲಗಿಸಬೇಕಿದೆ. ಜಗತ್ತಿನ ಶ್ರಮಿಕರು ಒಂದಾಗಿ, ಅಯಾದೇಶಗಳ ಬಂಡವಾಳಿಗ ವರ್ಗವನ್ನು ಸಮೂಹ ಆಂದೋಲನದ ಮೂಲಕ ಮಣ್ಣುಮುಕ್ಕಿಸಿದಾಗ ಮಾತ್ರ ಅದು ಸಾಧ್ಯ. ಸಮಾಜವಾದಿ ತತ್ವಗಳನ್ನಾಧರಿಸಿದ, ಅತ್ಯಂತ ವ್ಯವಸ್ಥಿತವಾದ, ಲಾಭದ ಉದ್ದೇಶ, ಕತ್ತು ಕೊಯ್ಯುವ ಸ್ಪರ್ಧೆಗಳಿಲ್ಲದ ಒಂದು ಸುಸ್ಥಿರ ಜಾಗತಿಕ ವ್ಯವಸ್ಥೆ ಎಲ್ಲಾ ರೀತಿಯ ಬಿಕ್ಕಟ್ಟುಗಳನ್ನು ಕೊನೆಗೊಳಿಸುತ್ತದೆ. ಇದಕ್ಕೆ ಉದಾಹರಣೆಯಾಗಿ, 1929ರಲ್ಲಿ ಅಮೆರಿಕಾದಲ್ಲಿ ಉಂಟಾದ ಮಹಾಕುಸಿತ (**The Great Deppression**) ವು ಬಂಡವಾಳಶಾಹಿ ಜಗತ್ತಿನಲ್ಲಿ ಅಪಾರ ಕಷ್ಟ–ನಷ್ಟ, ಸಾವು–ನೋವುಗಳನ್ನುಂಟುಮಾಡಿತು. ಮೂರು ಕೋಟಿ ಜನರು ಉದ್ಯೋಗ ಕಳೆದುಕೊಂಡರು. ಆದರೆ ಅದೇ ಹೊತ್ತಿಗೆ ಸೋವಿಯತ್ ಒಕ್ಕೂಟದ ಸಮಾಜವಾದಿ ಜಗತ್ತನ್ನು ಈ ಬಿಕ್ಕಟ್ಟು ಕೊಂಚವೂ ತಾಕಿರಲಿಲ್ಲ. ಅದೇ ಸಂದರ್ಭದಲ್ಲಿ ಉತ್ಪಾದನೆಯು ಶೇ. 290ರಷ್ಟು ಹೆಚ್ಚಿತ್ತು. 1933ರಲ್ಲಿ ಕೈ ಗಾರಿಕಾ ಉತ್ಪಾದನೆಯು ನೂರಕ್ಕೆ ನೂರರಷ್ಟಿತ್ತು.

ವಾಸ್ತವದಲ್ಲಿ ಇಂದು ಮಾನವ ಸಮಾಜ ಸಾಧಿಸಿರುವ ವೈಜ್ಞಾನಿಕ ಪ್ರಗತಿ ಅದ್ಭುತವಾದುದು. ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ ಇತ್ಯಾದಿಯಾಗಿ ತೀವ್ರ ವೇಗದಲ್ಲಿ ಬೆಳೆಯುತ್ತಿರುವ ಆವಿಷ್ಕಾರಗಳು ಇಡೀ ಮಾನವಜಗತ್ತನ್ನು ಹಸಿವು, ನರಳಿಕೆ, ದುಃಖ ದುಮ್ಮಾನ, ಹಿಂಸೆ, ಶೋಷಣೆ ದಮನಗಳಿಲ್ಲದ ಸಮಾಜಮುಖಿ ಪರಿಸರ ಸಹಕಾರಿಯಾದಂತಹ ಒಂದು ಅದ್ಭುತ ಸಮತಾ ಮಾನವ ಸಮಾಜದ ಸೃಷ್ಟಿಯನ್ನು ಸರಳೀತಗೊಳಿಸಲು ಭೂಮಿಕೆಯನ್ನು ಒದಗಿಸಿವೆ. ಆದರೆ ಅವುಗಳ ಮೇಲೆ ನಿಯಂತ್ರಣ ಹೊಂದಿರುವ ಬಂಡವಾಳಶಾಹಿ–ಸಾಮ್ರಾಜ್ಯಶಾಹಿಯು ತನ್ನ ವರ್ಗದ ಸ್ವಾರ್ಥಕ್ಕಾಗಿ, ತದ್ವಿರುದ್ಧವಾದ, ನೋವು, ಅನ್ಯಾಯ, ದಬ್ಬಾಳಿಕೆ, ಯುದ್ಧ, ಹಿಂಸೆ, ಬಿಕ್ಕಟ್ಟುಗಳೇ ತುಂಬಿರುವ ಸಮಾಜವನ್ನು ಸೃಷ್ಟಿಸಲು ಬಳಸಿಕೊಂಡಿದೆ.

ಆದ್ದರಿಂದಲೇ, ಇಂದಿನ ಬಿಕ್ಕಟ್ಟಿನ ಹಿಂದಿನ ರೋಗವನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕಿದೆ. ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ನೀಡಿ ಮನುಕುಲದ ರಕ್ಷಣೆಗೆ ಕಟಿಬದ್ಧರಾಗಬೇಕಿದೆ. ಈ ಪ್ರಕ್ರಿಯೆಯಲ್ಲಿ ಕೆಲವರು **blood donate** ಮಾಡುವ ಪರಿಸ್ಥಿತಿ ಎದರಾದರೂ ಸರಿ ನಮ್ಮ ಮುಂದಿನ ಪೀಳಿಗೆಗೆ ಜಗತ್ತನ್ನು ಸುರಕ್ಷಿತವಾಗಿ, ಆರೋಗ್ಯ ಕರವಾಗಿ ಉಳಿಸುವ ಹೊಣೆಗಾರಿಕೆ ನಮ್ಮೆಲ್ಲರದಾಗಲಿ! □

ಬಸವಣ್ಣ ನಿರ್ಮಿಸ ಬಯಸಿದ ಸಮಾಜ

ಡಾ. ಎಚ್. ಟಿ. ಪೋತೆ

ಕನ್ನಡದ ನೆಲದಲ್ಲಿ ಹುಟ್ಟಿದ ವೀರಶೈವ ಚಳವಳಿ ಬುದ್ಧನ ಸಿದ್ಧಾಂತವನ್ನೇ ಹೋಲುವಂತಹದ್ದಾಗಿದೆ. ಸಂಪ್ರದಾಯಸ್ಥ ಬ್ರಾಹ್ಮಣವಾದಿ ಸಿದ್ಧಾಂತಕ್ಕೆ ವಿರುದ್ಧವಾಗಿ ಬೆಳೆದ ಈ ಚಳವಳಿ ಮೂರ್ತಿ ಪೂಜೆಯನ್ನು ಹಾಗೂ ಜಾತಿ ಆಧಾರಿತ ಸಮಾಜವನ್ನು ಖಂಡಿಸಿತು. ವೀರಶೈವ ಚಳವಳಿಯು ಹುಟ್ಟಿನಿಂದ ಜಾತಿಯ ವ್ಯತ್ಯಾಸಗಳನ್ನು ತಿರಸ್ಕರಿಸುತ್ತಾ ಭ್ರಾತೃತ್ವವನ್ನು ಎತ್ತಿ ಹಿಡಿಯಿತು. ಆದರೆ ವೀರಶೈವ ಧರ್ಮವು ಯಾವ ಬ್ರಾಹ್ಮಣ ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿತೋ, ಅದೇ ತರಹದ ಹುಟ್ಟು ಹಾಗೂ ಶುದ್ಧಿಯ ಆಧಾರದ ಮೇಲೆ ಸಾಮಾಜಿಕ ಪ್ರತ್ಯೇಕತೆಯನ್ನು ಬೆಳೆಸಿಕೊಂಡಿತು. ಈ ವೈಫಲ್ಯಕ್ಕೆ ಬಸವಾದಿ ಶರಣರು ಕಾರಣರಾಗುವುದಿಲ್ಲ. ಆನಂತರದಲ್ಲಿ ಬಂದ ಆ ಪಂಥದ ಅನುಯಾಯಿಗಳು ಅದನ್ನು ದಿಕ್ಕುತಪ್ಪಿಸಿದರು.

ನಮ್ಮ ಸಮಾಜದ ವ್ಯವಸ್ಥೆಯಲ್ಲಿ ಏಳು ಜನರಲ್ಲಿ ಒಬ್ಬನನ್ನು ಅಸ್ಪೃಶ್ಯನೆಂದು ಪರಿಗಣಿಸುವ ಪರಿಪಾಠವಿದೆ. ಅಸ್ಪೃಶ್ಯ ಎನಿಸಿಕೊಂಡವನನ್ನು ಸಾಮಾಜಿಕ ಬದುಕಿನಿಂದ ದೂರವಿಡುವುದೇ ಈ ಆಚರಣೆಯ ಗುರಿ. ಇದು ಆರೋಗ್ಯದ ಕಾರಣದಿಂದ ಹುಟ್ಟಿದ್ದಲ್ಲ. ಸಾಮಾಜಿಕ ಕಾರಣದಿಂದ ಹುಟ್ಟಿದ್ದು. ಸಾವಿರಾರು ವರ್ಷಗಳ ಇತಿಹಾಸವಿರುವ ಅಸ್ಪೃಶ್ಯತೆ, ವರ್ಣ ವ್ಯವಸ್ಥೆಯ ಹುಟ್ಟಿನ ನಂತರ ಜಾರಿಗೆ ಬಂದಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಎಲ್ಲ ಜಾತಿಗಳಲ್ಲೂ ಕೆಲವರು ಆ ಜಾತಿಯ ಕಟ್ಟುಪಾಡುಗಳನ್ನು ಮುರಿದರು. ಆದ್ದರಿಂದ ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಯಿತೆಂಬ ಅಭಿಪ್ರಾಯವಿದೆ. ಜನಾಂಗ ಘರ್ಷಣೆಯಲ್ಲಿ ಸೆರೆಸಿಕ್ಕವರು, ಗೋಮಾಂಸ ಭಕ್ಷಣೆಯನ್ನು ಮುಂದುವರೆಸಿದವರು ಅಸ್ಪೃಶ್ಯರಾದರು ಎಂಬ ಅಭಿಪ್ರಾಯವೂ ಇದೆ. ಹೀಗೆ ಅನೇಕ ಕಾರಣಗಳಿಂದ ಆರಂಭವಾದ ಈ ಪದ್ಧತಿ ಆಧುನಿಕ ಸಮಾಜದಲ್ಲಿ ಮುಂದುವರೆಯುತ್ತಿರುವುದು ನಮ್ಮ ನಾಗರಿಕ ಪ್ರಜ್ಞೆಗೆ ಎಸೆದ ಸವಾಲು. ಸಂಪೂರ್ಣ ಅರ್ಥಹೀನವಾಗಿರುವ ಅಸ್ಪೃಶ್ಯತೆ ಈಗ ಒಂದು ಪದ್ಧತಿಯಲ್ಲ, ಪಿಡುಗು. ಹುಟ್ಟಿನ ಕಾರಣದಿಂದ ಮನುಷ್ಯನ ವ್ಯಕ್ತಿತ್ವವನ್ನು ನಿರ್ಧರಿಸುವ ಈ ಪದ್ಧತಿ ಮಾನವತಾವಾದಿಗಳಿಂದ ಖಂಡಿಸಲ್ಪಟ್ಟಿದೆ.

ಮಾನವ ಜನಾಂಗದಲ್ಲಿ ತಾರತಮ್ಯ ಭಾವವನ್ನು ಉಂಟುಮಾಡುವ ಪ್ರವೃತ್ತಿಯೇ ಅಸ್ಪೃಶ್ಯತೆಯ ಮೂಲ. ಈ ಅಸಮಾನತೆಯ ಪ್ರವೃತ್ತಿಯನ್ನು ತೀವ್ರವಾಗಿ ವಿರೋಧಿಸಿದವರಲ್ಲಿ ಬುದ್ಧನು ಮೊದಲಿಗ. ಆತ ಜಾತಿ, ವರ್ಣವನ್ನು ಪರಿಗಣಿಸದೆ ಎಲ್ಲರಿಗೂ ತನ್ನ ಧರ್ಮದಲ್ಲಿ ಪ್ರವೇಶವನ್ನು ಕೊಟ್ಟನು. ಇದು ನಮ್ಮ ಶ್ರೇಣೀಕರಣಗೊಂಡ ಸಮಾಜ ವ್ಯವಸ್ಥೆಯ ಮೇಲೆ ನಡೆದ ಮೊದಲ ದಾಳಿ. ಕಸ ಗುಡಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಉಳಿದವರೆಲ್ಲ ಕೀಳಾಗಿ ಕಂಡಾಗ ಬುದ್ಧನು ಆ ವ್ಯಕ್ತಿಯನ್ನು ಗೌರವಿಸಿದ ಸಂಗತಿ ಜನಜನಿತವಾಗಿದೆ. ಅವನ ಶಿಷ್ಯ ಆನಂದನು ಅಮ್ರಪಾಲಿ ಎಂಬ ಚಾಂಡಾಲ ಮಹಿಳೆಯಿಂದ ನೀರನ್ನು ಸ್ವೀಕರಿಸಿ ಕುಡಿದ ಘಟನೆಯೂ ಅಷ್ಟೇ ಪ್ರಸಿದ್ಧವಾಗಿದೆ. ಈ ಬಗೆಯ ಉದಾರವಾದಿ ಧೋರಣೆಯನ್ನು ಆಗಿನ ಕಾಲಕ್ಕೆ ದೊಡ್ಡ ಪ್ರಮಾಣದ ಸುಧಾರಣೆ ಎಂದೇ ಭಾವಿಸಬಹುದು" ಅಸ್ಪೃಶ್ಯತೆ ಮತ್ತು ಕನಿಷ್ಠ ಶ್ರೇಷ್ಠತೆಯನ್ನು ಹೋಗಲಾಡಿಸಲು ಶ್ರಮಿಸಿದ ಮೊದಲ ಪ್ರಯತ್ನ ಇದಾದರೆ, ಎರಡನೆಯ ಪ್ರಯತ್ನ ಬಸವಾದಿ ಶರಣರದು.

ಕನ್ನಡದ ನೆಲದಲ್ಲಿ ಹುಟ್ಟಿದ ವೀರಶೈವ ಚಳವಳಿ ಬುದ್ಧನ ಸಿದ್ಧಾಂತವನ್ನೇ ಹೋಲುವಂತಹದ್ದಾಗಿದೆ. "ಸಂಪ್ರದಾಯಸ್ಥ ಬ್ರಾಹ್ಮಣವಾದಿ ಸಿದ್ಧಾಂತಕ್ಕೆ ವಿರುದ್ಧವಾಗಿ ಬೆಳೆದ ಈ ಚಳವಳಿ ಮೂರ್ತಿ ಪೂಜೆಯನ್ನು ಹಾಗೂ ಜಾತಿ ಆಧಾರಿತ ಸಮಾಜವನ್ನು ಖಂಡಿಸಿತು. ವೀರಶೈವ ಚಳವಳಿಯು ಹುಟ್ಟಿನಿಂದ ಜಾತಿಯ ವ್ಯತ್ಯಾಸಗಳನ್ನು ತಿರಸ್ಕರಿಸುತ್ತಾ ಭ್ರಾತೃತ್ವವನ್ನು ಎತ್ತಿ ಹಿಡಿಯಿತು. ಆದರೆ ವೀರಶೈವ ಧರ್ಮವು ಯಾವ ಬ್ರಾಹ್ಮಣ ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿತೋ, ಅದೇ ತರಹದ ಹುಟ್ಟು ಹಾಗೂ ಶುದ್ಧಿಯ ಆಧಾರದ ಮೇಲೆ ಸಾಮಾಜಿಕ ಪ್ರತ್ಯೇಕತೆಯನ್ನು ಬೆಳೆಸಿಕೊಂಡಿತು".೧

ಈ ವೈಫಲ್ಯಕ್ಕೆ ಬಸವಾದಿ ಶರಣರು ಕಾರಣರಾಗುವುದಿಲ್ಲ. ಆನಂತರದಲ್ಲಿ ಬಂದ ಆ ಪಂಥದ ಅನುಯಾಯಿಗಳು ಅದನ್ನು ದಿಕ್ಕುತಪ್ಪಿಸಿದರು. ಕೆಲ ಮಠಮಾನ್ಯಗಳು ಸಹ ಶರಣರ ನಿಜವಾದ ತತ್ವಗಳನ್ನು ಪ್ರತಿಪಾದಿಸದೆ ಮೌಢ್ಯ, ಸಂಪ್ರದಾಯ, ವರ್ಣ ಜಾತಿ ಸಂಕೋಲೆಗಳನ್ನು ಎತ್ತಿ ಹಿಡಿಯುತ್ತ ಸಾಗಿದ್ದರ ಫಲವಾಗಿಯೇ ಸ್ವಾತಂತ್ರ್ಯ ಪೂರ್ವದ ಅಂದರೆ, ೧೮ನೇ ಶತಮಾನದಲ್ಲಿ ಪೂನಾ ವನ್ನು ಆಳುತ್ತಿದ್ದ ಪೇಶ್ವೆಗಳ ಕಾಲದ ಸಾಮಾಜಿಕ ಸ್ಥಿತಿಗತಿಯ ಕುರಿತು ಒಂದಷ್ಟು ವಿಚಾರಗಳನ್ನು ಮೆಲುಕು ಹಾಕುವುದರ ಮೂಲಕ ಬಸ ವಣ್ಣ ನಿರ್ಮಿಸ ಬಯಸಿದ ಸಮಾಜದ ವಿಚಾರಗಳ ಮೇಲೆ ಬೆಳಕು ಚೆಲ್ಲುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಪೇಶ್ವೆಗಳ ಕಾಲದಲ್ಲಿ ಆಡಳಿತಕ್ಕೊಳಪಟ್ಟಿದ್ದ ಕನ್ನಡದ ಮುಂಬೈ ಕರ್ನಾಟಕ ಪ್ರದೇಶವು ಒಂದಾಗಿದೆ. ಪುಣೆ ಪೇಶ್ವೆಗಳ ಆಡಳಿತ ಕೇಂದ್ರ ಸ್ಥಳವಾಗಿತ್ತು. ಅಲ್ಲಿ ಅಸ್ಪೃಶ್ಯರಿಗೆ ಸ್ವತಂತ್ರವಾಗಿ ಬದುಕುವ ಹಕ್ಕನ್ನು ನಿರಾಕರಿಸಲಾಗಿತ್ತು. ಒಬ್ಬ ಅಸ್ಪೃಶ್ಯ ವರ್ಗದ ವ್ಯಕ್ತಿ ನಿಸ್ಸಂಕೋಚವಾಗಿ ಮೈಚಳಿಬಿಟ್ಟು ಊರು ಕೇರಿಯಲ್ಲಿ ಓಡಾಡುವಂತಿರಲಿಲ್ಲ. ಅಸ್ಪೃಶ್ಯ ವರ್ಗದ ಯಾವುದೇ ವ್ಯಕ್ತಿ ಊರ ಪ್ರವೇಶ ಮಾಡಬೇಕಾದರೆ ಅವರಿಗೆ ಇಂತಹದೆ ಸಮಯವೆಂದು ನಿಯಮ ಹಾಕಿದ್ದರು. ಆ ನಿಯಮದ ಪ್ರಕಾರ ದಿನದ ಹಗಲು ಹನ್ನೆರಡು ಗಂಟೆಗೆ ಮಾತ್ರ ಊರ ಪ್ರವೇಶ ಮಾಡಬೇಕಾಗುತ್ತಿತ್ತು. ಆಗ ಕೈಯಲ್ಲಿ ಒಂದು ಬಡಿಗೆ, ಬೆನ್ನಿಗೆ ಮುಳ್ಳು ಬಾರಿಗೆ, ಕೊರಳಲ್ಲಿ ಟೆಂಗಿನ ಪರಟೆ ಕಟ್ಟಿಕೊಂಡು ಜಾಡಮಾಲಿ ಬರುತ್ತಿದ್ದೇನೆ, ಹೊಲೆಯ ಬರುತ್ತಿದ್ದಾನೆ. ದಯಮಾಡಿ ದಾರಿ ಬಿಡಿ ಎಂದು ಕೂಗಿಕೊಂಡು ಹೋಗಬೇಕಾಗುತ್ತಿತ್ತು. ಒಂದು ವೇಳೆ ಅಪ್ಪಿ ತಪ್ಪಿ ಯಾರಾದರೂ ಮೇಲು ಕುಲದವರು ಎದುರಿಗೆ

ಬಂದರೆ ಅಸ್ಪೃಶ್ಯನಾದ ವ್ಯಕ್ತಿ ದೂರ ಸರಿದು ನೆಲದ ಮೇಲೆ ಅಡ್ಡ ಮಲಗಬೇಕು. ಆತನಿಗೆ ಉಗುಳು ಬಂದರೆ ಕೊರಳಲ್ಲಿ ಕಟ್ಟಿಕೊಂಡ ಪರಟೆಯಲ್ಲಿಯೇ ಉಗುಳಬೇಕು. ಯಾಕೆಂದರೆ, ಅಸ್ಪೃಶ್ಯನು ಉಗುಳಿದ ಉಗುಳು ಮೇಲು ಜಾತಿಯ ಜನ ತುಳಿದರೆ ಮೈಲಿಗೆಯಾಗುತ್ತದೆ. ಎನ್ನುವ ಕಾರಣಕ್ಕಾಗಿ ಕೊರಳ ಪರಟೆಯಲ್ಲಿಯೇ ಉಗುಳು ಬೇಕಾಗುತ್ತಿತ್ತು. ಬೆನ್ನಿಗೆ ಬಾರಿಗೆ ಕಟ್ಟಿಕೊಂಡ ಕಾರಣವೇನೆಂದರೆ, ಅಸ್ಪೃಶ್ಯನು ನಡೆದ ಹೆಜ್ಜೆಯ ಮೇಲೆ ಯಾರಾದರೂ ಹೆಜ್ಜೆ ಇಟ್ಟರೆ ಮೈಲಿಗೆಯಾಗುತ್ತದೆ ಎನ್ನುವುದರಿಂದ ಅವನು ನಡೆದ ದಾರಿಯ ಹೆಜ್ಜೆಗಳನ್ನು ಬೆನ್ನಿಗೆ ಕಟ್ಟಿ ಕೊಂಡ ಬಾರಿಗೆಯಿಂದ ಅಳಿಸುತ್ತ ಹೋಗಬೇಕಾಗುತ್ತಿತ್ತು.

ಇನ್ನು ಮೂರನೆಯ ಕಾರಣ, ಹಗಲು ಹನ್ನೆರಡು ಗಂಟೆಗೆ ಊರ ಪ್ರವೇಶ ಮಾಡುವುದು. ಅಸ್ಪೃಶ್ಯನಾದವನು ಊರ ಪ್ರವೇಶವನ್ನು ಬೆಳಗಿನ ಜಾವ ಇಲ್ಲವೆ ಸಾಯಂಕಾಲ ಮಾಡಿದರೆ ಸೂರ್ಯನ ಬಿಸಿಲಿನಿಂದ ದಲಿತನ ನೆರಳು ಉದ್ದುದ್ದ ಬೀಳುವುದರಿಂದ, ಆ ನೆರಳು ಯಾರಿಗಾದರೂ ತಾಕಿದರೆ, ಸ್ಪರ್ಶ ಮಾಡಿದರೆ ಮೈಲಿಗೆಯಾಗುತ್ತದೆ ಎನ್ನುವ ಕಾರಣಕ್ಕೆ ಹಗಲು ಹನ್ನೆರಡು ಗಂಟೆಗೆ ಊರ ಪ್ರವೇಶ ಮಾಡಬೇಕಾಗುತ್ತಿತ್ತು. ಯಾಕೆಂದರೆ, ಸೂರ್ಯ ನೆತ್ತಿಯ ಮೇಲಿರು ವುದರಿಂದ ಅವನ ನೆರಳು ಅವನ ಕಾಲಲ್ಲಿ ಬೀಳುತ್ತಿತ್ತು. ಅದಕ್ಕಾಗಿ ಸಮಯ ನಿಗಧಿ ಮಾಡಿದ್ದರು. ಇಂತಹ ಕ್ರೂರ ಪದ್ಧತಿ ಪೇಶ್ವೆಗಳ ಕಾಲದಲ್ಲಿ ಚಾಲ್ತಿಯಲ್ಲಿತ್ತು. ಇದು ಬಸವ ಪೂರ್ವದಲ್ಲಿಯೂ ಹಾಗೂ ಆನಂತರದಲ್ಲಿಯೂ ಅನುಚಾನವಾಗಿ ನಡೆದುಕೊಂಡು ಬಂದಿರುವಂತಹದ್ದು. ಈಗಲೂ ಇಂತಹ ಪದ್ಧತಿಗಳು ಅಲ್ಲಲ್ಲಿ ಚಾಲ್ತಿಯಲ್ಲಿವೆ. ಆದರೆ ಅದರ ರೂಪ ಬೇರೆ ಬೇರೆಯಾಗಿದೆ. ಇದಕ್ಕೆ ಪೂರಕವಾಗಿ ವಚನ ಚಳವಳಿಯಲ್ಲಿ ಸಂಬೋಳಿ ನಾಗಿದೇವ ಎನ್ನುವ ದಲಿತ ವಚನಕಾರನಿದ್ದ. ಅವನು ಇಂತಹ ಕ್ರೂರ ಪದ್ಧತಿಗೆ ಬಲಿಯಾದವ. ೧೨ನೆಯ ಶತಮಾನದಲ್ಲಿ ಆ ಪದ್ಧತಿಯನ್ನು ಧಿಕ್ಕರಿಸಿ ಶರಣ ಸಂಸ್ಕೃತಿಗೆ ಸೇರಿದವನಾಗಿದ್ದಾನೆ. ಊರ ಪ್ರವೇಶ ಮಾಡುವ ಅಸ್ಪೃಶ್ಯನನ್ನು 'ಸಂಬೋಳಿ' ಎಂದು ಕರೆಯುತ್ತಿದ್ದರು.

ಬ್ರಾಹ್ಮಣ ಮುಖದಿಂದ ಹುಟ್ಟಿದ, ಕ್ಷತ್ರಿಯ ತೋಳುಗಳಿಂದ ಹುಟ್ಟಿದ, ವೈಶ್ಯನಾದವ ತೊಡೆಗಳಿಂದ ಹುಟ್ಟಿದ, ಶೂದ್ರನಾದವ ಪಾದಗಳಿಂದ ಜನಿಸಿದ. ಪಂಚಮರು ಅಸ್ಪೃಶ್ಯರೆನಿಸಿಕೊಂಡವರು ವರ್ಣಾತೀತರು ಹೀಗೆ ವೈದಿಕ ವ್ಯವಸ್ಥೆ ನಿಯಮಗಳನ್ನು ಮಾಡಿಕೊಂಡು ಅದನ್ನು ಎಲ್ಲರಿಗೂ ಬೋಧಿಸಿದೆ. ವರ್ಣಾಶ್ರಮ ಧರ್ಮದ ಈ ಅನಿಷ್ಟ ಸಾಮಾಜಿಕ ಪದ್ಧತಿಯನ್ನು ಶರಣರು ವಿರೋಧಿಸುವುದರ ಮೂಲಕ ಪರ್ಯಾಯ ಸಮಾಜ ಕಟ್ಟಿ ತೋರಿಸಿದರು. ವರ್ಣಾಶ್ರಮ ಧರ್ಮದ ಬೇರಿಗೇ ಶರಣರು ಕೊಡಲಿಯ ನಿಕ್ಕಿದರು. ಸಮಾನತೆಯ ಹಂದರದ ನವಸಮಾಜವನ್ನು ಕಟ್ಟುವ ಕನಸು ಕಂಡರು. ತಾವು ಕಂಡ ಕನಸನ್ನು ನನಸಾಗಿಸಲು ತಮ್ಮ ಜೀವಿತದುದ್ದಕ್ಕೂ ಶ್ರಮಿಸಿದರು.

ಮನುಷ್ಯನ ದೇಹದ ಅಂಗಾಂಗಗಳಲ್ಲೇ ಬಲ ಭಾಗ ಶ್ರೇಷ್ಠ ಎಡ ಭಾಗ ಕನಿಷ್ಠವೆಂದು ಹೇಳುವ ವೈದಿಕ ಪದ್ಧತಿಯ ವಿರುದ್ಧ ಬಸವಾದಿ ಶರಣರು ಸಮರಸಾರಿ ಸಮಾಜೋಧಾರ್ಮಿಕ ಕ್ರಾಂತಿ ಮಾಡಿದರು. ಅಂದಿನ ಸಾಮಾಜಿಕ ಬದುಕಿನಲ್ಲಿ ಹೊಸದೊಂದು ಸಂಚಲನವನ್ನುಂಟು ಮಾಡಿದರು. ಡಾಂಬಿಕ ಭಕ್ತಿಯನ್ನು ವಿರೋಧಿಸಿದರು.

ಧರ್ಮದ ಕುರಿತು ಇಲ್ಲಿಯವರೆಗೆ ವೈದಿಕರು ನಂಬಿಸಿದ ಅನೇಕ ನಂಬಿಕೆಗಳನ್ನು ಶರಣರು ವಿರೋಧಿಸಿದರು. ಅವುಗಳಿಗೆ ಅರ್ಥವೇ ಇಲ್ಲವೆಂದು ಪ್ರತಿಪಾದಿಸಿದರು. ಬಸವಣ್ಣ ಧರ್ಮದ ತಿರುಳನ್ನು 'ದಯವಿಲ್ಲದ ಧರ್ಮದ್ಯವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ; ದಯವೇ ಧರ್ಮದ ಮೂಲವಯ್ಯಾ' ಎಂದು ಅದರ ಮಹತ್ವವನ್ನು ಎತ್ತಿಹೇಳಿದರು. ಅಸ್ಪೃಶ್ಯರನ್ನು ಆ ಕಾಲದಲ್ಲಿ ಗುಡಿಯೊಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಅಂತಹವರನ್ನು ಕರೆದು ಸಂತೈಸಿದರು. ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡುವೆ? ಬಡವನಯ್ಯ, ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರಹೊನ್ನ ಕಳಸವಯ್ಯ, ಕೂಡಲ ಸಂಗಮದೇವ, ಕೇಳಯ್ಯ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದು ಹೇಳುತ್ತ ಮನುಷ್ಯ ಸಂತತಿ ಜಂಗಮ ಸ್ವರೂಪಿ ಅದಕ್ಕೆ ಕೊನೆಯಿಲ್ಲ ಎಂದು ವಿಶ್ವಾಸ ತುಂಬಿದವರು ಬಸವಣ್ಣನವರು.

ನೀರ ಕಂಡಲ್ಲಿ ಮುಳುಗುವವರ, ಮರವ ಕಂಡಲ್ಲಿ ಸುತ್ತುವವರ ಭಕ್ತಿ ಅದು ನಿಜವಾದ ಭಕ್ತಿಯಲ್ಲವೆಂದೂ, ಅರ್ಥವಿಹೀನವಾದ ತೋರಿಕೆಯ ಢಾಂಬಿಕ ಆಚರಣೆಯೆಂದು ಶರಣರು ಸಾಮಾನ್ಯರಿಗೆ ತಿಳಿಹೇಳಿದರು. ಅಂದು ಜನತೆಯ ಮನಸ್ಸಿನಲ್ಲಿ ಮನೆಮಾಡಿಕೊಂಡಿದ್ದ, ರಕ್ತಗತವಾಗಿದ್ದ ಮೂಢನಂಬಿಕೆಗಳನ್ನು ಕಿತ್ತೆಸೆಯಲು ಶರಣರು ಕಂಕಣ ಬದ್ಧರಾದುದನ್ನು ಅವರ ವಚನಗಳಿಂದ ತಿಳಿಯುವೆವು. 'ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು, ದಿಟದಿ ನಾಗರ ಕಂಡಡೆ ಕೊಲ್ಲೆಂಬರು, ಉಂಬ ಜಂಗಮ ಬಂದಡೆ ನಡೆ ಎಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿವರು'.

ಧರ್ಮದ ಕುರಿತು ಇಲ್ಲಿಯವರೆಗೆ ವೈದಿಕರು ನಂಬಿಸಿದ ಅನೇಕ ನಂಬಿಕೆಗಳನ್ನು ಶರಣರು ವಿರೋಧಿಸಿದರು. ಅವುಗಳಿಗೆ ಅರ್ಥವೇ ಇಲ್ಲವೆಂದು ಪ್ರತಿಪಾದಿಸಿದರು. ಬಸವಣ್ಣ ಧರ್ಮದ ತಿರುಳನ್ನು 'ದಯವಿಲ್ಲದ ಧರ್ಮದ್ಯವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ; ದಯವೇ ಧರ್ಮದ ಮೂಲವಯ್ಯಾ' ಎಂದು ಅದರ ಮಹತ್ವವನ್ನು ಎತ್ತಿಹೇಳಿದರು. ಅಸ್ಪೃಶ್ಯರನ್ನು ಆ ಕಾಲದಲ್ಲಿ ಗುಡಿಯೊಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಅಂತಹವರನ್ನು ಕರೆದು ಸಂತೈಸಿದರು. ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡುವೆ? ಬಡವನಯ್ಯ, ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರಹೊನ್ನ ಕಳಸವಯ್ಯ, ಕೂಡಲ ಸಂಗಮದೇವ, ಕೇಳಯ್ಯ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ಹೇಳುತ್ತ ಮನುಷ್ಯ ಸಂತತಿ ಜಂಗಮ ಸ್ವರೂಪಿ ಅದಕ್ಕೆ ಕೊನೆಯಿಲ್ಲ. ಕಟ್ಟಿದ ಕಟ್ಟಡ ಬಿದ್ದು ಹೋಗುತ್ತದೆ. ಆದ್ದರಿಂದ ನೀವು ಹಿರಿಯ ಮಹಾಮೇಶ್ವರರು ದೇಹವೇ ದೇಗುಲವೆಂದು ತಿಳಿದು ಆತ್ಮದಲ್ಲಿಯೇ, ನಿಮ್ಮ ಕಾಯಕದಲ್ಲಿಯೇ ದೇವರಿದ್ದಾನೆ ಎಂದು ಅಸ್ಪೃಶ್ಯರಲ್ಲಿ ಆತ್ಮವಿಶ್ವಾಸ ತುಂಬಿದ ವರು ಬಸವಣ್ಣನವರು. ವಿದ್ಯೆ, ಹಣ, ಅಂತಸ್ತು, ಅಧಿಕಾರ ಒಬ್ಬರಲ್ಲೇ ಕೂಡಿಬೀಳಬಾರದು. ಎಲ್ಲರಿಗೂ ಸಮಾನವಾಗಿ ಹಂಚಿಕೆ ಆಗಬೇಕು. ನೀರು ಸದಾ ಹರಿತಾ ಇದ್ದರೆ ಸ್ವಚ್ಛ ವಿರುತ್ತದೆ. ನಿಂತಲ್ಲೇ ನಿಂತರೆ ಕೊಳೆತು, ಮಲೆತು ನಾರುತ್ತದೆ. ಇದರಂತೆ ನಾವು ಸದಾ ಚಲನಶೀಲರಾಗಬೇಕೆಂದು ಬಸವಣ್ಣನವರು ನುಡಿದಿದ್ದಾರೆ. ಸ್ಥಾವರಕ್ಕೆ ಪ್ರಪಂಚದಲ್ಲಿ ಸ್ಥಾನವಿಲ್ಲ. ಅದು ನಾಶ ಹೊಂದುತ್ತದೆ. 'ಜಂಗಮ' ಅಂದರೆ ಚಲನಶೀಲವಾದುದುದಕ್ಕೆ ಅಂತ್ಯವಿಲ್ಲ. ಮಾನವ ಶರೀರ ಸದಾ ಚಲನಶೀಲವಾಗಬೇಕು. ಅದುವೇ ನಿಜವಾದ ದೇಗುಲ. ಕಲ್ಲು-ಮಣ್ಣುಗಳಿಂದ ಕಟ್ಟಿದ ದೇಗುಲ ಬಿದ್ದು ಹೋಗುತ್ತದೆ. ಅಲ್ಲಿಗೆ ಹೋಗಿ ಸಾಧಿಸುವುದು ಅದಕ್ಕಿಂತ ಶ್ರೇಷ್ಠವಾದ ದೇಗುಲ ಎಂದರೆ ದೇಹವೇ ಎಂದು ಸಾರಿದ್ದು ಅಪೂರ್ವವಾಗಿದೆ.

ಅಸ್ಪೃಶ್ಯರಲ್ಲಿ ಧೈರ್ಯ ತುಂಬಿದ್ದಲ್ಲದೆ ಅನುಭವ ಮಂಟಪದಲ್ಲಿ ಮಾದಾರ ಚೆನ್ನಯ್ಯ, ಧೂಳಯ್ಯ, ದೋಹಯ್ಯ, ಉರಿಲಿಂಗ ಪೆದ್ದಿ, ಕಾಳವ್ವೆ, ಸೂಳೆ ಸಂಕವ್ವೆ, ಕಂಭಾವಿ ಭೋಗಣ್ಣ, ಸಮಗಾರ ಹರಳಯ್ಯ, ಡೋಹಾರ ಕಕ್ಕಯ್ಯ, ಸಂಬೋಳಿ ನಾಗಿದೇವ ಹೀಗೆ ಅನೇಕ ತಳವರ್ಗದ ಅಸ್ಪೃಶ್ಯರೆನಿಸಿಕೊಂಡವರನ್ನು ಬಸವಣ್ಣ ಬಾಚಿ ತಬ್ಬಿಕೊಂಡ. ಅನುಭವ ಮಂಟಪದಲ್ಲಿ ಅವರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟ, ಹರಳಯ್ಯ ದಂಪತಿಗಳು ಮಾಡಿದ ಚಪ್ಪಲಿಗಳನ್ನು ತನ್ನ ಮಸ್ತಕದ ಮೇಲಿರಿಸಿಕೊಂಡು ತನ್ನ ಶ್ರೇಷ್ಠ ಗುಣವನ್ನು ಮಾನವೀಯ ಮೌಲ್ಯವನ್ನು ಮೆರೆದ ವ್ಯಕ್ತಿ ಬಸವಣ್ಣ. ಆತನು ನಿಜಕ್ಕೂ ಮಾನವ್ಯದ ಮಂದಾರವನ್ನರಳಿಸಿದ ಮಹಾಪುರುಷ.

ಪುರುಷ ಮೇಲು, ಸ್ತ್ರೀ ಕೀಳು ಎಂದಲ್ಲದೆ ಮಾನವ ಮಾನವರಲ್ಲಿ ಭೇದವನ್ನುಂಟು ಮಾಡಲಿಕ್ಕೆ ಕಾರಣವಾಗಿದ್ದ ವೇದ ಆಗಮಗಳನ್ನು ಬಸವಣ್ಣ ವಿರೋಧಿಸುವ ರೀತಿ ಅನನ್ಯತೆಯಿಂದ ಕೂಡಿದೆ. ವೇದಕ್ಕೆ ಒರೆಯುಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ. ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗ ಕೊಯಿವೆ ಎಂದು ಹೇಳುತ್ತಲೇ ಮಾದರ ಚೆನ್ನಯ್ಯನ ಮನೆಯ ಮಗನಾನಯ್ಯ ಎಂದು ನುಡಿಯುತ್ತಾನೆ. ತಳವರ್ಗದವರ ಜೊತೆ ಇರುವ ಬಸವಣ್ಣನ ಒಡನಾಟವನ್ನು ಸಹಿಸದವರಿಗೆ ಇದು ಉತ್ತರವಾಗಿತ್ತು. ಕುಲಗೋತ್ರಗಳಲ್ಲಿ ನಂಬಿಕೆ ಇಟ್ಟುಕೊಂಡವರಿಗೆ, ಮನುಷ್ಯ ವಿರೋಧಿಗಳಿಗೆ ಬಸವಣ್ಣನ ಈ ಚಿಂತನೆ ನುಂಗಲಾರದ ತುತ್ತಾಯಿತು. ಮುಂದುವರೆದರು ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ ಎಂದು ತನ್ನನ್ನು ತಾನು ತಳ ವರ್ಗೀಕರಣಗೊಳಿಸಿಕೊಳ್ಳುವುದರ ಮೂಲಕ ಬಸವಣ್ಣ ದಲಿತ ಶೋಷಿತರ ಬದುಕಿನಲ್ಲಿ ಭರವಸೆಯನ್ನು, ಆಸೆಯನ್ನು ಮೂಡಿಸಿದ್ದಲ್ಲದೆ ಆತ್ಮ ವಿಶ್ವಾಸ ತುಂಬಿದ.

ಅಂದಿನ ಸಮಾಜದಲ್ಲಿ ಮಾತೆತ್ತಿದರೆ ಜಾತಿ, ಮತ, ಕುಲಗೋತ್ರಗಳ ಮೇಲಾಟದ ಸಂರ್ಭದಲ್ಲಿ ಹುಟ್ಟು ಯಾವಾಗಲೂ ಶ್ರೇಷ್ಠವಲ್ಲ. ಒಳ್ಳೆಯ ಕೆಲಸ ಮಾಡುವುದ

(೩೫ನೇ ಪುಟಕ್ಕೆ)

ರಾಮಾಯಣ ಮತ್ತು ಮಹಾಭಾರತಕ್ಕೆ ಸೇರಿದ ಬಗೆಬಗೆಯ ಐತಿಹ್ಯಾಗಳು ಈ ನಾಡಿನಾದ್ಯಂತ ಹಬ್ಬಿದ್ದು, ಇಲ್ಲಿ ಕಲ್ಲು-ಕಲ್ಲು ಕೂಡ ಕತೆ ಹೇಳುತ್ತದೆ. ರಾಮತೀರ್ಥ, ಲಕ್ಷ್ಮಣ ತೀರ್ಥ, ಮೃಗವಧೆ, ಸೀತೆ ಸೆರಗು ಎಂಬ ಸ್ಥಳ ನಾಮಗಳಿಗೆ ಕೊರತೆ ಯಿಲ್ಲ. ಹಂಪಿಯ ಸುತ್ತ ಮುತ್ತಲಿನ ಪರಿಸರವನ್ನೆ ರಾಮಾಯಣದ ಕಿಷ್ಕಿಂಧೆ ಎಂದು ಕರೆಯತ್ತಾರೆ. ಕೋಲಾರದ ಬೆಟ್ಟ ಸಾಲಿಗೆ ಪಾಂಡವರ ಜನನ ಮತ್ತು ಬಾಲ್ಯ ಜೀವನಗಳ ಭೂಮಿಕೆ ಯಾದ 'ಶತ ಶೃಂಗ ಶೈಲ'ವೆಂಬ ಹೆಸರಿದೆ. ಕೋಲಾರದ ಬೆಟ್ಟಸಾಲಿ ನಲ್ಲಿ ಭೀಮನ ಹಾಲಾಡಿ. ಭೀಮನ ಗರಡಿ, ಭೀಮ-ಬಕಾಸುರ ಗವಿ ಎಂಬ ಸ್ಥಳ ನಾಮಗಳಿವೆ. ಮಲೆ ನಾಡಿನಲ್ಲಿ ಒಂದೇ ರಾತ್ರಿ ಯಲ್ಲಿ ಭೀಮಕಟ್ಟಿದನೆಂದು ಹೇಳುವ ಭೀಮನ ಕಟ್ಟೆ ಇದೆ. ನೈಸರ್ಗಿಕ ಸ್ಥಳ ಗಳು ಮತ್ತು ರಾಷ್ಟ್ರೀಯ ಮಹಾಕಾವ್ಯಗಳ ಮೇಳನವೆನ್ನಬಹುದಾದ ಈ ಬಗೆಯನ್ನು ನೈಸರ್ಗಿಕ ಐತಿಹ್ಯಾಗಳು ಎಂದು ಕರೆಯಬುಹುದು.

ವಿ ಚಂದ್ರಶೇಖರ
ನಂಗಲಿ

ಪರಂಪರೆ ಸಂರಕ್ಷಣೆಗಾಗಿ ಕಾಲೇಜುಗಳಲ್ಲಿ ಹೆರಿಟೇಜ್ ಕ್ಲಬ್‌ಗಳ ಸ್ಥಾಪನೆ

"ಹೆರಿಟೇಜ್ ಕ್ಲಬ್ (=ಪರಂಪರೆ ಕೂಟ)"-ಎಂಬ ಮುದ್ರಿತ ಪಾರಿಭಾಷಿಕ ಪದಗಳನ್ನು ಕುರಿತೇ ಆಲೋಚಿಸಬೇಕಾಗಿದೆ. 'ಹೆರಿಟೇಜ್ ಕ್ಲಬ್' ಎಂಬುದಕ್ಕೆ 'ಪರಂಪರೆ ಕೂಟ' ಎಂಬುದು ಸಮರ್ಪಕ ಅನುವಾದವಲ್ಲ. ಕ್ಲಬ್‌ಗೆ 'ಬಳಗ' ಎಂಬ ಪದವನ್ನಿಟ್ಟುಕೊಳ್ಳಬಹುದು. ಹೆರಿಟೇಜ್ ಮತ್ತು ಪರಂಪರೆ ಸಮಾನಾರ್ಥಕ ಶಬ್ದಗಳಲ್ಲ! ಟ್ರೆಡಿಷನ್ ಎಂಬುದಕ್ಕೆ ಕನ್ನಡದಲ್ಲಿ ಪರಂಪರೆ ಎಂಬ ಶಬ್ದ ಚಾಲ್ತಿಯಲ್ಲಿದೆ. ಆದ್ದರಿಂದ, ಹೆರಿಟೇಜ್ ಎಂಬುದಕ್ಕೆ ಬೇರೆ ಶಬ್ದವನ್ನೆ ಇಟ್ಟುಕೊಳ್ಳಬೇಕು ಅಥವಾ ಇದಾವ ಗೊಡವೆಯೂ ಬೇಡ ಎನ್ನುವುದಾದರೆ, 'ಹೆರಿಟೇಜ್ ಕ್ಲಬ್'-ಎಂಬುದನ್ನೇ ಒಪಿಕೊಳ್ಳಬಹುದು, 'ಹೆರಿಟೇಜ್ ಎಂಬ ಸಂಯೋಜಿತ ಶಬ್ದದಲ್ಲಿ 'ಹೆರಿಡಿಟಿ' ಮತ್ತು 'ಏಜ್' ಎಂಬ ಎರಡು ಶಬ್ದಗಳಿವೆ. ಇದಕ್ಕೆ ಕನ್ನಡದಲ್ಲಿ ಶಬ್ದಗಳಿಲ್ಲವಾದ್ದರಿಂದ ಎಂದಿನಂತೆ ಅನುವಾದ ಮಾದರಿಯನ್ನು ಆಶ್ರಯಿಸಿ 'ಯುಗಯಾತ್ರೀ' ಎಂಬ ಸಂಸ್ಕೃತ ಶಬ್ದವನ್ನು ಬಳಸ ಬಹುದು. ಕಣ್ಣಿಗೆ ಕಾಣದ ಮುತ್ತಜ್ಜಗಿಂತಲೂ (='ಯುಗ ಯಾತ್ರೀ' ಗಿಂತಲೂ) ಕಣ್ಣಿಗೆ ಕಾಣುವ ಮೊಮ್ಮಗಳು (=ಹೆರಿಟೇಜ್) ಮೇಲು ಎಂಬಂತೆ ಇಂಗ್ಲಿಷಿನ 'ಹೆರಿಟೇಜ್ ಕ್ಲಬ್'-ಹೆಚ್ಚು ಸ್ವೀಕಾರಾರ್ಹವೆಂದು ನನ್ನ ಅಭಿಪ್ರಾಯ.

ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯವರು ಪ್ರಕಟಿಸಿರುವ 'ಪರಂಪರೆ ಉಳಿಸಿ' - ಎಂಬ ಹೆಸರಿನಲ್ಲಿರುವ ಕರಪತ್ರದಿಂದ ಆಯ್ದಸಾಲುಗಳಿವು: "ಕರ್ನಾಟಕವು ಉಜ್ವಲ ಇತಿಹಾಸ, ಭವ್ಯ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಸಾವಿರಾರು ವರ್ಷಗಳ ಇತಿಹಾಸ, ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ..... ನಮ್ಮ ಅಮೂಲ್ಯ ಪರಂಪರೆಯನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ...... ಅದೇ ರೀತಿ ಸ್ಥಳೀಯ ಸಾಂಪ್ರದಾಯಿಕ ಕರಕುಶಲ ಕಲೆ, ಪಾರಂಪರಿಕ ಆಟಗಳು, ಜಾನಪದ ಜಾತ್ರೆಗಳು ನಮ್ಮ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗಗಳಾಗಿವೆ, ನಮ್ಮ ಸುತ್ತಲಿನ ಹಸಿರು ಪರಿಸರ, ನದಿ, ಹಳ್ಳಕೊಳ್ಳಗಳು, ಸರೋವರಗಳು, ಗುಡ್ಡ ಬೆಟ್ಟಗಳು, ಕೆರೆ ಕುಂಟೆಗಳು ನಮ್ಮ ನೈಸರ್ಗಿಕ ಪರಂಪರೆ ತಾಣಗಳು ಅತಿಕ್ರಮಣವಾಗದಂತೆ ತಡೆಯುವ ಜವಾಬ್ದಾರಿ ಯುವ ಜನಾಂಗದ ಮೇಲಿದೆ,,,, ಬನ್ನಿ! ಪರಂಪರೆ ಸಂರಕ್ಷಣೆಗೆ ಕೈ ಜೋಡಿಸಿ, ಈ ವಿಚಾರವನ್ನು ಎಲ್ಲರಿಗೂ ತಲು ಪಿಸಿ, ನಮ್ಮ ಶ್ರೀಮಂತ ಪರಂಪರೆಯನ್ನು ಸಂರಕ್ಷಿಸಲು, ಉಳಿಸಲು ನೆರವಾಗಿ".....

ಮೇಲಿನ ಕರಪತ್ರದಲ್ಲಿ 'ಪರಂಪರೆ'ಯನ್ನು ಐತಿಹಾಸಿಕ, ಕಲಾತ್ಮಕ, ಜಾನಪದ, ಸಾಂಸ್ಕೃತಿಕ, ನೈಸರ್ಗಿಕ ಮುಂತಾಗಿ ಬಹು ವಿಧಗಳಿಂದ ಬಹುರೂಪಿಯಾಗಿ ಗುರುತಿಸಿ ಕೊಂಡಿರುವುದು ಉಚಿತವಾಗಿದೆ. ಪರಂಪರೆಯೆಂದರೆ, ಕೇವಲ ಗತಕಾಲದ ಸ್ಮಾರಕಗಳು ಎಂಬ ಸ್ಥಾವರ ದೃಷ್ಟಿಯನ್ನು ಮೀರಿದ ಮತ್ತು ನಮ್ಮ ಸುತ್ತಮುತ್ತಲಿನ ಪರಿಸರ ಜನ್ಯ ಸಂಗತಿಗಳೆಂಬ ಜಂಗಮ ದೃಷ್ಟಿಯನ್ನು ಒಳಗೊಂಡಿರುವ ಸರ್ಕಾರಿ ನೆಲೆಯ ವಿವರಣೆಯನ್ನು ನಾನು ಕೂಡ ಒಪ್ಪುತ್ತೇನೆ.

ಪರಂಪರೆಯನ್ನು ಬದುಕುವುದಕ್ಕೂ ಮತ್ತು ಪರಂಪರೆಯನ್ನು ಅರಿಯುವುದಕ್ಕೂ ಇರುವ ಅಜಗಜಾಂತರ ವ್ಯತ್ಯಾಸವನ್ನು ಇಲ್ಲಿ ಸ್ಪಷ್ಟ ಪಡಿಸಿಕೊಳ್ಳಬೇಕಾಗಿದೆ. ಪರಂಪರೆಯ ಜೀವನ ಶೈಲಿಯಲ್ಲಿ ಬದುಕುವುದೆಂದರೆ ಸದಾ ಆಗುತ್ತಿರುವ ಪ್ರಕ್ರಿಯೆ ಎಂಥರ್ಥ! ಪರಂಪರೆಯ ಸಂರಕ್ಷಣೆಯಲ್ಲಿ ಅರಿವು ಮೂಡಿಸುವುದು ಎಂದರೆ ಅದೊಂದು ಬಗೆಯ ವಿಶೇಷ ಚಟುವಟಿಕೆಯೆಂದೇ ಅರ್ಥ! ಇದನ್ನು ದೇವಾಲಯವೇ ಆಗುವುದು ಮತ್ತು ದೇವಾಲಯಕ್ಕೆ ಹೋಗಿ ಬರುವುದು ಎಂಬ ವೈದೃಶ್ಯಕ್ಕೆ ಹೋಲಿಸಬಹುದು. ದೇವಾಲಯವೇ ಆಗುವುದನ್ನು ಬಿಟ್ಟುಕೊಟ್ಟಾಗ ದೇವಾಲಯಕ್ಕೆ ಹೋಗಿ ಬರುವುದು ಹೇಗೋ ಹಾಗೆಯೇ ಪರಂಪರೆಯ ಜೀವನ ಶೈಲಿಯನ್ನು ಬಿಟ್ಟುಕೊಟ್ಟಾಗ ಪರಂಪರೆಯ ಸಂರಕ್ಷಣೆ-ಅರಿವು ಮುಖ್ಯವಾಗುತ್ತದೆ. 'ಪರಂಪರೆ' ಎಂದರೆ ಹಿಂದಿನದು ಮಾತ್ರವಲ್ಲ! ಭೂತ-ವರ್ತಮಾನ-ಭವಿಷ್ಯಗಳ ಪ್ರತೀಕದಂತಿರುವ 'ಬೀಜ'ಗಳಂತೆ ಪರಂಪರೆಯು ಯುಗಯಾತ್ರೀ ಪ್ರಜ್ಞೆಯಾಗಿದೆ. ಈ ದೃಷ್ಟಿಯಿಂದ ನೋಡಿದರೆ, ಟಿ.ಎಸ್. ಎಲಿಯಟ್ ರಚಿಸಿದ 'ಟ್ರೆಡಿಷನ್ ಆಂಡ್ ಇಂಡಿವಿಜ್ಯುಅಲ್ ಟಾಲೆಂಟ್'-ಎಂಬ ಪ್ರಬಂಧವು ಶತಮಾನದ ಚಿಂತನೆಗಳಲ್ಲಿ ಒಂದಾಗಿದೆ. ಇದರ ಪ್ರಭಾವಕ್ಕೆ ಒಳಗಾಗದ ಲೇಖಕರೆ ಇಲ್ಲವೆಂದು ಹೇಳಬಹುದು. ಜಗತ್ತಿನ ಎಲ್ಲ ಭಾಷಾ ಸಾಹಿತ್ಯಗಳಲ್ಲಿ 'ಪರಂಪರೆ'ಯನ್ನು ಕುರಿತ ಚರ್ಚೆ. ಸಂವಾದಗಳಿಗೆ ಈ ಲೇಖನವೇ ಮೂಲ ಸೆಲೆಯಾಗಿದೆ.

ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಗಮನಿಸಿದರೆ, ಪರಂಪರೆಯ ಬಗ್ಗೆ ಟೀಕೆ ಮತ್ತು ಪ್ರಶಂಸೆಗಳೆರಡೂ ಕಂಡು ಬರುತ್ತವೆ. ಅಜ್ಜ ನೆಟ್ಟಾಲದ ಮರಕ್ಕೆ ಮೊಮ್ಮಗ ನೇಣು ಹಾಕಿಕೊಂಡ-ಎಂಬ ಗಾದೆ ಮಾತಿನಲ್ಲಿ ಪರಂಪರೆಗೆ ಜೋತು ಬೀಳುವುದನ್ನು ಟೀಕಿಸಲಾಗಿದೆ. ಪರಂಪರೆಯನ್ನು ಕುರಿತು "ಬೇರು ಸತ್ತೀ ಮರವನೆತ್ತಿ ನಿಲ್ಲಿಸು ಮಗೂ"-ಎಂದಿರುವ ಗೋಪಾಲಕೃಷ್ಣ ಅಡಿಗರ ನುಡಿಗಳಲ್ಲೂ ಕಟುವಾದ ಟೀಕೆ ಮತ್ತು ವಿಡಂಬನೆಗಳಿವೆ. ಕೆ.ಎಸ್.ನರಸಿಂಹಸ್ವಾಮಿಯವರು ಪರಂಪರೆಗೆ ವಿಶಿಷ್ಟರೀತಿಯಲ್ಲಿ ವಿದಾಯ ಹೇಳಿದ್ದಾರೆ.

"ಹಕ್ಕಿತಂಗುವುದಿಲ್ಲ, ಕೋತಿ ಜಗ್ಗುವುದಿಲ್ಲ
ಏನಿದರ ಅಮರಭಾವ?
ನೂರು ವಸಂತಗಳ ಹೀರಿ ಕಟ್ಟರೆಯಾಗಿದೆ ಇದರ ದೇಹ
ಹಾವಿನ ಸಂಸಾರದ ಪೊಟ್ಟರೆಯಾಗಿದೆ ಇದರ ಗೇಹ
ಬಿರುಗಾಳಿಯಾದರೂ ಬೀಸಿ ಇದು ಬಿದ್ದರೆ ವಾಸಿ"

ಪರಂಪರೆಯನ್ನು ಕುರಿತ ಪ್ರಶಂಸೆ ಮತ್ತು ಅಭಿಮಾ ನಕ್ಕೆ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ನೋಡಬೇಕು:

ಹಳೆಬೇರು ಹೊಸಚಿಗುರು
ಕೂಡಿರಲು ಮರ ಸೊಬಗು.

ಬೀಜದಿಂದ ಮೊಳಕೆಯೊಡೆದ ಚಿಗುರಿಗೆ ಶಕ್ತಿಸಾಲದು! ಆದರೆ, ಹಳೆಬೇರುಗಳಿಂದ ಮೂಡಿದ ಚಿಗುರು ಬಿಸಿಲಬೇಗೆಯನ್ನು ಸಹಿಸಿಕೊಂಡು ನಳನಳಿಸುತ್ತಾ ಬೆಳಗುತ್ತದೆ. ಬೇರನ್ನು ತಾಯಿಗೂ ಚಿಗುರನ್ನು ಮಗುವಿಗೂ ಹೋಲಿಸಬಹುದು. ನಾನು ಎಂ.ಎ. ಓದುತ್ತಿದ್ದಾಗ ಡಾ॥ ಸಿ.ನಾರಾಯಣ ರೆಡ್ಡಿಯವರ ಪಿ.ಎಚ್.ಡಿ. ಥೀಸಿಸ್ ಗಮನಿಸಿದ್ದೆ. ಇದರಲ್ಲಿ ಪರಂಪರೆ ಮತ್ತು ಕವಿ ಪ್ರತಿಭೆಯನ್ನು ತಾಯಿ ಮತ್ತು ಮಗುವಿಗೆ ಹೋಲಿಸಲಾಗಿದೆ. ಪರಂಪರೆ ಯಲ್ಲಿ ಜಳ್ಳು ಸಾಕಷ್ಟಿರುವುದರಿಂದ ಅದನ್ನೆಲ್ಲ ತೂರಿಕೊಂಡು, ಗಟ್ಟಿಕಾಳುಗಳನ್ನು ಸಂಗ್ರಹಿಸಿ ಕೊಳ್ಳಬೇಕಾಗುತ್ತದೆ. ಬಹುಶಃ ಈ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಪರಂಪರೆಯ ಬಗ್ಗೆ ಟೀಕೆ ಮತ್ತು ಪ್ರಶಂಸೆ

ಗಳೆರಡೂ ಕಂಡುಬಂದಿವೆ. "ಹಿಂದಣ ಹೆಜ್ಜೆಯನರಿತಲ್ಲದೆ ಮುಂದಣ ಹೆಜ್ಜೆಯ ನಿರಿಸಲಾಗದು"-ಎಂಬ ಅಲ್ಲಮ ಪ್ರಭುಗಳ ಮಾತಿನಲ್ಲಿ ಪರಂಪರೆ ಮತ್ತು ಆಧುನಿಕತೆಗಳ ನಡುವೆ ಅವಿಭಾಜ್ಯ ಸಂಬಂಧವಿರುವುದನ್ನು ಕಾಣುತ್ತೇವೆ.

ಕೋಲಾರದ ಸರ್ಕಾರಿ ಬಾಲಕರ ಕಾಲೇಜಿಗೆ ಕೋಲಾರ ನಗರದಿಂದ ಮಾತ್ರವಲ್ಲದೆ, ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಂದಲೂ ವಿದ್ಯಾರ್ಥಿಗಳು ಬರುತ್ತಿರುವುದರಿಂದ ಇಂಥವರನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ರಾಜ್ಯದಲ್ಲಿರುವ ಕೆಲವು 'ಮ್ಯೂಸಿಯಂ'ಗಳ ಬಗ್ಗೆ ಮಾಹಿತಿ ಕೊಡುತ್ತಿದ್ದೇನೆ:

1. ತಮಾಷ ಬಂಗಲೆ-ಇರುವೆ ಜೀವ. ಇದು ಜೀವನ ಎಂಬ ಪ್ರದರ್ಶನ ಶಾಲೆ. ಬೆಂಗಳೂರಿನ ಕಸ್ತೂರ್ ಬಾ ರಸ್ತೆಯಲ್ಲಿದೆ.

2. ವಿಶ್ವೇಶ್ವರಯ್ಯ ಮ್ಯೂಸಿಯಂ-ತಂತ್ರಜ್ಞಾನ ನಡೆದು ಬಂದ ಹಾದಿಯ ಪ್ರದರ್ಶನ ಶಾಲೆ. ಬೆಂಗಳೂರಿನ ಕಸ್ತೂರ್ ಬಾ ರಸ್ತೆಯಲ್ಲಿದೆ.

3. ಜಾನಪದ ಮ್ಯೂಸಿಯಂ-ರಾಮನಗರದ ಬಳಿ ಬೆಂಗಳೂರು- ಮೈಸೂರು ಹೆದ್ದಾರಿಯ ಪಕ್ಕದಲ್ಲಿದೆ.

4. ಜಾನಪದ ಮ್ಯೂಸಿಯಂ- ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿದೆ.

ಬಹುಮುಖ್ಯವಾದ ಈ ನಾಲ್ಕು ಮ್ಯೂಸಿಯಂಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವಮಾನದಲ್ಲೊಮ್ಮೆಯಾದರೂ ಸರಿ! ದರ್ಶಿಸಬೇಕು.

'ಪ್ರಾಚ್ಯವಸ್ತು'ಗಳಲ್ಲಿ ಎರಡು ಬಗೆಯಿದೆ: 1. ನಿಸರ್ಗ ನಿರ್ಮಿತ ಪ್ರಾಚ್ಯವಸ್ತುಗಳು 2. ಮನುಷ್ಯನಿರ್ಮಿತ ಪ್ರಾಚ್ಯವಸ್ತುಗಳು, ನಿಸರ್ಗನಿರ್ಮಿತ ಪ್ರಾಚ್ಯವಸ್ತುಗಳಿಗೆ ಸಸ್ಯ ಪಳೆಯುಳಿಕೆ ಮತ್ತು ಪ್ರಾಣಿ ಪಳೆಯುಳಿಕೆ ಉತ್ತಮ ಉದಾಹರಣೆಯಾಗಿದೆ. ಫಾಸಿಲ್ಸ್ ಎಂದು ಕರೆಯುವ ಸಸ್ಯ ಮತ್ತು ಪ್ರಾಣಿ ಪಳೆಯುಳಿಕೆಗಳಲ್ಲಿ ಜೀವಕೋಶಗಳು ಸಿಲಿಕಾನ್ ಆಗಿ ಪರಿವರ್ತನೆಗೊಂಡಿರುತ್ತವೆ. ಆದ್ದರಿಂದಲೇ ಇದಕ್ಕೆ ಪೆಟ್ರಿಫಿಕೇಷನ್ ಅಥವಾ ಶಿಲೀಕರಣವೆಂದು ಕರೆಯುತ್ತಾರೆ. ಕೋಲಾರದ ಸುತ್ತ ಮುತ್ತಲಿನಲ್ಲಿರುವ ಅಗ್ನಿಶಿಲೆಯ ಬೆಟ್ಟಸಾಲುಗಳು ಹಾಗೂ ಉಳವಿಯ ಬಳಿಯಿರುವ ಸುಣ್ಣಕಲ್ಲಿನ ಬೆಟ್ಟಸಾಲುಗಳ ಒಳಗಡೆಯಿರುವ ಗವಿಲೊಳಗಿನ ಜಲ ಶಿಲೆಗಳ ವಿವಿಧ ವಿನ್ಯಾಸಗಳು ನಿಸರ್ಗನಿರ್ಮಿತ ಪ್ರಾಚ್ಯವಸ್ತುಗಳಾಗಿವೆ. ತಿರುಮಲ ಬೆಟ್ಟದಲ್ಲಿರುವ ಶಿಲಾತೋರಣಂ ಅಥವಾ ಜಿಯಾಲಜಿಕಲ್ ಆರ್ಚ್ ಕೂಡ ನಿಸರ್ಗ ನಿರ್ಮಿತ ಪ್ರಾಚ್ಯವಸ್ತು ವಿಶೇಷವಾಗಿದೆ. ವೆಂಕಟೇಶ್ವರ ಸ್ವಾಮಿ ನಡೆದು ಬಂದಾಗ ಶಿಲೆಗಳೇ ಸರಿದು ದಾರಿ ಬಿಟ್ಟಿದ್ದರಿಂದ ಉಂಟಾಗಿರುವ ಕಮಾನು ಶಿಲೆಯ ತೋರಣವನ್ನೆ 'ಜಿಯಾಲಜಿಕಲ್ ಆರ್ಚ್'-ಎಂದು ಕರೆದಿದ್ದಾರೆ. ಬಹು ಹಿಂದೆ, ಸೃಷ್ಟಿ ಪೂರ್ವಯುಗದಲ್ಲಿ ಜಲ ಪ್ರವಾಹಗಳ ನುಗ್ಗುವಿಕೆಯಿಂದ ಉಂಟಾಗಿರುವ ಸಹಜ ದಾರಿಗಳಿವು ಎಂದು ಭೂವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಬಾದಾಮಿಯ ಬಳಿಯಿರುವ 'ಸಿಡಿಲ ಫಡಿ'ಯೂ ನಿಸರ್ಗ ನಿರ್ಮಿತವಾದ ಕಮಾನು ಶಿಲೆಯಾಗಿದೆ.

ಮನುಷ್ಯನಿರ್ಮಿತ ಪ್ರಾಚ್ಯವಸ್ತುಗಳಿಗೆ ಹಳೆಯ ಶಿಲಾಯುಗ ಮತ್ತು ನವ ಶಿಲಾಯುಗದ ಅನೇಕ ವಸ್ತು ವಿಶೇಷಗಳನ್ನು ಉದಾಹರಿಸಬಹುದು. ಆರಿದ ಲಾವಾರಸದ ಬೂದಿಯ ಮೇಲೆ ನಡೆದಾಡಿದ ಆದಿಮಾನವರ ಹೆಜ್ಜೆಗುರುತುಗಳು ಅಗ್ನಿಶಿಲೆಗಳ ಮೇಲೆ ಮೂಡಿರುವುದನ್ನು ಗುರುತಿಸಲಾಗಿದೆ. ಜನಪದರು ಕರೆಯುವ ಪಾಂಡವರ ಸಮಾಧಿಗಳು, ಪಾಂಡವರ ಗುಹೆಗಳು, ಪಾಂಡವರ ಮಾರ್ಗ ಮುಂತಾದವು ಆದಿಮಾನವರ ವಾಸಸ್ಥಾನದ ಕುರುಹುಗಳಾಗಿರುತ್ತವೆ. ಇಂಥವುಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ನಮಗಿದ್ದಾಗ ಪರಂಪರೆ ಮತ್ತು ವರ್ತಮಾನಗಳ ಬೆಸುಗೆಯೊಂದು ಸಾಧ್ಯವಾಗುತ್ತದೆ. ಉದಾಹರಣೆಗೆ, ಇಂಗ್ಲೆಂಡಿನಲ್ಲಿರುವ ಸ್ಟೋನ್ ಹೆಂಜ್‌ಸ್ ಎಂಬ ಶಿಲಾಯುಗದ ಸ್ಮಾರಕವೊಂದರ ಸ್ಫೂರ್ತಿಯಿಂದ ಕುಪ್ಪಳಿಯಲ್ಲಿ, ಕವಿಶೈಲದಲ್ಲಿ ನಿರ್ಮಿಸಿರುವ ಕುವೆಂಪು ಸ್ಮಾರಕ ಎಲ್ಲರ ಮನಸೆಳೆದಿದೆ.

ಮನುಷ್ಯನಿರ್ಮಿತ ಪ್ರಾಚ್ಯವಸ್ತುಗಳಿಗೆ ಹಳೆಯ ಶಿಲಾಯುಗ ಮತ್ತು ನವ ಶಿಲಾಯುಗದ ಅನೇಕ ವಸ್ತು ವಿಶೇಷಗಳನ್ನು ಉದಾಹರಿಸಬಹುದು. ಆರಿದ ಲಾವಾರಸದ ಬೂದಿಯ ಮೇಲೆ ನಡೆದಾಡಿದ ಆದಿ ಮಾನವರ ಹೆಜ್ಜೆಗುರುತುಗಳು ಅಗ್ನಿಶಿಲೆಗಳ ಮೇಲೆ ಮೂಡಿರುವುದನ್ನು ಗುರುತಿಸಲಾಗಿದೆ. ಜನಪದರು ಕರೆಯುವ ಪಾಂಡವರ ಸಮಾಧಿಗಳು, ಪಾಂಡವರ ಗುಹೆಗಳು, ಪಾಂಡವರ ಮಾರ್ಗ ಮುಂತಾದವು ಆದಿಮಾನವರ ವಾಸಸ್ಥಾನದ ಕುರುಹುಗಳಾಗಿರುತ್ತವೆ. ಇಂಥವುಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ನಮಗಿದ್ದಾಗ ಪರಂಪರೆ ಮತ್ತು ವರ್ತಮಾನಗಳ ಬೆಸುಗೆಯೊಂದು ಸಾಧ್ಯವಾಗುತ್ತದೆ. ಉದಾಹರಣೆಗೆ, ಇಂಗ್ಲೆಂಡಿನಲ್ಲಿರುವ ಸ್ಟೋನ್ ಹೆಂಜ್‌ಸ್ ಎಂಬ ಶಿಲಾಯುಗದ ಸ್ಮಾರಕವೊಂದರ ಸ್ಫೂರ್ತಿಯಿಂದ ಕುಪ್ಪಳಿಯಲ್ಲಿ, ಕವಿಶೈಲದಲ್ಲಿ ನಿರ್ಮಿಸಿರುವ ಕುವೆಂಪು ಸ್ಮಾರಕ ಎಲ್ಲರ ಮನ ಸೆಳೆದಿದೆ.

ನಮ್ಮ ಬಾಳನ್ನು 'ಪ್ರಾಚೀನ' ಮತ್ತು 'ನವೀನ' ಎಂಬ ಧ್ರುವೀಕರಣಕ್ಕೊಳಪಡಿಸಿ, ಕೃತಕವಾದ ಭೇದ ಭಾವದಿಂದ ಬದುಕಬಾರದು. ಕಾಲದ ಹಂಗಿಲ್ಲದ 'ನಿತ್ಯನೂತನ ವಸ್ತು'ಗಳೊಡನೆ ಸಹಜ ಸಂಬಂಧವನ್ನು ಪಡೆದಿರುವುದು ಕೂಡ ಪರಂಪರೆಯ ವ್ಯಾಪ್ತಿಗೊಳಪಡುತ್ತದೆ. ನಮ್ಮ ಬಾಳಿನ ಚತುರ್ಮುಖ ಸೌಂದರ್ಯವೆಂದೇ ಕರೆಯಬಹುದಾದ 1. ನಮ್ಮ ಊರು, 2. ನಮ್ಮ ಭಾಷೆ, 3. ನಮ್ಮ ಪರಿಸರ, 4. ನಮ್ಮ ಸಂಸ್ಕೃತಿಗಳನ್ನು ಸಹಜವಾಗಿ ಒಳಗೊಳ್ಳುತ್ತಾ, ಸ್ಥಳೀಯ ಮತ್ತು ವಿಶ್ವಾತ್ಮಕ ಪ್ರಜ್ಞೆಯೊಂದನ್ನು ರೂಢಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಸ್ವಂತಿಕೆಯನ್ನು ಪರಿತ್ಯಜಿಸುವ ಜೀವನ ಶೈಲಿಯನ್ನು ಗುಲಾಮಿ ಬದುಕೆಂದು ಕರೆಯಬೇಕಾಗಿದೆ. ಆದ್ದರಿಂದ, ನಮ್ಮ ನಡೆ-ನುಡಿ, ರುಚಿ-ಅಭಿರುಚಿಗಳಲ್ಲಿ ಪರಂಪರೆಯ ಎದೆ ಬಡಿತ ಮತ್ತು ಆಧುನಿಕತೆಯ ನಾಡಿಮಿಡಿತಗಳೆರಡೂ ಮಿಳಿತವಾಗಿರಬೇಕು.

ರಾಮಾಯಣ ಮತ್ತು ಮಹಾಭಾರತಕ್ಕೆ ಸೇರಿದ ಬಗೆಬಗೆಯ ಐತಿಹ್ಯಗಳು ಈ ನಾಡಿನಾದ್ಯಂತ ಹಬ್ಬಿದ್ದು, ಇಲ್ಲಿ ಕಲ್ಲು-ಕಲ್ಲು ಕೂಡ ಕತೆ ಹೇಳುತ್ತದೆ. ರಾಮತೀರ್ಥ, ಲಕ್ಷ್ಮಣ ತೀರ್ಥ, ಮೃಗವಧೆ, ಸೀತೆ ಸೆರಗು ಎಂಬ ಸ್ಥಳ ನಾಮಗಳಿಗೆ ಕೊರತೆಯಿಲ್ಲ. ಹಂಪಿಯ ಸುತ್ತಮುತ್ತಲಿನ ಪರಿಸರವನ್ನೆ ರಾಮಾಯಣದ ಕಿಷ್ಕಿಂಧೆ ಎಂದು ಕರೆಯುತ್ತಾರೆ. ಕೋಲಾರದ ಬೆಟ್ಟ ಸಾಲಿಗೆ ಪಾಂಡವರ ಜನನ ಮತ್ತು ಬಾಲ್ಯ ಜೀವನಗಳ ಭೂಮಿಕೆಯಾದ 'ಶತ ಶೃಂಗ ಶೈಲ'ವೆಂಬ ಹೆಸರಿದೆ. ಕೋಲಾರದ ಬೆಟ್ಟಸಾಲಿನಲ್ಲಿ ಭೀಮನ ಹಾಲಾಡಿ, ಭೀಮನ ಗರಡಿ, ಭೀಮ-ಬಕಾಸುರ ಗವಿ ಎಂಬ ಸ್ಥಳ ನಾಮಗಳಿವೆ. ಮಲೆನಾಡಿನಲ್ಲಿ ಒಂದೇ ರಾತ್ರಿಯಲ್ಲಿ ಭೀಮಕಟ್ಟಿದನೆಂದು ಹೇಳುವ ಭೀಮನ ಕಟ್ಟೆ ಇದೆ. ನೈಸರ್ಗಿಕ ಸ್ಥಳಗಳು ಮತ್ತು ರಾಷ್ಟ್ರೀಯ ಮಹಾಕಾವ್ಯಗಳ ಮೇಳನವೆನ್ನಬಹುದಾದ ಈ ಬಗೆಯನ್ನು ನೈಸರ್ಗಿಕ ಐತಿಹ್ಯಗಳು ಎಂದು ಕರೆಯಬಹುದು. ಇವುಗಳಿಂದ ನಮ್ಮ ಬದುಕಿಗೆ ಸ್ಫೂರ್ತಿಸಿಗುವುದೇ ಹೊರತು ಯಾವುದೇ ಬಗೆಯ ಕೇಡು ಇದರಿಂದ ಸಂಭವಿಸದು.

'ಭಾಷಿಕ ಐತಿಹ್ಯಗಳು'-ಇವನ್ನು ಬಹಳ ಎಚ್ಚರದಿಂದ ಪರಿಶೀಲಿಸಬೇಕಾಗುತ್ತದೆ. ಕೋಲಾರಕ್ಕೆ 'ಕೋಲಾಹಲಪುರ'-(ಕುವಲಾಲಪುರ) ಎಂಬ ಪದನಿಷ್ಪತ್ತಿಯನ್ನು ಪರಶುರಾಮನ ಪಾತ್ರ ಮತ್ತು ಕೋಲಾಹಲಕ್ಕೆ ಗಂಟು ಹಾಕಿ ಹೇಳುವುದುಂಟು. ಶ್ರೀರಾಮನು ಜಟಾಯುವನ್ನು ಕುರಿತು 'ಲೇಪಾಕ್ಷಿ' (=ಎದ್ದೇಳು ಪಕ್ಷಿ) ಎಂದು ಹೇಳಿದ ಸ್ಥಳವೇ ಲೇಪಾಕ್ಷಿ ಆಗಿದೆ ಎನ್ನುವುದುಂಟು. ಭಾಷಾವಿಜ್ಞಾನದಲ್ಲಿ ಈ ಬಗೆಯ ಪದನಿಷ್ಪತ್ತಿಯನ್ನು ಪಂಡಿತ ನಿಷ್ಪತ್ತಿ ಮತ್ತು ಜನಪ್ರಿಯ ನಿಷ್ಪತ್ತಿ ಎಂದು ಕರೆಯುತ್ತಾರೆ. ಇವು ಎಷ್ಟೋ ವೇಳೆ ಸುಳ್ಳು ಸೃಷ್ಟಿಗಳಾಗಿದ್ದು ಪಟ್ಟಭದ್ರ ಹಿತಾಸಕ್ತಿಗಳ ವಕ್ತಾರನಂತೆ ಕಾರ್ಯನಿರ್ವಹಿಸುತ್ತವೆ. 'ಕೋಲಾರ' ಎಂಬ ಸ್ಥಳನಾಮವನ್ನು ಕೊಲ್+ಹಾರ=ಕೊಲ್ಹಾರ ಎಂದು ವಿವರಿಸಲಾಗಿದೆ. ಕ್ರಿ.ಶ. ಒಂದನೆ ಶತಮಾನಕ್ಕೆ ಸೇರಿದ ಕೋಲಾರಮ್ಮ ದೇವಾಲಯದಲ್ಲಿ ನರಬಲಿ, ಪ್ರಾಣಿ ಬಲಿ ಮುಂತಾದ ಕರಾಳ ಆಚರಣೆಗಳಿದ್ದುವೆಂದು ಹೇಳುತ್ತಾರೆ. ಮಾತೃದೇವತೆಗೆ ಬಲಿಕೊಡುವ ಸಂಪ್ರದಾಯದ ಕುರುಹಾಗಿ (=ಕೊಂದು ಹಾರವಾಗಿ ಅರ್ಪಿಸುವುದರ ಸಂಕೇತವಾಗಿ) 'ಕೋಲಾರ' ಎಂಬ ಹೆಸರು ಬಂದಿದೆಯೆಂದು ಗುರುತಿಸಲಾಗಿದೆ. ಇದಕ್ಕೆ ಪೂರಕವಾಗಿ ಮಾತೃದೇವತೆಯ ಪ್ರಸಿದ್ಧ ತಾಣಗಳಿಗೆ 'ಕೊಲ್' ಎಂಬ ಹೆಸರಿರುವುದನ್ನು 'ಕೊಲ್ಕತ್ತ' (=ಕಲ್ಕತ್ತಾ), ಕೊಲ್ಲೂರು=ಎಂಬಲ್ಲೂ ಮನಗಾಣಬಹುದು. ಇದಲ್ಲದೆ, ಕೋಲ ಮತ್ತು ಮುಂಡ ಎಂಬ ಬುಡಕಟ್ಟು ಜನರು ವಾಸ ಮಾಡುತ್ತಿದ್ದ ಪ್ರದೇಶವೆಂಬ ನಿಷ್ಪತ್ತಿಯೂ ಇದೆ. 'ಕೋಲರು' ವಾಸ ಸ್ಥಾನವೇ ಕ್ರಮೇಣ 'ಕೋಲಾರ' ಆಗಿರಬಹುದೆಂಬ ವಿವರಣೆಯೂ ಇದೆ. 'ಲೇ ಪಕ್ಷಿ'-ಎಂಬುದನ್ನು ಒಪ್ಪಿಕೊಳ್ಳುವುದಾದರೆ ರಾಮನ ಮಾತೃಭಾಷೆ ತೆಲುಗು ಎಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಭಾಷಿಕ ಐತಿಹ್ಯಗಳನ್ನು ಬಹು ಎಚ್ಚರದಿಂದ ಪರಿಶೀಲಿಸಬೇಕು.

ಮತೀಯ ಐತಿಹ್ಯಗಳು/ಪುರೋಹಿತಶಾಹಿ ಐತಿಹ್ಯಗಳು: ಇದಕ್ಕೆ ರಾಮಜನ್ಮಭೂಮಿಯೆಂದು ಕರೆಯಲ್ಪಡುತ್ತಿರುವ 'ಅಯೋಧ್ಯೆ' ಒಳ್ಳೆಯ ಉದಾಹರಣೆ. ಲೋಹಿಯಾ ಅವರು ಗುರುತಿಸಿರುವಂತೆ, ರಾಮಕೃಷ್ಣ ಶಿವ ಇವು ಕೇವಲ ವ್ಯಕ್ತಿನಾಮಗಳಲ್ಲ. ಇವು ಇಂಡಿಯದ ಮಹತ್ ಸ್ವಪ್ನಗಳು ಎಂಬ ವಿವರಣೆ ಸರಿಯಾಗಿದೆ. ಭಾರತೀಯರ ಬದುಕಿನ ಲಯ-ಉಸಿರಾಟದಲ್ಲಿ ಬೆರೆತು

ಹೋಗಿರುವ ರಾಮ-ಕೃಷ್ಣ-ಶಿವರನ್ನು ನಿರ್ದಿಷ್ಟ ದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ. ಬಾಬರ್ ಒಂದು ನಿರ್ದಿಷ್ಟ ಕಾಲಕ್ಕೆ ಸೇರಿದ ಮನುಷ್ಯ. 'ರಾಮ' ಎಂಬುದು ನಿತ್ಯನೂತನವಾದ ಕಾಲ-ಗೇಶಗಳ ಎಲ್ಲೆ ಮೀರಿದ ಚೈತನ್ಯ ಅಥವಾ ಕಾಣ್ಕೆ. ಶ್ರಮಜೀವಿಯ ಉದ್ಗಾರದಲ್ಲಿ, ಗಾಂಧಿಯ ಅಂತಿಮ ನುಡಿಯಲ್ಲಿ 'ರಾಮ' ಜನಿಸಿದ್ದನ್ನು ಮತ್ತು ಜನಿಸುತ್ತಿರುವುದನ್ನು ಅರ್ಥಮಾಡಿಕೊಂಡರೆ 'ರಾಮಜನ್ಮಭೂಮಿ' ಎಂಬ ಪುರೋಹಿತಶಾಹಿ ಐತಿಹ್ಯದ ಮಿತಿಯ ಅರಿವಾಗುತ್ತದೆ.

ಒಮ್ಮೊಮ್ಮೆ, ನೈಸರ್ಗಿಕ ಐತಿಹ್ಯಗಳು ಕೂಡ ಮತೀಯ ಮತ್ತು ಮತಿಹೀನ ವಿವರಣೆಗಳಿಗೆ ಒಳಗಾಗುವುದುಂಟು. ಉದಾಹರಣೆಗೆ, ಶ್ರೀ ಕರುಣಾನಿಧಿಯವರು 'ರಾಮಸೇತು'ವನ್ನು ಕುರಿತು ರಾಮ ಯಾವ ಕಾಲದ ಇಂಜಿನಿಯರ್? ಅವನು ಯಾವ ಕಾಲದಲ್ಲಿ ಸೇತುವೆ ಕಟ್ಟಿದ?-ಎಂಬ ಪ್ರಶ್ನೆಗಳನ್ನು ಕೇಳಿದ್ದು ಕರುಣಾನಿಧಿಯವರ ಮತಿಹೀನತೆಯೆಂದೇ ಗುರುತಿಸಬೇಕಾಗಿದೆ. ಈ ಬಗೆಯ ವಾಕ್ ಪ್ರಹಾರದಿಂದ ಕೆರಳುವ ಜನ ಮತೀಯ ದೃಷ್ಟಿಯಿಂದ ಸಂಘಟಿತರಾಗಿ 'ರಾಮ ಸೇತು'ವಿನ ಮೇಲೆ ತಮ್ಮ ಹಕ್ಕನ್ನು ಕ್ಲೇಮು ಮಾಡುವುದಕ್ಕೂ ಅವಕಾಶ ಸೃಷ್ಟಿಸಿದಂತಾಗುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿಯೇ ಬೇರೆ! ಈಗಿರುವ ಭೌಗೋಳಿಕ ಪರಿಸ್ಥಿತಿಯಲ್ಲಿ ವಿದೇಶಿ ನೌಕೆಗಳು ಶ್ರೀಲಂಕಾವನ್ನು ಪ್ರದಕ್ಷಿಣೆ ಮಾಡಿಕೊಂಡು ಭಾರತದ ಪೂರ್ವ ತೀರ ಪ್ರವೇಶಿಸಬೇಕಾಗಿದೆ. ಇದರ ಬದಲಿಗೆ ಭಾರತ ಮತ್ತು ಶ್ರೀಲಂಕಾ ನಡುವೆ ಸೇತುಬಂಧದಂತೆ ಕಂಡುಬರುವ ನೈಸರ್ಗಿಕ ಶಿಲಾರಚನೆಯನ್ನು ಸ್ಫೋಟಕಗಳ ಮೂಲಕ ತೆಗೆದು ಹಾಕಿದರೆ, ವಿದೇಶಿ ನೌಕೆಗಳ ಶ್ರೀಲಂಕಾ ಪ್ರದಕ್ಷಿಣೆ ತಪ್ಪಿಹೋಗಿ, ಅವು ನೇರ ಮಾರ್ಗದಲ್ಲಿ ಭಾರತದ ಪೂರ್ವತೀರ ತಲುಪಬಹುದೆಂಬ ಗುಲಾಮಿದೃಷ್ಟಿಯ ಯೋಜನೆಯಿದು. ವ್ಯಾಪಾರದ ಉದ್ದೇಶಕ್ಕೆ ಭಾರತಕ್ಕೆ ಬಂದ ವಿದೇಶಿಯರು ಭಾರತವನ್ನೇ ವಸಾಹತು ಮಾಡಿಕೊಂಡು ಆಳಿದ ಇತಿಹಾಸದ ಗಾಯ ಇನ್ನೂ "ಮಾಯದ ಕಲೆ"ಯಾಗಿ ಉಳಿದಿದೆ. ನೇರ ಪ್ರವೇಶಕ್ಕೆ ಜಲಮಾರ್ಗ ಸೃಷ್ಟಿಸುವ ಈ ಕಪಟಯೋಜನೆಗೆ ಧಿಕ್ಕಾರ ವಿರಲಿ! ಭಾರತವನ್ನು ಅಭದ್ರಗೊಳಿಸುವ ಯೋಜನೆಗಳು, ಎಷ್ಟೇ ಆಮಿಷ ಒಡ್ಡದರೂ ಅದಕ್ಕೆ ಅವಕಾಶ ಕೊಡಬಾರದು. ಇದನ್ನು ರಾಷ್ಟ್ರಸಂರಕ್ಷಣೆಯ ದೃಷ್ಟಿಯಿಂದ ಪರಿಶೀಲಿಸಬೇಕೇ ಹೊರತು ಮತೀಯ ಅಥವಾ ಮತಿಹೀನ ದೃಷ್ಟಿಯ ವಿವರಣೆಗಳಿಗೆ ದಾರಿ ಮಾಡಬಾರದು.

ನಾವಿಂದು ಪ್ರತ್ಯಕ್ಷವಾಗಿ ನೋಡುತ್ತಿರುವ ಕ್ರಿಮಿಕೀಟಗಳು, ಸಸ್ಯ ಮೂಲಿಕೆಗಳು, ಪಕ್ಷಿ ಪ್ರಾಣಿಗಳು ಕುರಿತ ತಿಳುವಳಿಕೆಯೂ 'ಪರಂಪರೆ ಉಳಿಸಿ' ಎಂಬುದರ ವ್ಯಾಪ್ತಿಗೊಳಪಡುತ್ತದೆ. ಪಾಕೇಟುಗಳಲ್ಲಿ ಸಿಗುವ ಸಿದ್ಧವಸ್ತುಗಳು ಉದಾಹರಣೆಗೆ, ಪಾಪ್ ಕಾರ್ನ್, ಹಾಲು, ಎಣ್ಣೆ, ಧಾನ್ಯಗಳು, ಸಂಸ್ಕರಿಸಿದ ಪುಡಿಗಳು ಇವುಗಳ ಮೂಲ ರೂಪದ ಅರಿವು ಎಷ್ಟೋ ಮಂದಿ ನಾಗರಿಕರಿಗೆ ಇರುವುದಿಲ್ಲ. ಪಾಪ್ ಕಾರ್ನ್ ಮೂಲರೂಪ 'ಮುಸುಕಿನ ಜೋಳ'ವೆಂದೂ, ಹಾಲಿನ ಮೂಲ ರೂಪ 'ಕೆಚ್ಚಲು' ಎಂದೂ ಸಂಶೋಧನೆಗಳಿಂದ ತಿಳಿಯಬೇಕಾದ ವಾತಾವರಣವೊಂದು ಏರ್ಪಡುತ್ತಿದೆ. ಇದನ್ನೆಲ್ಲ ಅರಿತು ಯಾವುದೇ ಬಗೆಯ ಮತಿಹೀನತೆ ಅಥವಾ ಮತಿ ವಿಕಾರಕ್ಕೆ ಒಗ್ಗಾಗದ ಪ್ರಜ್ಞೆಯೊಂದನ್ನು ರೂಢಿಸಿಕೊಂಡರೆ ಪರಂಪರೆಯನ್ನು ಉಳಿಸಿದಂತಾಗುತ್ತದೆ. □



ನಾನೊಂದು ರೂಪಕವಲ್ಲ, ಸಂಕೇತವೂ ಅಲ್ಲ
ನೀವು ಆಲಿಸುತ್ತಿರುವುದು ಮರದ ಎಲೆಗಳ ನಡುವೆ
ನುಸುಳಿ ಬರುತ್ತಿರುವ ಪಿಸುಗಾಳಿಯ ಸದ್ದಲ್ಲ
ಅಥವಾ ರಸ್ತೆಯಲ್ಲಿ ಕಲ್ಲೇಟಿಗೆ ಜರ್ಜರಿತವಾದ ಬೆಕ್ಕಲ್ಲ
ನಾನು ರಸ್ತೆಯಲ್ಲಿ ಜರ್ಜರಿತವಾಗುತ್ತಿದ್ದೇನೆ
ಅಳುತ್ತಿರುವವನು, ನಗುತ್ತಿರುವವನೂ ನಾನೆ
ನೋವು ನಲವಿನ ಭಾವನೆ ನನ್ನಲ್ಲೂ ಇದೆ
ನಾನು ಇದ್ದದನ್ನು ಹೇಳಬಲ್ಲೆ
ಏಕೆಂದರೆ ನನಗೂ ಅಸ್ತಿತ್ವವಿದೆ.
ಇದು ನನ್ನ ಧ್ವನಿ
ಇವು ನನ್ನದೇ ಮಾತುಗಳು
ನನ್ನ ತುಟಿಗಳು ನುಡಿಯುತ್ತವೆ
ನನ್ನ ಕೈಗಳು ಬರೆಯುತ್ತವೆ-
ನಾನೊಬ್ಬ ಕವಿ.
ನೀವು ಕೇಳುತ್ತಿರುವುದು ನನ್ನ ಮುಷ್ಟಿಯ ಸದ್ದು
ನಿಮ್ಮ ಕಪಾಳದ ಮೇಲೆ.

ಮೂಲ: ಕ್ಯಾಲ್ವಿನ್ ಸಿ. ಹೆರ್ನ್‌ಟನ್
ಕನ್ನಡಕ್ಕೆ: ಡಾ. ಜೆ. ಬಾಲಕೃಷ್ಣ

ಬಸವಣ್ಣ ನಿರ್ಮಿಸಬಯಸಿದ ಸಮಾಜ

(೩೧ನೇ ಪುಟದಿಂದ)

ರಿಂದ ಒಳ್ಳೆಯತನ ಬರುತ್ತದೆ. ಶ್ರೇಷ್ಠತೆ ದೊರೆಯುತ್ತದೆ. ಹುಟ್ಟು ಮಾನವ ಶ್ರೇಷ್ಠತ್ವವನ್ನು ಅಳೆಯುವ ಸಾಧನವಲ್ಲ. ಹುಟ್ಟಿದ ಮೇಲೆ ಆತ ತೋರುವ ಗುಣಗಳಿಂದ ಆತನ ಶ್ರೇಷ್ಠತ್ವವನ್ನು ಅಳೆಯಬೇಕೆಂದುದು ಸ್ವಾಗತಾರ್ಹವಾಗಿದೆ. ಅದಕ್ಕಾಗಿ ಬಸವಣ್ಣ ಹೀಗೆ ಹೇಳುತ್ತಾನೆ. 'ಶೆಟ್ಟಿಯೆಂಬೆನೆ ಸರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹಾರನೆಂಬೆನೆ ಕಕ್ಕಯ್ಯನ? ಮಾದಾರ ನೆಂಬೆನೆ ಚೆನ್ನಯ್ಯನ? ಆನು ಹಾರುವನೆಂದರೆ ಕೂಡಲ ಸಂಗಮ ನಗುವನಯ್ಯ ಎನ್ನುವಲ್ಲಿ ಹುಟ್ಟು ಶ್ರೇಷ್ಠವಲ್ಲವೆನ್ನುವುದು ಬಸವಣ್ಣನ ಈ ವಚನದಿಂದ ದಿಟವಾಗುತ್ತದೆ. ಆಧುನಿಕ ಯುಗದ ಈ ಸಂದರ್ಭದಲ್ಲಿ ಹುಟ್ಟೇ ಶ್ರೇಷ್ಠವೆಂದು ಹೇಳುವವರಿದ್ದಾರೆ. ಇಂಥವರ ಮತಿಗೆ ಕನಿಕರಿಸದೆ ಗತ್ಯಂತರವಿಲ್ಲ. ಜಾತ್ಯತೀತ ಮನೋಭಾವವನ್ನು ನಾವಿಂದು ಅಳವಡಿಸಿಕೊಳ್ಳಬೇಕು. ಅಂದಾಗಲೇ ನಾವು ನಿಜವಾದ ಬಸವಣ್ಣನ ವಾರಸುದಾರರಾಗುವೆವು.

ಅಂದಿನ ಕಾಲದಲ್ಲಿ ವಿವಿಧ ವೃತ್ತಿ ಮಾಡುವವರನ್ನು ಕೀಳಾಗಿ ಕಂಡು ನಿಂದಿಸುವವರಿಗೆ, ವರ್ತಿಸುವವರಿಗೆ ಬಸವಣ್ಣನವರು ನೀಡಿದ ಉತ್ತರ ಮಾರ್ಮಿಕವಾದುದು. ಚಪ್ಪಲಿ ಹೊಲೆಯವರನ್ನು ಇತರೆ, ವೃತ್ತಿ ಮಾಡುವವರನ್ನು ಕನಿಷ್ಠವೆಂದು ಭಾವಿಸುವವರಿಗೆ "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ, ವೇದವನೋದಿ, ಹಾರುವನಾದ" ಎಂದು ಹೇಳುವುದರ ಮೂಲಕ ಸಮಾಜದಲ್ಲಿದ್ದ ವೃತ್ತಿ ಕೀಳರಿಮೆಯನ್ನು ಬಸವಣ್ಣ ಹೋಗಲಾಡಿಸಿದ. ಆ ಮೂಲಕ ವೃತ್ತಿಗೌರವವನ್ನು ತಂದುಕೊಟ್ಟ, ಕುಡಿಯುವ ನೀರು, ಸೇವಿಸುವ ಗಾಳಿ, ಸುಡುವ ಬೆಂಕಿ ಒಂದೆಯಾಗಿದ್ದರೂ ತಾರತಮ್ಯ ಭಾವ ಹೊಂದಿದವರನ್ನು ಕುರಿತು 'ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ, ಶೌಚಾಚಮನಕ್ಕೆ ಕುಲವೊಂದೆ, ತನ್ನ ತಾನರಿದವಂಗೆ ಎಂದು ಹೇಳುವುದರ ಮೂಲಕ ಜಾತಿವಾದಿಗಳಿಗೆ ಚಾಟಿ ಏಟಿನಂತೆ ಅವರ ಅಂಥ ವಿಚಾರಗಳಿಗೆ ಸಾಣಿ ಹಿಡಿಯುವ ಕೆಲಸ ಬಸವಣ್ಣ ಮಾಡಿದ್ದಾನೆ.

ಸಮಾಜದಲ್ಲಿ ತಾಂಡವವಾಡುತ್ತಿದ್ದ ಜಾತಿ ವ್ಯವಸ್ಥೆಯನ್ನು ಕಂಡು ಮಮ್ಮಲ ಮರುಗಿದ ಬಸವಣ್ಣನವರು ಸುಮಾರು ಎಂಟುನೂರು ವರ್ಷಗಳ ಹಿಂದೆಯೇ ಸಮತಾ ಸಮಾಜದ ಕನಸು ಕಂಡವನಾಗಿದ್ದಾನೆ. ಜಾತಿರಹಿತ ವರ್ಗರಹಿತ, ವರ್ಣರಹಿತ ಸಮಾಜವನ್ನು ಕಟ್ಟುವ ಮಹೋನ್ನತ ಗುರಿಯನ್ನು ಹೊಂದಿದ್ದ ಬಸವಾದಿಶರಣರ ಸಮಾಜೋ ಧಾರ್ಮಿಕ ಚಳವಳಿಯ ಬಹುದೊಡ್ಡ ಸಾಧನೆ ಅಸ್ಪೃಶ್ಯರನ್ನು ಸಮಾಜದ ಮೇಲ್ವರ್ಗದ ಕಕ್ಷೆಗೆ ತೆಗೆದುಕೊಂಡಿದ್ದು. ಅವರಲ್ಲಿ ಆತ್ಮಸ್ಥೈರ್ಯವನ್ನು ಜಾಗೃತಗೊಳಿಸಿದ್ದು, ಸ್ತ್ರೀ ಸಮೂಹಕ್ಕೆ ಜ್ಞಾನ ಹಾಗೂ ಲಿಂಗಧಾರಣೆಯ ಅವಕಾಶ ಕಲ್ಪಿಸಿಕೊಟ್ಟಿದ್ದು ಈ ಎಲ್ಲ ಮಹತ್ವದ ಬದಲಾವಣೆಯನ್ನು ಶರಣ ಚಳವಳಿ ತಂದಿತು. ಅಂದಿನ ಜಾತಿ ವ್ಯವಸ್ಥೆಯ ಸಂದರ್ಭದಲ್ಲಿ ಸ್ತ್ರೀಗೆ ಕೊಟ್ಟ ಸಮಾನತೆ ಅಪೂರ್ವವಾದುದು. ಗಂಡು ಹೆಣ್ಣಿನ ನಡುವೆ ಸುಳಿವ ಆತ್ಮನಿಗೆ ಯಾವ ಬೇದಭಾವವೂ ಇಲ್ಲವೆಂದು ಪ್ರತಿಪಾದಿಸಿದ್ದು ಚಳವಳಿಯ ಮಹೋನ್ನತ ಆಶಯವಾಗಿತ್ತು.

ಕಾಯಕಕ್ಕೆ ಮೀಸಲಾದ ಮೋಳಿಗೆ ಮಾರಯ್ಯ ದಂಪತಿಗಳಿಗೆ, ದಾಸೋಹ ಮತ್ತು ಕಾಯಕದಲ್ಲಿ ಶ್ರೇಷ್ಠರಾದ ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ ದಂಪತಿಗಳ ಬೆನ್ನೆಲುಬಾಗಿ ನಿಂತವರು ಬಸವಣ್ಣ. ಲಕ್ಕಮ್ಮ ನಿಜಕ್ಕೂ ಸ್ವಾಭಿಮಾನದ ಹೆಣ್ಣು ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವೇ ಘನ ಶಿವಭಕ್ತರಿಗೆ ಬಡತನವಿಲ್ಲ. ಎನಗೆ ಯಾರ ಹಂಗಿಲ್ಲವೆನ್ನುವ ದಿಟ್ಟ ಮಹಿಳೆ. ಮಾದಾರ ಧೂಳಯ್ಯನಂತಹವರೂ ವೃತ್ತಿಯಲ್ಲಿ ನಿರತರಾದಾಗ ಶಿವನನ್ನೇ ಗಣನೆಗೆ ತೆಗೆದುಕೊಂಡವರಲ್ಲ. ಕಾಯಕವೇ ಕೈಲಾಸವೆಂದು ಭಾವಿಸಿದವರು. ಇಂಥ ಅನೇಕ ವಚನಕಾರರಲ್ಲಿ ಅದರಲ್ಲೂ ತಳವರ್ಗದಿಂದ ಬಂದವರಲ್ಲಿ ಸ್ವಾಭಿಮಾನದ ಬೀಜವನ್ನು ಬಿತ್ತಿದವರು ಬಸವಣ್ಣನವರು ಎನ್ನುವುದು ನಿಜಕ್ಕೂ ಸ್ತುತ್ಯಾರ್ಹವಾಗಿದೆ.

ಇವತ್ತಿನ ಅನೇಕ ಚಿಂತಕರು ಸಮಾಜವಾದದ ಚಿಂತನೆ ಮಾಡುವಾಗ, ಕಮ್ಯುನಿಷ್ಟ ವಿಚಾರ ಬಂದಾಗ ನಾವೆಲ್ಲ ಬೇರೆಡೆ ಮುಖಮಾಡುವ ಪ್ರವೃತ್ತಿ ನಮ್ಮಲ್ಲಿ ಬಂದಿದೆ. ಜಗತ್ತಿನ ಯಾವ ಮೂಲೆಯಲ್ಲೂ ಆಗದಂತಹ ಸಾಮಾಜಿಕ ಬದಲಾವಣೆ, ಕಾಯಕ ಪ್ರಜ್ಞೆ, ಮಾನವೀಯ ಮೌಲ್ಯಗಳ ಕುರಿತು ಮಹೋನ್ನತ ಚಿಂತನೆ ಬಸವಣ್ಣನವರ ನೇತೃತ್ವದಲ್ಲಿ ಕನ್ನಡದ ನೆಲದಲ್ಲಿ ನಡೆದಿರುವುದನ್ನು ಹಿತ್ತಲ ಗಿಡ ಮದ್ದಲ್ಲವೆನ್ನುವಂತೆ ಗೌಣವಾಗಿಸುವವರು ನಾವಾಗಿದ್ದೇವೆ. ರಷ್ಯನ ಕ್ರಾಂತಿ ಲೆನಿನ್ ಲಿಂಕನ್‌ರ ಚಿಂತನೆ ಕಡೆಗೆ, ಪಶ್ಚಿಮದ ದಿಕ್ಕಿಗೆ ನಾವು ಈಗಲೂ ಮುಖಮಾಡುತ್ತೇವೆ. ನಿಜಕ್ಕೂ ಅದು ನಮ್ಮ ಹೃದಯ ವೈಶಾಲ್ಯತೆಯ ಅಭಾವವೋ ಅಥವಾ ನಮ್ಮದೆನ್ನುವುದು, ದೊಡ್ಡದಲ್ಲವೆಂದು ಪರಿಭಾವಿಸುವ ಪ್ರವೃತ್ತಿಯೋ ನಮ್ಮಲ್ಲಿ ಬೆಳೆದು ಮನೆಮಾಡಿಕೊಂಡಿದೆಯೆಂದು ಖೇದದಿಂದ ಹೇಳಬಹುದು.

ಈ ಎಲ್ಲ ಜೀವಪರ ಅಂಶಗಳನ್ನು ಗಮನಿಸಿದಾಗ ಬಸವಣ್ಣ ಹೆಂಗರುಳಿನ ಸ್ವಭಾವದ ವ್ಯಕ್ತಿ ಎನ್ನುವುದು ಮನದಟ್ಟಾಗುತ್ತದೆ. ಆದ್ದರಿಂಲೇ ನೊಂದವರ, ಬೆಂದವರ ಪರ ನಿಂತು ನವ ಸಮಾಜ ನಿರ್ಮಾಣ ಮಾಡಿದರು. ಅವರು ಆರಂಭಿಸಿದ ದಲಿತ ಚಳವಳಿ ಕರ್ನಾಟಕದಾದ್ಯಂತ ಹಬ್ಬಲಿಲ್ಲ. ಆ ಕ್ರಾಂತಿ ಜ್ಯೋತಿ ಅಲ್ಲಿಗೇ ತಣ್ಣಗಾಯಿತು. ಅತ್ಯಂತ ತೀವ್ರ ಚಳವಳಿಯ ಮೂಲ ಉದ್ದೇಶವೆನಿಸಿದ್ದ ಜಾತ್ಯತೀತ ಭಾವ ನೆಯನ್ನು ಮೂಲೆ ಗುಂಪು ಮಾಡಿತು. ಆದರೆ, ಬಸವಣ್ಣ ನಿರ್ಮಿಸ ಬಯಸಿದ ಸಮ ಸಮಾಜದ ಕನಸು ಇಂದಿಗೂ ನಮಗೆ ಮಾದರಿಯಾಗಿದೆ. ಅವರು ನಿರ್ಮಿಸಬಯಸಿದ ಸಮಾಜ ಶೋಷಣೆ ರಹಿತ, ಜಾತ್ಯಾತೀತ, ಲಿಂಗ ತಾರ ತಮ್ಯ ರಹಿತ, ಮೌಢ್ಯ ರಹಿತವಾದುದಾಗಿದೆ. ನಿಜಕ್ಕೂ ಅವರು ಸಮಾನತೆಯ ಹಂದರದ ಮೇಲೆ ನವ ಸಮಾಜ ವನ್ನು ನಿರ್ಮಿಸುವ ಪಣತೊಟ್ಟು ಕಾರ್ಯ ಪ್ರವೃತ್ತರಾಗಿ ದ್ದರು, ಮತ್ತು ಆ ಮಾರ್ಗದಲ್ಲಿ ಮುನ್ನಡೆದರು. ಆದರೆ ಅಂಥ ಸಮಾಜವಿನ್ನೂ ನಿರ್ಮಾಣವಾಗಿಲ್ಲ. ಅಂಥ ಸಮಾಜ ನಿರ್ಮಾಣದ ಹೊಣೆ ಇಂದು ನಮ್ಮ-ನಿಮ್ಮ ಮೇಲಿದೆಯಲ್ಲವೇ? ಅಂಥಹ ಸಮಾಜ ನಿರ್ಮಾಣವಾದಲ್ಲಿ ನಾವು ನಿಜಕ್ಕೂ ಬಸವಾನುಯಾಯಿಗಳಾಗುವೆವು. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೭

ಶಿಲುಬೆ ಹೊತ್ತವರು

○ ಡಾ॥ ನಾ. ಡಿಸೋಜ

ಶಿ[illegible] ಉತ್ತರದ ಹಳ್ಳಿಗಳಾದ ಮಾರುತಿ ಪುರ, ಸಮರಾನ್ ಕುಳಿ, ಹೆಗ್ಗೋಡು, ಕಾನ್ಮನೆ, ಹಿತ್ತಲಕೊಪ್ಪ, ಬರದ್ವಳ್ಳಿ, ಅದರಂತೆ, ಮೊದಲಾದೆಡೆಗಳಿಗೆ ಹೋಗುವ ಕಾಲು ದಾರಿಗಳು ಸೇರುವಲ್ಲಿ ಇದ್ದುದು ಕಿರಸ್ತಾನರ ಗುಸ್ತೀನ್ ಮಾಮನ ಮನೆ. ಸುತ್ತ ಒಂದು ಕಾಂಪೌಂಡು ಗೋಡೆ. ಒಳಗೆ ದೂರದಲ್ಲಿ ಮಾಮನ ಮನೆ.

ಮನೆಯ ಸುತ್ತ ಮಾವು, ಹಲಸು, ತೆಂಗು, ಚಿಕ್ಕು, ಎಂದೆಲ್ಲ ನೆಟ್ಟ ಮರಗಳು. ಕೆಲ ಹೂವಿನ ಗಿಡ ಬಳ್ಳಿಗಳು, ಸೊಂಪಾಗಿ ಬೆಳೆದು ಹಿಟ್ಟು ಉದುರಿಸಿದ ಹಾಗೆ ಕಾಣುತ್ತಿದ್ದ ಮಲ್ಲಿಗೆ ಬಳ್ಳಿ, ತಲೆತುಂಬ ಹೂಬಿಡುವ ಕನಕಾಂಬರ, ಗಾಳಿಗೆ ತೊನೆ ದಾಡುವ ರಥಪುಷ್ಪ, ಬಗೆ ಬಗೆಯ ಬಣ್ಣಗಳ ಗುಲಾಬಿ ಗಿಡಗಳ ಸಾಲು ಸಾಲು, ಜೊತೆಗೆ ಕೆಲ

ಅಲಂಕಾರಿಕ ಗಿಡಗಳು. ರಾತ್ರಿಯೆಲ್ಲ ಸುಗಂಧ ಬೀರುವ ರಾತ್ರಿ ರಾಣಿ, ಮಳೆಗಾಲದಲ್ಲಿ ಡೇರೆ, ದಸರೆಯ ಸಮಯಕ್ಕೇನೆ ಹೂ ಬಿಡುವ ಚೆಂಡು ಹೂವು, ನಡು ರಾತ್ರಿಗೆ ಅರಳಿ ಊರವರಲ್ಲಿ ಕುತೂಹಲ ಕೆರಳಿಸಿದ್ದ ಬ್ರಹ್ಮ ಕಮಲ, ಕೊನೆ ಮನೆಯ ಗಂಗಾಧರ ರಾಯರು ನಿತ್ಯ ಬಂದು ಎರಡು ಎಲೆಗಳನ್ನು ತಿಂದು ತಮ್ಮ ಸಿಹಿ ಮೂತ್ರವನ್ನ ತಹಬಂದಿಗೆ ತಂದು ಕೊಂಡಿರುವಂತಹಾ ನಿತ್ಯ, ಪುಷ್ಪ. ಗಂಗಾಧರ ರಾಯರ ಮನೆಯ ಪಕ್ಕದ ಷಡಕ್ಷರಪ್ಪನವರು ತಪ್ಪದೆ ತಮ್ಮ ಮನೆಯ ಈಸ್ವರ ಪೂಜೆಗೆಂದು ಗುಸ್ತೀನ ಮಾಮನ ಮನೆಯಿಂದ ಕೊಂಡೊಯ್ಯುತ್ತಿದ್ದ



ಕಥೆ

ಇನ್ನೂ ಕೆಲ ಹೂವುಗಳು, ಹೀಗೆ ಮಾಮನ ತೋಟದ ಮನೆ ಎಲ್ಲರಿಗೂ ಬೇಕಾಗಿತ್ತು.

ಪರಿಚಿತವಾಗಿತ್ತು. ಈ ತೋಟದ ಮತ್ತೂ ಒಂದು ವಿಶೇಷತೆ ಅಂದರೆ ರಸ್ತೆ ಪಕ್ಕದ ಕಾಂಪೌಂಡಿಗೆ ಅಂಟಿ ಕೊಂಡಿದ್ದ ಒಂದು ಶಿಲುಬೆ. ಸುಮಾರು ನಾಲ್ಕು ಅಡಿ ಎತ್ತರದ ಒಂದು ಕಟ್ಟೆ. ಇದರ ಮೇಲೆ ಒಂದು ಒಂದೂವರೆ ಅಡಿ ಎತ್ತರದ ಜಂಬಿಟ್ಟಿಗೆ ಕಲ್ಲಿನ ಶಿಲುಬೆ. ಅದರ ಎರಡೂ ಬಾಹುಗಳ ಮೇಲೆ ಸದಾ ಒಂದು ಹೂವಿನ ಹಾರ ತೂಗು ಬಿದ್ದಿರುತ್ತಿತ್ತು. ಅದರ ಮುಂದೆ ರಾತ್ರಿ ಉರಿಸಿದ ಮೇಣದ ಬತ್ತಿಯ ಮೇಣ ಉಂಡೆಯಾಗಿ ನಿಂತಿರುತ್ತಿತ್ತು. ಬೆಳಿಗ್ಗೆ ಶಾಲೆಗೆ ಹೋಗುವ ಹುಡುಗರು ಈ ಮೇಣವನ್ನ ಅಲ್ಲಿಂದ ಎಬ್ಬಿಸಿ ಕೆರೆದು ತೆಗೆದು ಕೊಂಡು ಹೋಗುತ್ತಿದ್ದರು. ಇದನ್ನ ಮನೆಗೆ ತೆಗೆದು ಕೊಂಡು ಹೋಗಿ ಮನೆಯಲ್ಲಿ ಅದನ್ನು ಕರಗಿಸಿ ಮತ್ತೆ ಮೇಣದ ಬತ್ತಿ ಮಾಡಲು ಯತ್ನಿಸುತ್ತಿದ್ದರು. ಸಂಜೆ ಆಯಿತೆಂದರೆ ಗುಸ್ತೀನ್ ಮಾಮ, ಅವನ ಹೆಂಡತಿ, ಮಗ, ಸೊಸೆ, ಮೊಮ್ಮಕ್ಕಳು ಅಲ್ಲಿ ಬಂದು ಶಿಲುಬೆಯ ಕಟ್ಟೆಯ ಮುಂದೆ ಮೊಣಕಾಲೂರಿ, ಶಿಲುಬೆಯ ಮುಂದೆ ಮೇಣದ ಬತ್ತಿ ಹೊತ್ತಿಸಿ, ಕೈಯಲ್ಲಿ ಜಪಸರ ಹಿಡಿದು, ಒಂದು ಆರ್ಧಗಂಟೆ ಜಪ ಮಾಡಿ ಅಂತ್ಯದಲ್ಲಿ ಒಂದು ಕೀರ್ತನೆ ಹಾಡಿ ಹೋಗುತ್ತಿದ್ದರು. ಹೀಗೆ ಅವರು ಹೊತ್ತಿಸಿದ ಮೇಣದ ಬತ್ತಿಗಳು ಬಹಳ ಹೊತ್ತಿನವರೆಗೆ ಅಲ್ಲಿ ಉರಿದು ತಮ್ಮ ತಮ್ಮ ಹಳ್ಳಿಗಳಿಗೆ ಹೋಗುವ ಹಳ್ಳಿ ಜನರ ದಾರಿಗೆ ಬೆಳಕು ನೀಡುತ್ತಿದ್ದವು. ಗುಸ್ತೀನ್ ಮಾಮ ತನ್ನ ತೋಟದಲ್ಲಿ ಬೆಳೆದ ಹೂವುಗಳಲ್ಲಿ ಜನ ತೆಗೆದು ಕೊಂಡು ಹೋಗಿ ಉಳಿದುದನ್ನ ಕಿತ್ತು ಹಾರ ಮಾಡಿಯೋ ಇಲ್ಲ ಹಾಗೆಯೇ ತಂದು ಶಿಲುಬೆಯ ಪದತಲದಲ್ಲಿ ರಾಶಿ ಹಾಕುತ್ತಿದ್ದ. ಕೆಲ ಶಾಲಾ ಮಕ್ಕಳು ಶಾಲೆಯಲ್ಲಿ ತಮ್ಮ ನೆಚ್ಚಿನ ಆಧ್ಯಾಪಕರಿಗೆ ಕೊಡಲೆಂದು ಮಾಮನ ಮನೆಗೆ ಬಂದು ಹೂವುಗಳನ್ನ ಕೊಂಡೊಯ್ಯುತ್ತಿದ್ದರು. ಮಾಮ ಕೂಡ ಸಂತಸದಿಂದ ಈ ಹೂವುಗಳನ್ನ ನೀಡುತ್ತಿದ್ದ.

ಇದು ಲಾಗಾಯ್ತಿನಿಂದ ನಡೆದು ಬಂದ ಒಂದು ಪದ್ಧತಿ. ಗುಸ್ತೀನ್ ಮಾಮ ಸರಕಾರಿ ಆಸ್ಪತ್ರೆಯಲ್ಲಿ ವಾರ್ಡ ಬಾಯ್ ಆಗಿ ಕೆಲಸ ಮಾಡುತ್ತಿದ್ದವ. ರಕ್ತ, ಕೀವು, ಗಾಯ, ಇತ್ಯಾದಿ ಅಂದರೇನೆ ಹೆದರಿ ಕೊಳ್ಳುವವರ ನಡುವೆ, ಹೇಸಿಗೆ ಪಟ್ಟು ಕೊಳ್ಳುವವರ ನಡುವೆ, ಅದೇನೂ ಇಲ್ಲದೆ, ರೋಗಿಗಳ ಸೇವೆ ಮಾಡುತ್ತಿದ್ದವ ಈತ. ಅವನು ಕೆಲಸಕ್ಕೆ ಸೇರಿದ್ದೇ ಅವನಿಗೆ ಹದಿನಾರು ವರ್ಷವಾದಾಗ. ಹೊಸದಾಗಿ ಪ್ರಾರಂಭವಾದ ಅಸ್ಪತ್ರೆಗೆ ಓರ್ವ ವಾರ್ಡ ಬಾಯ್ ಬೇಕಿತ್ತು. ಗುಸ್ತೀನನ ತಂದೆ ಊರ ಪ್ರವಾಸಿ ಮಂದಿರದಲ್ಲಿ ಮೇಟಿ ಯಾಗಿದ್ದವ ತನಗೆ ಸಹಾಯವಾಗಲೆಂದು ಮಗನನ್ನು

ಪ್ರವಾಸಿ ಮಂದಿರದಲ್ಲಿ ಇರಿಸಿಕ್ಕೊಂಡಿದ್ದ. ಇಲ್ಲಿ ಸರಕಾರಿ ಆಸ್ಪತ್ರೆ ತೆರೆಯಲೆಂದೇ ಬಂದ ಮೆಗ್ಗಾನ್ ಸಾಹೇಬನ ಕಣ್ಣಿಗೆ ಈ ಹುಡುಗ ಬಿದ್ದ.

"ಮಾಮ್, ಯಾರು ಹುಡುಗ?"

"ನನ್ನ ಮಗ ಸಾಹೇಬರೆ?"

"ಏನು ಕೆಲಸ ಮಾಡುತ್ತಾನೆ?"

"ಇನ್ನೂ ಚಿಕ್ಕವ, ನನ್ನ ಜೊತೆ ಇರಿಸಿ ಕೊಂಡಿದ್ದೇನೆ"

"ಇವನಿಗೊಂದು ಕೆಲಸ ಕೊಡೋಣ, ಇವನನ್ನ ಸರಕಾರಿ ಆಸ್ಪತ್ರೆಗೆ ಕಳುಹಿಸು"

ಮೆಗ್ಗಾನ್ ಸಾಹೇಬರ ಮಾತನ್ನ ತೆಗೆದು ಹಾಕಲಿಲ್ಲ ಗುಸ್ತೀನನ ತಂದೆ. ಗುಸ್ತೀನ ಸರಕಾರಿ ಆಸ್ಪತ್ರೆಯಲ್ಲಿ ವಾರ್ಡಬಾಯ್ ಆಗಿ ನೇಮಕ ಕೊಂಡ. ನಂತರ ಸರಕಾರಿ ಆಸ್ಪತ್ರೆಗೆ ವೈದ್ಯರಾಗಿ ಬಂದ ಡಾಕ್ಟರ ಮಿಸ್ಕಿತ್ ಅವನಿಗೆ ಎಲ್ಲ ಹೇಳಿ ಕೊಟ್ಟರು. ಈ ಕೆಲಸ ಒಂದು ಸೇವೆ. ರೋಗಿಗಳೇ ನಮ್ಮ ಪಾಲಿಗೆ ದೇವರು. ಅವರ ಗಾಯ ತೊಳೆಯುವಾಗ, ಅವರ ಗಾಯಗಳಿಗೆ ಡ್ರೆಸ್ಸಿಂಗ್ ಮಾಡುವಾಗ ನಾವು ಹೇಸಿ ಕೊಳ್ಳ ಬಾರದು. ಗಾಯಗಳನ್ನ ಹೊಲಿಯುವಾಗ, ಆರೈಕೆ ಮಾಡುವಾಗ ಹೆಚ್ಚಿನ ಮುತುವರ್ಜಿ ವಹಿಸಬೇಕು. ಮೊದಲೇ ನೊಂದಿರುವ ಅವರನ್ನ ನಮ್ಮ ಒರಟುತನ ದಿಂದ ಮತ್ತೆ ನೋವು ಮಾಡ ಬಾರದು. ಇಂತಹಾ ಹಲವು ವಿಚಾರಗಳನ್ನ ಮಿಸ್ಕತ್ ಹೇಳಿ ಕೊಟ್ಟರು. ಗುಸ್ತೀನ ಇದೆಲ್ಲವನ್ನ ಕಲಿತ. ಆ ಕಾರ್ಯದಲ್ಲಿ ಪ್ರವೀಣ ನೆನಿಸಿ ಕೊಂಡ. ಮೆಗ್ಗಾನ್ ಸಾಹೇಬರು, ಮಿಸ್ಕತ್ ಡಾಕ್ಟರರು ಈ ದೇಶ ಬಿಟ್ಟು ಹೋದರು. ಆದರೆ ಅವರಿಂದ ಏನು ಕೆಲಸವನ್ನ ಗುಸ್ತೀನ ಕಲಿತಿದ್ದ ಅದನ್ನ ಈತ ಮುಂದುವರೆಸಿದ.

ಸುಮಾರು ನಲವತ್ತು ವರ್ಷ ಶಿವಸಾಗರದ ಸರಕಾರಿ ಆಸ್ಪತ್ರೆಯಲ್ಲಿ ಗುಸ್ತೀನ್ ಮಾಮ ವಾರ್ಡಬಾಯ್ ಆಗಿ ಸೇವೆ ಮಾಡಿದ. ಊರಿನಲ್ಲಿ ಮಾತ್ರವಲ್ಲ ಅಕ್ಕಪಕ್ಕದ ಎಲ್ಲ ಹಳ್ಳಿಜನ ಇವನ ಕೆಲಸವನ್ನ ಮೆಚ್ಚಿ ಕೊಂಡರು. ಒಂದು ಗೊಣಗಾಟವಿಲ್ಲ, ಬೇಸರದ ಮಾತಿಲ್ಲ, ಹಣ ಕೊಡಿ ಅನ್ನುವ ತಕರಾರಿಲ್ಲ, ಸದಾ ಹಸನ್ಮುಖಿ, ಶಾಂತ ಸ್ವಭಾವದವ, ಯಾವಾಗಲೂ ಕೆಲಸ ಕೆಲಸ ಕೆಲಸ. ಹತ್ತಿರದಲ್ಲಿ ಒಂದು ಅಪಘಾತವೋ, ಬೆಂಕಿ ಆಕಸ್ಮಿಕವೋ ಆಗಿದೆ ಅಂದರೆ ಗುಸ್ತೀನ್ ಮಾಮ ರಾತ್ರಿ ಮನೆಗೂ ಹೋಗದೆ ಜನರ ಸೇವೆ ಮಾಡುವವ. ಅವನು ಸರಕಾರಿ ಸೇವೆಯಲ್ಲಿ ಇರುವಾಗಲೆ ಮಾರುತಿ ಮರ ಗ್ರಾಮಪಂಚಾಯತಿ ಅವನಿಗಾಗಿ ಒಂದು ಎಕರೆ ಜಮೀನನ್ನ ನೀಡಿತು. ಆತ ಅಲ್ಲಿ ಸಣ್ಣದೊಂದು ಮನೆ ಕಟ್ಟಿಸಿಕೊಂಡ. ಇದಕ್ಕೆ ಹಳ್ಳಿ ಜನ ಕೂಡ ಅವನಿಗೆ ಸಹಾಯ ಮಾಡಿದರು. ಅಲ್ಲಿ ಮರ ಗಿಡ ನೆಟ್ಟ, ಅದಕ್ಕೊಂದು ಕಾಂಪೌಡ ಕಟ್ಟಿದ. ಆಗಲೇ ಕಾಂಪೌಂಡ ಗೋಡೆಗೆ ತಾಗಿದಂತೆ ಒಂದು ಶಿಲುಬೆ ನಿಲ್ಲಿಸಿದ. ಇಲ್ಲೊಂದು ಕ್ರೀಸ್ತುವರ ಮನೆ ಇದೆ ಎಂಬುದು ಅಲ್ಲಿ ತಿರುಗಾಡುವವರಿಗೆ ತಿಳಿಯಲೆಂಬುದು ಅವನ ಉದ್ದೇಶ. ಇದನ್ನು ಯಾರೂ ತಪ್ಪಾಗಿ ತಿಳಿಯಲಿಲ್ಲ. ಅವನು ಅವನ ಜಮೀನಿನಲ್ಲಿ ಅವನ ನಂಬಿಕೆಯಂತೆ ಈ ಶಿಲುಬೆಯನ್ನ ನಿಲ್ಲಿಸಿದ್ದನಲ್ಲ.

ಸುಮಾರು ನಲವತ್ತು ವರ್ಷಗಳ ಸೇವೆಯ ನಂತರ ಆತ ನಿವೃತ್ತನಾದ. ಆಸ್ಪತ್ರೆಯಲ್ಲಿ ಕೊನೆಯ ದಿನ ಅವನಿಗೆ ಹೃದಯ ತುಂಬಿ ಬಂದು ಬೀಳ್ಕೊಟ್ಟರು. ಸಾಲದಕ್ಕೆ ಊರಲ್ಲಿಯ ಕೆಲ ಸಂಸ್ಥೆಗಳು ಅವನಿಗೆ ಸನ್ಮಾನ ಮಾಡಿದವು. ಅವನ ಬಗ್ಗೆ ಕೆಲ ಪತ್ರಿಕೆಗಳಲ್ಲಿ ಲೇಖನಗಳು ಬಂದವು. ಸೇವೆ ಅನ್ನುವುದೇ ತನ್ನ ಅರ್ಥವನ್ನ ಕಳೆದು ಕೊಂಡಿರುವಾಗ ಗುಸ್ತೀನ್ ಮಾಮ ನಂಥವನನ್ನ ಗುರುತಿಸಲು ಜನ ಹಿಂದೆ ಬೀಳಲಿಲ್ಲ.

ನಿವೃತ್ತಿಯ ನಂತರವೂ ಆತ ಕೆಲ ವರುಷ ಆಸ್ಪತ್ರೆಗೆ ಹೋಗಿ ಬಂದ. ನಂತರ ತನ್ನ ಮನೆಯಲ್ಲಿಯೇ ತನ್ನ ಕೆಲಸವನ್ನ ಮುಂದುವರೆಸಿದ. ಆದರೆ ಕ್ರಮೇಣ ವಯಸ್ಸಾದ ಹಾಗೆ ಇದು ತನ್ನಿಂದ ಆಗದ ಕೆಲಸ ಅನಿಸಿತು. ಆ ಕೆಲಸದಿಂದ ಆತ ದೂರವಾದ. ಆದರೆ ಜನ ಅವನನ್ನ ಮರೆಯಲಿಲ್ಲ. ಅವನನ್ನು ಮಾತನಾಡಿಸುವ ಅವನ ಕ್ಷೇಮ ಸಮಾಚಾರ ಕೇಳುವ ಜನ ಕಡಿಮೆ ಆಗಲಿಲ್ಲ.

ಈಗ ಕೆಲವರ್ಷಗಳಿಂದ ಗುಸ್ತೀನ ಮಾಮ ತೋಟದಲ್ಲಿಯೇ ಸಣ್ಣ ಪುಟ್ಟ ಕೆಲಸ ಮಾಡಿ ಕೊಂಡಿದ್ದಾನೆ. ಗಿಡಗಳಿಗೆ ನೀರು ಹಾಕುವುದು, ಗೊಬ್ಬರ ಹಾಕುವುದು, ಪಾತಿ ಮಾಡುವುದು, ಹೊಸ ಗಿಡ ನೆಡುವುದು, ಹೀಗೆ ಅವನ ಹಗಲು ಕಳೆದು ಹೋಗುತ್ತದೆ. ತೋಟದಲ್ಲಿ ಕೆಲಸ ಮಾಡುವ ಮಗ ಸೊಸೆಗೆ ಆತ ನೆರವಾಗುತ್ತಾನೆ. ಅವನ ಮಗ ಹೆಚ್ಚು ಓದಲಿಲ್ಲ. ಅವನೂ ಕೂಡ ಶಾನುಭೋಗರ ಧನ್ವಂತರಿ ಚಿಕಿತ್ಸಾಲಯದಲ್ಲಿ ಕೆಲಸ ಮಾಡುತ್ತಾನೆ. ಅಪ್ಪ ಮಾಡಿದ ಅದೇ ಕೆಲಸ. ಶಾನುಭೋಗರಿಗೆ ಈತನ ಮೇಲೆ ತುಂಬಾ ನಂಬಿಕೆ. ಈತ ತಮ್ಮ ಚಿಕಿತ್ಸಾಲಯದ ಹೆಸರನ್ನ ಕೆಡಿಸದೆ ಕೆಲಸ ಮಾಡುತ್ತಾನೆ ಅನ್ನುವ ವಿಶ್ವಾಸ. ಇನ್ನುಳಿದಹಾಗೆ ಈತ ತನ್ನ ಕೈ

ತೋಟದಲ್ಲಿ ಕೆಲಸ ಮಾಡುತ್ತಾನೆ. ಊರವರ, ಹಳ್ಳಿಗರ ಪ್ರೀತಿ ಗಳಿಸಿದ್ದಾನೆ. ವಯಸ್ಸಾದ ತಂದೆ ಗುಸ್ತೀನನನ್ನ ಚೆನ್ನಾಗಿ ನೋಡಿ ಕೊಳ್ಳುತ್ತಾನೆ. ಗುಸ್ತೀನ ಕೂಡ ಮಗ ಸೊಸೆ ಎಂದರೆ ಪ್ರಾಣ ಕೊಡುತ್ತಾನೆ. ಸಂಜೆ ಆಯಿತೆಂದರೆ ಗುಸ್ತೀನ ಗೇಟನ್ನು ತಳ್ಳಿ ಕೊಂಡು ಹೊರ ಬರುತ್ತಾನೆ. ಶಿಲುಬೆಯ ಕಟ್ಟೆಯವರೆಗೆ ಬಂದು ಅಲ್ಲಿ ಶಿಲುಭೆಯ ಸುತ್ತ ಶುಚಿಮಾಡುತ್ತಾನೆ. ಗಟ್ಟಿಯಾದ ಮೇಣವನ್ನ ತೆಗೆಯುತ್ತಾನೆ. ಶಿಲುಬೆಗೆ ಹಾಕಿದ ಹಾರ ತೆಗೆದು ಸೊಸೆ ಕಟ್ಟಿ ತಂದ ಹೊಸ ಮಾಲೆಯನ್ನ ಶಿಲುಬೆಗೆ ಹಾಕುತ್ತಾನೆ. ನಿಧಾನವಾಗಿ ಕತ್ತಲಾಗುತ್ತದೆ. ಹಳ್ಳಿ ಜನ ತಮ್ಮ ತಮ್ಮ ಹಳ್ಳಿಗಳಿಗೆ ಇವನ ಶಿಲುಬೆಯ ಪಕ್ಕದ ರಸ್ತೆಯಲ್ಲಿ ಹಾದು ಹೋಗುತ್ತಾರೆ. ಅವರು ನಿಂತು ಮಾತನಾಡುತ್ತಾರೆ. ಕ್ಷೇಮ ಸಮಾಚಾರ ಕೇಳುತ್ತಾರೆ. ತಮಗೆ ಆಗಿರುವ ಕಜ್ಜ, ಗಾಯ ಇತ್ಯಾದಿಗಳ ಬಗ್ಗೆ ಹೇಳುತ್ತಾರೆ. ಅವರಿಗೂ ತನಗೆ ಗೊತ್ತಿದ್ದ ಔಷಧಿ ಹೇಳುತ್ತಾನೆ. ಹಾಗೆಯೇ ಮನೆಯಿಂದ ಹೆಂಡತಿ, ಸೊಸೆ, ಮಗ, ಮೊಮ್ಮಕ್ಕಳು ಬಂದು ಶಿಲುಬೆಯ ಮುಂದೆ ಸೇರುತ್ತಾರೆ. ಶಿಲುಬೆ ಕಟ್ಟೆಯ ಮುಂದಿನ ಶಗಣಿ ಸಾರಿಸಿದ ನೆಲದಲ್ಲಿ ಅವರೆಲ್ಲ ಮೊಣಕಾಲೂರುತ್ತಾರೆ. ಅಲ್ಲೊಂದು ಜಪಸರ ಪ್ರಾರ್ಥನೆ, ಒಂದು ಕೀರ್ತನೆ, ಎಲ್ಲರಿಗೂ ಒಳಿತಾಗಲಿ ಎಂದು ಒಂದು ಪರಲೋಕ ಮಂತ್ರ, ಮೂರು ನಮೋರಾಣಿ ಮಂತ್ರ ವನ್ನ ಗುಸ್ತೀನ್ ಮಾಮನೇ ಹೇಳಿ ಕೊಡುತ್ತಾನೆ. ಕತ್ತಲು ಮತ್ತೂ ಕವಿದಾಗ ಪ್ರಾರ್ಥನೆ ಮುಗಿಸಿ ಅವರೆಲ್ಲ ಚದುರುತ್ತಾರೆ. ಅಲ್ಲಿ ಹೊತ್ತಿಸಿದ ಮೇಣದ ಬತ್ತಿಗಳು ಬಹಳ ಹೊತ್ತಿನವರೆಗೆ ಉರಿಯುತ್ತಿರುತ್ತವೆ.

ಗುಸ್ತೀನ್ ಮಾಮ ಅಂತಹಾ ದೈವ ಭಕ್ತನಲ್ಲ. ಪ್ರತಿ ಭಾನುವಾರ ಇಗರ್ಜಿಗೆ ಹೋಗಲೇ ಬೇಕೆಂಬ ದರ್ದು ಅವನಿಗಿಲ್ಲ. ಆತ ಹಿಂದೆ ಆಸ್ಪತ್ರೆಯಲ್ಲಿ ಕೆಲಸ ಮಾಡುವಾಗ ಇದಕ್ಕೆಲ್ಲ ಅವನಿಗೆ ಬಿಡುವು ಸಿಗುತ್ತಿರಲಿಲ್ಲ. ಬಿಡುವಿದ್ದರೆ ಆತ ಇಗರ್ಜಿಗೆ ಹೋಗುತ್ತಿದ್ದ, ಪಾಪನಿವೇದನೆ ಮಾಡಿ ದಿವ್ಯ ಪ್ರಸಾದ ಸ್ವೀಕರಿಸುತ್ತಿದ್ದ. ಆದರೆ ಆತ ತಪ್ಪದೆ ಮಾಡುವ ಒಂದು ಕೆಲಸವೆಂದರೆ ಸಂಜೆ ಶಿಲುಬೆಯ ಮುಂದೆ ಮಾಡುವ ಜಪ. ಹಾಗೆಯೇ ವರ್ಷಕ್ಕೆ ಒಂದು ಬಾರಿ ಆತ ಶಿಲುಬೆಯ ಹಬ್ಬವನ್ನ ವೈಭವದಿಂದ ಆಚರಿಸುತ್ತಾನೆ. ಅಂದು ಶಿಲುಬೆಗೆ ಸುಣ್ಣ ಬಣ್ಣ ಬಳಿದು, ಊರ ತರುಣರೆಲ್ಲ ಬಂದು ಸುತ್ತ ತೋರಣ ಕಟ್ಟುತ್ತಾರೆ, ಬಣ್ಣದ ದೀಪ ತೂಗು ಬಿಡುತ್ತಾರೆ, ಬಾಳೇ ಕಂದನ್ನು ತಂದು ಶಿಲುಬೆಯ ಎರಡೂ ಕಡೆ ನೆಡುತ್ತಾರೆ. ಸಂಜೆ ಐದು ಗಂಟೆಗೆ ಶಿಲುಬೆ ಜಪ ದೊಡ್ಡ ಪ್ರಮಾಣ ದಲ್ಲಿಯೇ ನಡೆಯುತ್ತದೆ. ಊರಿನ ಎಲ್ಲ ಕ್ರೀಸ್ತುವರು, ಜೊತೆಗೆ ಮಾಮನ ಪರಿಚಿತರು, ಆ ರಸ್ತೆಯಲ್ಲಿ ಸದಾ ತಿರುಗಾಡುವ ಹಳ್ಳಿ ಜನ ಈ ಜಪದಲ್ಲಿ ಭಾಗಿಗಳಾಗುತ್ತಾರೆ. ಒಂದು ಅರ್ಧಗಂಟೆ ಜಪ ನಂತರ ತೋಟದ ಮನೆ ಎದುರು ನೂರು ಜನರಿಗೆ ಊಟ. ಇದೊಂದನ್ನು ಮಾಮ ನಡೆಸಿ ಕೊಂಡು ಬರುತ್ತಿದ್ದಾನೆ. ಯಾವುದು ತಪ್ಪಿದರೂ ಇದನ್ನ ಆತ ತಪ್ಪಿಸುವುದಿಲ್ಲ. ಅಲ್ಲಿ ತಿರುಗಾಡುವ ಜನ ಕ್ರಮೇಣ ಒಂದು ಅಭ್ಯಾಸವನ್ನ ರೂಢಿಸಿ ಕೊಂಡಿದ್ದಾರೆ. ಪೇಟೆಯಿಂದ ತಿರುಗಿ ಹೋಗುವಾಗ ಅವರೆಲ್ಲ ಒಂದು ಮೇಣದ ಬತ್ತಿ ಪ್ಯಾಕೇಟನ್ನ ತಂದು ಈ ಶಿಲುಬೆಯ ಕಟ್ಟೆಯ ಮೇಲೆ ಇರಿಸು ತ್ತಾರೆ. ಇಲ್ಲವೇ ತಾವೇ ಮುಂದಾಗಿ ಪ್ಯಾಕೇಟಿನಿಂದ ಮೇಣದ ಬತ್ತಿ ಹೊರಗೆ ತೆಗೆದು ಶಿಲುಬೆಯ ಮುಂದೆ

ಹೊತ್ತಿಸುತ್ತಾರೆ. ಹಾಗೆಯೇ ಕೈ ಮುಗಿಯುತ್ತಾರೆ. ಕೆಲವರು ಗುಸ್ತೀನ ಮಾಮನ ಕೈಗೇನೆ ಮೇಣದ ಬತ್ತಿ ಪ್ಯಾಕೇಟ ಮುಟ್ಟಿಸಿ ನೀವೇ ಹಚ್ಚಿ ಬಿಡಿ ಅನ್ನುತ್ತಾರೆ. ಗುಸ್ತೀನ್ ಮಾಮ ಅದನ್ನು ಭಕ್ತಿಯಿಂದ ಸ್ವೀಕರಿಸಿ

ಮಾರನೇ ದಿನ ಅದನ್ನ ಶಿಲುಬೆಯ ಮುಂದೆ ಹೊತ್ತಿಸುತ್ತಾನೆ. ಅಂತು ಈ ಶಿಲುಬೆ ದೇವರು ಕೇವಲ ಗುಸ್ತೀನ್ ಮಾಮನಿಗೆ ಮಾತ್ರ ಮೀಸಲಾಗಿ ಉಳಿಯಲಿಲ್ಲ. ಗುಸ್ತೀನ್ ಮಾಮನ ಗುಣ ಸ್ವಭಾವ ಅರಿತವರೆಲ್ಲ ಈ ಶಿಲುಬೆ ದೇವರನ್ನ ಪ್ರೀತಿಯಿಂದ



[illegible] ಬಹಳ ವರ್ಷಗಳವರೆಗೆ ಇದು ಮುಂದುವರೆಯಿತು. ಅಲ್ಲಿ ತಿರುಗಾಡುವವರು ಆ ದೇವರಿಗೆ ಕೈ ಮುಗಿಯುವುದು, ಹರಕೆ ಹೇಳಿ ಕೊಳ್ಳುವುದು, ದನ ತಪ್ಪಿಸಿಕೊಂಡರೆ ಕೇಳಿಕೊಳ್ಳುವುದು, ಪರೀಕ್ಷೆಗೆ ಹೋಗುವ ಮಕ್ಕಳು ಅಲ್ಲಿ ನಿಂತು ಕೈ ಮುಗಿಯುವುದು, ಸೈಕಲ್ಲಿನಲ್ಲಿ ತಿರುಗಾಡುವವರು ದೇವರಿಗೆ ವಂದಿಸುವುದು ಇದೆಲ್ಲ ನಡೆಯ ತೊಡಗಿ ಗುಸ್ತೀನ್ ಮಾಮನ ಮನೆ ದೇವರಿಗೆ ಉಳಿದವರೂ ಗೌರವ ಕೊಡ ತೊಡಗಿದರು. ಗುಸ್ತೀನ್ ಮಾಮ ಇದನ್ನು ಬೆಂಬಲಿಸಲೂ ಇಲ್ಲ, ಪ್ರೋತ್ಸಾಹಿಸಲೂ ಇಲ್ಲ.

******

ಆದರೆ ಈಗ ಕೆಲ ದಿನಗಳ ಹಿಂದೆ ಮರಾನ್ಕುಳಿಯ ಹಾಲಿನ ಮಂಜಪ್ಪ ಬೆಳಿಗ್ಗೆ ಶಿವಸಾಗರಕ್ಕೆ ವರ್ತನೆಯ ಹಾಲನ್ನು ತಂದವ ಶಿಲುಬೆ ದೇವರ ನೇರಕ್ಕೆ ಬಂದು ಸೈಕಲ್ಲಿನ ಮೇಲೆ ಕುಳಿತೇ ಶಿಲುಬೆ ದೇವರತ್ತ ಎಂದಿನಂತೆ ಕೈಮುಗಿದು ಫೆಡಲ್ ತುಳಿದ. ಏನೋ ವಿಚಿತ್ರವೆನಿಸಿ ಆತ ಸೈಕಲ್ ನಿಲ್ಲಿಸಿ ನೋಡಿದ.

ಶಿಲುಬೆ ಕಟ್ಟೆಯ ಮೇಲೆ ಶಿಲುಬೆ ಇರಲಿಲ್ಲ. ಕಟ್ಟೆ ಮಾತ್ರ ಬೋಳು ಬೋಳಾಗಿ ನಿಂತಿತ್ತು. ಸುಮಾರು ಒಂದೂವರೆ ಅಡಿ ಎತ್ತರದ ಶಿಲುಬೆ ನಾಲ್ಕು ತುಂಡಾಗಿ ಕೆಳಗೆ ಬಿದ್ದಿತ್ತು. ಅದರ ಬಾಹುಗಳ ಮೇಲಿನ ಹೂವಿನ ಹಾರ ಮಣ್ಣಿನಲ್ಲಿ ಹೊರಳಾಡುತ್ತಲಿತ್ತು. ಕಟ್ಟೆಯ ಮೇಲೆ ಅರ್ಧ ಉರಿದು ನಿಂತ ಮೇಣದ ಬತ್ತಿಗಳು ವಿಕಾರವಾಗಿ ಕಾಣುತ್ತಲಿದ್ದವು. ದೇವರೇ ಇದೇನಾಯಿತು ಎಂದು ಆತ ಗಾಬರಿಯಾದ. ಹಾಗೆಯೇ ಗುಸ್ತೀನ್ ಮಾಮನ ಮನೆಯತ್ತ ತಿರುಗಿ ಆತ ಕೂಗಿದ. ಗುಸ್ತೀನ್ ಮಾಮ ಹೊರ ಬಂದು ಏನು ಎಂದ. ಆತನಿಗೆ ಏನೂ ಗೊತ್ತಿರಲಿಲ್ಲ. ಮಂಜಪ್ಪ ಹೀಗೆ ಎಂದು ವಿಷಯ ತಿಳಿಸಿದಾಗ ಮಾಮ ಗಾಬರಿಯಿಂದ ನೋಡಿದ. ಶಿಲುಬೆ ತುಂಡಾಗಿ ಮಣ್ಣಿನಲ್ಲಿ ಹೊರಳಾಡುತ್ತಿತ್ತು. ಮಾಮ ಏನೂ ಮಾತನಾಡಲಿಲ್ಲ. ಮೌನದಿಂದ ಎದೆ, ಹಣೆ, ಭುಜಗಳನ್ನ ಮುಟ್ಟಿಕೊಂಡು ಶಿಲುಬೆಯ ವಂದನೆ ಮಾಡಿ ತನ್ನ ಮನೆಯತ್ತ ನಡೆದು ಹೋದ. ಅವನ ನಡಿಗೆ ಅವನಿಗೆ ಆದ ನೋವನ್ನು ದಿಗ್ಭ್ರಾಂತಿಯನ್ನು, ವ್ಯಕ್ತಪಡಿಸುವಂತಿತ್ತು. ಆದರೆ ಗುಸ್ತೀನ್ ಮಾಮನ ಮನೆ ಮುಂದಿನ ಶಿಲುಬೆಯನ್ನ ಯಾರೋ ಕಿತ್ತು ಮುರಿದುಹಾಕಿದ್ದಾರೆ ಅನ್ನುವ ಸುದ್ದಿ ಅಲ್ಲಿ ತಿರುಗಾಡುವ ಹತ್ತು ಹಳ್ಳಿಗಳ ಜನಕ್ಕೆ, ಅಕ್ಕಪಕ್ಕದ ಬೇರೆ ಹಳ್ಳಿ ಜನರಿಗೆ, ಶಿವಸಾಗರದ ಎಲ್ಲ ಜನರಿಗೆ ತಿಳಿದು ಬಂದು ಅವರೆಲ್ಲ ಬಂದು ಬಂದು ಆ ದೃಷ್ಯವನ್ನ ನೋಡಿ ಹೋಗ ತೊಡಗಿದರು.

ಕೆಲವರು ಮಾಮನ ಮನೆಗೂ ಬಂದು ಮಾಮನಿಗೆ ಸಾಂತ್ವನ ಹೇಳುವ ಯತ್ನ ಮಾಡಿದರು. ಸುದ್ದಿ ಕೇಳಿ ಗಂಗಾಧರ ರಾಯರು ಓಡಿ ಬಂದರು. ಷಡಕ್ಷರಪ್ಪನವರೂ ಬಂದರು. ಶಿಲುಬೆಯ ಕಂಬದ ಬಳಿ ನಿಂತು ಛೆ ಛೆ ಎಂದು ಮಿಡುಕಾಡಿದರು. "ಮಾಮ ಹೀಗೆ ಆಗಬಾರದಿತ್ತು, ಆ ಕಲ್ಲಿನ ಶಿಲುಬೆ ಯಾರಿಗೆ ಏನು ಮಾಡಿತ್ತು ಮಾರಾಯರೇ" ಎಂದು ಕೇಳಿದರು. ಮಾಮ ಆಗಲೂ ಮಾತನಾಡಲಿಲ್ಲ.

ಹೀಗೆ ಬಂದ ಯಾರೋ "ಗುಸ್ತೀನ್ ಮಾಮ್, ಪೋಲೀಸ ಕಂಪ್ಲೆಂಟ್ ಕೊಡಿ" ಎಂದು ಸಲಹೆ ಮಾಡಿದರು. ಆಗಲೂ ಮಾಮ ಮಾತನಾಡಲಿಲ್ಲ. ಅವನ ಮಗ ತುಸು ಸಿಟ್ಟು ಮಾಡಿ ಕೊಂಡವನು "ನಾವಿನ್ನು ಸುಮ್ಮನೆ ಇರಬಾರದು, ಇದು ಯಾರು ಮಾಡಿದ್ದೋ ಅವರಿಗೆ ಸರಿಯಾಗಿ ಬುದ್ಧಿ ಕಲಿಸ ಬೇಕು" ಎಂದು ಕೂಗಾಡಿದ. ಆಗಲೂ ಮಾಮ ಹಾಗೆಲ್ಲ ಹೇಳಬಾರದು ಎಂದು ಮಗನಿಗೆ ಸಮಾಧಾನ ಮಾಡಿದ. ಅಂದು ಶಾನುಭೋಗರ ಶಾಪಿನಿಂದ ಬೇಗನೆ ಬಂದ ಮಗ ತುಸು ಬಿಗಿದು ಕೊಂಡೇ ಇದ್ದ. ಅವನ ಸಂಗಡ ವರ್ಷದ ಶಿಲುಬೆ ಹಬ್ಬದಂದು ಬಂದು ಶಿಲುಬೆಯನ್ನ ಅಲಂಕರಿಸುವ ಊರ ತರುಣರ ತಂಡ ಕೂಡ ಇತ್ತು. ಅವರ ಮುಖಗಳು ಕೂಡ ಬಿಗಿದು ಕೊಂಡಿದ್ದವು. ಅವರನ್ನೆಲ್ಲ ನೋಡಿದ್ದೇ ಮಾಮ ತುಸು ಆತಂಕಗೊಂಡ.

ಈತ ಹೀಗೆ ವಿಚಾರ ಮಾಡುತ್ತಿರುವಾಗಲೇ ಮಗ=

"ಬಾಬಾ" ಎಂದ.

"ಏನು ಮಗು?"

ಮಗನ ಜೊತೆ ಬಂದ ಯುವಕರೆಲ್ಲ ಮಗನ ಹಿಂದೆ ನಿಂತರು.

"ಈ ಕೆಲಸ ಮಾಡಿದವರು ಯಾರು ಅನ್ನುವುದು ತಿಳಿದಿದೆ....ಇಲ್ಲಿ ತಿರುಗಾಡುವ ಜನ ಶಿಲುಬೆಗೆ ಮೇಣದ ಬತ್ತಿ ಹೊತ್ತಿಸುತ್ತಾರೆ ಅಂತ ಇದನ್ನ ಒಡೆದು ಹಾಕಿದ್ದಾರೆ. ನಾವು ಮತ್ತೆ ಶಿಲುಬೆ ನಿಲ್ಲಿಸೋಣ. ಅದರ ಸುದ್ದಿಗೆ ಯಾರು ಬರುತ್ತಾರೋ ನೋಡೋಣ" ಈ ಮಾತು ಹೇಳುವಾಗ ಮಗನ ಮೈ ಕಂಪಿಸುತ್ತಿತ್ತು. ಅವನ ಕಣ್ಣುಗಳಿಂದ ಕಿಡಿ ಹೊರ ಬೀಳುತ್ತಿತ್ತು. ಮಗನ ಹಿಂದೆ ನಿಂತ ಯುವಕರು ಕೂಡ ಹೆಡೆ ತೂಗಿದರು..

ಮಗ ತಂದೆಯ ಎದುರು ನಿಂತು ಮತ್ತೂ ಮಾತನಾಡಿದ=

"ಬಾಬ, ಇವತ್ತು ಏನು ಇಲ್ಲಿ ನಡೆದಿದೆ ಅದು ಇಲ್ಲಿಗೇನೆ ಮುಗಿಯುವುದಿಲ್ಲ. ಅದು ಮತ್ತೆ ಮತ್ತೆ ಮುಂದುವರಿಯುತ್ತೆ. ನಾವು ಸರಿಯಾದ ರೀತಿಯಲ್ಲಿ ಉತ್ತರ ಕೊಡಲಿಲ್ಲ ಅಂದರೆ ನಾಳೆ ನಾವಿಲ್ಲಿ ಬದುಕುವುದೇ ದುಸ್ತರವಾಗ ಬಹುದು"

ಮಗನ ಮಾತು ಭುಗಲೆದ್ದು ಉರಿಯುವ ಬೆಂಕಿಯಂತೆ ಮೈಯನ್ನ ದಹಿಸಿತು.

ಮಗ ಹಾಗು ಅವನ ಸ್ನೇಹಿತರ ಮನಸ್ಸಿನಲ್ಲಿ ಇದೀಗ ಒಂದು ಸೇಡಿನ ಬೀಜವನ್ನ ಬಿತ್ತಲಾಗಿದೆ. ಈ ಬೀಜ ಅಲ್ಲಿ ಮೊಳಕೆ ಯೊಡೆಯುವ ಮುನ್ನ ಅದನ್ನು ತೆಗೆದು ಹಾಕುವುದು ಹೇಗೆ ಎಂಬ ಬಗ್ಗೆ ಆತ ಯೋಚಿಸತೊಡಗಿದ. ಈ ಯುವಕರು ಈ ಹಿಂದೆ ಯಾವತ್ತೂ ಹೀಗೆ ವಿಚಾರ ಮಾಡಿದವರಲ್ಲ. ಇವರು ಒಳ್ಳೆಯವರಾಗಿ ದೇವರಿಗೆ ಧರ್ಮಕ್ಕೆ ತಲೆಬಾಗಿ ಬದುಕುತ್ತಿದ್ದವರು. ಯಾವ ಕಾರಣಕ್ಕೂ ದ್ವೇಶವನ್ನ ಸಾದಿಸದವರು.

ಇದೀಗ ಅವರು ಈ ನಿಟ್ಟಿನಲ್ಲಿ ಯೋಚನೆ ಮಾಡತೊಡಗಿದ್ದಾರೆ ಅಂದರೆ ನಾಳೆ ಇದು ಎಲ್ಲಿಗೆ ಹೋಗಿ ತಲುಪುತ್ತದೋ. ಆತ ತನ್ನ ಕುತ್ತಿಗೆಯಲ್ಲಿಯ ಶಿಲುಬೆಗೆ ಮುತ್ತಿಟ್ಟು ದೇವರೇ ನೀನೇ ಇದಕ್ಕೊಂದು ದಾರಿ ತೋರಿಸ ಬೇಕು ಎಂದು ಕೇಳಿ ಕೊಂಡ.

ಇದೀಗ ಗುಸ್ತೀನ್ ಮಾಮನ ಕಾಂಪೌಂಡಿನ ಅಂಚಿನಲ್ಲಿ ಹೊಸ ಶಿಲುಬೆಯನ್ನ ನಿಲ್ಲಿಸುವ ಯತ್ನದಲ್ಲಿ ಮಾಮನ ಮಗ ಇದ್ದಾನೆ. ಅವನಿಗೆ ಊರಿನವರ ಬೆಂಬಲ, ಅವನ ಸಂಗಡಿಗರ ಪ್ರೋತ್ಸಾಹ ದೊರಕಿದೆ. ಅಲ್ಲಿ ಆತ ಸುಮಾರು ನಾಲ್ಕು ಅಡಿ ಎತ್ತರದ ಕಬ್ಬಿಣದ ಶಿಲುಬೆಯನ್ನ ಹೊಸದಾಗಿ ಕಟ್ಟಲಾದ ಕಲ್ಲಿನ ಕಟ್ಟೆಯ ಮೇಲೆ ನಿಲ್ಲಿಸುವ ವಿಚಾರ ಮಾಡುತ್ತಿದ್ದಾನೆ. ಅಂತೆಯೇ ಒಂದು ದಿನ ಲಾರಿಯಲ್ಲಿ ಕಬ್ಬಿಣದ ಗಟ್ಟಿ ಮುಟ್ಟಾದ ಒಂದು ಶಿಲುಬೆ, ಶಿಲುಬೆ ಕಟ್ಟೆಗೆ ಬೇಕಾದ ಕಲ್ಲು, ಸಿಮೆಂಟು, ಮರಳು ಬಂದು ಅಲ್ಲಿ ಬೀಳುತ್ತವೆ. ಇದೇ ಲಾರಿ ಹತ್ತಿ ಮಗ ಅವನ ಸ್ನೇಹಿತರು ಬರುತ್ತಾರೆ. ಅವರೆಲ್ಲ ಲಾರಿಯ ಹಿಂಬದಿಯಲ್ಲಿ ಇರಿಸಿದ ಕಲ್ಲು ಮರಳು, ಕಬ್ಬಿಣದ ಶಿಲುಬೆಯನ್ನ ಇಳಿಸುವಾಗ ಮಗ ಲಾರಿಯಿಂದ ಏನೋ ಒಂದನ್ನ ಮುಚ್ಚಿ ಮರೆ ಮಾಡಿ ತನ್ನ ಮನೆಯೊಳಗೆ ಕೊಂಡೊಯ್ಯುವುದನ್ನ ಗುಸ್ತೀನ್ ಮಾಮ ಗಮನಿಸುತ್ತಾನೆ.

"ಅದು ಏನು ಮಗ?" ಎಂದು ಕೇಳುತ್ತ ಮಗನನ್ನ ಹಿಂಬಾಲಿಸುತ್ತಾನೆ ಗುಸ್ತೀನ್ ಮಾಮ. ಆದರೆ ಅವನ ಮಗ ಅದನ್ನು ಆದಷ್ಟು ತಂದೆಯಿಂದ ಮರೆ ಮಾಚುತ್ತಾನೆ. ಆದರೂ ಗುಸ್ತೀನ ಅದನ್ನ ನೋಡಿ ಬಿಡುತ್ತಾನೆ. ಲೋಹದ ಕೊಳವೆಯೊಂದು ಅವನ ಎದೆಯನ್ನ ಚುಚ್ಚಿ ಘಾಸಿ ಗೊಳಿಸುತ್ತದೆ.

ಮಗನ ಮುಖ ನೋಡುತ್ತ ಗುಸ್ತೀನ್ ಮಾಮ ಹೇಳುತ್ತಾನೆ–

"ಮಗು, ಈ ಸಮಸ್ಯೆಗೆ ಪರಿಹಾರ ಸೇಡಿನಲ್ಲಿ ಇಲ್ಲ ಕ್ಷಮೆಯಲ್ಲಿದೆ...ನಾವು ಇದನ್ನ ಅರ್ಥ ಮಾಡಿಕೊಂಡಷ್ಟೂ ಅದರಿಂದ ಎಲ್ಲರಿಗೆ ಒಳಿತಾಗುತ್ತದೆ"

ಮಾಮ ಮಗ ಮುಚ್ಚಿ ಇರಿಸಬೇಕೆಂದಿದ್ದ ಆ ವಸ್ತುವನ್ನ ಮಗನ ಕೈಯಿಂದ ಕಸಿದು ಕೊಳ್ಳಲು ಯತ್ನಿಸುತ್ತಾನೆ.

ಮಗ ತಂದೆಯ ಕೈಯನ್ನು ದೂರ ತಳ್ಳಿ–

"ಬಾಬ, ನೀವು ಈ ವಿಷಯಕ್ಕೆ ಬರಬೇಡಿ"

ಅನ್ನುತ್ತಾನೆ,

ಮಗನಿಂದ ತಳ್ಳಿಸಿ ಕೊಂಡ ತಂದೆ ಹೋಗಿ ಅಲ್ಲೊಂದು ಕಡೆ ಕುಸಿದು ಕೂರುತ್ತಾನೆ. ಆ ಕ್ಷಣದಲ್ಲಿ ತನ್ನ ದೇಹದಲ್ಲಿಯ ಶಕ್ತಿ ಎಲ್ಲ ಉಡುಗಿ ಹೋದ ಅನುಭವ ಮಾಮನಿಗೆ ಆಗುತ್ತದೆ. ಆತ ನಿಸ್ಸಹಾಯಕನಾಗಿ ಮಗ ಮತ್ತು ಅವನ ಸ್ನೇಹಿತರ ಚಟುವಟಿಕೆಯನ್ನ ಗಮನಿಸುತ್ತಾನೆ. ಆ ಯುವಕರು ಅತೀ ಉತ್ಸಾಹದಿಂದ,

ಏನೋ ಛಲದಿಂದ, ಹಟಮಾರಿತನದಿಂದ ಆ ಕೆಲಸದಲ್ಲಿ ತೊಡಗಿ ಕೊಂಡಿದ್ದನ್ನ ಈತ ಕಾಣುತ್ತಾನೆ. ಈ ಕೆಲಸದಲ್ಲಿ ಎಲ್ಲಿಯೂ ದೈವ ಭಕ್ತಿ ಕಾಣದೆ ಗುಸ್ತೀನ್ ಮಾಮ ಆತಂಕಕ್ಕೆ ಒಳಗಾಗುತ್ತಾನೆ. □



ಭಿನ್ನಾಭಿನ್ನ ನಿರಾಕರಣೆ

ಡಾ. ಎಸ್. ನಟರಾಜ್ ಬೂದಾಳು

ಸೃಷ್ಟಿಕೃತಿಗೆ ಸಚ್ಚಿದಾನಂದನೆ ಕವಿ. ಅವನ ಮನೀಷಿಯೆ ಅದಕ್ಕೆ ನಿಯತಿ. ಅವನ ಪ್ರಸರಣವೆ ಅದಕ್ಕೆ ಸತ್ಯ ಮತ್ತು ಅಸ್ತಿತ್ವ. ಒಂದೊಂದು ವ್ಯಾಪಾರವೂ ಅದರ ಸಾರಸತ್ವಾರ್ಥದಲ್ಲಿ ಮೂಲದಲ್ಲಿಯೆ ನಿಯಮಿತವಾಗಿದೆ. ಹೀಗೆ ನಡೆದುದು ತಪ್ಪು, ಹೀಗಿರಬಾರದಾಗಿತ್ತು, ಹಾಗೆ ನಡೆಯಬೇಕಿತ್ತು, ಹಾಗಿರಬೇಕಿತ್ತು ಎಂಬ ಟೀಕೆಗಳಿಗೆ ಟೀಕಾವಕಾಶ ಹೊರತು ಬೇರೆಯ ಅವಕಾಶವಿಲ್ಲ." (ಕುವೆಂಪು ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ). ಇನ್ನು ವೇದಾಂತವಂತೂ ಈ ನಿಲುವನ್ನು ಪ್ರಧಾನವಾಗಿ ಮುಂದಿಡುತ್ತದೆ: "ಏಕತ್ವದ ಉನ್ನತತರವಾದ ಕಲ್ಪನೆಯೊಂದುಂಟು. ಅದು ಏಕತತ್ವವಾದ. ಇಡೀ ಸೃಷ್ಟಿಗೆ ಮೂಲವೊಂದೇ ಎಂಬುದು ಅದರ ದೃಷ್ಟಿ. ಉಪನಿಷತ್ತುಗಳಲ್ಲಿ ಆ ದೃಷ್ಟಿಯು ಪೂರ್ಣವಾಗಿ ವಿಕಾಸ 'ಗೊಂಡಿದೆ. ಏಕತತ್ವವಾದದ ಚಿಂತನೆಯು ಎರಡಾದರೂ ಪ್ರತ್ಯೇಕ ಛಾಯೆಗಳು ಇವೆ. ಮೊದಲಿಗೆ ಪ್ರಕೃತಿಯನ್ನು ಭಗವಂತನೊಂದಿಗೆ ಅನನ್ಯಗೊಳಿಸುವ ಪ್ರಕೃತಿದೇವೈಕ್ಯವಾದ ದೃಷ್ಟಿಯು ಅಲ್ಲಿದೆ.

ರಸ ಮತ್ತು ಆನಂದದ ಮೂಲಕ ವಿಶ್ವದ ಮೂಲಸ್ವರೂಪವೆಂದುಕೊಂಡಿರುವ ಬ್ರಹ್ಮ, ಪರಾಸತ್, ಪರಾವಾಕ್ ಮೊದಲಾದ ಹೆಸರುಗಳಿಂದ ಸೂಚಿಸಲ್ಪಡುವ ಆ ಒಂದು 'ಮೂಲವಸ್ತು' ತಲುಪುವುದೇ ಭಾರತೀಯ ಕಾವ್ಯಮೀಮಾಂಸೆಯ ಏಕೈಕ ಗುರಿ. ಈ ನಿಲುವಿಗೆ ಪ್ರೇರಣೆ ಅದರ ಲೋಕವಿವರಣೆಯಲ್ಲಿದೆ. ಅದು ಲೋಕ ಸಮಸ್ತವನ್ನೂ ಅನನ್ಯ, ಏಕವೆಂದು ಗುರುತಿಸಿಕೊಂಡಿದೆ. ಈ ನಿಲುವು ಹಾಗೂ ಅದರೆಡೆಗಿನ ಪ್ರಯಾಣ ನಮ್ಮ ಕಾವ್ಯ ಮೀಮಾಂಸೆಯಲ್ಲಿಯೂ ಪ್ರಧಾನವಾಗಿದೆ ಮತ್ತು ನಮ್ಮ ಜೀವನಕ್ರಮವನ್ನು ಈ ನಿಲುವೇ ನಿರ್ದೇಶಿಸುತ್ತಿದೆ. ಹಾಗಾದರೆ ಬೌದ್ಧಮೀಮಾಂಸೆಯ ನಿಲುವು ಏನು? ಅದು ಯಾವುದರಿಂದ ಪ್ರೇರಣೆ ಪಡೆದಿದೆ? ಲೋಕಜೀವನವು ಅಲ್ಲಿ ಯಾವುದರಿಂದ ನಿರ್ದೇಶನವನ್ನು ಪಡೆಯುತ್ತಿದೆ? ಇವು ಪ್ರಮುಖ ಪ್ರಶ್ನೆಗಳಾಗಿದ್ದು ಇವುಗಳ ವಿಸ್ತಾರವಾದ ವಿವರಣೆಗಳನ್ನು ಮುಂದಿನ ಲೇಖನಗಳಲ್ಲಿ ಚರ್ಚಿಸಬಹುದು. ಸದ್ಯಕ್ಕೆ ಬೌದ್ಧ ನಿಲುವಿನ ಮುಖ್ಯಾಂಶವೇನೆಂದು ಗಮನಿಸಿ ಮುಂದುವರಿಯಬಹುದು. ಲೋಕಸಮಸ್ತವೂ ಸಂಬಂಧಗಳ ಸರಮಾಲೆ. ಈ ಸಂಬಂಧಗಳಿಂದ ಸದಾ ಉಂಟಾಗುತ್ತಲೇ ಇರುವ ಲೋಕದ ಅರಿವು ಸ್ವಯವಾದರೆ ನಮ್ಮಲ್ಲಿ ಉಂಟಾಗುವ ಕರುಣಾ-ಮೈತ್ರಿಯು ಸಕಲ ಜೀವಿಗಳ ದುಃಖವನ್ನು ನಿವಾರಿಸಬಲ್ಲದು. ನಾವು ಅನುಭವಿಸುವ ರಸವಿಶೇಷವೆಂದರೆ ಕರುಣಾಮೈತ್ರಿ ಮತ್ತು ಗುರಿಯೆಂದರೆ ದುಃಖ ನಿವಾರಣೆ – ಇದು ಬೌದ್ಧ ಮೀಮಾಂಸೆಯ ನಿಲುವು. ನಮ್ಮ ಸುತ್ತಲಿನ ಲೋಕವನ್ನು ನಾವು ಹೇಗೆ ನೋಡುತ್ತೇವೆ ಎಂಬುದೇ ಇಲ್ಲಿನ ಮುಖ್ಯ ಪ್ರಶ್ನೆ.

ಒಂದರಿಂದ ಇನ್ನೊಂದು ಅನ್ಯವೆ? ಅನನ್ಯವೆ?

ಲೋಕಾನುಸಂಧಾನವನ್ನು ದಿಕ್ಕುಗೆಡಿಸುವ ಪ್ರಶ್ನೆ ಇದು. ಇಡೀ ಜಗತ್ತು ಸಂಬಂಧಗಳ ಬೃಹತ್ ಜಾಲವಾಗಿರುವಾಗ, ಅನ್ಯತ್ವವನ್ನು ಅಥವಾ ಅನನ್ಯತ್ವವನ್ನು ಹುಡುಕುವ ಪ್ರಯತ್ನದಲ್ಲಿಯೇ ಸಂಬಂಧದ ನಿರಾಕರಣೆ ಇರುತ್ತದೆ. ಎಲ್ಲವನ್ನೂ ಯಾವುದಾದರೂ ಒಂದಕ್ಕೆ ಅರ್ಪಿಸಲು ಧಾರ್ಮಿಕ ಜಗತ್ತು ಹಾತೊರೆಯುತ್ತಿರುತ್ತದೆ. ಭಾರತೀಯ ಮೀಮಾಂಸೆಗಂತೂ ಇಲ್ಲಿ ಯಾವ ಸಂದೇಹವೂ ಇಲ್ಲ. ತೊಡಕೂ ಇಲ್ಲ. ಒಂದು ಸಣ್ಣ ಅನುಮಾನವನ್ನೂ ವ್ಯಕ್ತಪಡಿಸಲು ಅವಕಾಶ ಕೊಡುವುದಿಲ್ಲ. ಕುವೆಂಪುರವರೇ ಹೀಗೆ ನಮ್ಮ ಬಾಯಿ ಮುಚ್ಚಿಸುತ್ತಾರೆ: "ಈ ನಿಯತಿ ಅವನ ಇಚ್ಛೆ; ಅವನ ತಪಸ್ಸು; ಅವನ ಆನಂದ. ಯಾವುದು ಹೇಗಿರಬೇಕು? ಏನಾಗಬೇಕು? ಎಲ್ಲಿರಬೇಕು? ಯಾವುದರೊಡನೆ ಹೇಗೆ ವ್ಯವಹರಿಸಬೇಕು? ಎಂಬೆಲ್ಲ ಅರ್ಥಗಳನ್ನೂ ಅದಕ್ಕದಕ್ಕೆ ತಗುವಂತೆ ಸಾರ್ವಕಾಲಿಕವಾಗಿ ನಿರ್ಣಯಿಸಿದ್ದಾನೆ. ಮರ್ತ್ಯಬುದ್ಧಿಗೆ ತಿಳಿಯುವಂತೆ ಯಾಂತ್ರಿಕವಾಗಿ ಅಲ್ಲ, ಅಮೃತಚಿದ್ಗೋಚರವಾಗುವಂತೆ ಮಾಂತ್ರಿಕವಾಗಿ. ಆ ಇಚ್ಛಾ ಪ್ರಕಾರವೇ ಈ ಸೃಷ್ಟಿಯಲ್ಲಿ ಅಲಂಘ್ಯವಾದ ನಿಯತಿಯಂತೆ ಪ್ರಕಾಶಗೊಂಡಿದೆ. ಸೃಷ್ಟಿಕೃತಿಗೆ ಸಚ್ಚಿದಾನಂದನೆ ಕವಿ. ಅವನ ಮನೀಷಿಯೆ ಅದಕ್ಕೆ ನಿಯತಿ. ಅವನ ಪ್ರಸರಣವೆ ಅದಕ್ಕೆ ಸತ್ಯ ಮತ್ತು ಅಸ್ತಿತ್ವ. ಒಂದೊಂದು ವ್ಯಾಪಾರವೂ ಅದರ ಸಾರಸತ್ವಾರ್ಥದಲ್ಲಿ ಮೂಲದಲ್ಲಿಯೆ ನಿಯಮಿತವಾಗಿದೆ. ಹೀಗೆ ನಡೆದುದು ತಪ್ಪು, ಹೀಗಿರಬಾರದಾಗಿತ್ತು, ಹಾಗೆ ನಡೆಯಬೇಕಿತ್ತು, ಹಾಗಿರಬೇಕಿತ್ತು–ಎಂಬ ಟೀಕೆಗಳಿಗೆ ಟೀಕಾವಕಾಶ ಹೊರತು ಬೇರೆಯ ಅವಕಾಶವಿಲ್ಲ." (ಕುವೆಂಪು–ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ). ಇನ್ನು ವೇದಾಂತವಂತೂ ಈ ನಿಲುವನ್ನು ಪ್ರಧಾನವಾಗಿ ಮುಂದಿಡುತ್ತದೆ: "ಏಕತ್ವದ ಉನ್ನತತರವಾದ ಕಲ್ಪನೆಯೊಂದುಂಟು. ಅದು ಏಕತತ್ವವಾದ. ಇಡೀ ಸೃಷ್ಟಿಗೆ ಮೂಲವೊಂದೇ ಎಂಬುದು ಅದರ ದೃಷ್ಟಿ. ಉಪನಿಷತ್ತುಗಳಲ್ಲಿ ಆ ದೃಷ್ಟಿಯು ಪೂರ್ಣವಾಗಿ ವಿಕಾಸಗೊಂಡಿದೆ. ಏಕತತ್ವವಾದದ ಚಿಂತನೆಯು ಎರಡಾದರೂ ಪ್ರತ್ಯೇಕ ಛಾಯೆಗಳು ಇವೆ. ಮೊದಲಿಗೆ ಪ್ರಕೃತಿಯನ್ನು ಭಗವಂತನೊಂದಿಗೆ ಅನನ್ಯಗೊಳಿಸುವ ಪ್ರಕೃತಿದೇವೈಕ್ಯವಾದ ದೃಷ್ಟಿಯು ಅಲ್ಲಿದೆ. – (ಕುವೆಂಪುರವರದ್ದು ಇದೇ ನಿಲುವು–ಈ ಅಭಿಪ್ರಾಯ ನನ್ನದು.) – ಅದು ಅತ್ಯಂತ ಗಮನಾರ್ಹವಾದ ರೀತಿಯಲ್ಲಿ ವ್ಯಕ್ತಗೊಂಡಿರುವ ಋಕ್ಕು ಒಂದಿದೆ. ಅದರಲ್ಲಿ, ಅದಿತಿ ದೇವತೆಯನ್ನು, ಎಲ್ಲ ದೇವತೆಗಳು, ಎಲ್ಲ ಮಾನವರು, ಆಕಾಶ, ವಾಯು–ವಸ್ತುತಃ 'ಏನೇನು ಇತ್ತೋ ಅಥವಾ ಏನೇನು ಇರುವುದೋ'– ಅದೆಲ್ಲದರೊಂದಿಗೂ ಅನನ್ಯಗೊಳಿಸಿದ್ದಾರೆ. ಕವಿ–ತಾತ್ವಿಕನು ಇಡೀ ವಿಶ್ವವು ಒಂದು ಮೂಲದಿಂದ ಬಂದದ್ದು ಎಂದು ಗುರುತಿಸುವುದರ ಜೊತೆಗೆ ಅದರ ಸ್ವರೂಪವೇನು ಎಂಬ ಸಮಸ್ಯೆಯನ್ನು ಬಿಡಿಸಹೊರಟಿದ್ದಾನೆ."(ಎಂ. ಹಿರಿಯಣ್ಣ – ಭಾರತೀಯ ತತ್ವಶಾಸ್ತ್ರದ ರೂಪುರೇಖೆಗಳು, ಅನು; ಡಾ. ಪ್ರಭುಶಂಕರ). ಇದು ಸ್ಥೂಲವಾಗಿ ಭಾರತೀಯ ಕಾವ್ಯಮೀಮಾಂಸೆಯು ಆಧರಿಸಿರುವ ಲೋಕವಿವರಣೆಯ ನಿಲುವು. ಈ ನಿಲುವುಗಳನ್ನು ಕುರಿತು ಚರ್ಚಿಸಬಹುದು. ಲೋಕವನ್ನು ಹಾಗೆ ಎಲ್ಲವೂ ಒಂದೇ ಎಂದೋ ಎಲ್ಲವೂ ಭಿನ್ನ ಭಿನ್ನ ಘಟಕಗಳೆಂದೋ ಗ್ರಹಿಸಲಾಗದು ಎನ್ನುವುದು ಬೌದ್ಧ ಮೀಮಾಂಸೆಯ ನಿಲುವು.



ಭಿನ್ನಾಭಿನ್ನ ನಿರಾಕರಣೆ:

ಬುದ್ಧನ ಪರಿನಿರ್ವಾಣದ ಸುಮಾರು ಇನ್ನೂರು ವರ್ಷಗಳ ನಂತರ ಬಂದ ಅಥೆನ್ಸ್‌ನ ತಾತ್ವಿಕ ಹೆರಾಕ್ಲೀಟಸ್‌ನ ಮಾತೊಂದಿದೆ. ಅದೇನೆಂದರೆ "ಒಂದು ನದಿಗೆ ಎರಡು ಸಾರಿ ಕಾಲಿಡಲು ಸಾಧ್ಯವಿಲ್ಲ". ಇದು ಲೋಕವನ್ನು ಒಂದು ಪ್ರವಾಹವನ್ನಾಗಿ ಸ್ವೀಕರಿಸಲು ಒತ್ತಾಯಿಸುತ್ತದೆ. ಇದರ ಮುಂದುವರಿಕೆಯೆಂಬಂತೆ ನಾಗಾರ್ಜುನನ ಮಧ್ಯಮಿಕವಾದ ಈ ಮಾತನ್ನು ಹೀಗೆ ವಿಸ್ತರಿಸುತ್ತದೆ.

ಒಂದು ನದಿಗೆ ಎರಡು ಸಾರಿ ಕಾಲಿಡಲು ಸಾಧ್ಯವಿಲ್ಲ
ಎರಡು ಸಾರಿ ಕಾಲಿಟ್ಟ ಆ ಮನುಷ್ಯ ಒಬ್ಬನೇ ಅಲ್ಲ

ಎರಡು ಸಾರಿ ಕಾಲಿಟ್ಟಾಗಿನ ಪರಿಸ್ಥಿತಿಗಳು ಒಂದೇ ಅಲ್ಲ.

ಎರಡು ಸಾರಿ ಕಾಲಿಟ್ಟಾಗಿನ ಪರಿಣಾಮಗಳು ಒಂದೇ ಅಲ್ಲ.

ಹಾಗೆ ಎರಡು ಸಾರಿ ಕಾಲಿಟ್ಟ ಆ ನದಿ ಒಂದೇ ಅಥವಾ ಬೇರೆ ಬೇರೆಯೆ? ಎಂಬ ಪ್ರಶ್ನೆ ಸ್ವಲ್ಪ ನಿಧಾನಗತಿಯ ಉತ್ತರವನ್ನು ಬಯಸುತ್ತದೆ. ಒಂದೇ ಎಂದುತ್ತರಿಸಿದರೆ ಬದಲಾವಣೆಯನ್ನೆ ನಿರಾಕರಿಸಿದಂತಾಗುತ್ತದೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಬೇರೆ ಬೇರೆ ಎಂದಾದರೆ ಎರಡನೆಯ ನದಿ ಉಂಟಾದುದು ಹೇಗೆ ಎಂಬ ಪ್ರಶ್ನೆಗೆ ಉತ್ತರವಿಲ್ಲವಾಗುತ್ತದೆ. ಹಾಗಾಗಿ ಒಂದೆಯೂ ಅಲ್ಲ ಬೇರೆ ಬೇರೆಯೂ ಅಲ್ಲ ಎಂಬ ಉತ್ತರವನ್ನೇ ಕೊಡಬೇಕಾಗುತ್ತದೆ. ಹಾಗೆಯೇ ನದಿಗೆ ಎರಡು ಸಾರಿ ಕಾಲಿಟ್ಟ ಆ ಮನುಷ್ಯ ಒಬ್ಬನೇ ಅಥವಾ ಬೇರೆ ಬೇರೆಯೆ ಎಂಬ ಪ್ರಶ್ನೆ. ಉತ್ತರವೂ ಅದೇ. ಒಬ್ಬನೇ ಅಲ್ಲ ಬೇರೆ ಬೇರೆಯೂ ಅಲ್ಲ.

ನಾಗಾರ್ಜುನ ಇನ್ನೆರಡು ಉದಾಹರಣೆಗಳನ್ನು ಮುಂದಿಡುತ್ತಾನೆ.

ಭಾವವೊಂದು ತಾನೇ ಅನ್ಯವಾಗಿ ಬದಲಾಗದು
ಹೇಗೆಂದರೆ, ಯುವಕ ತಾನೇ ವೃದ್ಧನಾಗುವುದಿಲ್ಲ
ವೃದ್ಧನೂ (ಪುನಃ) ವೃದ್ಧನಾಗುವುದಿಲ್ಲ

ಜರೆಯು ನಾಗಾರ್ಜುನನಿಂದ ನಿರಾಕರಿಸಲ್ಪಟ್ಟಿಲ್ಲ. ಆದರೆ ಅನ್ಯತಾ ಅಥವಾ ಅನನ್ಯತಾವಾದಗಳ ಮೂಲಕ ಬದಲಾವಣೆಯನ್ನು ವಿವರಿಸಲು ಸಾಧ್ಯವಿಲ್ಲ. ಯಾರೊಬ್ಬರನ್ನೂ ಶಾಶ್ವತ ಆತ್ಮವುಳ್ಳವನೆಂದು ಗ್ರಹಿಸುವುದಾಗಲೀ ಕ್ಷಣದಿಂದ ಕ್ಷಣಕ್ಕೆ ಭಿನ್ನನೆಂದು ಗ್ರಹಿಸುವುದಾಗಲೀ ಯುಕ್ತವಲ್ಲ. ಯುವಕ ವೃದ್ಧನಾಗುವ ಪ್ರಕ್ರಿಯೆ ಉಂಟೇ ಹೊರತು ಯುವಕ ಯಾವಾಗ ವೃದ್ಧನಾದ? ಎಂಬ ಪ್ರಶ್ನೆಗೆ ಉತ್ತರವಿಲ್ಲ. ಏಕೆಂದರೆ 'ಯುವಕ' ಎನ್ನುವ ಹಂತವೊಂದು ಕ್ಷಣಮಾತ್ರವೂ ಸ್ವತಂತ್ರವಾಗಿ, ಸ್ಥಗಿತವಾಗಿ ಇಲ್ಲ. ಹಾಗಾಗಿ ಯುವಕ ವೃದ್ಧ ಒಬ್ಬನೇ ಅಲ್ಲ. ಹಾಗೆಯೇ ಬೇರೆ ಬೇರೆಯೂ ಅಲ್ಲ. ಏಕೆಂದರೆ ಯುವಕ ವೃದ್ಧನಾ ಗುವ ಪ್ರಕ್ರಿಯೆ ಇದೆ.

ಇದೇ ಅದಾಗಿ ಬದಲಾಗುವುದಾದರೆ
ಹಾಲು ತಾನೇ ಮೊಸರು ಎನ್ನಲು ಸಾಧ್ಯವಾಗುತ್ತದೆ.
ಆಗ ಮೊಸರುತನ (ದಧೀಭಾವ) ಹಾಲಿನಿಂದ ಬೇರೆಯಾಗುತ್ತದೆ.

ಹಾಲು ಮೊಸರಾಗುವ ಪ್ರಕ್ರಿಯೆ ಇದೆ. ಹಾಲು ಮೊಸರು ಬೇರೆ ಬೇರೆ ಎಂದಾದರೆ ಮೊಸರು ಉಂಟಾಗಲು ಬೇಕಾದ 'ಕಾರಣ'ವಾದ ಹಾಲನ್ನೇ ನಿರಾಕರಿಸಿದಂತಾಗುತ್ತದೆ. ಅಥವಾ ಹಾಲೇ ಮೊಸರು ಎಂದಾದರೆ 'ಮೊಸರುತನ (ದಧೀಭಾವ) ಹಾಲಿನಿಂದ ಬೇರೆಯಾಗಿ ಅಲಾಯಿದ ಉಳಿದುಬಿಡುತ್ತದೆ. ಅದನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಹಾಲು ಮೊಸರು ಬೇರೆ ಬೇರೆಯೂ ಅಲ್ಲ ಮತ್ತು ಒಂದೇ ಅಲ್ಲ. ಹಾಲು ಮೊಸರಾಗುವ ಪ್ರಕಿಯೆ ಉಂಟೇ ಹೊರತು ಹಾಲು ಮೊಸರಾದದ್ದು ಯಾವಾಗ? ಎಂಬ ಪ್ರಶ್ನೆಗೆ ಉತ್ತರ ಸಿಗಲಾರದು. ಇಲ್ಲಿ ಕಾಲದ ಅಂಶವನ್ನು ಹೊರಗಿಟ್ಟು ಚರ್ಚಿಸಲಾಗುತ್ತಿದೆ. ಮಾಧ್ಯಮಿಕರ ಕಾಲದ ಬಗೆಗಿನ ನಿಲುವನ್ನು ಬೇರೆಡೆ ಚರ್ಚಿಸಲಾಗುವುದು. ಇಲ್ಲಿ ವಿಶ್ಲೇಷಿಸಲಾಗುತ್ತಿರುವ ಅಂಶವೆಂದರೆ ನಾಗಾರ್ಜುನನ ಪೂರ್ವಪಕ್ಷವು ಹೇಗಾದರೂ ಮಾಡಿ ಒಂದು ಕ್ಷಣಕ್ಕಾದರೂ ವಸ್ತುವೊಂದನ್ನು ಸ್ಥಾಪಿಸಲು

ಹಾಲು ಮೊಸರಾಗುವ ಪ್ರಕ್ರಿಯೆ ಇದೆ. ಹಾಲು ಮೊಸರು ಬೇರೆ ಬೇರೆ ಎಂದಾದರೆ ಮೊಸರು ಉಂಟಾಗಲು ಬೇಕಾದ 'ಕಾರಣ'ವಾದ ಹಾಲನ್ನೇ ನಿರಾಕರಿಸಿದಂತಾಗುತ್ತದೆ. ಅಥವಾ ಹಾಲೇ ಮೊಸರು ಎಂದಾದರೆ 'ಮೊಸರುತನ' (ದಧೀಭಾವ) ಹಾಲಿನಿಂದ ಬೇರೆಯಾಗಿ ಅಲಾಯಿದ ಉಳಿದುಬಿಡುತ್ತದೆ. ಅದನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಹಾಲು ಮೊಸರು ಬೇರೆ ಬೇರೆಯೂ ಅಲ್ಲ ಮತ್ತು ಒಂದೇ ಅಲ್ಲ. ಹಾಲು ಮೊಸರಾಗುವ ಪ್ರಕಿಯೆ ಉಂಟೇ ಹೊರತು ಹಾಲು ಮೊಸರಾದದ್ದು ಯಾವಾಗ? ಎಂಬ ಪ್ರಶ್ನೆಗೆ ಉತ್ತರ ಸಿಗಲಾರದು. ಇಲ್ಲಿ ಕಾಲದ ಅಂಶವನ್ನು ಹೊರಗಿಟ್ಟು ಚರ್ಚಿಸಲಾಗುತ್ತಿದೆ. ಮಾಧ್ಯಮಿಕರ ಕಾಲದ ಬಗೆಗಿನ ನಿಲವನ್ನು ಬೇರೆಡೆ ಚರ್ಚಿಸಲಾಗುವುದು. ಇಲ್ಲಿ ವಿಶ್ಲೇಷಿಸಲಾಗುತ್ತಿರುವ ಅಂಶವೆಂದರೆ ನಾಗಾರ್ಜುನನ ಪೂರ್ವಪಕ್ಷವು ಹೇಗಾದರೂ ಮಾಡಿ ಒಂದು ಕ್ಷಣಕ್ಕಾದರೂ ವಸ್ತುವೊಂದನ್ನು ಸ್ಥಾಪಿಸಲು ಹೆಣಗುತ್ತಿತ್ತು. ಆದರೆ ಒಂದು ಕ್ಷಣಕ್ಕಾದರೂ ಪೂರ್ವಪಕ್ಷದ ನಿಲುವನ್ನು ಒಪ್ಪಿಕೊಂಡರೆ ಬೌದ್ಧ ಮೀಮಾಂಸೆಯು ತನ್ನ ನಿಲುವಾದ 'ಸಂಬಂಧದ ಜಗತ್ತನ್ನೇ' ಬಿಟ್ಟುಕೊಡಬೇಕಾಗುತ್ತದೆ. ಅದಕ್ಕಾಗಿ ನಾಗಾರ್ಜುನ ಅದನ್ನು ಒಂದು ತಾರ್ಕಿಕ ತುದಿಗೆ ಒಯ್ದು ಮುಟ್ಟಿಸುತ್ತಾನೆ.

ಹೆಣಗುತ್ತಿತ್ತು. ಆದರೆ ಒಂದು ಕ್ಷಣಕ್ಕಾದರೂ ಪೂರ್ವಪಕ್ಷದ ನಿಲುವನ್ನು ಒಪ್ಪಿಕೊಂಡರೆ ಬೌದ್ಧ ಮೀಮಾಂಸೆಯು ತನ್ನ ನಿಲುವಾದ 'ಸಂಬಂಧದ ಜಗತ್ತನ್ನೇ' ಬಿಟ್ಟುಕೊಡಬೇಕಾಗುತ್ತದೆ. ಅದಕ್ಕಾಗಿ ನಾಗಾರ್ಜುನ ಅದನ್ನು ಒಂದು ತಾರ್ಕಿಕ ತುದಿಗೆ ಒಯ್ದು ಮುಟ್ಟಿಸುತ್ತಾನೆ. ಅವನ ಅಗ್ನಿ–ಇಂಧನ ಪರೀಕ್ಷೆಯು ಅದನ್ನು ಯಶಸ್ವಿಯಾಗಿ ನಿರ್ವಹಿಸುತ್ತದೆ.

ಪ್ರತೀತ್ಯ ಸಮುತ್ಪಾದದ ಕೇಂದ್ರ ತಾತ್ವಿಕತೆಯ ವಿಶ್ಲೇಷಣೆಯನ್ನು ಅಗ್ನಿ ಮತ್ತು ಇಂಧನಗಳ ಪರೀಕ್ಷೆಯ ಮೂಲಕ ನಡೆಸುತ್ತಾನೆ. ಅಗ್ನಿ ಮತ್ತು ಇಂಧನಗಳ ನಡುವಿನ ಸಂಬಂಧವನ್ನು ಅನ್ಯತ್ವ ಮತ್ತು ಏಕತ್ವಗಳನ್ನು ಅನ್ವಯಿಸಿ ವಿಶ್ಲೇಷಿಸಲಾಗಿದೆ. ಇದೇ ವಿವರಣೆಯನ್ನು ಪ್ರತೀತ್ಯ ಸಮುತ್ಪನ್ನವಾಗಿರುವ ಪದಾರ್ಥ ಪ್ರಪಂಚದ ವಿವರಣೆಗೂ ವಿಸ್ತರಿಸಬಹುದಾಗಿದೆ. ಅಗ್ನಿ–ಇಂಧನ ಸಂಬಂಧವು ಬೌದ್ಧ ದರ್ಶನದಲ್ಲಿ ವ್ಯಾಪಕ ಚರ್ಚೆಗೆ ಒಳಗಾಗಿದೆ.

1: ಅಗ್ನಿ ಮತ್ತು ಇಂಧನ ಒಂದೇ ಎಂದಾದರೆ
ಕರ್ತೃ ಮತ್ತು ಕರ್ಮ ಒಂದೇ ಎಂದಾಗುತ್ತದೆ
ಅಗ್ನಿ ಮತ್ತು ಇಂಧನ ಬೇರೆ ಬೇರೆ ಎಂದಾದರೆ
ಅಗ್ನಿ ಇಂಧನವಿಲ್ಲದೆಯೂ ಇರಬಲ್ಲುದಾಗುತ್ತದೆ

ಅಗ್ನಿ ಮತ್ತು ಇಂಧನಗಳು ಒಂದೇ ಎಂದಾದರೆ ಮತ್ತೊಂದು ಉಂಟಾಗುವ ಸಾಧ್ಯತೆಯೇ ಇಲ್ಲದ ಕ್ರಿಯಾಹೀನತೆ ಉಂಟಾಗುತ್ತದೆ. ಅಗ್ನಿ ಮತ್ತು ಇಂಧನ ಬೇರೆ ಬೇರೆ ಎಂದುಕೊಂಡರೆ, ಇಂಧನ ಇಲ್ಲದೆಯೂ ಅಗ್ನಿ ಇರಬಲ್ಲದು ಎಂದಾಗುತ್ತದೆ. ಅಗ್ನಿಗೆ ಕಾರಣವೇ ಇಲ್ಲ ದಂತಾಗುತ್ತದೆ.

2: ಕಾರಣವಿಲ್ಲದೆ ಉಂಟಾದ ಅಗ್ನಿ ನಿತ್ಯವಾಗುತ್ತದೆ
ಅದರ ಪ್ರಾರಂಭವೆನ್ನುವುದು ಅರ್ಥಹೀನವಾಗುತ್ತದೆ
ಹೀಗಾದಾಗ ಅದು ಕ್ರಿಯಾಹೀನವಾಗುತ್ತದೆ

ಅಗ್ನಿ ಉಂಟಾಗಲು ಇಂಧನ 'ಕಾರಣ'ವಾಗುತ್ತದೆ. ಇಂಧನ ಬೇಕಿಲ್ಲ ಎನ್ನುವುದಾದರೆ ಅಗ್ನಿ ಸದಾ ಉರಿಯುತ್ತಲೇ ಇರುತ್ತದೆ. ಸದಾ ಉರಿಯುತ್ತಲೇ ಇರುವುದಕ್ಕೆ ಪ್ರಾರಂಭವೆನ್ನುವ ಹಂತವೇ ಇಲ್ಲದಂತಾಗುತ್ತದೆ.

4: ಇಲ್ಲಿ, ಉರಿಯುತ್ತಿರುವಾಗ ಇಂಧನವೇ ಅಗ್ನಿ
ಎನ್ನುವುದಾದರೆ ಯಾವುದರಿಂದ ಇಂಧನವನ್ನು ಹತ್ತಿಸಬೇಕು?

ಉಷ್ಣವು ಇಂಧನದಲ್ಲಿ ಅಂತರ್ಗತವಾಗಿ ಇದೆ ಎಂದಾದರೆ ಅದು ಈಗಾಗಲೇ ಉರಿಯುತ್ತಿರಬೇಕು. ಏಕೆಂದರೆ ಉರಿಯುವುದು ಅದರ ಲಕ್ಷಣ. ತನ್ನ ಉರಿಯುವ ಲಕ್ಷಣದ ಹೊರತಾಗಿ ಬೆಂಕಿ ಇರಲಾರದು. ಹಾಗಾದರೆ ಅಗ್ನಿ ಪ್ರಾರಂಭವಾದದ್ದು ಯಾವಾಗ ಎಂದಾಗಲೀ, ಅಗ್ನಿಗೆ ಕಾರಣವನ್ನಾಗಲೀ ಪ್ರಶ್ನಿಸುವಂತೆಯೇ ಇಲ್ಲ.

5: (ಇಂಧನದಿಂದ) ಅನ್ಯವಾಗಿ ಇರುವ ಅಗ್ನಿ
ಅದನ್ನು ತಲುಪುವುದಿಲ್ಲ
ಸಂಪರ್ಕಕ್ಕೇ ಸಿಗದ್ದು ಹತ್ತಿಕೊಳ್ಳುವುದಿಲ್ಲ
ಹತ್ತಿಕೊಳ್ಳದೇ ಇರುವುದು ನಂದುವುದಿಲ್ಲ
ಅಂತ್ಯಗೊಳ್ಳದಿರುವುದು ನಿತ್ಯವಾಗುತ್ತದೆ

ಅಗ್ನಿ ಮತ್ತು ಇಂಧನ ಬೇರೆ ಬೇರೆ ಎಂದರೆ, ಪ್ರಶ್ನೆಗಳ ಸರಮಾಲೆಯೇ ಎದುರಾಗುತ್ತದೆ. ಪ್ರತ್ಯೇಕ ಎಂದರೆ ಸ್ವತಂತ್ರ ಅಸ್ತಿತ್ವ ಎಂದಾಗುತ್ತದೆ. ಸ್ವತಂತ್ರ ಅಸ್ತಿತ್ವವುಳ್ಳದ್ದು ಅನ್ಯವನ್ನು ತಲುಪುವುದಿಲ್ಲ. ಅಗ್ನಿ ಇಂಧನದ ನಡುವ ಸಂಪರ್ಕವೇರ್ಪಡುವುದಿಲ್ಲ. ಸಂಪರ್ಕವೇ ಇಲ್ಲದೆ ಅಗ್ನಿ ಉಂಟಾಗುವುದಿಲ್ಲ.

6: ಅಗ್ನಿಯು ಇಂಧನದಿಂದ ಅನ್ಯವಾದಾಗ, ಹೆಣ್ಣು ಗಂಡನ್ನು ಸೇರುವಂತೆ
ಗಂಡು ಹೆಣ್ಣನ್ನು ಸೇರುವಂತೆ ಅಗ್ನಿಯು ಇಂಧನವನ್ನು ಸೇರುತ್ತದೆ.

ಇದು ಪ್ರತಿಪಕ್ಷವು ಮುಂದಿಟ್ಟ ಒಂದು ಸಾಧ್ಯತೆ. ಅಗ್ನಿ ಇಂಧನ ಪ್ರತ್ಯೇಕವೆಂದಿಟ್ಟುಕೊಂಡು ಎರಡರ ನಡುವಿನ ಪೂರಕ ಸಂಬಂಧವನ್ನು ಒಂದು ಸಾಧ್ಯತೆಯಾಗಿ ನಾಗಾರ್ಜುನ ಪರೀಕ್ಷೆಗೆ ಸ್ವೀಕರಿಸುತ್ತಾನೆ ಮತ್ತು ಉತ್ತರಿಸುತ್ತಾನೆ.

7: ಅಗ್ನಿ ಮತ್ತು ಇಂಧನ ಪರಸ್ಪರ ಪ್ರತ್ಯೇಕಿತವಾಗಿದ್ದರೆ,
ಅಗ್ನಿ ಇಂಧನದಿಂದ ಭಿನ್ನವಾದರೂ ಅದನ್ನು ಸೇರ

ಬಹುದು.

ಆಕರ್ಷಣೆಯ ಸಂಬಂಧ ಪ್ರತ್ಯೇಕಿತರಾದಾಗ ಮಾತ್ರ ಸಾಧ್ಯವಾಗುವಂಥದ್ದು. ಅಗ್ನಿ–ಇಂಧನ ಪ್ರತ್ಯೇಕ ಅಸ್ತಿತ್ವಗಳಲ್ಲ ಎಂಬ ಸಂಗತಿ ಈಗಾಗಲೇ ಸಿದ್ಧವಾಗಿದೆ. (ಒಂದೇ ಅಲ್ಲ ಎನ್ನುವುದೂ ಅವುಗಳ 'ಸಂಬಂಧ' ವ್ಯಾಖ್ಯಾನದ ಅಷ್ಟೇ ಮುಖ್ಯಾಂಶ) ಪ್ರತ್ಯೇಕವಲ್ಲದವುಗಳ ನಡುವೆ ಆಕರ್ಷಣೆಯ ಮಾತು ಅಸಂಬದ್ಧ. ಹಾಗಾಗಿ ನಾಗಾರ್ಜುನ ಸ್ತ್ರೀ–ಪುರುಷರ ಆಕರ್ಷಣೆಯ ಹೋಲಿಕೆ ಅಸಂಬದ್ಧವೆಂದು ತಳ್ಳಿ ಹಾಕಿದ್ದಾನೆಂದು ಭಾವಿಸಬಹುದು. ಯಾವುದೇ 'ಸಂಬಂಧ'ಗಳನ್ನು ಬೌದ್ಧ ಮೀಮಾಂಸೆಯು ಸ್ವೀಕರಿಸಲು ಸಿದ್ಧ, ವಿಶ್ಲೇಷಿಸಲೂ ಸಿದ್ಧ. ಆದರೆ ಅವುಗಳ ಮೂಲಕ ಸ್ವತಂತ್ರ ಅಸ್ತಿತ್ವ, ಅಸ್ತಿತ್ವವುಳ್ಳ 'ವಸ್ತು'ವೊಂದನ್ನು ಸಿದ್ಧಪಡಿ ಸುವ ಪ್ರಯತ್ನವಿದ್ದರೆ, ತಕ್ಷಣ ಅದನ್ನು ಹತ ಮಾಡಿಬಿಡುತ್ತದೆ.

ಇಲ್ಲಿನ ಮತ್ತೊಂದು ವ್ಯಾಖ್ಯಾನವೆಂದರೆ ಅಗ್ನಿ–ಇಂಧನಗಳು ತಮ್ಮ ಅಸ್ತಿತ್ವಕ್ಕೆ ಮತ್ತು ವ್ಯಾಖ್ಯಾನಕ್ಕೆ ಪರಸ್ಪರ ಅವಲಂಬಿತರಾಗಿದ್ದರೆ, ಸ್ತ್ರೀ–ಪುರುಷರು ಪರಸ್ಪರಾವಲಂಬಿಗಳಾಗಿದ್ದರೂ ಭಿನ್ನ ಅಸ್ತಿತ್ವವುಳ್ಳವರು. ಅಂದರೆ ಅವುಗಳ ಗ್ರಹಿಕೆಗೆ ಸಂಬಂಧಿಸಿದ ಹಾಗೆ ಪರಸ್ಪರಾವಲಂಬಿಗಳಾಗಿದ್ದರೂ ಭಿನ್ನ ವಾಸ್ತವಿಕ ಅಸ್ತಿತ್ವವುಳ್ಳವರು. ಈ ಹೋಲಿಕೆಯಲ್ಲಿ ಒಂದು ವೈಷಮ್ಯ ಇದೆ. ಅಗ್ನಿ–ಇಂಧನಗಳಿಗೆ ಭಿನ್ನ ದೇಶಾವಸ್ಥೆ ಇಲ್ಲ. ಸ್ತ್ರೀ ಪುರುಷರು ಪರಸ್ಪರಾಪೇಕ್ಷೆ ಇಲ್ಲದ ಹೊತ್ತು ಭಿನ್ನ ದೇಶಾವಸ್ಥೆಯಲ್ಲಿರುತ್ತಾರೆ. ಈ ಅವಲಂಬನೆಯ ಸಂಬಂಧದ ಸ್ವರೂಪ ಬೇರೆ.

8: ಅಗ್ನಿಯನ್ನವಲಂಬಿಸಿ ಇಂಧನವೂ

ಇಂಧನವನ್ನವಲಂಬಿಸಿ ಅಗ್ನಿಯೂ ಇರುತ್ತವಾದರೆ

ಯಾವುದರ ಪೂರ್ವನಿಷ್ಪನ್ನದಿಂದ

ಅಗ್ನಿಯು ಇಂಧನವನ್ನವಲಂಬಿಸುವಂತಾಗುತ್ತದೆ?

ಪರಸ್ಪರಾವಲಂಬನೆಯ ಸಂಬಂಧ ಇಲ್ಲಿ ಪ್ರಶ್ನಾತೀತವಾಗಿಯೇ ಇದೆ. ಆದರೆ ವಸ್ತುವಾದಿಗಳು ತಪ್ಪದೇ ಕೇಳುವ "ಯಾವುದರಿಂದ ಪ್ರಾರಂಭ?" ಎಂಬ ಪ್ರಶ್ನೆಯನ್ನು ನಾಗಾರ್ಜುನ ಸ್ವೀಕರಿಸಿ ಉತ್ತರಿಸುತ್ತಾನೆ. ಈ ಪ್ರಶ್ನೆಯಲ್ಲಿನ ಗೃಹೀತವೆಂದರೆ ಎರಡೂ ಭಿನ್ನ ಸ್ವತಂತ್ರಾಸ್ತಿತ್ವಗಳೆಂಬುದು. ಪೂರ್ವ ನಿಷ್ಪನ್ನ ಯಾವುದು? ಅಗ್ನಿಯೋ ಇಂಧನವೋ? ಬೀಜವೋ ವೃಕ್ಷವೋ? ಮೊಟ್ಟೆಯೋ ಕೋಳಿಯೋ?–ತಾತ್ವಿಕ ಊಹಾಪೋಹಗಳ ಸರಮಾಲೆಯ ಪ್ರಾರಂಭವೇ ಈ ಪ್ರಶ್ನೆಗಳ ಮೂಲಕ ಉಂಟಾಗುತ್ತದೆ. ಇಂತಹ ಪ್ರಶ್ನೆಗಳು ಉಂಟಾಗುವುದೇ ತಪ್ಪು ಗ್ರಹಿಕೆಯಿಂದ. ಯಾವುದಾದರೂ ಒಂದನ್ನು ಮೊದಲೇ ಸಿದ್ಧವಾಗಿತ್ತು ಎಂದರೆ ಮುಗಿಯಿತು ಅದು ಎಂದಿಗೂ ಅನ್ಯವಾಗಿಯೇ ಉಳಿದುಬಿಡುತ್ತದೆ.

9: ಅಗ್ನಿಯು ಇಂಧನವನ್ನವಲಂಬಿಸಿರುತ್ತದೆ ಎಂದರೆ

ಅಗ್ನಿಯು ಈಗಾಗಲೇ ಇದೆ ಎಂದಾಗುತ್ತದೆ.

ಹಾಗಿದ್ದಾಗ ಇಂಧನವೂ ಅಗ್ನಿಯಿಲ್ಲದೆ ಇರಬಹುದಾಗುತ್ತದೆ.

ವಸ್ತುವಾದಿಗಳ ಯಾವ ಹತಾಶೆಯ ಪ್ರಯತ್ನವನ್ನೂ ಬಿಡದೆ ಎದುರಿಸುವ ನಾಗಾರ್ಜುನ, ಯಾವುದರ ಪೂರ್ವ ನಿಷ್ಪನ್ನವೂ ಅಂತಿಮವಾಗಿ ಸ್ವತಂತ್ರಾಸ್ತಿತ್ವವನ್ನು ಪ್ರಶ್ನಾತೀತವಾಗಿ ಸಿದ್ಧಮಾಡಿಬಿಡುತ್ತದೆ ಎಂಬುದನ್ನು ಮುಂದಿಡುತ್ತಾನೆ.

10: ಇನ್ನೊಂದನ್ನು ಅವಲಂಬಿಸಿ ಸಿದ್ಧವಾಗುವ



ಆಕರ್ಷಣೆಯ ಸಂಬಂಧ ಪ್ರತ್ಯೇಕಿತರಾದಾಗ ಮಾತ್ರ ಸಾಧ್ಯವಾಗುವಂಥದ್ದು. ಅಗ್ನಿ–ಇಂಧನ ಪ್ರತ್ಯೇಕ ಅಸ್ತಿತ್ವಗಳಲ್ಲ ಎಂಬ ಸಂಗತಿ ಈಗಾಗಲೇ ಸಿದ್ಧವಾಗಿದೆ. (ಒಂದೇ ಅಲ್ಲ ಎನ್ನುವುದೂ ಅವುಗಳ 'ಸಂಬಂಧ' ವ್ಯಾಖ್ಯಾನದ ಅಷ್ಟೇ ಮುಖ್ಯಾಂಶ) ಪ್ರತ್ಯೇಕವಲ್ಲದವುಗಳ ನಡುವೆ ಆಕರ್ಷಣೆಯ ಮಾತು ಅಸಂಬದ್ಧ. ಹಾಗಾಗಿ ನಾಗಾರ್ಜುನ ಸ್ತ್ರೀ–ಪುರುಷರ ಆಕರ್ಷಣೆಯ ಹೋಲಿಕೆ ಅಸಂಬದ್ಧವೆಂದು ತಳ್ಳಿ ಹಾಕಿದ್ದಾನೆಂದು ಭಾವಿಸಬಹುದು. ಯಾವುದೇ ಸಂಬಂಧಗಳನ್ನು ಬೌದ್ಧ ಮೀಮಾಂಸೆಯು ಸ್ವೀಕರಿಸಲು ಸಿದ್ಧ, ವಿಶ್ಲೇಷಿಸಲೂ ಸಿದ್ಧ. ಆದರೆ ಅವುಗಳ ಮೂಲಕ ಸ್ವತಂತ್ರ ಅಸ್ತಿತ್ವ, ಅಸ್ತಿತ್ವವುಳ್ಳ 'ವಸ್ತು'ವೊಂದನ್ನು ಸಿದ್ಧಪಡಿಸುವ ಪ್ರಯತ್ನವಿದ್ದರೆ, ತಕ್ಷಣ ಅದನ್ನು ಹತ ಮಾಡಿಬಿಡುತ್ತದೆ. ಇಲ್ಲಿನ ಮತ್ತೊಂದು ವ್ಯಾಖ್ಯಾನವೆಂದರೆ ಅಗ್ನಿ–ಇಂಧನಗಳು ತಮ್ಮ ಅಸ್ತಿತ್ವಕ್ಕೆ ಮತ್ತು ವ್ಯಾಖ್ಯಾನಕ್ಕೆ ಪರಸ್ಪರ ಅವಲಂಬಿತರಾಗಿದ್ದರೆ, ಸ್ತ್ರೀ–ಪುರುಷರು ಪರಸ್ಪರಾವಲಂಬಿಗಳಾಗಿದ್ದರೂ ಭಿನ್ನ ಅಸ್ತಿತ್ವವುಳ್ಳವರು. ಅಂದರೆ ಅವುಗಳ ಗ್ರಹಿಕೆಗೆ ಸಂಬಂಧಿಸಿದ ಹಾಗೆ ಪರಸ್ಪರಾವಲಂಬಿಗಳಾಗಿದ್ದರೂ ಭಿನ್ನ ವಾಸ್ತವಿಕ ಅಸ್ತಿತ್ವವುಳ್ಳವರು.

ಭಾವಗಳು

ಪರಸ್ಪರಾವಲಂಬನೆಯಲ್ಲಿ ಸಿದ್ಧಿಸುತ್ತವೆ.

ತಾನು ಅವಲಂಬಿಸಿರುವ ವಸ್ತುವಿನಲ್ಲಿ (?) ಅದು

'ವಸ್ತು' ರೂಪದಿಂದ ಇರುವುದಾದರೆ ಅವಲಂಬನೆಯ ಮಾತೆಲ್ಲಿ?

ಇದು ವಸ್ತುವಾದಿಗಳ ಕೂದಲು ಸೀಳುವ ಉದ್ಯೋಗ. ಮಾಧ್ಯಮಿಕರ ಅನ್ಯತಾ ಮತ್ತು ಅನನ್ಯತಾವಾದನವನ್ನು ಅಧರಿಸಿ, ವಸ್ತು ಸಾಧ್ಯತೆಯನ್ನು ಪತ್ತೆ ಹಚ್ಚಲು ಹೊರಟ ವಸ್ತುವಾದಿಗಳ ಪ್ರಶ್ನೆ ಇದು. ಈ ಪ್ರಯತ್ನವನ್ನು ಬಿಡದೆ ನಾಗಾರ್ಜುನ ಹತ ಮಾಡುತ್ತಾನೆ.

11: ಪರಾವಲಂಬನೆಯಿಂದ ಸಿದ್ಧಗೊಂಡಿರುವ ಭಾವವು

ತಾನಿನ್ನೂ ಸಿದ್ಧಗೊಳ್ಳದಿರುವಾಗ, ಪರಾವಲಂಬಿ ಹೇಗೆ?

'ಸಿದ್ಧ'ಗೊಳ್ಳುವಿಕೆ ಹೇಗೆ ಅವಲಂಬಿಯಾಗಲು ಸಾಧ್ಯ?

ಆದುದರಿಂದ, ಅದರ ಸಾಪೇಕ್ಷವು ಯುಕ್ತವಾದುದಲ್ಲ.

ಸಿದ್ಧಗೊಂಡ ಮತ್ತು ಇನ್ನೂ ಸಿದ್ಧಗೊಳ್ಳದ ಎರಡೂ ಸ್ಥಿತಿಯಲ್ಲಿ ಸ್ವತಂತ್ರ ವಸ್ತುವಿನ ಸಾಧ್ಯತೆಯನ್ನು ನಾಗಾರ್ಜುನ ಅಲ್ಲಗಳೆಯುತ್ತಿದ್ದಾನೆ. ಇನ್ನೂ ಸಿದ್ಧಗೊಂಡಿಲ್ಲದಿರುವುದು ತನ್ನ ವ್ಯಾಖ್ಯಾನದಿಂದಲೇ ಅದಿನ್ನೂ ಉಂಟಾಗಿಲ್ಲ ಹಾಗಾಗಿ ಅದು ಮತ್ತೊಂದನ್ನು ಅವಲಂಬಿಸುವ ಪ್ರಶ್ನೆಯೇ ಇಲ್ಲ. ಇನ್ನು ಅವಲಂಬನೆಯಿಂದ ಸಿದ್ಧವಾಗಿರುವುದು ಮತ್ತೊಂದರಿಂದ ಸಂಪೂರ್ಣವಾಗಿ ಅನ್ಯವಲ್ಲ.

12: ಅಗ್ನಿ ಇಂಧನವನ್ನವಲಂಬಿಸಿಲ್ಲ ; ಇಂಧನವನ್ನವಲಂಬಿಸದೆಯೂ ಇಲ್ಲ.

ಇಂಧನ ಅಗ್ನಿಯನ್ನವಲಂಬಿಸಿಲ್ಲ ; ಅಗ್ನಿಯನ್ನವಲಂಬಿ ಸದೆಯೂ ಇಲ್ಲ.

ಅಗ್ನಿ 'ಸ್ವ' ದಿಂದ ಉತ್ಪತ್ತಿಯಾದುದೂ ಅಲ್ಲ ; ಪರದಿಂದ ಉತ್ಪತ್ತಿಯಾದುದೂ ಅಲ್ಲ ; ಕಾರಣರಹಿತವಾಗಿ ಉತ್ಪತ್ತಿಯಾದುದೂ ಅಲ್ಲ. ಇಂಧನಕ್ಕೂ ಅದೇ ತತ್ವ ಅನ್ವಯಿಸುತ್ತದೆ. ಅವುಗಳ ಸಂಬಂಧವನ್ನು ಭಿನ್ನವೆಂದಾಗಲೀ ಅಭಿನ್ನವೆಂದಾಗಲೀ ವಿವರಿಸಲಾಗದು.

13: ಮತ್ತೂ ಮುಂದಕ್ಕೆ, ಇಂಧನವೇ ಅಗ್ನಿಯಲ್ಲ

ಇಂಧನದ ಹೊರತಾಗಿಯೂ ಅಗ್ನಿ ಇಲ್ಲ.

ಅಗ್ನಿಯಲ್ಲಿ ಇಂಧನವಿಲ್ಲ. ಇಂಧನದಲ್ಲಿ ಅಗ್ನಿ ಇಲ್ಲ.

ಅವೆರಡರಲ್ಲೂ ಅದು (ಅಗ್ನಿ) ಇಲ್ಲ.

ಎಲ್ಲ ತಾತ್ವಿಕ ಶಾಶ್ವತ ಸಂರಚನೆಗಳೂ ಇಲ್ಲಿ ನಿರಾಕರಣೆಗೊಂಡಿವೆ. ಅಗ್ನಿ–ಇಂಧನದ ಬಗೆಗೆ ಅನ್ವಯಿಸಬಹುದಾದ ಅನ್ಯತೆ/ಅನನ್ಯತೆಯ ಎಲ್ಲ ತಾತ್ವಿಕ ಪರಿಕಲ್ಪನೆಗಳನ್ನು ಈ ಸೂತ್ರದಲ್ಲಿ ನಿರಾಕರಿಸಲಾಗಿದೆ.

16: ಸ್ವ ಮತ್ತು ವಸ್ತು ಪ್ರಪಂಚನವನ್ನು ಶಾಶ್ವತ ಅಸ್ತಿತ್ವಗಳೆಂದು

ವಾದಿಸುವವರು ಬುದ್ಧನ ಉಪದೇಶವನ್ನು

ಅರಿತಿದ್ದಾರೆಂದು ನಾನು ಭಾವಿಸುವುದಿಲ್ಲ.

ತನ್ನನ್ನೂ ಸೇರಿಸಿಕೊಂಡಂತೆ ಲೋಕಸಮಸ್ತವನ್ನು ಒಂದೇ ಎಂದೋ ಬೇರೆ ಬೇರೆ ಎಂದೋ ಭಾವಿಸಿ ನಡೆದುಕೊಳ್ಳುವವರಿಗೆ ಬುದ್ಧಗುರು ತೋರಿಸಿಕೊಟ್ಟ ದಾರಿ ದೊರಕುವುದಿಲ್ಲ. ಇದು ಬುದ್ಧಗುರುವಿನ ಉಪದೇಶವನ್ನಾಧರಿಸಿ ಮಾಡಿದ ವ್ಯಾಖ್ಯಾನ ಎಂದು ನಾಗಾರ್ಜುನ ಪರೋಕ್ಷವಾಗಿ ಸೂಚಿಸುತ್ತಿದ್ದಾನೆ. □



ಧರೆ ಹತ್ತಿ ಉರಿದರೆ

- ೨ -

ಡಾ. ಟಿ.ಆರ್. ಚಂದ್ರಶೇಖರ್

ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಆಳಿದ ಇತಿಹಾಸವಿರುವ ಇಂಗ್ಲೆಂಡ್‌ನ ಇಂದಿನ ಆರ್ಥಿಕ ಸ್ಥಿತಿಯು ಒಂದು ಕಾಲಕ್ಕೆ 'ಸಿಕ್ ಕಂಟ್ರಿ ಆಫ್ ಯೂರೋಪ್' ಎಂಬ ಬಿರುದಾವಳಿಗೆ ಪಾತ್ರವಾಗಿದ್ದ ಇಟಲಿಯ ಆರ್ಥಿಕ ಸ್ಥಿತಿಗಿಂತ ಹೀನಾ ಯವಾಗಿಬಿಟ್ಟಿದೆ. ಇದು ಜಾಗತೀಕರಣವು ಎದಿರುಸುತ್ತಿರುವ ತೀವ್ರ ವಾದ ಸಮಸ್ಯೆಯಾಗಿದೆ, ಇದನ್ನು ೧೯೩೦ರ ಮಹಾ ಆರ್ಥಿಕ ಮುಗ್ಗಟ್ಟಿಗೆ ಹೋಲಿಸಲಾಗುತ್ತಿದೆ. ಇಂದು ವಿಶ್ವವು ಎದುರಿ ಸುತ್ತಿರುವ ಎರಡನೆಯ ಮಹಾ ಮುಗ್ಗಟ್ಟೆಂದು ಗುರು ತಿಸಲಾಗುತ್ತಿದೆ. ಇದು ೧೯೩೦ರ ಮುಗ್ಗಟ್ಟಿಗಿಂತ ಹೆಚ್ಚು ಪಟ್ಟು ಅಗಾಧವಾಗಿ ದೆಯೆಂದು ತಜ್ಞರು ಹೇಳು ತ್ತಿದ್ದಾರೆ. ಹಣಕಾಸು ಸಂಸ್ಥೆಗಳು ಇಂದು ದಿವಾ ಳಿಯಾಗುತ್ತಿವೆ, ಉದ್ದಿಮೆಗ ಳಲ್ಲಿ ಉತ್ಪಾದನೆಯು ನೆಲ ಕಚ್ಚಿಬಿಟ್ಟಿದೆ. ನಿರುದ್ಯೋ ಗದ ಪ್ರಮಾಣವು ಮಿತಿ ಮೀರಿ ಬೆಳೆಯುತ್ತಿದೆ. ಮಾರುಕಟ್ಟೆಯಲ್ಲಿ ಸರಕು ಗಳನ್ನು ಕೊಳ್ಳುವವರಿಲ್ಲ ದಂತಾಗಿದೆ. ಇದು ಮುಖ್ಯ ವಾಗಿ ಹಣಕಾಸು ವಲ ಯಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ.

ಇಂದು ಇಡೀ ವಿಶ್ವವು ಆರ್ಥಿಕ ಮುಗ್ಗಟ್ಟಿನಿಂದಾಗಿ ಮತ್ತು ಹಣಕಾಸು ಕ್ರೈಸಿಸ್‌ನಿಂದಾಗಿ ಅತ್ಯಂತ ಸಂಕಷ್ಟದ ಸ್ಥಿತಿಯಲ್ಲಿದೆ. ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಆಳಿದ ಇತಿಹಾಸವಿರುವ ಇಂಗ್ಲೆಂಡ್‌ನ ಇಂದಿನ ಆರ್ಥಿಕ ಸ್ಥಿತಿಯು ಒಂದು ಕಾಲಕ್ಕೆ 'ಸಿಕ್ ಕಂಟ್ರಿ ಆಫ್ ಯೂರೋಪ್' ಎಂಬ ಬಿರುದಾವಳಿಗೆ ಪಾತ್ರವಾ ಗಿದ್ದ ಇಟಲಿಯ ಆರ್ಥಿಕ ಸ್ಥಿತಿಗಿಂತ ಹೀನಾಯವಾಗಿಬಿಟ್ಟಿದೆ. ಇದು ಜಾಗತೀಕರಣವು ಎದಿರುಸು ತ್ತಿರುವ ತೀವ್ರವಾದ ಸಮಸ್ಯೆಯಾಗಿದೆ, ಇದನ್ನು 1930ರ ಮಹಾ ಆರ್ಥಿಕ ಮುಗ್ಗಟ್ಟಿಗೆ ಹೋಲಿಸಲಾ ಗುತ್ತಿದೆ. ಇಂದು ವಿಶ್ವವು ಎದುರಿಸುತ್ತಿರುವ ಎರಡನೆಯ ಮಹಾ ಮುಗ್ಗಟ್ಟೆಂದು ಗುರುತಿಸಲಾಗುತ್ತಿದೆ. ಇದು 1930ರ ಮುಗ್ಗಟ್ಟಿಗಿಂತ ಹೆಚ್ಚು ಪಟ್ಟು ಅಗಾಧವಾಗಿದೆಯೆಂದು ತಜ್ಞರು ಹೇಳುತ್ತಿದ್ದಾರೆ. ಹಣಕಾಸು ಸಂಸ್ಥೆಗಳು ಇಂದು ದಿವಾಳಿಯಾಗುತ್ತಿವೆ, ಉದ್ದಿಮೆ ಗಳಲ್ಲಿ ಉತ್ಪಾದನೆಯು ನೆಲಕಚ್ಚಿಬಿಟ್ಟಿದೆ. ನಿರುದ್ಯೋಗದ ಪ್ರಮಾಣವು ಮಿತಿಮೀರಿ ಬೆಳೆಯುತ್ತಿದೆ. ಮಾರುಕಟ್ಟೆಯಲ್ಲಿ ಸರಕುಗಳನ್ನು ಕೊಳ್ಳುವವರಿಲ್ಲದಂತಾಗಿದೆ. ಇದು ಮುಖ್ಯವಾಗಿ ಹಣಕಾಸು ವಲಯಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ. ಆದರೆ ಅದು ಅಲ್ಲಿಗೆ ಮುಗಿರುವುದಿಲ್ಲ. ಅದು ಈಗ ಉತ್ಪಾದನೆ, ಉದ್ಯೋಗ, ಅನುಭೋಗ ಮುಂತಾದ ಸಂಗತಿಗಳಿಗೆ ವಿಸ್ತರಿಸುವ ಸಾಧ್ಯತೆಯಿದೆ. ಈ ಮುಗ್ಗಟ್ಟಿನ ಮೂಲವನ್ನು ತಜ್ಞರು ಹಣಕಾಸು ಸಂಸ್ಥೆಗಳ ಸಟ್ಟಾ ವ್ಯವಹಾರ, ಮಿತಿ ಮೀರಿದ ಸಾಲ ವ್ಯವಹಾರದಲ್ಲಿ, ಅದರಲ್ಲಿ ಒತ್ತೆ ವ್ಯವಹಾರದಲ್ಲಿ ಮತ್ತು ಅತಿಯಾದ ದುರಾಸೆಯಲ್ಲಿ ಗುರಿತಿಸಲು ಬಯಸುತ್ತಾರೆ.

ಇದನ್ನು ಒಂದು ವಿಧದಲ್ಲಿ ಬಂಡವಾಳಶಾಹಿಯ ವಿಘಟ ನೆಯ ಆರಂಭವೆಂದು ತಿಳಿಯಬಹುದಾಗಿದೆ. ಕೆಲವರು ಇದು ಅದರ 'ಅಂತ್ಯ'ವೆಂದು ಹೇಳಿತ್ತಿದ್ದಾರೆ. ಇದರಲ್ಲಿ ಉತ್ಪ್ರೇಕ್ಷೆಯ ಸಂಗ ತಿಯಿರಬಹುದು. ಆದರೆ ಅದು ವಾಸ್ತವಿಕ ಸಂಗತಿಯಾಗಿದೆ. ಅನೇಕ ತಜ್ಞರು ವಾದಿಸುತ್ತಿರುವಂತೆ ಅನಿಯಂತ್ರಿತ ಹಾಗೂ ಅತಿ ಯಾದ ಲಾಭಗಳಿಸಬೇಕೆಂಬ ದುರಾಸೆ, ಮಾರುಕಟ್ಟೆಗಳಲ್ಲಿನ ಹೊಸ ಹೊಸ ನಮೂನೆಯ ಮೋಸ-ವಂಚನೆ, ಸರ್ಕಾರದ ನಿರ್ವಹಣಾ ಸಾಮರ್ಥ್ಯದಲ್ಲಿನ ಕೊರತೆ ಮುಂತಾದವು ಇದಕ್ಕೆ ಕಾರಣವಾಗಿವೆ.

ಜಾಗತಿಕ ಮುಗ್ಗಟ್ಟು ಮತ್ತು ನಮ್ಮ ಆರ್ಥಿಕ ಬಿಕ್ಕಟ್ಟು

ಹಣಕಾಸು ಸಂಸ್ಥೆಗಳಲ್ಲಿನ ಮೋಸದ ಆಳ ಮತ್ತು ಹರವು ಅಸಾ ಧಾರಣವಾದುದಾಗಿದೆ. ಹೊಸಹೊಸ ದಾರಿಗಳನ್ನು ಕಂಡುಕೊಂಡು ದಲ್ಲಾಳಿಗಳು ಜನರಿಗೆ ಮತ್ತು ಸಮಾಜಕ್ಕೆ ಘೋರ ಅನ್ಯಾಯ ಮಾಡುತ್ತಿದ್ದಾರೆ. ಇಡೀ ಮುಗ್ಗಟ್ಟಿನ ಮೂಲವನ್ನು ತಜ್ಞರು ಸಾಲದ ವ್ಯವಹಾರದಲ್ಲಿನ ಗೊಂದಲದಲ್ಲಿ ಹುಡುಕಲು ಪ್ರಯತ್ನಿಸುತ್ತಿದ್ದಾರೆ. ನಿಯಂತ್ರಣವಿಲ್ಲದಿದ್ದರೆ ಯಾವ ರೀತಿಯಲ್ಲಿ ಮಾರುಕಟ್ಟೆಗಳು ಅನಾ ಹುತ ಮಾಡಬಹುದು ಎಂಬುದಕ್ಕೆ ಇಂದು ನಾವು ಎದಿರುಸುತ್ತಿ ರುವ ಬಿಕ್ಕಟ್ಟೇ ಸಾಕ್ಷಿಯಾಗಿದೆ. ಈ ಮುಗ್ಗಟ್ಟನ್ನು ಹಣಕಾಸು ವಲ ಯದ ಕುಸಿತವೆಂದೆ ಕರೆಯ ಲಾಗುತ್ತಿದೆ. ಈ ಬಿಕ್ಕಟ್ಟು ನಮ್ಮ ಆರ್ಥಿಕತೆಯ ಮೇಲೆ ತೀವ್ರವಾದ ಪರಿಣಾಮ ಉಂಟುಮಾಡಬಹುದಾಗಿದೆ. ಏಕೆಂದರೆ ನಮ್ಮ ಅಭಿವೃದ್ಧಿ – ಬೆಳವಣಿಗೆ ಗತಿಯು ಬಹಳಷ್ಟು ಮಟ್ಟಿಗೆ ರಫ್ತು ವ್ಯಾಪಾರ ವನ್ನು ಅವಲಂಭಿಸಿದೆ. ಆದರೆ ಈಗ ಈ ರಫ್ತು ವ್ಯಾಪಾರಕ್ಕೆ ತೀವ್ರ ಹೊಡೆತ ಬಿದ್ದಿದೆ. ಯುರೋಪು, ಅಮೇರಿಕ, ಜಪಾನುಗಳಲ್ಲಿ ಬೇಡಿಕೆಯು ಇಂಗಿಹೋಗುತ್ತಿದೆ.

ಸಿಮೀತ ವ್ಯಾಪ್ತಿಯ ಮಾರುಕಟ್ಟೆ

ನಮ್ಮ ಮಾರುಕಟ್ಟೆಯ ಜನರನ್ನು ಒಳಗೊಳ್ಳುವ ವ್ಯಾಪ್ತಿ ತುಂಬಾ ಸಿಮೀತವಾದುದು. ಒಂದು ಅಂದಾಜಿನ ಪ್ರಕಾರ ಅದು ನಮ್ಮ ಆರ್ಥಿ ಕತೆಯ ಸರಿ ಸುಮಾರು 250 ರಿಂದ 300 ದಶಲಕ್ಷ ಜನರನ್ನು ಮಾತ್ರ ಒಳಗೊಳ್ಳುತ್ತಿದೆ. ಅರ್ಜುನ್‌ಸೇನ್‌ಗುಪ್ತ ಹೇಳುವಂತೆ ಜಾಗತೀಕರಣದ ಲಾಭ ಪಡೆದುಕೊಳ್ಳುತ್ತಿರುವವರ ಪ್ರಮಾಣವು ಶೇ25 ಮೀರಿವುದಿಲ್ಲ. ಈ ಮಾರುಕಟ್ಟೆ, ಈ ಜಾಗತೀಕರಣ,ಈ ಉದಾರೀಕರಣ ನಮ್ಮ ಸಂದರ್ಭ ದಲ್ಲಿ ಸಮಾಜದ ಶೇ75ರಷ್ಟು ಜನರನ್ನು ಬದಿಗಿಟ್ಟೇ ನಡೆಯುತ್ತಿದೆ. ನಮ್ಮ ದೇಶದ ಮಧ್ಯಮವರ್ಗದ ಗಾತ್ರ ಬಹಳ ಸೀಮಿತವಾದುದು. ಜಾಗತೀ ಕರಣಕ್ಕೆ ಕೇವಲ ಮಧ್ಯಮವರ್ಗವನ್ನು ಮಾತ್ರ ಒಳಗೊಳ್ಳುವುದು ಸಾಧ್ಯವಾಗಿದೆ. ಉತ್ಪಾದನೆಯೇನೋ ಆಸ್ಫೋಟಕಾರಿಯಾಗಿ ಏರಿಕೆಯಾಗಿದೆ. ಆದರೆ ಅದನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯವು ಅದಕ್ಕೆ ಸರಿಸಮನಾಗಿ ವಿಸ್ತೃತಗೊಳ್ಳಲಿಲ್ಲ. ಇದು ನಮ್ಮ ಕಳೆದ 15–20 ವರ್ಷಗಳ ಜಾಗತೀಕರಣದ ಅನುಭವವಾಗಿದೆ. ಈ ಜಾಗತೀಕರಣವು ನಮ್ಮ ಸಮಾಜದ ಎಲೀಟ್ ವರ್ಗವನ್ನು ಮಾತ್ರ ಓಲೈಸುತ್ತಿದೆ. ಜಾಗತೀ ಕರಣದ ಪ್ರಸಿದ್ಧ ಟೀಕಾಕಾರರಾದ ಜೋಸೆಫ್ ಸ್ಟಿಗ್‌ಲಿಡ್ಜ್ ಮತ್ತು ಪಾಲ್ ಕೃಗ್ ಮನ್ ಹೇಳುವಂತೆ ಅದು ಸಮಾಜದ ಬಹುಪಾಲು ಬಡವರಿಗೆ, ಬಹುಪಾಲು ಪರಿಸರಕ್ಕೆ, ಮಹಿಳೆಯರಿಗೆ ಅನುಕೂಲವನ್ನುಂಟು ಮಾಡ ಲಿಲ್ಲ. ಆಸ್ಫೋಟಕಾರಿಯಾಗಿ ಏರಿಕೆಯಾದ ಉತ್ಪಾದನೆಯು ತಿರುಗಿ ತಿರುಗಿ ಅದೇ 250 ರಿಂದ 300 ದಶಲಕ್ಷದಷ್ಟಿರುವ ಮಧ್ಯಮವರ್ಗವನ್ನು ಅವಲಂಬಿಸಿಕೊಂಡು ಮುಂದುವರಿದಿದೆ ಇದನ್ನು ಅರ್ಜುನಸೇನ್‌ಗುಪ್ತ ಶೆ23ರ ಆರ್ಥಿಕತೆಯೆಂದು ಕರೆದಿದ್ದಾರೆ. ಅದು ಸಮಾಜದ ಸರಿಸು ಮಾರು 800ದಶಲಕ್ಷದಷ್ಟಿರುವ ಬಡವರನ್ನು, ಮಹಿಳೆಯರನ್ನು, ಕೂಲಿ ಕಾರರನ್ನು ಒಳಗೊಳ್ಳುತ್ತಿಲ್ಲ. ಇದರ ಪರಿಣಾಮವನ್ನು ನಾವೀಗ ಎದಿರಿ ಸಬೇಕಾಗಿದೆ. ಎಲ್ಲಿಯವರೆಗೆ ನಾವು ನಮ್ಮ ಮಾರುಕಟ್ಟೆಯ ವ್ಯಾಪ್ತಿಯನ್ನು ವಿಸ್ತೃತಗೊಳಿಸುವುದಿಲ್ಲವೊ ಅಲ್ಲಿಯವರೆಗೆ ನಮ್ಮ ಅಭಿವೃದ್ಧಿಗೆ ಜನರನ್ನು ಒಳಗೊಳ್ಳುವ ಸ್ವರೂಪವನ್ನು ಮೈಗೂಡಿಸಿಕೊಳ್ಳುವುದು ಸಾಧ್ಯ ವಾಗುವುದಿಲ್ಲ. ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಮುಗ್ಗಟ್ಟನ್ನು ಎದಿರಿಸಲು ನಮಗಿರುವ ಪರಿಣಾಮಕಾರಿಯಾದ ಕ್ರಮವೆಂದರೆ ನಮ್ಮ ಆಂತರಿಕ ಮಾರುಕಟ್ಟೆಯ ವ್ಯಾಪ್ತಿಯನ್ನು ವಿಸ್ತೃತಗೊಳಿಸುವುದು. ಇಂದು ವಿಶ್ವದಲ್ಲಿ ಆಂತರಿಕವಾಗಿ ಬೃಹತ್ ಮಾರುಕಟ್ಟೆ ಹೊಂದಿರುವ ನಾಲ್ಕು ದೇಶಗಳನ್ನು ಬ್ರಿಕ್(BRIC)ದೇಶಗಳೆಂದು ಕರೆಯುತ್ತಾರೆ. ಅವುಗಳಾವುವೆಂದರೆ ಬ್ರೆಜಿಲ್, ರಷ್ಯ, ಇಂಡಿಯಾ ಮತ್ತು ಚೈನಾ. ಈ ದೇಶಗಳು ಇಂದು ಜಾಗತಿಕವಾಗಿ ಉಂಟಾಗಿರುವ ಮುಗ್ಗಟ್ಟನೆನು ಮತ್ತು ಆರ್ಥಿಕ ಕ್ರೈಸಿಸ್ಸನ್ನು ತಮ್ಮ ಆಂತರಿಕ ಮಾರುಕಟ್ಟೆಯನ್ನು ಸೂಕ್ತವಾಗಿ ವಿಸ್ತೃತಗೊಳಿಸಿಕೊಳ್ಳುವುದರ ಮೂಲಕ ಎದುರಿಸಬಹುದೆಂಬುದು ತಜ್ಞರ ಅಭಿಪ್ರಾಯವಾಗಿದೆ. ಆದರೆ ಸಮಸ್ಯೆಯೆಂದರೆ ಅದು ವಿಸ್ತೃತಗೊಳ್ಳುತ್ತಿಲ್ಲ. ಆದರೆ ಅದು ನಡೆಯಬೇಕು. ಈ ಮಾರುಕಟ್ಟೆಯೊಳಗೆ ಕೂಲಿಕಾರರು, ದುಡಿಯುವ ಮಹಿಳೆಯರು, ಪರಿಶಿಷ್ಟರು ಪ್ರವೇಶಿಸುವಂತೆ ಮಾಡಬೇಕಾಗುತ್ತದೆ.

ಮಾರುಕಟ್ಟೆ ಪ್ರಣೀತ ಅಭಿವೃದ್ಧಿಯನ್ನು ಹಾಡಿಹರಸುತ್ತಿದ್ದವರು ಇಂದು ಪಾಠ ಕಲಿಯಬೇಕಾಗಿದೆ. ಪಾಲ್ ಕೃಗ್‌ಮನ್ ತನ್ನ ಅಂಕಣದಲ್ಲಿ ಇಂದಿನ ಮುಗ್ಗಟ್ಟಿಗೆ ಪರಿಹಾರವೆಂದರೆ ಸರ್ಕಾರವು ಹೆಚ್ಚು ಹೆಚ್ಚು ಕ್ರಿಯಾಶೀಲವಾಗಿ ಆರ್ಥಿಕತೆಯ ಮೇಲೆ ಹತೋಟಿಯಿಟ್ಟುಕೊಳ್ಳುವುದೆಂದು ಬರೆಯುತ್ತಿದ್ದಾನೆ.ಮಾರುಕಟ್ಟೆಗಳು ಮುಕ್ತವಾಗಿರಬೇಕು,ನಿಜ. ಆದರೆ ಅವುಗಳ ನಿಯಂತ್ರಣವೂ ಮುಖ್ಯ. ಅಂದರೆ ಮುಕ್ತತೆ ಮತ್ತು ನಿಯಂತ್ರಣಗಳ ನಡುವೆ ಒಂದು ಸಮತೋಲನ ಅಗತ್ಯವಾಗಿದೆ. ಮಾರುಕಟ್ಟೆಗೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪಾತ್ರವಿರಬೇಕು. ಆದರೆ ಅದು ನಿಯಂತ್ರಣವಿಲ್ಲದ ಅರಾಜಕ ಸ್ಥಿತಿಯಾಗಬಾರದು. ಮಾರುಕಟ್ಟೆ ತನ್ನಷ್ಟಕ್ಕೆ ತಾನೆ ಎಲ್ಲವನ್ನು ಸಾಧಿಸಿಬಿಡುವುದಿಲ್ಲ. ಸಾರ್ವಜನಿಕ ವಲಯದ ನೆರವು ಅದಕ್ಕೆ ಬೇಕಬೇಕಾಗುತ್ತದೆ. ಇಂದು ನಮ್ಮ ಸಂದರ್ಭದಲ್ಲಿ ಮಾರುಕಟ್ಟೆಯು ಸ್ವಲ್ಪಮಟ್ಟಿಗೆ ಅಭಿವೃದ್ಧಿಯ ದೃಷ್ಟಿಯಿಂದ ಯಶಸ್ವಿಯಾಗಿದ್ದರೆ ಅದಕ್ಕೆ ನಾವು ಕಳೆದ 50ವರ್ಷಗಳಲ್ಲಿ ನಿರ್ಮಿಸಿರುವ ಬೃಹತ್ ಮೂಲಸೌಲಭ್ಯದ ಬೃಹತ್ ಜಾಲ ಕಾರಣವಾಗಿದೆ. ಈ ಜಾಲವಿಲ್ಲದಿದ್ದರೆ ಮಾರುಕಟ್ಟೆ ಮತ್ತು ಖಾಸಗಿ ಉದ್ದಿಮೆ ವಲಯವು ಬದುಕಲು ಮತ್ತು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ವಿದ್ಯುತ್ ಸ್ಥಾವರಗಳ, ಭಾರಿ ಯಂತ್ರೋದ್ಯಮಗಳ, ಸಂಪರ್ಕಜಾಲದ ಮತ್ತು ಮೂಲಸೌಲಭ್ಯದ ಅಡಿಪಾಯವಿಲ್ಲದಿದ್ದರೆ ಐಟಿಯ, ಬಿಟಿಯ ಮತ್ತು ಖಾಸಗಿ ಕಂಪನಿಗಳ ಬೂಮು ಸಾಧ್ಯವಿರಲಿಲ್ಲ.

ಅರ್ಜುನ್‌ಸೇನ್‌ಗುಪ್ತ ಹೇಳುವಂತೆ ಜಾಗತೀಕರಣದ ಲಾಭ ಪಡೆದುಕೊಳ್ಳುತ್ತಿರುವವರ ಪ್ರಮಾಣವು ಶೇ25 ಮೀರಿವುದಿಲ್ಲ. ಈ ಮಾರುಕಟ್ಟೆ, ಈ ಜಾಗತೀಕರಣ,ಈ ಉದಾರೀಕರಣ ನಮ್ಮ ಸಂದರ್ಭದಲ್ಲಿ ಸಮಾಜದ ಶೇ75ರಷ್ಟು ಜನರನ್ನು ಬದಿಗಿಟ್ಟೇ ನಡೆಯುತ್ತಿದೆ. ನಮ್ಮ ದೇಶದ ಮಧ್ಯಮವರ್ಗದ ಗಾತ್ರ ಬಹಳ ಸೀಮಿತವಾದುದು. ಜಾಗತೀಕರಣಕ್ಕೆ ಕೇವಲ ಮಧ್ಯಮವರ್ಗವನ್ನು ಮಾತ್ರ ಒಳಗೊಳ್ಳುವುದು ಸಾಧ್ಯವಾಗಿದೆ. ಉತ್ಪಾದನೆಯೇನೋ ಆಸ್ಫೋಟಕಾರಿಯಾಗಿ ಏರಿಕೆಯಾಗಿದೆ. ಆದರೆ ಅದನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯವು ಅದಕ್ಕೆ ಸರಿಸಮನಾಗಿ ವಿಸ್ತೃತಗೊಳ್ಳಲಿಲ್ಲ. ಇದು ನಮ್ಮ ಕಳೆದ 15–20 ವರ್ಷಗಳ ಜಾಗತೀಕರಣದ ಅನುಭವವಾಗಿದೆ. ಈ ಜಾಗತೀಕರಣವು ನಮ್ಮ ಸಮಾಜದ ಎಲೀಟ್ ವರ್ಗವನ್ನು ಮಾತ್ರ ಓಲೈಸುತ್ತಿದೆ. ಜಾಗತೀಕರಣದ ಪ್ರಸಿದ್ಧ ಟೀಕಾಕಾರರಾದ ಜೋಸೆಫ್ ಸ್ಟಿಗ್‌ಲಿಡ್ಜ್ ಮತ್ತು ಪಾಲ್ ಕೃಗ್ ಮನ್ ಹೇಳುವಂತೆ ಅದು ಸಮಾಜದ ಬಹುಪಾಲು ಬಡವರಿಗೆ, ಬಹುಪಾಲು ಪರಿಸರಕ್ಕೆ, ಮಹಿಳೆಯರಿಗೆ ಅನುಕೂಲವನ್ನುಂಟು ಮಾಡಲಿಲ್ಲ.

ಅಮರ್ತ್ಯಸೇನ್ ಬಹಳ ಹಿಂದಿನಿಂದಲೂ ಪ್ರತಿಪಾದಿಸಿಕೊಂಡು ಬರುತ್ತಿರುವಂತೆ ಸಮಾಜದಲ್ಲಿ ಜನರ ಧಾರಣಾ ಸಾಮರ್ಥ್ಯವು ಕೆಳಮಟ್ಟದಲ್ಲಿರುವಾಗ, ಅದು ದುರ್ಬಲವಾಗಿರುವಾಗ ಮುಕ್ತ ಮಾರುಕಟ್ಟೆ ವ್ಯವಸ್ಥೆಯು ಸಮಾಜದಲ್ಲಿ ಹಾಲಿನ ಹಳ್ಳವನ್ನು, ಜೇನಿನ ಹೊಳೆಯನ್ನು ಹರಿಸುವುದು ಸಾಧ್ಯವಿಲ್ಲ. ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಬಹು ಮುಖ್ಯ ಸಂಗತಿಗಳೆಂದರೆ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಲಿಂಗ ಸಮಾನತೆಮು. ಈ ವಿಷಯದಲ್ಲಿ ನಮ್ಮ ಸ್ಥಿತಿಯು ಚಿಂತಾಜನಕವಾಗಿದೆ. ಈ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳದೆ ಜಾಗತೀಕರಣವನ್ನು ತಬ್ಬಿಕೊಂಡಿದ್ದರಿಂದ ಅನೇಕ ಸಮಸ್ಯೆಗಳನ್ನು ನಾವು ಎದಿರಿಸಬೇಕಾಗಿದೆ. ಪೂರ್ವ ಏಷ್ಯಾದ ದೇಶಗಳೆಲ್ಲ ಜಾಗತೀಕರಣದ ಮತ್ತು ಮುಕ್ತ ಮಾರುಕಟ್ಟೆಯ ಲಾಭವನ್ನು ಬಾಚಿಕೊಳ್ಳುವುದು ಸಾಧ್ಯವಾದದ್ದೇ ಅಲ್ಲಿನ ಜನರ ಉತ್ತಮ ಸಾಕ್ಷರತಾ ಮಟ್ಟ, ಅಲ್ಲಿನ ಜನರ ಉತ್ತಮ ತಾಂತ್ರಿಕ ಜ್ಞಾನ ಮತ್ತು ಮಹಿಳೆಯರ ಉತ್ತಮ ಧಾರಣಾ ಸಾಮರ್ಥ್ಯ. ಅಲ್ಲಿ ಜಾಗತೀಕರಣಕ್ಕೆ ಅಗತ್ಯವಾದ ಅಡಿಪಾಯವಿತ್ತು. ಅದರಿಂದಾಗಿ ಅಲ್ಲಿ ಅದಯ ಯಶಸ್ವಿಯಾಯಿತು.ನಮ್ಮ ಸಂದರ್ಭದಲ್ಲಿ ಅಂತಹ ಅಡಿಪಾಯ ಇರಲಿಲ್ಲ.

ಬುದ್ಧಿವಂತರ ಬುದ್ಧಿವಂತಿಕೆ!

ಇಂದು ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳಾಗುತ್ತವೆ. ಮೂಲ ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳೆಲ್ಲವೂ ಮೂಲೆಗುಂಪಾಗುತ್ತಿವೆ. ಅವುಗಳ ಅಧ್ಯಯನಕ್ಕೆ ಸರ್ಕಾರ ಪ್ರೋತ್ಸಾಹ ನೀಡುತ್ತಿಲ್ಲ. ಮೇನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳು ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಇಂದು ಎಲ್ಲರ ಆಕರ್ಷಣೆಯ ಕೇಂದ್ರಗಳಾಗಿಬಿಟ್ಟಿವೆ. ಅಲ್ಲಿಂದ ಪಾಸಾದ ಮಕ್ಕಳು ಅತಿಯಾದ ಬುದ್ಧಿವಂತರೆಂದು ತಿಳಿಯಲಾಗುತ್ತದೆ. ಅವರು ಅಪಾರ ಸಂಬಳ ತರಯವಂತಹ ನೌಕರಿ ಪಡೆಯುತ್ತಿದ್ದಾರೆ. ಅಂತಹ

[illegible] ಬುದ್ಧಿವಂತರನ್ನು [illegible] ಸುವ ಸಂಸ್ಥೆಗಳನ್ನು ಶ್ರೇಷ್ಠ ಶಿಕ್ಷಣ ಸಂಸ್ಥೆಗಳೆಂದು ತಿಳಿಯ ಲಾಗುತ್ತಿದೆ. ಅಂತಹ ಶ್ರೇಷ್ಠ ಶಿಕ್ಷಣ ಸಂಸ್ಥೆಗಳಿಂದ ಹೊರ ಬಂದ ಯುವಕರನ್ನು ಬುದ್ಧಿವಂತರೆಂದು ಪರಿಗಣಿಸಲಾ ಗುತ್ತಿದೆ. ಬುದ್ಧಿವಂತರು ಎಂದರೆ ಹೇಗೆ? ಈ ಸಂಸ್ಥೆಗ ಳಿಂದ ಬಂದ ಮಕ್ಕಳು ಉದ್ದಿಮೆ ರಂಗದಲ್ಲಿ ಲಕ್ಷಗಟ್ಟಲ್ಲೆ ಸಂಬಳ ಪಡೆಯುಬಲ್ಲವರಾಗಿದ್ದಾರೆ. ಪದವಿಯನ್ನು ಪಡೆದ ಮೇಲೆ ಲಕ್ಷಗಟ್ಟಲೆ ಸಂಬಳ ಯಾರು ತರುತ್ತಾರೋ ಅವರು ಬುದ್ಧಿವಂತರೆನಿಸಿಕೊಳ್ಳುತ್ತಿದ್ದಾರೆ ಮತ್ತು ಅಂತಹ ಪದವೀದರರನ್ನು ಉತ್ಪಾದಿಸುವ ಸಂಸ್ಥೆಗಳನ್ನು ಶ್ರೇಷ್ಠ ಶಿಕ್ಷಣ ಸಂಸ್ಥೆಗಳೆಂದು ತಿಳಿಯಲಾಗುತ್ತಿದೆ. ಇಂದು ಇಂತಹ 'ಬುದ್ಧಿವಂತ'ರೆನಿಸಿಕೊಳ್ಳುತ್ತಿರುವವರ ಅತಿಯಾದ ಬುದ್ಧಿವಂತಿಕೆಯ ಪರಿಣಾಮವಾಗಿ ಹಣಕಾಸು ಸಂಸ್ಥೆಗಳು ಮಣ್ಣುಮುಕ್ಕುತ್ತಿವೆ. ಈ ಬುದ್ಧಿವಂತರೆನ್ನುವವರು ಕಂಡು ಹಿಡಿದ ಡಿರೈವೇಟಿವ್ಸ್‌ಗಳ ಹಾವಳಿಯಿಂದ ಹಣಕಾಸು ಮಾರುಕಟ್ಟೆಯು ಜನರನ್ನು ದಿವಾಳಿಯೆಬ್ಬಿಸುತ್ತಿದೆ. ಲಾಭ ಮಾಡಿಕೊಳ್ಳಬೇಕೆಂಬ ಒಂದೆ ಉದ್ದೇಶದಿಂದ ಹೊರಟ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮುಳುಗಿಹೋಗು ತ್ತಿವೆ.

ಬ್ಯಾಂಕುಗಳ ಸಾಲದ ವ್ಯವಹಾರ

ವಸತಿ ಕ್ಷೇತ್ರದಲ್ಲಿನ ಸಂಪಾದನೆಯ ಬೂಮು ಮುಗಿದು ಅದು ಇನ್ನಿಲ್ಲದಂತೆ ಧೂಳಿಪಟವಾಗುತ್ತಿದೆ, ಆರ್ಥಿಕತೆಗಳನ್ನು ದಿವಾಳಿಯೆಬ್ಬಿಸುತ್ತಿವೆ. ಅದರ ಸುವರ್ಣ ಯುಗ ಮುಗಿಯಿತೆಂದೆ ಹೇಳಲಾಗುತ್ತಿದೆ. ಭೌತಿಕ ಬಂಡ ವಾಳವನ್ನು ಹೆಚ್ಚಿಸದ ಮತ್ತು ಉದ್ಯೋಗವನ್ನು ಹೆಚ್ಚಿಸದ ಈ ಸಾಲದ ವ್ಯವಹಾರದ ಬೂಮು ಮೂರಾಬಟ್ಟೆಯಾ ದಾಗ ಅಲ್ಲುಳಿಯುವುದು ಏನೂ ಇಲ್ಲ. ಅದೊಂದು ಗಾಳಿ ಯಲ್ಲಿ ಕಟ್ಟಿದ ಗೋಪುರ. ಕೇವಲ ಸೇವಾ ವಲಯವನ್ನು ನಂಬಿಕೊಂಡು, ಅದನ್ನು ಮಾತ್ರ ಬೆಳೆಸಿಕೊಂಡು ಆರ್ಥಿಕತೆ ಯೊಂದು ಬದುಕುವುದು-ಬೆಳೆಯುವುದು ಸಾಧ್ಯವಿಲ್ಲ. ಕಳೆದ ಶತಮಾನದ 90ರ ದಶಕದಲ್ಲಿ ಭಾರತವು ಅಭಿವೃ ದ್ಧಿಯ ದೃಷ್ಟಿಯಿಂದ ಯಶಸ್ವಿಯಾಗಿದ್ದರೆ ಅದರ ಸಂಪೂರ್ಣ ಕೀರ್ತಿಯು 60-70ರ ದಶಕಗಳಲ್ಲಿ ಭಾರ ತವು ನಿರ್ಮಿಸಿದ್ದ ಬೃಹತ್ ವಿದ್ಯುತ್ ಯೋಜನೆಗಳು, ಭಾರಿ ಉದ್ದಿಮೆಗಳು, ನೀರಾವರಿ ಯೋಜನೆಗಳು, ಯಂತ್ರೋದ್ಯಮಗಳು ಮುಂತಾದವುಗಳ ರೂಪದಲ್ಲಿದ್ದ ಭೌತಿಕ ಬಂಡವಾಳಕ್ಕೆ ಸಲ್ಲಬೇಕು. ಆರ್ಥಿಕತೆಯ ಉತ್ಪಾ ದನಾ ವಲಯವನ್ನು ಮತ್ತು ಭೌತಿಕ ಬಂಡವಾಳವನ್ನು ಕಟ್ಟದೆ ಕೇವಲ ಸೇವಾ ವಲಯವನ್ನು ಅದರಲ್ಲೂ ಹಣಕ ಾಸು ಸೇವಾ ವಲಯವನ್ನು ಮಾತ್ರ ಬೆಳೆಸಿಕೊಂಡು ಹೋದರೆ ಏನಾಗುತ್ತದೆಯೆಂಬುದಕ್ಕೆ ಇವತ್ತಿನ ಮುಗ್ಗಟ್ಟು-ಬಿಕ್ಕಟ್ಟು ಸಾಕ್ಷಿ. ನಮ್ಮ ಶೇರು ಮಾರುಕಟ್ಟೆಯ ಬಂಡವಾ ಳೀಕೃತ ಮೌಲ್ಯವು ಅದೆಷ್ಟೋ ಲಕ್ಷ ಕೋಟಿಗಳೆಂದು ಹೇಳಲಾಗುತ್ತಿತ್ತು. ಅದು ಇಂದು ಪುಸ್ಸೆಂದುಬಿಟ್ಟಿದೆ, ನಾವು ತಿಳಿದುಕೊಳ್ಳಬೇಕಾದುದು ಯಾವುದೆಂದರೆ ನಮ್ಮ ಶೇರು ಮಾರುಕಟ್ಟೆಯು ಕಳೆದ 15-20 ವರ್ಷಗಳಲ್ಲಿ ವಿಪರೀತ ವಿಸ್ತರಣೆಯಾಗಿದೆಯೆಂದು ಹೇಳುತ್ತಾರೆ. ಆದರೆ ಅಲ್ಲಾಗಿ ರುವ ಬೆಳವಣಿಗೆ ಏನೆಂದರೆ ಅದೇ ಮಧ್ಯಮವರ್ಗವು ಅಲ್ಲಿಯೂ ಪ್ರವೇಶಿಸಿಬಿಟ್ಟು ಬೂಮಿನ ಲಾಭ ಪಡೆದು ಕೊಳ್ಳಲು ಪ್ರಯತ್ನಿಸಿತು. ಅಲ್ಲಿ ಅಗಾಧ ಪ್ರಮಾಣದಲ್ಲಿ ಲಾಭವೂ ಉಂಟಾಗಿರಬಹುದು. ಆದರೆ ಈಗಾಗಲೆ ಹೇಳಿ ರುವಂತೆ ನಮ್ಮ ಮಾರುಕಟ್ಟೆ ವ್ಯಾಪ್ತಿಯು ಸೀಮಿತವಾಗಿರು ವುದೇ ಇಂದಿನ ನಮ್ಮ ಮುಗ್ಗಟ್ಟಿಗೆ ಕಾರಣವಾಗಿದೆ. ಮಾಲ್‌ಗಳು, ಮಾರ್ಟ್‌ಗಳು, ಮಲ್ಟಿಪ್ಲೆಕ್ಸ್‌ಗಳು ಮುಂತಾದವುಗಳಲ್ಲಿ ನಮಗೆ ಕಾಣುವ ಜನರು ಯಾರು? ಅಲ್ಲಿಯೂ ನಮಗೆ ಎದುರಾಗುವವರು ಅದೇ ಮಧ್ಯಮವರ್ಗ, ಅದೇ 250-300ದಶಲಕ್ಷ ಜನಸಮೂಹ!.

> **ದುಡಿಮೆ ಕ್ಷೇತ್ರದಲ್ಲಿ ಇಂದು ಮಹಿಳೆಯರ ಪ್ರಮಾಣವು ಹೆಚ್ಚಾಗುತ್ತಿದೆ. ಕರ್ನಾಟಕವನ್ನೇ ತೆಗೆದುಕೊಂಡರೆ ನಮ್ಮ ನಗರಗಳಲ್ಲಿ, ಸಣ್ಣ ಪುಟ್ಟ ಪಟ್ಟಣಗಳಲ್ಲಿನ ಹೊಟೆಲ್ಲುಗಳಲ್ಲಿ ಉಪಹಾರ ಗೃಹಗಳಲ್ಲಿ ಇಂದು ಮಹಿಳಾ ದುಡಿಮೆಗಾರರು ಹೆಚ್ಚಾಗಿ ಕಂಡುಬರುತ್ತಾರೆ. ಒಂದು ಕಾಲಕ್ಕೆ ಅಲ್ಲಿ ಮಹಿಳೆಯರು ಪ್ರವೇಶಿಸು ವುದು ಸಾಧ್ಯವಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಆದರೆ ಅಂತಹ ಅವಕಾಸ ಉಂಟಾಗಿರುವುದೆ ಅದ್ಭತವಾದ ಬದಲಾವಣೆಯಾಗಿದೆ. ಇಂದು ಮಾಲ್‌ಗಳಲ್ಲಿ, ಮಾರ್ಟ್‌ಗಳಲ್ಲಿ, ಸಣ್ಣ ಪುಟ್ಟ ಅಂಗಡಿಗಳಲ್ಲಿ, ಶಾಪುಗಳಲ್ಲಿ ನಮಗೆ ದುಡಿಯುವ ಮಹಿಳೆಯರು ನೋಡಲು ದೊರೆಯುತ್ತಾರೆ. ಅವರ ವರಮಾನದ ಮಟ್ಟ ಉತ್ತಮವಾಗುತ್ತಿದೆ. ಅದರಿಂದ ಅವರಿಗೆ ಕುಟುಂಬ ಮಟ್ಟದಲ್ಲಿ ಅಧಿಕಾರ ಪಡೆಯುವುದು ಸಾಧ್ಯವಾಗಿದೆ. ಆದರೆ ಈ ಬಗೆಯ ದುಡಿಮೆಯು ಅವರಿಗೆ ಆಯ್ಕೆಯಾಗಿಲ್ಲ. ಪ್ರತಿಯಾಗಿ ಅದು ಅವರಿಗೆ ಅನಿವಾರ್ಯವಾಗಿದೆ.**

ದುಡಿಮೆಯ ಮಹಿಳೀಕರಣ

ಜಾಗತೀಕರಣದಿಂದ ಉಂಟಾಗಿರುವ ಒಂದು ದೊಡ್ಡ ಪರಿಣಾಮವೆಂದರೆ ದುಡಿಮೆಯ ಮಹಿಳೀಕರಣ. ದುಡಿಮೆ ಕ್ಷೇತ್ರದಲ್ಲಿ ಇಂದು ಮಹಿಳೆಯರ ಪ್ರಮಾಣವು ಹೆಚ್ಚಾಗುತ್ತಿದೆ. ಅಗೋಚರರಾಗಿದ್ದ ದುಡಿಯುವ ಮಹಿಳೆ ಯರು ಇಂದು ದೃಗ್ಗೋಚರವಾಗುತ್ತಿದ್ದಾರೆ. ಆದರೆ ಅಲ್ಲಿನ ವಿಕೃತಿಯೆಂದರೆ ಅಲ್ಲಿಯೂ ಲಿಂಗ ಸಂಬಂಧಿ ಶ್ರಮ ವಿಭಜನೆಯ ವಿಜೃಂಭಣೆಯು ನಡೆದಿದೆ. ಕರ್ನಾಟಕವನ್ನೇ ತೆಗೆದುಕೊಂಡರೆ ನಮ್ಮ ನಗರಗಳಲ್ಲಿ, ಸಣ್ಣ ಪುಟ್ಟ ಪಟ್ಟಣಗಳಲ್ಲಿನ ಹೊಟೆಲ್ಲುಗಳಲ್ಲಿ ಉಪಹಾರ ಗೃಹಗಳಲ್ಲಿ ಇಂದು ಮಹಿಳಾ ದುಡಿಮೆಗಾರರು ಹೆಚ್ಚಾಗಿ ಕಂಡುಬರು ತ್ತಾರೆ. ಒಂದು ಕಾಲಕ್ಕೆ ಅಲ್ಲಿ ಮಹಿಳೆಯರು ಪ್ರವೇಶಿಸು ವುದು ಸಾಧ್ಯವಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಬದಲಾ ಗಿದೆ. ಆದರೆ ಈ ಬದಲಾವಣೆಯು ಲಿಂಗ ತಾರತಮ್ಯ ವನ್ನು ಮೀರಿ ಬೆಳೆಯುತ್ತಿಲ್ಲ. ಈ ಉಪಹಾರ ಗೃಹಗಳಲ್ಲಿ, ವಸತಿ ಗೃಹಗಳಲ್ಲಿ ಯಾವುದನ್ನು ನಾವು ಮನೆವಾರ್ತೆ ದುಡಿಮೆಯೆಂದು ಕರೆಯುತಿದ್ದವೊ ಅದನ್ನೇ ಮಹಿಳೆ ಯರು ಅಲ್ಲಿ ಮಾಡುತ್ತಿದ್ದಾರೆ. ಅದೆ ನೆಲ ಒರೆಸುವ, ಪಾತ್ರ ತೊಳೆಯುವ, ಅದೆ ಹಾಸಿಗೆ ಸಿದ್ದಪಡಿಸುವ, ಕಸ ಗುಡಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ ಅಂತಹ ಅವಕಾಶ ಉಂಟಾಗಿರುವುದೆ ಅದ್ಭುತವಾದ ಬದಲಾವಣೆ ಯಾಗಿದೆ. ಇಂದು ಮಾಲ್‌ಗಳಲ್ಲಿ, ಮಾರ್ಟ್‌ಗಳಲ್ಲಿ, ಸಣ್ಣ ಪುಟ್ಟ ಅಂಗಡಿಗಳಲ್ಲಿ, ಶಾಪುಗಳಲ್ಲಿ ನಮಗೆ ದುಡಿಯುವ ಮಹಿಳೆಯರು ನೋಡಲು ದೊರೆಯುತ್ತಾರೆ. ಅವರ ವರ ಮಾನದ ಮಟ್ಟ ಉತ್ತಮವಾಗುತ್ತಿದೆ. ಅದರಿಂದ ಅವರಿಗೆ ಕುಟುಂಬ ಮಟ್ಟದಲ್ಲಿ ಅಧಿಕಾರ ಪಡೆಯುವುದು ಸಾಧ್ಯವಾ ಗಿದೆ. ಆದರೆ ಈ ಬಗೆಯ ದುಡಿಮೆಯು ಅವರಿಗೆ ಆಯ್ಕೆಯಾಗಿಲ್ಲ. ಪ್ರತಿಯಾಗಿ ಅದು ಅವರಿಗೆ ಅನಿವಾರ್ಯ ವಾಗಿದೆ. ಮಹಿಳೆಯರ ದೃಷ್ಟಿಯಿಂದ ಬದುಕನ್ನು ಉತ್ತಮ ಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳಲ್ಲಿ ಆಯ್ಕೆಯ ವ್ಯಾಪ್ತಿ ವಿಸ್ತೃತಗೊಳ್ಳುತ್ತಿಲ್ಲ. ಅದು ಸಾಂಪ್ರದಾಯಿಕ ಚೌಕಟ್ಟಿ ನಲ್ಲೇ ಗಿರಕಿ ಹೊಡೆಯುತ್ತಿದೆ. ಅಭಿವೃದ್ಧಿಯೆಂದರೆ ಬದು ಕನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗ ಳಲ್ಲಿನ ಆಯ್ಕೆಯ ವ್ಯಾಪ್ತಿಯನ್ನು ವಿಸ್ತೃತಗೊಳಿಸುವುದಾಗಿದೆ.

> **ಜಾಗತೀಕರಣದಿಂದ ಉಂಟಾಗಿರುವ ಒಂದು ದೊಡ್ಡ ಪರಿಣಾಮವೆಂದರೆ ದುಡಿಮೆಯ ಮಹಿಳೀಕರಣ. ದುಡಿಮೆ ಕ್ಷೇತ್ರದಲ್ಲಿ ಇಂದು ಮಹಿಳೆಯರ ಪ್ರಮಾಣವು ಹೆಚ್ಚಾಗುತ್ತಿದೆ. ಅಗೋಚರ ರಾಗಿದ್ದ ದುಡಿಯುವ ಮಹಿಳೆಯರು ಇಂದು ಗೋಚರವಾಗುತ್ತಿದ್ದಾರೆ.**

ಮುಂದಿನ ಗುರಿ ಮತ್ತು ದಾರಿ

ಜನರನ್ನು ಒಳಗೊಳ್ಳುವ ಮತ್ತು ಸುಸ್ಥಿರಗತಿಯ ಅಭಿವೃದ್ಧಿಗೆ ಸಕಾರ ಮತ್ತು ಮುಕ್ತ ಮರುಕಟ್ಟೆಗಳ ನಡುವೆ ನಿರ್ಣಾಯಕವಾದ ಸಮತಫಲನದ ಅವಶ್ಯಕತೆಯಿದೆ. ಪ್ರಭುತ್ವ ಪ್ರಣೀತ ಪ್ರಣಾಳಿಕೆಯಾಗಲಿ ಅಥವಾ ಮಾರುಕಟ್ಟೆ ಪ್ರಣೀತ ಆರ್ಥಿಕತೆಯಾಗಲಿ ಸ್ವತಂತ್ರವಾಗಿ ನಮಗೆ ಜನ 'ರನ್ನು ಒಳಗೊಳ್ಳುವ ಮತ್ತು ಸುಸ್ಥಿರಗತಿ ಅಭಿವೃದ್ಧಿಯನ್ನು ಕೊಡುವುದಾಗುವುದಿಲ್ಲ. ಇವೆರಡನ್ನೂ ಸೂಕ್ತ ರೀತಿಯಲ್ಲಿ ಸಂಯೋಜಿಸ ಬೇಕಾಗುತ್ತದೆ. ಇದು ನಿವ್ವಹಣೆಗೆ ಸಂಬಂಧಿ ಸಿದ ಸಂಗತಿ. ಉದ್ದಿಮೆಗಳ ನಿವ್ವಹಣೆಗೆ ವಿರ್ಚಹಣಾ ತಜ್ಞ ರನ್ನು ಐಐಟಿಗಳು ಮತ್ತು ಐ.ಐ.ಎಮ್‌ಗಳು ಹೇಗೆ ತಯಾರು ಮಾಡುತ್ತಿವೆಯೋ ಅದೇ ರೀತಿಯಲ್ಲಿ ಪ್ರಭುತ್ವ ಮತ್ತು ಮಾರುಕಟ್ಟೆಗಳ ನಡುವಿನ ಸಂಯೋಜನೆಯನ್ನು ನಿರ್ವಹಿಸಲು ಅಗತ್ಯವಾದ ನಿರ್ವಹಣಾ ತಜ್ಞರನ್ನು ರೂಪಿ ಸುವ ಕಡೆಗೆ ಅವಯ ಗಮನ ನೀಡಬೇಕಾಗುತ್ತದೆ. ಆದರೆ ಸಾಕ್ಷರತೆಯಂತಹ ಸಂಗತಿಗೆ ಅಗತ್ಯವಾದ ಕಾರ್ಯತಂತ್ರ ವನ್ನು ಮಾರುಕಟ್ಟೆ ನಿರ್ವಹಿಸುವುದು ಸಾಧ್ಯವಿಲ್ಲ. ಆದರ ಅಕ್ಷರ ಸಂಸ್ಕೃತಿಯ ವ್ಯಾಪ್ತಿಯನ್ನು ವಿಸ್ತೃತಗೊಳಿಸದೆ ಜನ ರನ್ನು ಒಳಗೊಳ್ಳುವ ಮತ್ತು ಸುಸ್ತೀರಗತಿಯ ಅಭಿವೃದ್ಧಿ ಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಈ ಬಗೆಯ ಅಭಿವೃದ್ಧಿ ನೀತಿಯ ಬಗ್ಗೆ ಅಮರ್ತ್ಯಸೇನ್ ಕಳೆದ 15-20ವರ್ಷಗಳಿಂದ ನಿರಂತರವಾಗಿ ವಾದಿಸುತ್ತಲೇ ಬಂದಿ ದ್ದಾರೆ. □



ಭದ್ರ ಬುನಾದಿ ಮೇಲೆ
ಅಭಿವೃದ್ಧಿ ಸೌಧ ...

ಭಾರತದ ಕನಸು

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಅಮೆರಿಕಾ ಕ್ರಾಂತಿಯ ನಂತರ ಅಂದಿನ ರಾಷ್ಟ್ರ ನಾಯಕರು ನೀಡಿದ್ದ ಘೋಷಣೆಯನ್ನು ಕಿಂಗ್ ಜೂನಿಯರ್ ಅಮೆರಿಕನ್ನರಿಗೆ ನೆನಪಿಸಿದ. 'ಡ್ರೀಮ್' ಭಾಷಣ ಭವಿಷ್ಯದ ಅಮೆರಿಕಾ ಸಮಾಜದ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲಿತ್ತು. ಓರ್ವ ವ್ಯಕ್ತಿಯ ವರ್ಣವಲ್ಲ, ವ್ಯಕ್ತಿತ್ವ ಗುಣಮಟ್ಟದ ಮಾನದಂಡವಾಗಬೇಕು. ಜೀತದಾಳುಗಳ ಮಕ್ಕಳು ಮತ್ತು ಮಾಲೀಕರ ಮಕ್ಕಳು ಒಂದೆಡೆ ಕಲೆತು ಬಾಳಬೇಕು ಎಂಬ ಕನಸು ಅದಾಗಿತ್ತು. ಓರ್ವ ಕಪ್ಪು ಜನಾಂಗದ ವ್ಯಕ್ತಿ ಅಮೆರಿಕಾವನ್ನು ಆಳಬೇಕು ಎಂಬ ಆಶಯವನ್ನು ಕಿಂಗ್ ಜೂನಿಯರ್ ವ್ಯಕ್ತಪಡಿಸಿರಲಿಲ್ಲ. ಆದರೆ ಈಗ ಅಮೆರಿಕಾವನ್ನು ಮುನ್ನಡೆಸಲು ಓರ್ವ ಕಪ್ಪು ವ್ಯಕ್ತಿ ಆಯ್ಕೆಯಾಗಿದ್ದಾನೆ. ಅಮೆರಿಕಾದ ಜನರು ಒಬಾಮ ಅವರ ವರ್ಣಕ್ಕೆ ಬದಲಾಗಿ ಅವರ ವ್ಯಕ್ತಿತ್ವಕ್ಕೆ ಮನ್ನಣೆ ನೀಡಿರುವುದು ನಿಜವಾದ ಅರ್ಥದಲ್ಲಿ ಡ್ರೀಮ್ ಭಾಷಣದ ಗೆಲುವು.

ಭಾರತ ತನ್ನದೇ ಆದ ಕನಸನ್ನು ಇರಿಸಿಕೊಳ್ಳದೆ "ಭಾರತೀಯ ಒಬಾಮ" ಬಗ್ಗೆ ಚರ್ಚೆ ನಡೆಸಿದೆ. ಬರಾಕ್ ಒಬಾಮ ಅಮೆರಿಕಾದ ಕನಸಿನ ಬಗ್ಗೆ ಮಾತನಾಡಿ ಐತಿಹಾಸಿಕ ಅಡೆತಡೆಗಳ ನಡುವೆಯೂ ಗೆಲುವು ಸಾಧಿಸಿದರು. ಅಮೆರಿಕಾದ ಕನಸುಗಳ ಸಮಗ್ರ ರೂಪಕವಾಗಿ ಒಬಾಮ ಜಯಗಳಿಸಿದರು.

"ಅಮೆರಿಕನ್ ಡ್ರೀಮ್" ಎಂಬ ಪದ ಒಟ್ಟಾರೆ ಅಮೆರಿಕಾದ ರೂಪಕವಾಗಿ ಬೆಳೆಯಿತು. "ಅಮೆರಿಕನ್ ಡ್ರೀಮ್" ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ "ಡ್ರೀಮ್ ಭಾಷಣ"ದಿಂದ ಚಾಲ್ತಿಗೆ ಬಂದಿದೆ. ನಾಗರಿಕ ಹಕ್ಕುಗಳ ಮಹಾನ್ ನಾಯಕರಲ್ಲಿ ಒಬ್ಬರಾದ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ೧೯೬೩ರ ಆಗಸ್ಟ್ ೨೮ರಂದು ಪಾದಯಾತ್ರೆಯ ಮೂಲಕ ವಾಷಿಂಗ್ಟನ್‌ಗೆ ತೆರಳಿ "ಕನಸಿನ" ಭಾಷಣ ಮಾಡುತ್ತಾರೆ. ಈ ಐತಿಹಾಸಿಕ ನಡಿಗೆಯನ್ನು "ವಾಷಿಂಗ್ಟನ್ ನಡಿಗೆ" ಎಂದು ಕರೆಯಲಾಗುತ್ತದೆ. ಸುಮಾರು ೨,೫೦,೦೦೦ ಜನರು ಈ ಮಹಾ ಯಾತ್ರೆಯಲ್ಲಿ ಭಾಗವಹಿಸಿದ್ದರು. ಇವರಲ್ಲಿ ಸುಮಾರು ೫೦,೦೦೦ ಮಂದಿ ಬಿಳಿಯರು. ಇಂತಹ ಐತಿಹಾಸಿಕ ಸಂದರ್ಭದಲ್ಲಿ ಕಿಂಗ್ ಜೂನಿಯರ್ ಅಮೆರಿಕಾದ ಕುರಿತು ತಾವು ಕಂಡ ಕನಸಿನ ಬಗ್ಗೆ ಪ್ರಸ್ತಾಪಿಸುತ್ತಾರೆ:

"ಮುಂದೊಂದು ದಿನ ಈ ರಾಷ್ಟ್ರ ತನ್ನ ಪೀಳಿಗೆಯನ್ನು ಸಮರ್ಥವಾಗಿ ಅಭಿವ್ಯಕ್ತಿಸುವ ಹಾಗೆ ಬೆಳೆಯುತ್ತದೆ ಎಂಬ ಕನಸು ನನ್ನದು: "ಭಗವಂತ ಎಲ್ಲ ಮನುಷ್ಯರನ್ನು ಸಮಾನರಾಗಿ ಸೃಷ್ಟಿಸಿದ್ದಾನೆ ಎಂಬ ಸತ್ಯ ಸ್ವಯಂ ವೇದ್ಯವಾದುದು."

"ಮುಂದೊಂದು ದಿನ ಈ ರಾಷ್ಟ್ರದಲ್ಲಿ ನನ್ನ ನಾಲ್ಕು ಮಕ್ಕಳನ್ನು ತಮ್ಮ ವರ್ಣದ ಆಧಾರದ ಮೇಲೆ ಅಳೆಯದೆ, ವ್ಯಕ್ತಿತ್ವದ ಆಧಾರದ ಮೇಲೆ ಅಳೆಯಲಾಗುವುದು ಎಂಬ ಕನಸು ನನ್ನದು."

"ಮುಂದೊಂದು ದಿನ ರೆಡ್ ಹಿಲ್ಸ್‌ನಲ್ಲಿ ವಾಸವಾಗಿರುವ ಜೀತದಾಳುಗಳುಗಳ ಮಕ್ಕಳು ಮತ್ತು ಮಾಲೀಕರ ಮಕ್ಕಳು ಭ್ರಾತೃತ್ವದಿಂದ ಒಂದೆಡೆ ಸೇರುವ ಕನಸು ನನ್ನದು."

ಅಮೆರಿಕಾ ಕ್ರಾಂತಿಯ ನಂತರ ಅಂದಿನ ರಾಷ್ಟ್ರನಾಯಕರು ನೀಡಿದ್ದ ಘೋಷಣೆಯನ್ನು ಕಿಂಗ್ ಜೂನಿಯರ್ ಅಮೆರಿಕನ್ನರಿಗೆ ನೆನಪಿಸಿದ. "ಡ್ರೀಮ್" ಭಾಷಣ ಭವಿಷ್ಯದ ಅಮೆರಿಕಾ ಸಮಾಜದ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲಿತ್ತು. ಓರ್ವ ವ್ಯಕ್ತಿಯ ವರ್ಣವಲ್ಲ, ವ್ಯಕ್ತಿತ್ವ ಗುಣಮಟ್ಟದ ಮಾನದಂಡವಾಗಬೇಕು. ಜೀತದಾಳುಗಳ ಮಕ್ಕಳು ಮತ್ತು ಮಾಲೀಕರ ಮಕ್ಕಳು ಒಂದೆಡೆ ಕಲೆತು ಬಾಳಬೇಕು ಎಂಬ ಕನಸು ಅದಾಗಿತ್ತು. ಓರ್ವ ಕಪ್ಪು ಜನಾಂಗದ ವ್ಯಕ್ತಿ ಅಮೆರಿಕಾವನ್ನು ಆಳಬೇಕು ಎಂಬ ಆಶಯವನ್ನು ಕಿಂಗ್ ಜೂನಿಯರ್ ವ್ಯಕ್ತಪಡಿಸಿರಲಿಲ್ಲ. ಆದರೆ ಈಗ ಅಮೆರಿಕಾವನ್ನು ಮುನ್ನಡೆಸಲು ಓರ್ವ ಕಪ್ಪು ವ್ಯಕ್ತಿ ಆಯ್ಕೆಯಾಗಿದ್ದಾನೆ. ಅಮೆರಿಕಾದ ಜನರು ಒಬಾಮ ಅವರ ವರ್ಣಕ್ಕೆ ಬದಲಾಗಿ ಅವರ ವ್ಯಕ್ತಿತ್ವಕ್ಕೆ ಮನ್ನಣೆ ನೀಡಿರುವುದು ನಿಜವಾದ ಅರ್ಥದಲ್ಲಿ ಡ್ರೀಮ್ ಭಾಷಣದ ಗೆಲುವು.

ಆದರೆ ಭಾರತೀಯರ ಕನಸು ಯಾವುದು? ಕಾನ್ಶಿರಾಂ ಅವರನ್ನು ಹೊರತು ಪಡಿಸಿದರೆ ಬಹುತೇಕ ಅಗ್ರಗಣ್ಯ ದಲಿತ ನಾಯಕರು ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದವರು. ಭಾರತಕ್ಕೆ ಸಂವಿಧಾನವನ್ನು ನೀಡಿದ ಡಾ. ಅಂಬೇಡ್ಕರ್ ಸಂವಿಧಾನ ರಚನೆಯ ನಂತರ ಎರಡು ಬಾರಿ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದಾರೆ. ಇದು ಭಾರತದ ವಾಸ್ತವ ಸ್ಥಿತಿ.

ನಿಜ, ದಲಿತರು ಕೂಡ ಬದಲಾಗಬೇಕಿದೆ. ಭಾರತವನ್ನು ಆಳಬೇಕೆಂಬ ಪ್ರಜ್ಞೆ ದಲಿತರಿಗಿದೆ. ಆದರೆ ಈ ಅಂಶ ಭಾವನಾತ್ಮಕ ದೃಷ್ಟಿಯಿಂದ ಅದ್ಭುತವಾಗಿ ಕಂಡರೂ, ತಾರ್ಕಿಕವಾಗಿ ಸೋಲುತ್ತದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಅಸಂಬದ್ಧ ಆಡಳಿತ ಕೊನೆಗೊಳ್ಳಬೇಕು. ದಲಿತರು ಭಾರತವನ್ನು ಮುನ್ನಡೆಸಬೇಕು. ಕೇವಲ ಬಿಳಿಯರ ಅಮೆರಿಕದಲ್ಲಿ ಆಡಳಿತ ನಡೆಸಲು ಒಬಾಮ ಆಯ್ಕೆಯಾಗಿಲ್ಲ. ಒಬಾಮ ಇಡೀ ಅಮೆರಿಕಾ ದೇಶವನ್ನು ಮುನ್ನಡೆಸಲು ಆಯ್ಕೆಯಾಗಿದ್ದಾರೆ. ಅವರು ಅಮೆರಿಕಾದಲ್ಲಿ ಅಧಿಕಾರ ನಡೆಸಿದರೆ ಬಿಳಿಯರು ಮತ್ತು ಕಪ್ಪು ಜನರನ್ನು ಮುನ್ನಡೆಸಿದಂತೆ. ಹಾಗೆಯೇ ದಲಿತರು ಕೂಡ ದಲಿತರು ಮತ್ತು ಇತರೆ ಜಾತಿ-ಸಮುದಾಯಗಳನ್ನು ಒಳಗೊಂಡ ಸಮಗ್ರ ಭಾರತದಲ್ಲಿ ಅಧಿಕಾರ ನಡೆಸಬೇಕು. ಒಂದು ರಾಷ್ಟ್ರವನ್ನು ಅಥವಾ ಸಮಾಜವನ್ನು ಆಳುವುದು ಪಾಳಗಾರಿಕೆ. ಆದರೆ ಒಂದು ರಾಷ್ಟ್ರ ಅಥವಾ ಸಮಾಜವನ್ನು ಮುನ್ನಡೆಸುವುದು ಪ್ರಜಾತಂತ್ರ, ಅಮೆರಿಕಾ ಬದಲಾಗುತ್ತಿದೆ, ಜಗತ್ತು ಬದಲಾಗುತ್ತಿದೆ. ದಲಿತರು ಕೂಡ ಬದಲಾಗಬೇಕಿದೆ. ಬದಲಾಗುವ ಆಸ್ಥೆಯಿಲ್ಲದವರ ಜೀವನವನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ.

ಆದರೆ ಭಾರತದ ದಲಿತೇತರರು ಸ್ಥಿತಿ ಏನು? ಒಂದು ವೇಳೆ ಎಲ್ಲ ಕೋಟ್ಯಾಧಿಪತಿಗಳು ದಲಿತರೇ ಆದರೆ ದಲಿತೇತರರು ಯಾಕೆ ಬೇಸರ ಪಟ್ಟುಕೊಳ್ಳಬೇಕು? "ನೋಡಿ ತೀರ ಬಡವರ್ಗದಿಂದ ಬಂದ ಈತ ನೋಡನೋಡುತ್ತಲೇ ಕೋಟ್ಯಾಧಿಪತಿಯಾಗಿ ಬೆಳೆದ"ಎಂಬಂತಹ ಮಾತುಗಳನ್ನು ಕೇಳಿ ಕೇಳಿ ನಾನು ರೋಸಿ ಹೋಗಿದ್ದೇನೆ.

ಸಾಮಾಜಿಕವಾಗಿ ಒಡೆದು ಹೋಗಿರುವ ಈ ಸಮಾಜ ನನ್ನ ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಉದ್ಯಮ ವ್ಯವಹಾರ, ಶಿಕ್ಷಣ, ಚಲನಚಿತ್ರರಂಗ, ಮಾಧ್ಯಮ ಹೀಗೆ ಸಮಾಜದ ಎಲ್ಲ ರಂಗಗಳಲ್ಲಿ ಸಾಧನೆ ಮಾಡಿರುವ ೧೦೦ ಮಂದಿಯ ಪಟ್ಟಿ ಮಾಡಿ, ಅವರೆಲ್ಲರ ಹಿಂದಿನ ಹತ್ತು ತಲೆಮಾರುಗಳ ಬಗ್ಗೆ ಸಂಶೋಧನೆ ನಡೆಸಿ ನೋಡಿ. ಈ ಸಾಧಕರ ಪೂರ್ವಜರು ಯಾರಾದರೂ ಸತ್ತ ಪ್ರಾಣಿಗಳ ಚರ್ಮ ಸುಲಿದು ಚಪ್ಪಲಿಗಳನ್ನು ತಯಾರಿಸುತ್ತಿದ್ದರೆ? ಯಾರಾದರೂ ಹಂದಿಗಳ ಸಾಕಾಣಿಕೆ ಮಾಡುತ್ತಿದ್ದರೆ? ಯಾರಾದರೂ ಭೂಮಾಲೀಕರ ಕೈಕೆಳಗೆ ಜೀತ ಮಾಡುತ್ತಿದ್ದರೆ? ಈ ಸಾಧಕರ ಪೂರ್ವಜರಲ್ಲಿ ಯಾರಾದರೂ ಮನುಷ್ಯರ ಮಲ ಹೊರುತ್ತಿದ್ದರೆ? ಹಸಿವು ತಡೆಯಲು ಯಾರಾದರೂ ಇಲಿಗಳನ್ನು ತಿನ್ನುತ್ತಿದ್ದರೆ?

ಭಾರತದ ಎಲ್ಲ ಮಹಾನ್ ಸಾಧಕರು ತಮ್ಮ ಹಿಂದಿನ ಪೀಳಿಗೆಯ ಬಳುವಳಿಗಳನ್ನು ಪಡೆದವರು. ಯಶಸ್ಸು ಸಾಧಿಸಲಾಗದ ದಲಿತರು ಕೂಡ ತಮ್ಮ ಪೂರ್ವಜರ ಕೀಳು ಮಟ್ಟದ ಹಿನ್ನೆಲೆಯ ಬಳುವಳಿಯನ್ನು ಪಡೆದವರೆ. ದಲಿತೇತರರಿಗೆ ಅವರ ಪರಂಪರೆ ವರವಾದರೆ, ದಲಿತರಿಗೆ ಅದು ಶಾಪ. ಈ ಅಂಶವನ್ನು ಮನಸಿನಲ್ಲಿರಿಸಿಕೊಂಡು ನಾವೆಲ್ಲರೂ ನಮ್ಮ ಪರಂಪರೆಯನ್ನು ಬದಿಗಿರಿಸಿ ಒಟ್ಟಾರೆ "ಭಾರತೀಯ ಕನಸನ್ನು" ಕಟ್ಟಬೇಕಿದೆ.

ನಾವು ತೀರ ಸಾಮಾನ್ಯವಾದ ಆರಂಭವನ್ನೇ ಮಾಡೋಣ. ಚಂದನ್ ಮಿತ್ರ ಅವರ ಸೇವಾ ಮನೋಭಾವದ ಜೊತೆಗೆ ನನ್ನ ಪೀಳಿಗೆಯ ಕೆಳಮಟ್ಟದ ಸ್ಥಿತಿಯನ್ನು ಮೀರಿ ನಾನು ಮುಖ್ಯವಾಹಿನಿಯ ಭಾರ

ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ.ಆರ್

ವೈರುಧ್ಯಗಳ ನಡುವೆ

ತದಲ್ಲಿ ಅಂಕಣಕಾರನಾದೆ. ಹಾಗಾಗಿ ಭಾರತ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚಿಂತನೆ ನಡೆಸಲು ನಾನು "ಇಂಡಿಯನ್ ಡೈರಿ" ಅಂಕಣ ಬರೆಯಬೇಕಿದೆ. ಅದಕ್ಕೆ ನಾನು ಸಿದ್ಧ.

ಆದರೆ, "ನಮ್ಮ ಪರಂಪರೆಯ ಬಿಗಿಹಿಡಿತದಲ್ಲಿರುವ ನಾವು, ಇಡೀ ಭಾರತದ ಬಗ್ಗೆ ಮಾತನಾಡಲು ಬೌದ್ಧಿಕವಾಗಿ ಅಸಮರ್ಥರು, ನಮ್ಮ ಅಸ್ತಿತ್ವ ನಮ್ಮ ಜಾತಿಗಳ ಹಿನ್ನೆಲೆಯಿಂದ ಲಭಿಸಿದ್ದು" ಎಂದು ದಲಿತೇತರ ಅಂಕಣಕಾರರು, ವಿದ್ವಾಂಸರು ಕೂಡ ಮುಕ್ತವಾಗಿ, ಪ್ರಜ್ಞಾಪೂರ್ವಕವಾಗಿ ಹೇಳುವುದಾದರೆ ಭಾರತೀಯ ಕನಸು ಚಿಗುರೊಡೆದ ಹಾಗೆ.

ದಲಿತರ ಬೌದ್ಧಿಕ ರೂಪಕಗಳ ಪ್ರಕಾರ ದಲಿತ ಚಳವಳಿಗಳ ಮಾತೃಭೂಮಿ ಮಹಾರಾಷ್ಟ್ರ. ಹೌದು ಮಹಾರಾಷ್ಟ್ರ ದಲಿತರಿಗೆ ಮುಕ್ತಿ ಮಾರ್ಗ ತೋರಿದ ಪುಣ್ಯಭೂಮಿ. ಆದರೂ ದಲಿತರು ಮಹಾರಾಷ್ಟ್ರ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯದೆ ಉತ್ತರ ಪ್ರದೇಶದಲ್ಲಿ ಆಡಳಿತ ನಡೆಸುತ್ತಿರುವುದು ವೈರುಧ್ಯವಲ್ಲವೇ?

ಹಿಂದೂ ಧರ್ಮದ ಬಿಗಿಹಿಡಿತದಿಂದ ಮುಕ್ತವಾದ ಭಾರತದಲ್ಲಿ ಜಾತ್ಯತೀತ ಸಮಾಜದ ನಿರ್ಮಾಣ ಸಾಧ್ಯ ಎಂದು ಬಹಳಷ್ಟು ಮಂದಿ ದಲಿತರು ನಂಬಿದ್ದಾರೆ. ಮೂರು ಶತಮಾನಗಳ ಹಿಂದೆ ಸಿಖ್ ಧರ್ಮದ ಉದಯದೊಂದಿಗೆ ಹಿಂದೂ ಧರ್ಮದಿಂದ ಈಗಿನ ಪಂಜಾಬ್ ರಾಜ್ಯ ಮುಕ್ತವಾಯಿತು. ಗುರು ರವಿದಾಸ್ ಅವರನ್ನು ಧಾರ್ಮಿಕ ಗುರುವಾಗಿ ಸ್ವೀಕರಿಸಿದ ಹೆಗ್ಗಳಿಗೆ ಮಾನವೀಯ ಸಿಖ್ ಧರ್ಮದ್ದು. ಆದರೆ, ಪಂಜಾಬ್ ರಾಜ್ಯದಲ್ಲಿ ಸುಮಾರು ಮೂರನೇ ಒಂದರಷ್ಟು ಜನಸಂಖ್ಯೆಯನ್ನು ಹೊಂದಿರುವ ದಲಿತ ಸಮುದಾಯ ಇನ್ನೂ ಅಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಬೇಕಿದೆ. ಇಷ್ಟಾದರೂ ಸಾಂಸ್ಥಿಕವಾದ ಸಿಖ್ ಧರ್ಮದಿಂದ ಪ್ರತ್ಯೇಕವಾದ ಬಹಳಷ್ಟು ದಲಿತ ಗುರುದ್ವಾರಗಳು ಅಸ್ತಿತ್ವದಲ್ಲಿರುವುದು ಕೂಡ ವೈರುಧ್ಯವೇ.

ಅದೇ ರೀತಿ, ಬ್ರಾಹ್ಮಣರ ಹಿಡಿತದಿಂದ ಮುಕ್ತವಾದ ಭಾರತದಲ್ಲಿ ಜಾತ್ಯತೀತ ಸಮಾಜದ ನಿರ್ಮಾಣ ಸಾಧ್ಯ ಎಂಬ ಅನಿಸಿಕೆ ಕೂಡ ಇದೆ. ತಮಿಳುನಾಡು ರಾಜ್ಯದಲ್ಲಿ ಬ್ರಾಹ್ಮಣರನ್ನು ನಾಲ್ಕು ದಶಕಗಳ ಹಿಂದೆ ಅಧಿಕಾರದಿಂದ ಕೆಳಗಿಳಿಸಲಾಯಿತು. ಈ ರಾಜ್ಯದಲ್ಲಿ ಅತ್ಯಂತ ಯಶಸ್ವಿಯಾದ ಬ್ರಾಹ್ಮಣ ವಿರೋಧಿ ಚಳವಳಿಗಳು ನಡೆದಿವೆ. ಆದರೂ ಕೂಡ ತಮಿಳುನಾಡು ರಾಜ್ಯದ ಅಮಾನವೀಯ ವಾತಾವರಣದಲ್ಲಿ ದಲಿತ ಪಕ್ಷಗಳು ಒಂದುಸ್ಥಾನ ಗೆಲ್ಲಲೂ ವಿಫಲವಾಗಿರುವುದು ಕೂಡ ವೈರುಧ್ಯವಲ್ಲವೇ?

ಜಾಗತೀಕರಣದಿಂದ ನಿರ್ಮಿತವಾದ ಮಾರುಕಟ್ಟೆ ಅರ್ಥವ್ಯವಸ್ಥೆ ದಲಿತರ ಬದುಕನ್ನು ಸರ್ವನಾಶ ಮಾಡುತ್ತದೆ ಎಂದು ಬಹಳಷ್ಟು ದಲಿತ "ಬುದ್ಧಿಜೀವಿಗಳು" ನಂಬಿದ್ದಾರೆ. ದೇಶದ ಐವರು ದಲಿತ ಆರ್ಥಿಕ ತಜ್ಞರಲ್ಲಿ ನಾಲ್ಕು ಮಂದಿ ಆರ್ಥಿಕ ಸುಧಾರಣೆ ದಲಿತ ಸಮುದಾಯವನ್ನು ಪತನದಂಚಿಗೊಯ್ಯುತ್ತಿದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಆದರೆ ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಭಾರತದ ಮುಂದುವರೆದ ಅಧ್ಯಯನ ಕೇಂದ್ರ (ಸಿಎಎಸ್‌ಐ) ಉತ್ತರ ಪ್ರದೇಶದ ಸುಮಾರು ೨೦,೦೦೦ ದಲಿತರ ಮನೆಗಳಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಪ್ರತಿ ಮೂರನೆಯ ಒಂದು ದಲಿತ ಕುಟುಂಬಗಳಲ್ಲಿ ಮೊಬೈಲ್ ಫೋನ್ ಬಳಕೆಯಾಗುತ್ತಿದೆ. ೧೯೯೦ರಿಂದ ೨೦೦೭ರ ನಡುವೆ ದಲಿತರ ಜೀವನ ಶೈಲಿಯಲ್ಲಿ ಬೃಹತ್ ಪ್ರಮಾಣದಲ್ಲಿ ಬದಲಾವಣೆಗಳಾಗಿರುವುದು ಕೂಡ ಈ ಸಮೀಕ್ಷೆಯಲ್ಲಿ ಬೆಳಕಿಗೆ ಬಂದಿದೆ.

ಮಾರ್ಕ್ಸ್‌ವಾದ ಕೆಳವರ್ಗಗಳಿಗೆ ಸೇರಿದ್ದು ಎಂಬ ವಾದ ಬೌದ್ಧಿಕ ಫ್ಯಾಷನ್ ಆಗಿಬಿಟ್ಟಿದೆ. ಹೀಗಾಗಿ, ದಲಿತರು ಮಾರ್ಕ್ಸ್‌ವಾದಿಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಉತ್ತಮ ಸ್ಥಿತಿಯಲ್ಲಿದ್ದಾರೆ ಎಂಬುದು ಇದರ ಮುಂದುವರೆದ ಗ್ರಹಿಕೆ. ಆದರೆ ವಾಸ್ತವ ಸ್ಥಿತಿ ಬೇರೆಯೇ ಇದೆ. ಮಾರ್ಕ್ಸಿಸ್ಟರು ಅಧಿಕಾರದಲ್ಲಿರುವ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ದಲಿತರು ದುಸ್ಥಿತಿಯಲ್ಲಿರುವುದಷ್ಟೇ ಅಲ್ಲದೆ, ಮಾರ್ಕ್ಸ್‌ವಾದವನ್ನು ಈ ರಾಜ್ಯದ ಯಾವ ದಲಿತರೂ ನಂಬುವುದಿಲ್ಲ.

ಅಂಬೇಡ್ಕರ್ ನಂತರ ಬಹುತೇಕ ದಲಿತ ಚಳವಳಿಗಳು ಈ ಮೇಲೆ ಪಟ್ಟಿ ಮಾಡಿದ ಅಜೆಂಡಾಗಳ ಸುತ್ತಲೇ ಗಿರಕಿ ಹೊಡೆದಿವೆ. ಎಲ್ಲ ಪ್ರದೇಶಗಳಲ್ಲಿಯೂ ದಲಿತರು ತಮ್ಮ ಗುರಿಗಳನ್ನೇನೋ ಮುಟ್ಟಿದ್ದಾರೆ. ಆದರೆ ಇದರಿಂದ ಯಾವುದೇ ರೀತಿಯ ಪ್ರಯೋಜನಗಳಾಗಿಲ್ಲ. ಇದರರ್ಥ ಹಿಂದೂ ಧರ್ಮ ಉತ್ತಮವಾದುದು, ಬ್ರಾಹ್ಮಣರ ಆಡಳಿತ ಆದರ್ಶಮಯವಾದುದು ಎಂದೇನೂ ಅಲ್ಲ. ಅಥವಾ ಮಾರ್ಕ್ಸ್‌ವಾದ ದಲಿತ ವಿರೋಧಿ ಎಂಬುದೂ ಅಲ್ಲ. ಹಾಗಾದರೆ ಮಾರುಕಟ್ಟೆ ಅರ್ಥವ್ಯವಸ್ಥೆಯಿಂದ ದಲಿತರಿಗೆ ಮುಕ್ತಿಯಿದೆಯೇ? ಹಿಂದಿನ ಅನುಭವಗಳನ್ನು ಆಧಾರವಾಗಿರಿಸಿಕೊಂಡು ದಲಿತ ಚಳವಳಿಗಳು ದಲಿತೋದ್ಧಾರಕ್ಕಾಗಿ ಹೊಸ ಕಾರ್ಯಸೂಚಿಯನ್ನು ರಚಿಸುವ ಬಗ್ಗೆ ಚಿಂತಿಸಲು ಇದು ಸಕಾಲ ಅಲ್ಲವೇ?

ಜಾಗತೀಕರಣದಿಂದ ನಿರ್ಮಿತವಾದ ಮಾರುಕಟ್ಟೆ ಅರ್ಥವ್ಯವಸ್ಥೆ ದಲಿತರ ಬದುಕನ್ನು ಸರ್ವನಾಶ ಮಾಡುತ್ತದೆ ಎಂದು ಬಹಳಷ್ಟು ದಲಿತ "ಬುದ್ಧಿಜೀವಿಗಳು" ನಂಬಿದ್ದಾರೆ. ದೇಶದ ಐವರು ದಲಿತ ಆರ್ಥಿಕ ತಜ್ಞರಲ್ಲಿ ನಾಲ್ಕು ಮಂದಿ ಆರ್ಥಿಕ ಸುಧಾರಣೆ ದಲಿತ ಸಮುದಾಯವನ್ನು ಪತನದಂಚಿಗೊಯ್ಯುತ್ತಿದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಆದರೆ ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಭಾರತದ ಮುಂದುವರೆದ ಅಧ್ಯಯನ ಕೇಂದ್ರ (ಸಿಎಎಸ್‌ಐ) ಉತ್ತರ ಪ್ರದೇಶದ ಸುಮಾರು ೨೦,೦೦೦ ದಲಿತರ ಮನೆಗಳಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಪ್ರತಿ ಮೂರನೆಯ ಒಂದು ದಲಿತ ಕುಟುಂಬಗಳಲ್ಲಿ ಮೊಬೈಲ್ ಫೋನ್ ಬಳಕೆಯಾಗುತ್ತಿದೆ. ೧೯೯೦ರಿಂದ ೨೦೦೭ರ ನಡುವೆ ದಲಿತರ ಜೀವನ ಶೈಲಿಯಲ್ಲಿ ಬೃಹತ್ ಪ್ರಮಾಣದಲ್ಲಿ ಬದಲಾವಣೆಗಳಾಗಿರುವುದು ಕೂಡ ಈ ಸಮೀಕ್ಷೆಯಲ್ಲಿ ಬೆಳಕಿಗೆ ಬಂದಿದೆ.

ದಶಕಗಳಿಂದ ಕಡೆಗಣಿಸಲಾಗಿದ್ದ ಈ ಕಾರ್ಯಕ್ಕೆ ಡಿಸೆಂಬರ್ ೨೦೦೮ರ ಮೊದಲ ವಾರದಲ್ಲಿ ಸಿಎಎಸ್‌ಐ ಈ ಮೇಲಿನ ವಿಚಾರಗಳ ಬಗ್ಗೆ ದಲಿತ ಅಧ್ಯಯನಗಳ ವಿಚಾರ ಸಂಕಿರಣವನ್ನು ಏರ್ಪಡಿಸುವ ಮೂಲಕ ಉತ್ತಮ ಆರಂಭ ಒದಗಿಸಿದೆ. ಸಿಎಎಸ್‌ಐನ ದೇವೇಶ್ ಕಪೂರ್ ಮತ್ತು ರಾಮ್ ನಾರಾಯಣ್ ಅವರ ನಾಯಕತ್ವದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಹಲವಾರು ನಿರ್ಣಾಯಕ ವಿಚಾರಗಳ ಬಗ್ಗೆ ಚರ್ಚೆ ನಡೆಯಿತು.

ಈ ಐತಿಹಾಸಿಕ ವಿಚಾರ ಸಂಕಿರಣವನ್ನು ವಿಶ್ವವಿದ್ಯಾನಿಲಯದ ರೊನಾಲ್ಡ್ ಡೇನಿಯಲ್ಸ್ ಉದ್ಘಾಟಿಸಿ ಮಾತನಾಡಿದರು. ನರೇಂದ್ರ ಜಾಧವ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ನಂತರ ನಡೆದ ಗೋಷ್ಠಿಯಲ್ಲಿ, ೧೯ನೇ ಶತಮಾನದಲ್ಲಿ ಚಮ್ಮಾರರು ಉತ್ತರ ಪ್ರದೇಶ ರಾಜ್ಯದಲ್ಲಿ ಅತ್ಯಧಿಕ ತೆರಿಗೆ ನೀಡುತ್ತಿದ್ದರು ಎಂಬ ಅಂಶವನ್ನು ಸಾಕ್ಷ್ಯ ಸಮೇತ ಸಾಬೀತುಪಡಿಸಿ, ರಾಜ್ಯದ ದಲಿತರ ಬಗ್ಗೆ ತಪ್ಪು ಗ್ರಹಿಕೆಗಳನ್ನು ಹೊಂದಿದ್ದವರಿಗೆ ರಾಮ್ ನಾರಾಯಣ್ ಅಚ್ಚರಿ ಮೂಡಿಸಿದರು. ದಲಿತ ವಿದ್ವಾಂಸ ಗೋಪಾಲ್ ಗುರು ತಮ್ಮ ಸೈದ್ಧಾಂತಿಕ ಚಿಂತನೆಗಳಿಂದ ಎಲ್ಲರನ್ನೂ ಬೆರಗುಗೊಳಿಸಿದರು. ಇವರ ಜೊತೆಗೆ ಚಿನ್ನಯ್ಯ ಜಂಗಂ, ಕೆ ಸತ್ಯನಾರಾಯಣ, ಸನಲ್ ಮೋಹನ್, ಡಿ ಶ್ಯಾಂಬಾಬು, ಜೇಬ್ರೋಜಾ ಸಿಂಗ್, ಗುಂಡಿಮೇದ, ರಾಜ್‌ಕುಮಾರ್ ಹನ್ಸ್ ಅವರಂತಹ ದಲಿತ ಯುವ ಚಿಂತಕರು ಹೊಸ ಹೊಳಹುಗಳನ್ನು ನೀಡುವ ಮೂಲಕ ದಲಿತ ಚಿಂತನೆಗೆ ಹೊಸ ಆಯಾಮ ಒದಗಿಸಿದರು.

ಗೇಲ್ ಓಮ್ವೆಟ್, ಸುರಿಂದರ್ ಜೋಡ್ಕ, ಎಂ ಎಸ್ ಎಸ್ ಪಾಂಡಿಯನ್, ಶೈಲಜಾ ಪಾಯಿಕ್, ಮೃಣಾಲಿನಿ ಸಿನ್ಹಾ, ಪ್ರಿಯಾ ಜೋಷಿ, ಮತ್ತು ರೂಪಾ ವಿಶ್ವನಾಥ್ ಕೂಡ ತಮ್ಮ ವಿಚಾರಧಾರೆಗಳನ್ನು ಹಂಚಿಕೊಂಡರು.

ಅಮೆರಿಕಾ ಮೂಲದ ಬಹಳಷ್ಟು ವಿದ್ವಾಂಸರು– ಅತುಲ್ ಕೋಹ್ಲಿ, ಲ್ಯಾಂಟ್ ಪ್ರಿಚೆಟ್, ಟುಫುಕು ಜುಬೇರಿ, ಕಾರ್ತಿಕ್ ಮುರಳೀಧರನ್, ಲಾರಾ ಬ್ರುಯೆಕ್, ಕ್ಯಾಥರೀನ್ ಎಸ್ ನ್ಯೂಮನ್, ಬಾರ್ಬರಾ ಸೇವೇಜ್, ಡೌಗ್ಲಸ್ ಹೇನ್ಸ್, ಜಮಾಲ್ ಜೆ ಎಲಿಯಾಸ್, ಲುಸಿಂಡಾ ರ್‍ಯಾಂಬರ್ಗ್, ಹ್ಯೂಗೋ ಗೋರಿಂಜ್, ಮತ್ತು ಸ್ಟೀವನ್ ಐ ವಿಲ್ಕಿನ್ಸನ್– ಸಮ್ಮೇಳನಕ್ಕೆ ನಿಜವಾದ ಅರ್ಥದಲ್ಲಿ ಜಾಗತಿಕ ಆಯಾಮ ಒದಗಿಸಿದರು.

ಸಾಂಸ್ಕೃತಿಕವಾಗಿ ಕ್ರೈಸ್ತ ರೂಪ ಪಡೆಯುತ್ತಿರುವ ಭಾರತೀಯ ಮಧ್ಯಮವರ್ಗ

ಈ ಐತಿಹಾಸಿಕ ವಿಚಾರ ಸಂಕಿರಣದಲ್ಲಿ ದಲಿತರ ಕಾರ್ಯಸೂಚಿಯ ಬಗ್ಗೆ ಚಿಂತಿಸಲು ದಲಿತರು, ದಲಿತೇತರರು, ಅಮೆರಿಕನ್ನರು ಮತ್ತು ಭಾರತೀಯರು, ಕರಿಯರು, ಬಿಳಿಯರು, ಗಂಡಸರು ಮತ್ತು ಹೆಂಗಸರು, ಹೀಗೆ ಎಲ್ಲ ವರ್ಗಗಳ

ಪ್ರತಿನಿಧಿಗಳನ್ನು ಪೆನ್ಸಿಲ್ವೇನಿಯಾದ ಸುಂದರ ಕ್ಯಾಂಪಸ್‌ನಲ್ಲಿ ಸಿಎಎಸ್ಐ ಒಂದೆಡೆ ಸೇರಿಸಿತ್ತು.

ಈ ವಿಚಾರ ಸಂಕಿರಣದಲ್ಲಿ ದಲಿತರ ಕಾರ್ಯಸೂಚಿಯ ಬಗ್ಗೆ ಸಹಮತ ವ್ಯಕ್ತವಾಗದೇ ಇದ್ದಿರಬಹುದು. ಆದರೆ ಮಾರುಕಟ್ಟೆ ಅರ್ಥವ್ಯವಸ್ಥೆಯು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯನ್ನು 'ಕ್ರಿಯಾಶೀಲವಾಗಿ ನಾಶ' ಮಾಡುವ ಮೂಲಕ ದಲಿತರಿಗೆ ಮುಕ್ತಿ ಮಾರ್ಗ ಒದಗಿಸುತ್ತದೆ ಎಂಬ ವಾದಕ್ಕೆ ಸಾಕಷ್ಟು ಬೆಂಬಲ ದೊರಕಿದ್ದಂತೂ ಸತ್ಯ.

ಹಿಂದೂ ಧರ್ಮದ ನಂಬಿಕೆಯ ಪ್ರಕಾರ, ಸಂಪ್ರದಾಯ ಬದ್ಧ ಹಿಂದೂಗಳು ಸಾಗರೋಲ್ಲಂಘನ ಮಾಡುವಂತಿಲ್ಲ. ಹಿಂದೂಗಳನ್ನು ಮಾಲಿನ್ಯದಿಂದ ರಕ್ಷಿಸಬೇಕೆನ್ನುವುದು ಇದರ ಹಿಂದಿರುವ ಉದ್ದೇಶ. ಹಿಂದೂಗಳ ಪ್ರಕಾರ ಹಿಂದೂಗಳನ್ನು ಹೊರತುಪಡಿಸಿ ಇತರ ಎಲ್ಲ ಜನರೂ ಮ್ಲೇಚ್ಛರು. ವಿಕಿಪಿಡಿಯಾದಲ್ಲಿ ಉಲ್ಲೇಖಿಸಿರುವಂತೆ, "ಯಾರು ಮಾಂಸವನ್ನು ಸೇವಿಸುತ್ತಾನೋ, ದ್ವಂದ್ವಾತ್ಮಕ ಹೇಳಿಕೆಗಳನ್ನು ನೀಡುತ್ತಾನೋ ಅಥವಾ ಯಾರು ಪವಿತ್ರವಾದ ನಡತೆಯನ್ನು ಹೊಂದಿರುವುದಿಲ್ಲವೋ" ಅವನನ್ನು "ಮ್ಲೇಚ್ಛ" ಎಂದು ಬೌದ್ಧಾಯನ ವ್ಯಾಖ್ಯಾನಿಸಿದ್ದಾನೆ. ವಿಕಿಪಿಡಿಯಾದ ಮತ್ತೊಂದು ಉಲ್ಲೇಖದಲ್ಲಿ "ಪಾಲ ಸಂಸ್ಥಾನ (ಕಾಮರೂಪ)ದ ಬಹಳಷ್ಟು ಬೌದ್ಧರನ್ನು "ಮ್ಲೇಚ್ಛರು" ಎನ್ನಲಾಗುತ್ತಿತ್ತು ಎಂಬ ಅಂಶವಿದೆ. ಭಗವತ್ ಪುರಾಣದಲ್ಲಿ ಮ್ಲೇಚ್ಛ ಎಂಬ ಪದವನ್ನು ಮಾಂಸಹಾರಿಗಳು, ಅಸ್ಪೃಶ್ಯರು ಎಂಬ ಅರ್ಥದಲ್ಲಿ ಬಳಸಲಾಗಿದೆ.

ಅಂದರೆ ಹಿಂದೂಗಳಲ್ಲದ ಎಲ್ಲರೂ ಕೂಡ ಮ್ಲೇಚ್ಛರು ಅಥವಾ ಅಸ್ಪೃಶ್ಯರು. ಸಮಾಜದ ದಿನ ನಿತ್ಯದ ಜೀವನದಲ್ಲಿ ದಲಿತರನ್ನು ಕೆಲವು ಬಾರಿ ಮ್ಲೇಚ್ಛರು ಎಂದು ಕರೆಯಲಾಗುತ್ತದೆ. ಹಾಗಾಗಿ, ಸಂಪ್ರದಾಯಬದ್ಧ ಹಿಂದೂಗಳು, ದಲಿತರು ಮತ್ತು ವಿದೇಶಿಯರಿಂದ ಸಾಮಾಜಿಕವಾಗಿ ದೂರವಿರಬೇಕಾಗುತ್ತದೆ. ದಲಿತರು ಮತ್ತು ವಿದೇಶಿ ಸಂಸ್ಕೃತಿಯ ಭಯ ಹಿಂದೂ ಪ್ರಜ್ಞೆಯ ಅತ್ಯಂತ ಪ್ರಮುಖವಾದ ಅಂಶ. ವಿದೇಶಿ ಸಂಸ್ಕೃತಿಯಿಂದ ತಮ್ಮ ಸಂಸ್ಕೃತಿ "ನಾಶ"ವಾಗುವ ಆತಂಕ ಮತ್ತು ವಿದೇಶಿ ಸಂಸ್ಕೃತಿಯ ಪ್ರತಿಸ್ಪರ್ಧೆಯ ಭಯ ಹಿಂದೂಗಳಿಗೆ ಯಾವಾಗಲೂ ಇದ್ದೇ ಇದೆ.

೧೯೯೧ರಲ್ಲಿ ಜಾಗತೀಕರಣ ಭಾರತಕ್ಕೆ ಕಾಲಿರಿಸಿದಾಗ ಅದನ್ನು ಮೊದಲಿಗೆ ವಿರೋಧಿಸಿದವರು ಹಿಂದೂಗಳು. ಜಾಗತೀಕರಣ, ಕೇವಲ ಆರ್ಥಿಕ ವ್ಯವಸ್ಥೆಗಳ ಒಕ್ಕೂಟವಾಗಿ ಉದ್ಯಮ ವಹಿವಾಟು-ವ್ಯವಹಾರಗಳನ್ನು ನಡೆಸಲು ಅವಕಾಶ ಕಲ್ಪಿಸುವುದಷ್ಟೇ ಅಲ್ಲದೆ, ವಿದೇಶಿ ಸಂಸ್ಕೃತಿಯನ್ನು ಕೂಡ ಹೊತ್ತು ತರುತ್ತದೆ ಎಂಬ ಅಂಶದ ಬಗ್ಗೆ ಸಂಪ್ರದಾಯಬದ್ಧ ಹಿಂದೂಗಳಿಗೆ ಅರಿವಿತ್ತು. ಜಾಗತೀಕರಣ, ಬಂಡವಾಳಶಾಹಿ ವ್ಯವಸ್ಥೆಯ ಹೊಸ ರೂಪವಾಗಿರುವುದರಿಂದ ಜಗತ್ತಿನ ಬಂಡವಾಳಶಾಹಿ ವ್ಯವಸ್ಥೆ ಬರಿಗಾಲಲ್ಲಿ ನಡೆಯುವಂತಿಲ್ಲ. ಇನ್ನು ಬಂಡವಾಳಶಾಹಿ ವ್ಯವಸ್ಥೆ, ಹೊಸ ಸಾಮಾಜಿಕ ವ್ಯವಸ್ಥೆ ಕೂಡ ಆಗಿರುವುದರಿಂದ ಅದು ಸಂಸ್ಕೃತಿಯಿಂದ ಹೊರತಾಗಿರುವುದಿಲ್ಲ. ಹೀಗಾಗಿ, ವಿದೇಶಿಯರ ಬಂಡವಾಳಕ್ಕಿಂತ ವಿದೇಶಿಯರ ಸಂಸ್ಕೃತಿ ಸಂಪ್ರದಾಯಬದ್ಧ ಹಿಂದೂಗಳಿಗೆ ದಿಗಿಲು ಹುಟ್ಟಿಸಿತು. ಜಾಗತೀಕರಣ ಮುಂದೆ ತಮಗೆ ಉಂಟು ಮಾಡಬಹುದಾದ ಅಪಾಯದ ಬಗ್ಗೆ ಈ ಸಂಪ್ರದಾಯಬದ್ಧ ಹಿಂದೂಗಳಿಗೆ ಅರಿವಿತ್ತು.

ಕ್ರಿಸ್‌ಮಸ್ ಟ್ರೀ, ಸಾಂತಾ ಕ್ಲಾಸ್‌ನ ಬೊಂಬೆ ಮತ್ತಿತರ ವಸ್ತುಗಳನ್ನು ಖರೀದಿಸಲು ಇತ್ತೀಚೆಗೆ ನನ್ನ ಪುಟ್ಟ ಮಗಳು ಹತ್ತಿರದ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಕರೆದೊಯ್ದಿದ್ದಳು. ಶಾಪಿಂಗ್ ಕಾಂಪ್ಲೆಕ್ಸ್‌ಗೆ ಹೋದಾಗ ಬಹಳಷ್ಟು ಮಳಿಗೆಗಳಲ್ಲಿ ಕ್ರಿಸ್‌ಮಸ್ ಟ್ರೀ, ಸಾಂತಾ ಕ್ಲಾಸ್, ಮತ್ತಿತರ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿತ್ತು. ನನ್ನಂತೆಯೇ ಬಹಳಷ್ಟು ಪೋಷಕರು ತಮ್ಮ ಪುಟಾಣಿಗಳೊಂದಿಗೆ ಕ್ರಿಸ್‌ಮಸ್ ಸಂಬಂಧಿತ ವಸ್ತುಗಳನ್ನು ಖರೀದಿಸಲು ಅಲ್ಲಿಗೆ ಬಂದಿದ್ದರು. ಚೀನಾ ಉತ್ಪಾದಿತ ಸಾಂತಾ ಕ್ಲಾಸ್ ಕಡಿಮೆ ಬೆಲೆಯದಾದರೂ ಉತ್ತಮ ಗುಣಮಟ್ಟದ್ದಾಗಿರಲಿಲ್ಲ.

ಮಳಿಗೆಗಳಿಂದ ಹೊರಬಂದಾಗ, ಸಾಂತಾ ಕ್ಲಾಸ್ ಟೋಪಿ ಮತ್ತು ಆತನ ಉಡುಗೊರೆಗಳನ್ನು ಖರೀದಿಸಲು ನಾನು ಮರೆತಿದ್ದೇನೆ ಎಂದು ನನ್ನ ಮಗಳು ಬೇಸರಗೊಂಡಿದ್ದಳು. ತಮ್ಮ ಶಾಲೆಗಳಲ್ಲಿ ಕ್ರಿಸ್‌ಮಸ್ ಟ್ರೀ ವಿನ್ಯಾಸದ ಸ್ಪರ್ಧೆ ಇದ್ದುದರಿಂದ ಆಕೆಯ ವಯಸ್ಸಿನ ಎಲ್ಲ ಮಕ್ಕಳು ಕೂಡ ಸಾಂತಾ ಕ್ಲಾಸ್ ಮತ್ತು ಸಂಬಂಧಿಸಿದ ಇತರ ವಸ್ತುಗಳನ್ನು ಶಾಲೆಗೆ ತೆಗೆದುಕೊಂಡು ಹೋಗಬೇಕಿತ್ತು.

ಅಂದು ಸಂಜೆ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಹೋದಾಗ ಅಲ್ಲಿನ ಹಬ್ಬದ ವಾತಾವಾರಣ ಕಂಡು ನನಗೆ ಅಚ್ಚರಿಯ್ಯಾಯಿತು. ಯಾವುದೋ ಕ್ರೈಸ್ತ ರಾಷ್ಟ್ರದಲ್ಲಿನ ಶಾಪಿಂಗ್ ಕಾಂಪ್ಲೆಕ್ಸ್‌ನಂತೆ ಅದು ಕಂಗೊಳಿಸುತ್ತಿತ್ತು. ಮಳಿಗೆಯ ಪ್ರವೇಶ ದ್ವಾರದಲ್ಲಿ ಮನುಷ್ಯನ ಎತ್ತರದ ಸಾಂತಾ ಕ್ಲಾಸ್‌ನನ್ನು ನಿಲ್ಲಿಸಲಾಗಿತ್ತು; ಶಾಪಿಂಗ್ ಕಾಂಪ್ಲೆಕ್ಸ್‌ನ ಅರ್ಧದಷ್ಟು ಮಳಿಗೆಗಳು ಕ್ರಿಸ್‌ಮಸ್‌ಗೆ ಸಂಬಂಧಿಸಿದ ಯಾವುದಾದರೂ ವಸ್ತುಗಳನ್ನು ಮಾರಾಟ ಮಾಡುತ್ತಿದ್ದವು.

ನನ್ನ ಮಗಳು ಓದುವ ಶಾಲೆ ಕ್ರೈಸ್ತರದಲ್ಲ. ನಾನು ಭೇಟಿ ನೀಡಿದ ವ್ಯಾಪಾರ ಮಳಿಗೆಯ ಮಾಲೀಕ ಕೂಡ ಕ್ರೈಸ್ತನಲ್ಲ. ಮತ್ತು ನಾನು ವಾಸವಾಗಿರುವ ಬಡಾವಣೆ ಕೂಡ ಕ್ರೈಸ್ತರು ಹೆಚ್ಚು ವಾಸವಾಗಿರುವ ಪ್ರದೇಶವಲ್ಲ. ಭಾರತದ ಇತರೆ ಪ್ರದೇಶಗಳಲ್ಲಿರುವಂತೆ ಇದು ಕೂಡ ಹಿಂದೂಗಳ ಜನಸಂಖ್ಯೆ ಅಧಿಕವಾಗಿರುವ ಪ್ರದೇಶ. ಸ್ಥಿತಿವಂತರಾಗಿರುವ ಇಲ್ಲಿನ ಹಿಂದೂ ಮಧ್ಯಮ ವರ್ಗ ಹಿಂದೂ ಹಬ್ಬಗಳನ್ನು ಸಂಪ್ರದಾಯಬದ್ಧವಾಗಿ ಸಂಭ್ರಮದಿಂದ ಆಚರಿಸುತ್ತಾರೆ.

ಈ ಹಿಂದೂಗಳು ಮುಂಬರುವ ದಿನಗಳಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಾರೆ ಎಂದು ನಾನು ಹೇಳುತ್ತಿಲ್ಲ. ಆದರೆ ಪಾಶ್ಚಾತ್ಯ ಸಂಸ್ಕೃತಿ-ಕ್ರೈಸ್ತಧರ್ಮ ಇದರ ಅವಿಭಾಜ್ಯ ಅಂಗ-ಹೊಸ ಶತಮಾನದ ಭಾರತೀಯ ಜೀವನಶೈಲಿಯ ಪ್ರಮುಖ ಅಂಶವಾಗಿ ಬೆಳೆಯುತ್ತಿದೆ.

ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಕ್ರೈಸ್ತರ ಸಂಸ್ಕೃತಿ ಭಾರತೀಯ ಮಧ್ಯಮ ವರ್ಗಕ್ಕೆ ಪರಾಮರ್ಶೆಯ ಚೌಕಟ್ಟನ್ನು ಒದಗಿಸುತ್ತಿದೆ. ಅಂದರೆ, ಭಾರತೀಯ ಮಧ್ಯಮವರ್ಗದ ಕುಟುಂಬವೊಂದು ಕ್ರಿಸ್‌ಮಸ್ ಟ್ರೀ ಮತ್ತು ಸಾಂತಾ ಕ್ಲಾಸ್‌ನನ್ನು ಖರೀದಿಸದಿದ್ದರೆ, ಅವರನ್ನು ಹಳೆಯ ಕಾಲದವರು ಎಂದು ಪರಿಗಣಿಸುವ ಸಾಧ್ಯತೆ ಇದೆ. ಕ್ರೈಸ್ತ

೧೯೯೧ರಲ್ಲಿ ಜಾಗತೀಕರಣ ಭಾರತಕ್ಕೆ ಕಾಲಿರಿಸಿದಾಗ ಅದನ್ನು ಮೊದಲಿಗೆ ವಿರೋಧಿಸಿದವರು ಹಿಂದೂಗಳು. ಜಾಗತೀಕರಣ, ಕೇವಲ ಆರ್ಥಿಕ ವ್ಯವಸ್ಥೆಗಳ ಒಕ್ಕೂಟವಾಗಿ ಉದ್ಯಮ ವಹಿವಾಟು-ವ್ಯವಹಾರಗಳನ್ನು ನಡೆಸಲು ಅವಕಾಶ ಕಲ್ಪಿಸುವುದಷ್ಟೇ ಅಲ್ಲದೆ, ವಿದೇಶಿ ಸಂಸ್ಕೃತಿಯನ್ನು ಕೂಡ ಹೊತ್ತು ತರುತ್ತದೆ ಎಂಬ ಅಂಶದ ಬಗ್ಗೆ ಸಂಪ್ರದಾಯ ಬದ್ಧ ಹಿಂದೂಗಳಿಗೆ ಅರಿವಿತ್ತು. ಜಾಗತೀಕರಣ, ಬಂಡವಾಳಶಾಹಿ ವ್ಯವಸ್ಥೆಯ ಹೊಸ ರೂಪವಾಗಿರುವುದರಿಂದ ಜಗತ್ತಿನ ಬಂಡವಾಳಶಾಹಿ ವ್ಯವಸ್ಥೆ ಬರಿಗಾಲಲ್ಲಿ ನಡೆಯುವಂತಿಲ್ಲ. ಇನ್ನು ಬಂಡವಾಳಶಾಹಿ ವ್ಯವಸ್ಥೆ, ಹೊಸ ಸಾಮಾಜಿಕ ವ್ಯವಸ್ಥೆ ಕೂಡ ಆಗಿರುವುದರಿಂದ ಅದು ಸಂಸ್ಕೃತಿಯಿಂದ ಹೊರತಾಗಿರುವುದಿಲ್ಲ. ಹೀಗಾಗಿ, ವಿದೇಶಿಯರ ಬಂಡವಾಳಕ್ಕಿಂತ ವಿದೇಶಿಯರ ಸಂಸ್ಕೃತಿ ಸಂಪ್ರದಾಯಬದ್ಧ ಹಿಂದೂಗಳಿಗೆ ದಿಗಿಲು ಹುಟ್ಟಿಸಿತು.

ಸಂಸ್ಕೃತಿಯ ಪ್ರಭಾವ ಕೇವಲ ಸಾಂತಾ ಕ್ಲಾಸ್ ಅಥವಾ ಕ್ರಿಸ್‌ಮಸ್ ಟ್ರೀಗೆ ಮಾತ್ರ ಸೀಮಿತವಾಗಿಲ್ಲ.

೧೯೮೦ರಲ್ಲಿ ಭಾರತದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಲು ನಾನು ದೆಹಲಿಗೆ ಬಂದೆ. ಆಗ ನನಗೆ ವ್ಯಾಲೆಂಟೈನ್ಸ್ ಡೇ, ತಂದೆಯರ ದಿನ, ತಾಯಿಯರ ದಿನ ಇವ್ಯಾವುದೂ ಗೊತ್ತಿರಲಿಲ್ಲ. ನನ್ನ ಶಾಲಾ ದಿನಗಳಿಂದ ನನಗೆ ಕ್ರೈಸ್ತರು ಮತ್ತು ಸಾಂತಾ ಕ್ಲಾಸ್‌ನ ಬಗ್ಗೆ ತಿಳಿದಿತ್ತು. ಆಗ ಡಿಸೆಂಬರ್ ೨೫ರಂದು "ಬಡಾ ದಿನ್" (ವರ್ಷದಲ್ಲಿಯೇ ದೀರ್ಘವಾದ ದಿನ") ಆಚರಿಸುತ್ತಿದ್ದ ನೆನಪಿದೆ. ಆದರೆ ಈಗ ಎಲ್ಲ ಕ್ರೈಸ್ತಮಯ. ಕ್ರಿಸ್ತನಿಂದ ಹೊರತಾದ ದೇಸಿ ಕ್ರೈಸ್ತ ಸಂಸ್ಕೃತಿಯನ್ನು ಈಗ ನಾವು ಕಾಣಬಹುದು.

೨೦೫೦ರ ಹೊತ್ತಿಗೆ ಜಾಗತೀಕರಣದ ಚಕ್ರ ಇದೇ ಗತಿಯಲ್ಲಿ ತಿರುಗಿದರೆ, ಭಾರತದ ಮಧ್ಯಮವರ್ಗ "ಸಾಂಸ್ಕೃತಿಕವಾಗಿ ಕ್ರೈಸ್ತಮಯ"ವಾಗುವುದು ದಿಟ. ಇದು ಜಾಗತೀಕರಣ ವಿರೋಧಿ ಪಡೆಗಳಿಗೆ ಕಠಿಣವಾದ ಸವಾಲೇ ಸರಿ.

ಇಮಾಜಿನಿಂಗ್ ಇಂಡಿಯಾ

ಇತ್ತೀಚೆಗೆ ಬಿಡುಗಡೆಯಾದ ನಂದನ್ ನಿಲೇಕಣಿ ಅವರ ಕೃತಿ "ಇಮಾಜಿನಿಂಗ್ ಇಂಡಿಯಾ" ಹೊಸ ವಿಚಾರಗಳ ಮಹಾ ಪೂರವೇ ಸರಿ. ಸೀಮಿತಗೊಂಡಿರುವ ಭಾರತೀಯ ಉದ್ಯಮದ ಪರಿಧಿಯಿಂದ ಹೊರಬಂದು ಮುಕ್ತವಾಗಿ ಚಿಂತಿಸಿರುವ ನಿಲೇಕಣಿ, "ಐಡಿಯಾಸ್ ಫಾರ್ ದ ನ್ಯೂ ಸೆಂಚುರಿ" (ಹೊಸ ಶತಮಾನಗಳಿಗೆ ಹೊಸ ವಿಚಾರಗಳು) ಎಂಬ ತಮ್ಮ ಪುಸ್ತಕದ ಶೀರ್ಷಿಕೆಯಂತೆ ನೀಲ್ ಆರ್ಮ್‌ಸ್ಟ್ರಾಂಗ್ ಸಾಗಿದ ಅಸಾಧ್ಯವಾದ ದಾರಿಯಲ್ಲಿ ಸಾಗುವ ಪ್ರಯತ್ನ ಮಾಡಿದ್ದಾರೆ.

ಎಲ್ಲರಿಗೂ ಕಲ್ಪನಾಶಕ್ತಿಯಿರುತ್ತದೆ. ತಮ್ಮ ಕಲ್ಪನಾಶಕ್ತಿಯನ್ನು ಸ್ವಹಿತಾಸಕ್ತಿಗೆ, ಸೀಮಿತವಾಗಿ ಬಳಸುವ ಬಹಳಷ್ಟು ಮಂದಿ ಇದ್ದಾರೆ. ವಸ್ತ್ರೋದ್ಯಮಿಯೊಬ್ಬ ಜಗತ್ತನ್ನು ತಾನು ಉತ್ಪಾದಿಸುವ ವಸ್ತ್ರಗಳ ಮೂಲಕ ಗ್ರಹಿಸಿದರೆ, ಓರ್ವ ಮೀನುಗಾರ ತಾನು ಹಿಡಿಯುವ ಮೀನುಗಳ ಮೂಲಕ ಜಗತ್ತನ್ನು ನೋಡುತ್ತಾನೆ. ಇನ್ನು ಹೋಟೆಲ್ ಉದ್ಯಮಿಯೊಬ್ಬ ಪ್ರವಾಸಿಗಳ ಮೂಲಕ ಜಗತ್ತನ್ನು ನೋಡುತ್ತಾನೆ. ಹೀಗಾಗಿ, ಎಲ್ಲರ ಕಲ್ಪನೆಗಳೂ ಜಾಗತಿಕ ಆಯಾಮಗಳನ್ನು ಹೊಂದಿರುವುದಿಲ್ಲ.

ಇತ್ತೀಚೆಗೆ ಬಿಡುಗಡೆಯಾದ ನಂದನ್ ನಿಲೇಕಣಿ ಅವರ ಕೃತಿ "ಇಮಾಜಿನಿಂಗ್ ಇಂಡಿಯಾ" ಹೊಸ ವಿಚಾರಗಳ ಮಹಾಪೂರವೇ ಸರಿ. ಸೀಮಿತಗೊಂಡಿರುವ ಭಾರತೀಯ ಉದ್ಯಮದ ಪರಿಧಿಯಿಂದ ಹೊರಬಂದು ಮುಕ್ತವಾಗಿ ಚಿಂತಿಸಿರುವ ನಿಲೇಕಣಿ, "ಐಡಿಯಾಸ್ ಫಾರ್ ದ ನ್ಯೂ ಸೆಂಚುರಿ" (ಹೊಸ ಶತಮಾನಗಳಿಗೆ ಹೊಸ ವಿಚಾರಗಳು) ಎಂಬ ತಮ್ಮ ಪುಸ್ತಕದ ಶೀರ್ಷಿಕೆಯಂತೆ ನೀಲ್ ಆರ್ಮ್‌ಸ್ಟ್ರಾಂಗ್ ಸಾಗಿದ ಅಸಾಧ್ಯವಾದ ದಾರಿಯಲ್ಲಿ ಸಾಗುವ ಪ್ರಯತ್ನ ಮಾಡಿದ್ದಾರೆ.

ಪ್ರತಿಷ್ಠಿತ ಇನ್ಫೋಸಿಸ್ ಸಂಸ್ಥೆಯ ಸಹ-ಅಧ್ಯಕ್ಷ ನಿಲೇಕಣಿ ತಮ್ಮ ಐಟಿ ಕ್ಷೇತ್ರದಿಂದ ಹೊರಬಂದು ಒಟ್ಟಾರೆ ಭಾರತದ ಸಮಸ್ಯೆಗಳು ಮತ್ತು ಸಾಧ್ಯತೆಗಳ ಬಗ್ಗೆ ಚರ್ಚಿಸಿದ್ದಾರೆ.

ಬಹುತೇಕ ನಮ್ಮ ಗ್ರಹಿಕೆಗಳು ಅನುಭವಜನ್ಯವಾದುದು. ೧೭ನೆಯ ಶತಮಾನದಲ್ಲಿ ಯುರೋಪ್‌ನ ಸೆಂಟ್. ಬರ್ನಾರ್ಡ್ ಹೇಳಿದಂತೆ ಭಾರತೀಯ ಉದ್ಯಮದಲ್ಲಿ "ಎಲ್ಲವೂ ದುರ್ವಾಸನೆ ಬೀರುತ್ತವೆ, ಒಂದು ಅಂಶ ಕೂಡ ಸುವಾಸನೆ ಬೀರುವುದಿಲ್ಲ." ಭಾರತಕ್ಕೆ ಮಾರಕವಾಗಿರುವ ಬಹುದೊಡ್ಡ ಅಂಶ ಜಾತಿ ಎಂದು ಭಾರತೀಯ ಉದ್ಯಮ ಎಂದಾದರೂ ಚಿಂತಿಸಿದೆಯೇ? ಅಂಬೇಡ್ಕರ್ ಅವರನ್ನು ಪ್ರಶಂಸಿಸುವ ಪ್ರಯತ್ನಗಳನ್ನು ಎಂದಾದರೂ ಮಾಡಿದೆಯೇ? ಭಾರತದಲ್ಲಿ ಹಸಿವು, ಭಾಷೆ ಬಹುದೊಡ್ಡ ಸಮಸ್ಯೆ ಎಂದು ಉದ್ಯಮಿಗಳು ಎಂದಾದರೂ ಚರ್ಚೆ ಮಾಡಿದ್ದಾರೆಯೇ?

ನಿಲೇಕಣಿ ಅವರ ೫೩೧ ಪುಟದ ಪುಸ್ತಕ ಮಾರುಕಟ್ಟೆಗೆ ಬಿಡುಗಡೆಯಾದಾಗ ನಾನೂ ಕೂಡ ಈತ ಐಟಿ ಕ್ಷೇತ್ರವನ್ನು ಹೊಗಳಿ ಅಟ್ಟಕ್ಕೇರಿಸಿ ಮತ್ತೆ ಒಂದಷ್ಟು ಶತಮಾನಗಳ ಕಾಲ ತೆರಿಗೆ ವಿನಾಯಿತಿ ಕೇಳಿರುತ್ತಾರೆ ಎಂದು ಭಾವಿಸಿದ್ದೆ.

ಹೌದು. ನಿಲೇಕಣಿ ಐಟಿ ಕ್ಷೇತ್ರದ ಬಗ್ಗೆ ಪ್ರಸ್ತಾಪ ಮಾಡುವುದರ ಜೊತೆಗೆ, ತನ್ನ ಕ್ಷೇತ್ರದ ಸಾಧನೆಯ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇದು ೫೩೧ ಪುಟಗಳಲ್ಲಿ ಕೇವಲ ಕೆಲವೇ ಪುಟಗಳಿಗೆ ಮೀಸಲು. ನಿಲೇಕಣಿ ತಮ್ಮ ಪರಿಧಿಯನ್ನು ಮೀರಿ ಎಲ್ಲರನ್ನೂ ಒಳಗೊಂಡ ಮುಂದುವರೆದ ರಾಷ್ಟ್ರವಾಗಿ ಭಾರತವನ್ನು ಕಲ್ಪಿಸಿಕೊಂಡಿದ್ದಾರೆ. ಕಾಲ್ಪನಿಕ ನಾಯಕನಾಗಿ ರೂಪಾಂತರ ಹೊಂದಿರುವ ಅವರದು ಬರಿಗಾಲಿನ ಕಲ್ಪನೆಗಳಲ್ಲ. ಕಣ್ಣುಗಳಿಗೆ ಕಪ್ಪು ಪಟ್ಟಿ ಧರಿಸಿ ಕಣ್ಕಟ್ಟಿದ ಕುದುರೆಯನ್ನೇರಿ ಭಾರತದ ಅಂದಿನ ಮತ್ತು ಇಂದಿನ ಹೆದ್ದಾರಿಗಳು, ಸಣ್ಣ ದಾರಿಗಳನ್ನು ಹಾದು ಬರುತ್ತಾರೆ. ಕಣ್ಣುಗಳು ಮುಚ್ಚಿರುವುದರಿಂದ ವಸ್ತುನಿಷ್ಠವಾಗಿ ಎಲ್ಲ ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ತೀವ್ರ ಕಾಳಗವನ್ನು ಅವರು ಗಮನಿಸಿದ್ದಾರೆ. ಈ ಪ್ರಕ್ರಿಯೆಯು ಓದುಗರಿಗೆ ಉಜ್ವಲವಾದ ಭವಿಷ್ಯವನ್ನು ತೋರಿಸುತ್ತದೆ. ಜೊತೆಜೊತೆಗೆ ನೆಹರು ಅವರ ಸಮಾಜವಾದ ಬೋರಲಾಗಿ ಮಲಗಿದ ಸತ್ವವನ್ನು ಅರ್ಥ ಮಾಡಿಸುತ್ತದೆ.

ಡಿಸೆಂಬರ್ ೨೦ರಿಂದ ಆರಂಭಿಸಿ ಜನವರಿ, ೨೦೦೯ರವರೆಗೆ ಪ್ರತಿ ದಿನ ಸಂಜೆ ನಾನು ಪಾನಗೋಷ್ಠಿಯಲ್ಲಿ ತಪ್ಪದೇ ಭಾಗವಹಿಸಿದ್ದೇನೆ. ನನ್ನ ಬಹುತೇಕ ಸ್ನೇಹಿತರು ಲಾಲ್ ಬಹದ್ದೂರ್ ಶಾಸ್ತ್ರಿ ಅವರು "ವೆನ್ಸ್‌ಡೇ" ಎಂಬ ಪದವನ್ನು ಯಾವ ಅರ್ಥದಲ್ಲಿ ಬಳಸಿದ್ದರು ಎಂದು ನೆನಪಿಸಿಕೊಳ್ಳಲು ಅಥವಾ ವ್ಯಾಖ್ಯಾನಿಸಲು ವಿಫಲರಾಗಿ ಮುಜುಗರ ಅನುಭವಿಸಿದರು.

ಸ್ವಾತಂತ್ರ್ಯಾನಂತರದ ಎರಡು ದಶಕಗಳು ಭಾರತಕ್ಕೆ ಖ್ಯಾತಿ ಮತ್ತು ಅವಮಾನಗಳನ್ನು ತಂದ ಸಮಯ. ಈ ಅವಧಿಯಲ್ಲಿ ಸಾರ್ವಜನಿಕ ಉದ್ದಿಮೆಗಳಿಗೆ ನೆಹರು ಅವರು ಅಡಿಪಾಯ ಒದಗಿಸಿದ್ದನ್ನು ನಿಲೇಕಣಿ ಪ್ರಶಂಸಿಸುತ್ತಾರೆ. ಇದೇ ಸಂದರ್ಭದಲ್ಲಿ ದೇಶದಾದ್ಯಂತ ಕ್ಷಾಮ ತಲೆದೋರಿ ಆಹಾರದ ಕೊರತೆ ಉಂಟಾಗಿತ್ತು. ಆದರೆ ಅಮೆರಿಕಾದ ಸಹಾಯದಿಂದ ಲಕ್ಷಾಂತರ ಭಾರತೀಯರ ಜೀವ ಉಳಿಯಿತು. ೧೯೬೪ರಲ್ಲಿ ನೆಹರು ಅವರ ನಿಧನದ ನಂತರ ಲಾಲ್ ಬಹದ್ದೂರ್ ಶಾಸ್ತ್ರಿ ಅಧಿಕಾರಕ್ಕೆ ಬಂದರು. ಆ ಸಂದರ್ಭದಲ್ಲಿ ಆಹಾರದ ಕೊರತೆ ಎಷ್ಟಿತ್ತೆಂದರೆ, ಶಾಸ್ತ್ರಿ ಅವರು ತಮ್ಮ ಕುಟುಂಬ ಪ್ರತಿ ಬುಧವಾರ ರಾತ್ರಿ ಉಪವಾಸ ಮಾಡುವುದಾಗಿ ನಿರ್ಧರಿಸಿದ್ದರು. ನಂತರ ಪ್ರತಿ ಬುಧವಾರ ಭಾರತ ಸರ್ಕಾರ ಪತ್ರಿಕೆಗಳಲ್ಲಿ "ನೆನಪಿಡಿ, ಇಂದು ಉಪವಾಸದ ರಾತ್ರಿ" ಎಂಬ ಜಾಹೀರಾತನ್ನು ನೀಡಲಾರಂಭಿಸಿತು. ನಂದನ್, ನೆಹರು ಅವರ ಸಮಾಜವಾದದ ಇನ್ನೊಂದು ಮುಖವನ್ನು ಪರಿಚಯಿಸಲು ಈ ನಿದರ್ಶನವನ್ನು ಬಳಸುತ್ತಾರೆ.

೧೯೯೦ರ ಹೊತ್ತಿಗೆ ನೆಹರು ಅವರ ಸಮಾಜವಾದ ಎಂತಹ ದುಸ್ಥಿತಿಗೆ ತಲುಪಿತೆಂದರೆ ಭಾರತ ತನ್ನೆಲ್ಲ ಬಂಗಾರವನ್ನು ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ ಅಡವಿಟ್ಟು ಸಾಲ ಪಡೆಯಬೇಕಾಯಿತು. ನೆಹರು ಸಮಾಜವಾದ ಸದಾಶಯಗಳನ್ನು ಹೊಂದಿದ್ದರೂ ಇಡೀ ಭಾರತವನ್ನು ರೇಷನ್ ಕಾರ್ಡ್ ರಾಷ್ಟ್ರವನ್ನಾಗಿ ಪರಿವರ್ತಿಸಿಬಿಟ್ಟಿತು.

ಆರ್ಥಿಕ ಸುಧಾರಣೆ ಜಾರಿಯಾಗುವ ಮುನ್ನ ಭಾರತದ ಅರ್ಥವ್ಯವಸ್ಥೆ ವಾರ್ಷಿಕ ಶೇ. ೩.೫ರಷ್ಟು ಪ್ರಮಾಣದಲ್ಲಿ ವೃದ್ಧಿಯಾಗುತ್ತಿದ್ದರೆ, ಜನಸಂಖ್ಯೆ ಶೇ. ೨.೦ರಷ್ಟು ಪ್ರಮಾಣದಲ್ಲಿ ಹೆಚ್ಚಾಗುತ್ತಿತ್ತು. ಅಂದರೆ ತಲಾ ಆದಾಯ ಪ್ರತಿ ೪೫ ವರ್ಷಗಳಿಗೊಮ್ಮೆ ದ್ವಿಗುಣವಾಗುತ್ತಿತ್ತು. ಆದರೆ ಸುಧಾರಣೆಗಳು ಜಾರಿಯಾದ ನಂತರದ ದಿನಗಳಲ್ಲಿ ಅರ್ಥವ್ಯವಸ್ಥೆ ವಾರ್ಷಿಕ ಶೇ. ೮-೯ರಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆ. ಮತ್ತು ಜನಸಂಖ್ಯೆ ಶೇ. ೧.೫ರಷ್ಟು ಪ್ರಮಾಣದಲ್ಲಿ ಮಾತ್ರ ವೃದ್ಧಿಸುತ್ತಿದೆ. ಇದರರ್ಥ ಏನೆಂದರೆ, ಪ್ರತಿ ಒಂಭತ್ತು ವರ್ಷಗಳಿಗೊಮ್ಮೆ ತಲಾ ಆದಾಯ ದ್ವಿಗುಣಗೊಳ್ಳುತ್ತಿದೆ.

ನಂದನ್ ಅವರು ನಿರೂಪಣೆಗೆ ಗದ್ಯ ರೂಪದ ಕಾವ್ಯ ಶೈಲಿಯನ್ನು ಬಳಸುತ್ತಾರೆ. ಸ್ವಾತಂತ್ರ್ಯಾನಂತರ ನೆಹರು ಅವರ ಸಮಾಜವಾದ ಭಾರತವನ್ನು "ವೆನ್ಸ್‌ಡೇ" ಪರಿಸ್ಥಿತಿಗೆ ದೂಡಿ "ಬ್ಯಾಂಕ್ ಆಫ್ ಇಂಗ್ಲೆಂಡ್"ಗೆ ಮೊರೆ ಹೋಗುವಂತೆ ಮಾಡಿತು.

ಆದರೆ ಪ್ರಸ್ತುತ ಅಸ್ತಿತ್ವದಲ್ಲಿರುವ ಮಾರುಕಟ್ಟೆ ಅರ್ಥವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ಭಾರತವನ್ನು ಗೌರವಾನ್ವಿತ ಸ್ಥಿತಿಗೆ ತಂದು ನಿಲ್ಲಿಸಿದೆ. ಸಿಎಎಸ್‌ಐ/ ಯುಪೆನ್ ಅಧ್ಯಯನ ಗುರುತಿಸಿರುವಂತೆ, ಉತ್ತರ ಪ್ರದೇಶದ ಎರಡು ವಿಭಾಗಗಳಲ್ಲಿರುವ ದಲಿತರ ಕುಟುಂಬಗಳಲ್ಲಿ ಮೂರನೆಯ ಒಂದರಷ್ಟು ಕುಟುಂಬಗಳ ಬಳಿ ಮೊಬೈಲ್ ಫೋನ್ ಇದೆ. ಇದು ಬದಲಾಗುತ್ತಿರುವ ಭಾರತದ ಸಂಕೇತ. □

ಬುದ್ಧಾಯಣ

೩೧

ಆ ಗರಿಕೆ ಹುಲ್ಲು ನಸುನಕ್ಕು ಧನ್ಯವಾಯಿತು!

ಆ ಮರುಭೂಮಿಯ ಮರಳು ಎಷ್ಟು ಮೃದುವಾಗಿತ್ತೆಂದರೆ ಮುಷ್ಟಿಯಲ್ಲಿ ಹಿಡಿದರೆ ಝುರ್ರನೆ ಜಾರಿ ಹೋಗುವಷ್ಟು ನುಣುಪಾಗಿತ್ತು. ಸೂರ್ಯೋದಯ ದಿಂದಲೇ ಹುಲ್ಲು ಬೆಂಕಿಯಂತೆ ಸುಡುತ್ತಿದ್ದು, ಆದುದರಿಂದ ಆ ಮರುಭೂಮಿಯನ್ನು ದಾಟುವವರು ಸೌದೆ, ನೀರು, ತೈಲ ಮತ್ತು ಅಡುಗೆಯ ಸಾಮಾನನ್ನೆಲ್ಲ ಬಂಡಿಗಳ ಮೇಲೆ ಹೇರಿಕೊಂಡು ರಾತ್ರಿ ಹೊತ್ತಿನಲ್ಲಿಯೇ ತಮ್ಮ ಪ್ರಯಾಣವನ್ನು ಮಾಡುತ್ತಿದ್ದರು. ಎತ್ತುಗಳಿಗೆ ಮತ್ತು ಮನುಷ್ಯರಿಗೆ ಪ್ರತ್ಯೇಕ ಚಪ್ಪರಗಳನ್ನು ಹಾಕಿ ಬಿಸಿಲಿನಿಂದ ರಕ್ಷಣೆ ಪಡೆಯುತ್ತಿದ್ದರು. ಸಮಯವಿದ್ದಾಗಲೇ ಊಟ ಮುಗಿಸಿ, ನೆರಳಿನಲ್ಲಿ ಮಲಗಿ ವಿಶ್ರಮಿಸುತ್ತಿದ್ದರು.

ಸಿ.ಎಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಬೌತಮ ಬುದ್ಧರು ಸಾವತ್ಥಿಯ ಜೇತವನದಲ್ಲಿ ತಂಗಿದ್ದರು. ಆ ಸಮಯದಲ್ಲಿ ಕಾಶೀ ರಾಜ್ಯವನ್ನು ಬ್ರಹ್ಮದತ್ತನೆಂಬ ರಾಜನು ರಾಜ್ಯವಾಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಶ್ರೇಷ್ಠಿ ಕುಲದಲ್ಲಿ ಜನಿಸಿದರು. ಬೆಳೆದು ದೊಡ್ಡವರಾದ ಬಳಿಕ ವಿದ್ಯೆಯ ಜೊತೆಗೆ ವ್ಯಾಪಾರವನ್ನು ಕಲಿತರು. ಆತನ ತಂದೆಯು ಐನೂರು ಗಾಡಿಗಳ ಒಡೆಯರಾಗಿದ್ದರು. ಸುಲಭ ಬೆಲೆಗೆ ಯಾವ ಮತ್ತು ಎಲ್ಲಿ ವಸ್ತುಗಳು ದೊರೆಯುತ್ತದೆಯೋ ಅದನ್ನು ಕೊಂಡು ದುಬಾರಿ ಬೆಲೆ ಎಲ್ಲಿ ಸಿಗುತ್ತದೋ ಅಲ್ಲಿಗೆ ಕೊಂಡ್ಯೊಯ್ದು ಮಾರಿ ಅಧಿಕ ಲಾಭಗಳಿಸುತ್ತಿದ್ದರು.

ತಂದೆಯ ಮರಣಾನಂತರ ಅದೇ ವ್ಯಾಪಾರ ವೃತ್ತಿಯನ್ನು ಮುಂದುವರೆಸಿದರು ಅಂತಹ ಒಂದು ಸಂದರ್ಭಲ್ಲಿ ಬೋಧಿಸತ್ವರು ತನ್ನ ಬಂಡಿಗಳಿಗೆ ಸರುಕನ್ನು ತುಂಬಿಕೊಂಡು ಅರವತ್ತು ಯೋಜನ ದೂರದ ಮರುಭೂಮಿಯನ್ನು ದಾಟಿ ಆಚೆ ರಾಜ್ಯವನ್ನು ತಲುಪಬೇಕಾಗಿತ್ತು. ಅಂದಿನ ದಿನಗಳಲ್ಲಿ ಮರುಭೂಮಿಯನ್ನು ದಾಟುವುದೆಂದರೆ ಸಮುದ್ರವನ್ನು ದಾಟುವಷ್ಟೇ ತ್ರಾಸದಾಯಕವಾಗಿತ್ತು.

ಸುತ್ತ ಮುತ್ತ ಎತ್ತಲಿಂದ ಎಲ್ಲಿಯ ತನಕ ನೋಡಿದರೂ ಬರೀ ಮರುಭೂಮಿಯೇ ಕಾಣುತ್ತಿತ್ತು. ತುದಿ ಮೊದಲಿರಲಿಲ್ಲ. ಮಾರ್ಗದ ಗುರುತು ಇಲ್ಲವೇ ಇಲ್ಲ. ಮರುಭೂಮಿಯಲ್ಲಿ ಪಯಣಿಸುವುದು ಎಂದರೆ ಮರೀಚಿಕೆಯನ್ನು ಬೆನ್ನಟ್ಟಿದಂತೆಯೇ ಸರಿ. ಆ ಕಾರಣಕ್ಕಾಗಿ ಸಮುದ್ರಯಾನದಲ್ಲಿ ಹೇಗೆ ದಿಕ್ಸೂಚಕನೊಬ್ಬ ಇರುತ್ತಾನೋ ಹಾಗೆಯೇ ಇಲ್ಲಿಯೂ ಒಬ್ಬ ನುರಿತ ದಿಕ್ಸೂಚಕನನ್ನು ಕರೆದ್ಯೊಯುತ್ತಿದ್ದರು. ಆ ಮರುಭೂಮಿಯ ಮರಳು ಎಷ್ಟು ಮೃದುವಾಗಿತ್ತೆಂದರೆ ಮುಷ್ಟಿಯಲ್ಲಿ ಹಿಡಿದರೆ ಝುರನೆ ಜಾರಿ ಹೋಗುವಷ್ಟು ನುಣುಪಾಗಿತ್ತು. ಸೂರ್ಯೋದಯದಿಂದಲೇ ಹುಲ್ಲು ಬೆಂಕಿಯಂತೆ ಸುಡುತ್ತಿದ್ದು ಅದರ ಮೇಲೆ ನೆಡೆಯಲಾಗುತ್ತಿರಲಿಲ್ಲ. ಆದುದರಿಂದ ಆ ಮರುಭೂಮಿಯನ್ನು ದಾಟುವವರು ಸೌದೆ, ನೀರು, ತೈಲ ಮತ್ತು ಅಡುಗೆಯ ಸಾಮಾನನ್ನೆಲ್ಲ ಬಂಡಿಗಳ ಮೇಲೆ ಹೇರಿಕಂಡು ರಾತ್ರಿ ಹೊತ್ತಿನಲ್ಲಿಯೇ ತಮ್ಮ ಪ್ರಯಾಣವನ್ನು ಮಾಡುತ್ತಿದ್ದರು. ಬೆಳಕು ಹರಿಯುತ್ತಿದಂತೆಯೆ ತಮ್ಮ ಪಯಣವನ್ನು ನಿಲ್ಲಿಸುತ್ತಿದ್ದರು. ಎತ್ತುಗಳಿಗೆ ಮತ್ತು ಮನುಷ್ಯರಿಗೆ ಪ್ರತ್ಯೇಕ ಚಪ್ಪರಗಳನ್ನು ಹಾಕಿ ಬಿಸಿಲಿನಿಂದ ರಕ್ಷಣೆ ಪಡೆಯುತ್ತಿದ್ದರು. ಸಮಯವಿದ್ದಾಗಲೇ ಊಟ ಮುಗಿಸಿ, ನೆರಳಿನಲ್ಲಿ ಮಲಗಿ ತಮ್ಮ ಆಯಾಸವನ್ನು ನೀಗಿಕೊಳ್ಳುತ್ತಿದ್ದರು.

ಸೂರ್ಯಾಸ್ತವಾಗುತ್ತಿದ್ದಂತೆಯೇ ಸಂಜೆಯ ಭೋಜನವನ್ನು ಮುಗಿಸಿ, ಭೂಮಿ ತಂಪಾದ ಮೇಲೆ ಬಂಡಿಗಳನ್ನು ಹೂಡಿ ಕೊಂಡು ಮುಂದೆಹೊರಡುತ್ತಿದ್ದರು. ದಿಕ್ಸೂಚಕನು ಮುಂದಿನ ಗಾಡಿಯಲ್ಲಿ ಆಸನವನ್ನು ಹಾಕಿ ಕುಳಿತುಕೊಳ್ಳುತ್ತಿದ್ದನು. ಆಕಾಶದಲ್ಲಿನ ನಕ್ಷತ್ರಗಳನ್ನು ನೋಡುತ್ತ. "ಬಂಡಿಗಳನ್ನು ಇತ್ತ ಕಡೆ ಹೊಡೆಯಿರಿ. ಅತ್ತ ಕಡೆ ಹೊಡೆಯಿರಿ!" ಎಂದು ದಿಕ್ಕುಗಳನ್ನು ಮತ್ತು ಮಾರ್ಗಗಳನ್ನು ಸರಿಯಾಗಿ ಅರಿತು ಐನೂರು ಬಂಡಿಗಳನ್ನು ಮುನ್ನೆಡೆಸು ತ್ತಿದ್ದನ್ನು.

ಅರವತ್ತು ಯೋಜನಗಳ ಆ ಮರುಭೂಮಿಯಲ್ಲಿ ಐವತ್ತು ಯೋಜನಗಳನ್ನು ಯಾವ ತೊಂದರೆ ಇಲ್ಲದಂತೆ ದಾಟಿದರು. ಇನ್ನು ಉಳಿದದ್ದು ಒಂದೇ ರಾತ್ರಿಯ ಪಯಣವಾಗಿತ್ತು. ಹಾಗಾಗಿ ಎಲ್ಲರೂ ಸಂತೋಷವಾಗಿ ಅಂದು ಸಂಜೆಯ ಊಟ ಮುಗಿಸಿದರು. ಉಳಿದ ನೀರನ್ನು ಹೊರಚೆಲ್ಲಿ ಬಂಡಿಯನ್ನು ಹಗುರಗೊಳಿಸಿಕೊಂಡು ಹೊರೆಟರು. ಅಷ್ಟರಲ್ಲಿ ಎಲ್ಲರೂ ಸಹಜವಾಗಿ ನಿದ್ದೆಗೆಟ್ಟು ಬಸವಳಿದು ಹೋಗಿದ್ದರು. ದಿಕ್ಸೂಚಕನು ನಡುರಾತ್ರಿಯ ತನಕ ದಿಕ್ಕುಗಳನ್ನು ಸರಿಯಾಗಿ



ಎದೆಗುಂದದ ಬೋಧಿಸತ್ವರು ಕಲ್ಲಿನ ಬಂಡೆಯ ಮೇಲೆ ಪಕ್ಕಕ್ಕೆ ವಾಲಿ ಮಲಗಿದರು. ಬಂಡೆಗೆ ಕಿವಿಗೊಟ್ಟು ತಳದ ಶಬ್ಧವನ್ನು ಸೂಕ್ಷ್ಮವಾಗಿ ಗಮನಿಸಿದರು. ಅಲ್ಲಿ ನೀರಿನ ಝರಿಯು ಜುಳು ಜುಳನೆ ಹರಿದು ನಿರಂತರವಾಗಿ ಸಾಗುತ್ತಿರುವುದನ್ನು ಅರಿತರು ತನ್ನ ನೆಚ್ಚಿನ ಕಿರಿಯ ಸೇವಕನನ್ನು ಕುರಿತು: "ಮಗು! ನೀನೀಗಾ ಧೈರ್ಯಗುಂದಿ ಬಲಹೀನನಾದರೆ ನಾವೆಲ್ಲರೂ ನಾಶವಾಗಿ ಬಿಡುತ್ತೇವೆ. ನೀನು ಎದೆಗುಂದದೆ ಈ ಸುತ್ತಿಗೆಯನ್ನು ತೆಗೆದುಕೊಂಡು ಈ ಬಂಡೆಯನ್ನು ಸ್ಫೋಟಿಸು!" ಎಂದ. ಆ ಕಿರಿಯ ಸದೃಢ ಸೇವಕನು ತನ್ನ ಒಡೆಯನ ಅಣತಿಯಂತೆ ಬಂಡೆಯ ಮಧ್ಯೆದಲ್ಲಿ ಒಂದು ವೃತ್ತಾಕಾರವಾಗಿ ಒಡೆಯುತ್ತಾ ಸಣ್ಣ ಸಣ್ಣ ಚಕ್ಕೆಯನ್ನು ಎಬ್ಬಿಸ ತೊಡಗಿದ. ಬಂಡೆಯ ಐದಾರು ಅಡಿ ಆಳಕ್ಕೆ ಬಾಯಿ ತೆರೆದು ನಿಂತಿತು. ಬೋಧಿಸತ್ವರು ಆ ಗುಂಡಿಗೆ ಇಳಿದು ಮತ್ತೆ ಕಿವಿಗೊಟ್ಟು ಶಬ್ಧವನ್ನು ಅರಿತರು. ಅವರು ಅಲ್ಲೊಂದು ಜಾಗವನ್ನು ಗುರುತಿಸಿ: "ಮಗು! ಈ ಜಾಗಕ್ಕೆ ಬಲವಾದ ಏಟನ್ನು ಹಾಕು...!" ಎಂದರು ಅವನು ಹಾಗೆಯೇ ಮಾಡಲು ಅಡಿಯಿಂದ ನೀರು ಒಂದು ತಾಳೆಯ ಮರದ ಎತ್ತರಕ್ಕೆ ಚಿಮ್ಮಿತು. ಸೂಕ್ಷ್ಮಮತಿಗಳೂ ಮತ್ತು ಪ್ರಯತ್ನಶೀಲರಾದ ಬೋಧಿಸತ್ವರಿಗೆ ಮಾರ್ಗವನ್ನು ತೋರಿ, ಫಲವನ್ನು ನೀಡಿದ ಆ ಗರಿಕೆ ಹುಲ್ಲು ಕೊನೆಗೊಮ್ಮೆ ನಸುನಕ್ಕು ಹೀಗೆ ಧನ್ಯವಾಯಿತು!

ತೋರಿಸಿ ಕೊನೆಗೆ.

"ಚಾಲಕರೆ ನೇರವಾಗಿ ನೆಡೆದು ಮುಂದೆ ಎಡಕ್ಕೆ ತಿರುಗಿ ನಂತರ ಬಲಕ್ಕೆ ತಿರುಗಿರಿ! ಎಂದು ಸೂಚನೆ ಕೊಟ್ಟ ಅಷ್ಟರಲ್ಲಿ ಆತನಿಗೆ ಎಂದಿಲ್ಲದ ಮಾಯದ ನಿದ್ದೆ ಆವರಿಸಿ ಬಿಟ್ಟಿತು. ಆತ ಗಾಡ ನಿದ್ರೆಗೆ ವಶನಾಗಿ ಬಿಟ್ಟ. ಮುಂದೆ ದಿಕ್ಸೂಚನಿಂದ ಯಾವುದೇ ಆಜ್ಞೆಯು ಬರದಿದ್ದ ಕಾರಣ ಚಾಲಕರು ಹಿಂತಿರುಗಿ ಬಂದ ಹಾದಿಯನ್ನೇ ಹಿಡಿದು ಹೊರಟರು. ಅದು ಅವರಿಗೂ ತಿಳಿಯಲಿಲ್ಲ. ಎತ್ತುಗಳು ರಾತ್ರಿಯೆಲ್ಲಾ ತಮ್ಮ ಪಾಡಿಗೆ ತಾವು ಮುನ್ನಡೆಯುತ್ತಿದ್ದವು. ದಕ್ಸೂಚನಿಗೆ ಪೂರ್ವದಲ್ಲಿ ಸೂರ್ಯನು ಉದಯಿಸುತ್ತಿದ್ದಂತೆಯೇ ಎಚ್ಚರವಾಯಿತು. ನಕ್ಷತ್ರಗಳನ್ನು ನೋಡಿ ದಿಗಿಲುಗಂಡ ಅವನು: "ಬಂಡಿಗಳನ್ನು ಹಿಂತಿರುಗಿಸಿ...! ಬಂಡಿಗಳನ್ನು ಹಿಂದಕ್ಕೆ ತಿರುಗಿಸಿ. ಅನಾಹುತವಾಯಿತು. ಬಂದ ದಾರಿಗೆ ಹಿಂದಿರುಗಿ ಬಂದಿದ್ದೇವೆ" ಎನ್ನುವಷ್ಟರಲ್ಲಿ ಅವರೆಲ್ಲಾ ನೆನ್ನೆ ರಾತ್ರಿ ಬಿಡಾರ ಹೂಡಿದ್ದ ಸ್ಥಳದ ಬಳಿ ಬಂದು ನಿಂತಿದ್ದರು.

ಈ ಅನಾಹುತದ ಪರಿಣಾಮವನ್ನು ಅರಿತ ಬೋಧಿಸತ್ವರು ಕಳವಳದಿಂದ ಬಂಡಿಯಿಂದ ಕೆಳಗಿಳಿದರು. ಚಾಲಕರು ಒಬ್ಬರ ಮುಖವನ್ನು ಒಬ್ಬರು ನೋಡಿ ಕೊಂಡು "ಇನ್ನೂ ನಮ್ಮಗಳ ಸರ್ವನಾಶ ಖಂಡಿತ!" ಎಂದು ಉದ್ಗರಿಸಿದರು. ಆಗ ಬೋಧಿಸತ್ವರು:

"ಸೇವಕರೇ, ಚಿಂತಿಸದಿರಿ! ಸಮಸ್ಯೆಗೊಂದು ಪರಿಹಾರ ಸಿಕ್ಕೇಸಿಗುತ್ತದೆ. ನೀವುಗಳು ಎತ್ತುಗಳಿಗೂ ನಿಮಗೂ ಚಪ್ಪರವನ್ನು ನಿರ್ಮಿಸಿಕೊಂಡು ವಿಶ್ರಮಿಸಿಕೊಳ್ಳಿ" ಎಂದರು.

ಅವರಿಗೂ ಕೂಡ ತಾನು ಮುಂದೆ ಏನು ಮಾಡಬೇಕು ಎಂಬ ಸ್ಪಷ್ಠತೆ ಇರಲಿಲ್ಲ. ಆದರೆ ನಾನು ಧೈರ್ಯಗುಂದಿದರೆ ಇವರೆಲ್ಲರ ಸರ್ವನಾಶ ಖಂಡಿತ ಎಂಬ ನಿಲುವಿಗೆ ಬಂದರು. ಹೀಗೆ ಯೋಚಿಸುತ್ತಾ ತಂಪಾದ ಆ ಪ್ರಾತಃಕಾಲದಲ್ಲಿ ಆತ್ತಿತ್ತ ಅಲೆದಾಡ ತೊಡಗಿದರು. ಅಷ್ಟರಲ್ಲಿ ಅವರ ಕಣ್ಣಿಗೆ ಗುಳಿಬಿದ್ದ ಜಾಗವೊಂದರಲ್ಲಿ ಗರಿಕೆಯ ಒಂದು ಹುಲ್ಲುಕಡ್ಡಿ ಹಸಿರಾಗಿ ಬೆಳೆದು ನಿಂತು ಗಾಳಿಗೆ ತೂರಾಡುವ ದೃಶ್ಯವನ್ನು ಕಂಡರು. ಆಗ ಆ ಗರಿಕೆ ಹುಲ್ಲು ಬೋಧಿಸತ್ವರನ್ನು ಕಂಡು ಮೆಲ್ಲಗೆ ನಸುನಕ್ಕಿತು. ಅವರು ನಿಧಿಯೊಂದನ್ನು ಪತ್ತೆ ಹಚ್ಚಿದವರಂತೆ ಚೀರಿ ಕಂಡು:

"ಸೇವಕರೇ, ಇತತ ಬನ್ನಿ... ನಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಿ ಬಿಟ್ಟಿತು. ಇಲ್ಲಿ ನೋಡಿ ಈ ಹುಲ್ಲಿನ ಗರಿಕೆಯನು!" ಎನ್ನಲು ಅವರೆಲ್ಲಾ ಗಾಬರಿಯಿಂದ ಓಡಿ ಬಂದು ಆ ಗರಿಕೆಯ ಹುಲ್ಲನ್ನು ಮತ್ತು ತಮ್ಮ ಒಡೆಯನ ಮುಖವನ್ನು ಪ್ರಶ್ನಾರ್ಥಕವಾಗಿ ನೋಡಿದರು. ಅವರಿಗೆ ಏನೊಂದು ಅರಿಯಲಿಲ್ಲ. ಬದಲಿಗೆ ತಮ್ಮ ಒಡೆ ಯನಿಗೆ ಬುದ್ಧಿ ಭ್ರಮಣೆಯಾಗಿರುವುದು ಖಚಿತವೆಂದು ತಿಳಿದು ಮತ್ತೂ ಕುಸಿದರು. ಆತ ಮತ್ತೆ ಹೀಗೆ ನುಡಿದ:

"ನೋಡಿ ಈ ಗರಿಕೆ ಹುಲ್ಲನ್ನು ನೋಡಿ...!" ಎನ್ನಲು ಅದರಲ್ಲಿ ಹಿರಿಯ ಸೇವಕನೊಬ್ಬ,

"ಒಡೆಯಾ ಗರಿಕೆ ಹುಲ್ಲನ್ನು ನಾವು ಕಂಡಿಲ್ಲವೆ?

"ವಿಷಯ ಅದಲ್ಲ. ಈ ಮರುಭೂಮಿಯಲ್ಲಿ ಗರಿಕೆ ಹುಲ್ಲು ಚಿಗುರಬೇಕಾದರೆ ಇದರ ತಳದಲ್ಲಿ ನೀರಿನ ಪಸೆ ಇರಲೇಬೇಕು. ಹಾರೆ ಗುದ್ದಲಿ ಮುಂತಾದ ಆಯುಧಗಳನ್ನು ತರಿಸಿ ಇಲ್ಲಿ ಬಾವಿಯನ್ನು ತೋಡೋಣ!"

"ಒಡೆಯಾ, ಎಲ್ಲಾದರೂ ಉಂಟೆ? ಮರುಭೂಮಿಯಲ್ಲಿ ಜಲ ಇರಲು ಸಾಧ್ಯವೆ? ಯಾರಾದರೂ ಮರುಭೂಮಿಯಲ್ಲಿ ಬಾವಿ ತೆಗೆದು ಜಲವನ್ನು ಹೊರತೆಗೆದ ಉದಾಹರಣೆ ಇರುವುದೆ?"

"ಅವರಿವರ ಮಾತೇಕೆ? ನಾವೇ ಮತ್ತೊಬ್ಬರಿಗೆ ಉದಾಹರಣೆ ಏಕಾಗಬಾರದು?" ಎಂದ ಬೋಧಿಸತ್ವರು ತಾವೇ ಬಂಡಿಯಲ್ಲಿದ್ದ ಗುದ್ದಲಿಯನ್ನು ತಂದು ಒಂದೇ ಸಮನೆ ಮರಳನ್ನು ಹಗೆದು ಹಗೆದು ದೂರ ಚೆಲ್ಲ ತೊಡಗಿದರು. ಮರಳ ಅಕ್ಷಯ ಪಾತ್ರೆಯಂತೆ ಸಿಗುತ್ತಲೇ ಇತ್ತು. ಕೊನೆಗೆ ಗಟ್ಟಿನೆಲ ಸಿಕ್ಕಿತು ಸುತಲು ನಿಂತ ಸೇವಕರಿಗೆ ಏನೋ ಸ್ಫೂರ್ತಿ ಸಿಕ್ಕಂತಾಯಿತು. ಅವರೂ ಕೂಡಾ ಒಡೆಯನ ಜೊತೆ ಕೈ ಜೋಡಿಸಿದರು. ಮಧ್ಯಾಹ್ನ ಕಳೆದು ಮುಸ್ಸಂಜೆಯಾಗುವಷ್ಟರಲ್ಲಿ ಬಾವಿಯು ಅರವತ್ತು ಅಡಿ ಆಳ ಮತ್ತು ಅರವತ್ತು ಅಡಿ ಸುತ್ತಳತೆಯಿಂದ ತೆರೆದು ನಿಂತಿತು. ಬಳಿಕ ತಳದಲ್ಲೊಂದು ಕಲ್ಲುಬಂಡೆಯು ಸಿಕ್ಕಿಬಿಟ್ಟಿತು. ಸೇವಕರು ಅದರ ವಿರುದ್ಧ ಸೆಣಸಾಡಲಗದೆ ಕೈ ಚೆಲ್ಲಿ ಕುಳಿತರು.

ಎದೆಗುಂದದ ಬೋಧಿಸತ್ವರು ಕಲ್ಲಿನ ಬಂಡೆಯ ಮೇಲೆ ಪಕ್ಕಕ್ಕೆ ವಾಲಿ ಮಲಗಿದರು. ಬಂಡೆಗೆ ಕಿವಿಗೊಟ್ಟು ತಳದ ಶಬ್ಧವನ್ನು ಸೂಕ್ಷ್ಮವಾಗಿ ಗಮನಿಸಿದರು. ಅಲ್ಲಿ ನೀರಿನ ಝರಿಯು ಜುಳು ಜುಳನೆ ಹರಿದು ನಿರಂತರವಾಗಿ ಸಾಗುತ್ತಿರುವುದನ್ನು ಹರಿತರು ತನ್ನ ನೆಚ್ಚಿನ ಕಿರಿಯ ಸೇವಕನನ್ನು ಕುರಿತು:

"ಮಗು! ನೀನೀಗಾ ಧೈರ್ಯಗುಂದಿ ಬಲಹೀನನಾದರೆ ನಾವೆಲ್ಲರೂ ನಾಶವಾಗಿ ಬಿಡುತ್ತೇವೆ. ನೀನು ಎದೆಗುಂದದೆ ಈ ಸುತ್ತಿಗೆಯನ್ನು ತೆಗೆದುಕೊಂಡು ಈ ಬಂಡೆಯನ್ನು ಸ್ಫೋಟಿಸು!" ಎಂದ.

ಆ ಕಿರಿಯ ಸದೃಢ ಸೇವಕನು ತನ್ನ ಒಡೆಯನ ಅಣತಿಯಂತೆ ಬಂಡೆಯ ಮಧ್ಯೆದಲ್ಲಿ ಒಂದು ವೃತ್ತಾಕಾರವಾಗಿ ಒಡೆಯುತ್ತಾ ಸಣ್ಣ ಸಣ್ಣ ಚಕ್ಕೆಯನ್ನು ಎಬ್ಬಿಸ ತೊಡಗಿದ. ಬಂಡೆಯ ಐದಾರು ಅಡಿ ಆಳಕ್ಕೆ ಬಾಯಿ ತೆರೆದು ನಿಂತಿತು. ಬೋಧಿಸತ್ವರು ಆ ಗುಂಡಿಗೆ ಇಳಿದು ಮತ್ತೆ ಕಿವಿಗೊಟ್ಟು ಶಬ್ಧವನ್ನು ಅರಿತರು. ಅವರು ಅಲ್ಲೊಂದು ಜಾಗವನ್ನು ಗುರುತಿಸಿ:

"ಮಗು! ಈ ಜಾಗಕ್ಕೆ ಬಲವಾದ ಏಟನ್ನು ಹಾಕು...!" ಎಂದರು ಅವನು ಹಾಗೆಯೇ ಮಾಡಲು ಅಡಿಯಿಂದ ನೀರು ಒಂದು ತಾಳೆಯ ಮರದ ಎತ್ತರಕ್ಕೆ ಚಿಮ್ಮಿತು.

ಸೂಕ್ಷ್ಮತಿಗಳೂ ಮತ್ತು ಪ್ರಯತ್ನಶೀಲರಾದ ಬೋಧಿಸತ್ವರಿಗೆ ಮಾರ್ಗವನ್ನು ತೋರಿ, ಫಲವನ್ನು ನೀಡಿದ ಆ ಗರಿಕೆ ಹುಲ್ಲು ಕೊನೆಗೊಮ್ಮೆ ನಸುನಕ್ಕು ಹೀಗೆ ಧನ್ಯವಾಯಿತು! □

ಯಾತನೆಯೆಂದರೆ

ಯಾತನೆಯೆಂದರೆ
ನೀನಿಷ್ಟೂ ವರ್ಷಗಳು ಯಾವುದನ್ನು
ಮನೆಯೆಂದುಕೊಂಡಿರುವೆಯೋ ಅದನ್ನು
ಕೊಳೆಗೇರಿಯೆಂದು
ನೀನು ರೇಡಿಯೋದಲ್ಲಿ ಆಲಿಸುವುದು.

ಮೂಲ: ಲ್ಯಾಂಗ್‌ಸ್ಟನ್ ಹ್ಯೂಸ್
ಕನ್ನಡಕ್ಕೆ: ಡಾ॥ ಜೆ. ಬಾಲಕೃಷ್ಣ

'SAMVADA' Kannada Monthly, Feb 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಕವಿತೆಗಳು
ಕೆ.ಜಿ. ಶಂಕರಪಿಳ್ಳೆ
ಅನುವಾದ :
ತೇರ್ಳಿ ಎನ್. ಶೇಖರ್
ಬೆಲೆ : 120/-

ಕೇಂದ್ರ ಸಾಹಿತ್ಯ ಅಕಾದೆಮಿ,

ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001



ಲ ರೂ ಜ ಎ ಲ ನ್ವಾ
ಅನುವಾದ:
(ಶ್ರೀಮತಿ) ಶ್ರೀ ಹರ್ಲೇಕರ
ಬೆಲೆ : 350/-

ಕನುಪರ್ತಿ ವರಲಕ್ಷ್ಮಿ
ಪೀಲಾಪ್ರಗಡ ರಾಜ್ಯಲಕ್ಷ್ಮಿ
ಬೆಲೆ: 40/-

ಬಿಳಿಯ ಲಕೋಟೆ
ಬೆಂಗಾಲಿ ಮೂಲ: ಮತಿನಂದಿ
ಅನುವಾದ : ರಮಾ
ಬೆಲೆ : 100/-



ಸೂಫಿ ಹೇಳಿದ ಕಥೆ
ಕೆ.ಪಿ. ರಾಮನುಣ್ಣಿ
ಅನುವಾದ :
ಡಾ.ಅಶೋಕ ಕುಮಾರ್
ಬೆಲೆ : 100/-

ಅಕ್ಕಮಹಾದೇವಿ
ಗುರುಲಿಂಗ ಕಾಪಸೆ
ಬೆಲೆ: 40/-

ಒಂದು ಗಿಡ ಮತ್ತು ಎರಡು
ಹಕ್ಕಿಗಳು
ವಿಶ್ರಾಮ ಬೇಡೆಕರ
ಅನುವಾದ : ಕುಮುದಿನಿ
ಅಶೋಕ ಭೈರಣ್ಣ
ಬೆಲೆ : 225/-

ಪಿ. ಲಂಕೇಶ್
ಕೆ. ಮರುಳಸಿದ್ದಪ್ಪ
ಬೆಲೆ : 40/-

ಸ್ವಾಮಿ ವಿವೇಕಾನಂದ
ನಮಾಯಿ ಸದನ್ ಬೋಸ್
ಬೆಲೆ : 40/-

ಸುಂದರಿಯರು ಸುಂದರರು
ಉರೂಬ್
ಅನುವಾದ :
ಮೋಹನ ಕುಂಟಾರ್
ಬೆಲೆ : 250/-



ಶ್ರೀರಂಗ
ಎನ್ಕೆ.ಕುಲಕರ್ಣಿ
ಬೆಲೆ : 40/-

ಆರ್.ಕಲ್ಯಾಣಮ್ಮ
ಎಸ್.ಡಿ.ಶಶಿಕಲಾ
ಬೆಲೆ : 40/-



ನ ಹನ್ಯತೆ
ಮೈತ್ರೇಯಿ ದೇವಿ
ಅನುವಾದ : ಗೀತಾ
ವಿಜಯಕುಮಾರ್
ಬೆಲೆ : 250/-



ರಾಷ್ಟ್ರಕವಿ ಕುವೆಂಪು
ಪ್ರಭು ಶಂಕರ
ಬೆಲೆ: 40/-

ಆಧುನಿಕ ಮಹಾಭಾರತ
ಗುಂಟೂರು ಶೇಷೇಂದ್ರ ಶರ್ಮಾ
ಅನುವಾದ :
ಅರ್ಕಸಾಲಿ ವೃಷಭೇಂದ್ರಾಚಾರ್
ಬೆಲೆ : 200/-



ಕೇತು ವಿಶ್ವನಾಥರೆಡ್ಡಿ ಕತೆಗಳು
ತೆಲುಗು ಮೂಲ :
ಕೇತು ವಿಶ್ವನಾಥರೆಡ್ಡಿ
ಅನುವಾದ :
ಮೀರಾಸಾಬಿಹಳ್ಳಿ ಶಿವಣ್ಣ
ಬೆಲೆ : 120/-



ತ.ರಾ.ಸು
ಎಂ.ಎಸ್.ಪಾಟೀಲ
ಬೆಲೆ : 40/-



ಮಧುರಚೆನ್ನ
ಗುರುಲಿಂಗ ಕಾಪಸೆ
ಬೆಲೆ : 40/-

ನೆಲವೆದ್ದು ಬಡಿಯಿತು
ವಿಶ್ವಾಸ ಪಾಟೀಲ
ಕನ್ನಡಕ್ಕೆ : ಚಂದ್ರಕಾಂತ
ಪೋಕಳೆ
ಬೆಲೆ : 350/-